THE BOOK WAS DRENCHED

UNIVERSAL
LIBRARY
OU_200012
UNIVERSAL
LIBRARY

ಸದ್ಬೋಧ ಚಂದ್ರಿಕೆಯ ಗ್ರಂಥಾವಳಿಯು ೩.

ಶಕ್ತಿಮಯೀ

ಅಥವಾ

ಸೇಡುತೀರಿಸಿಕೊಳ್ಳುವ ಹವ್ಯಾಸ.

(ಐತಿಹಾಸಿಕ ಕಾದಂಬರಿ)

ಲೇಖಕ

ಭಿಕಾಜಿ ಪರಶುರಾಮಪಂತ ಕಾಳೆ,

ಮ್ಯಾನೇಜರ, ಶ್ರೀ ಶೇಷಾಚಲ ಪ್ರಿಂಟಿಂಗ ಪ್ರೆಸ್ಸ,

ಆನಂದವನ-ಅಗಡಿ.

ಪ್ರಕಾಶಕ

ವಾಯ್. ಜಿ. ಕುಲಕರ್ಣಿ,

ಎಡಿಟರ, ಸದ್ಬೋಧ ಚಂದ್ರಿಕೆ,

ಆನಂದವನ-ಅಗಡಿ.

1921

ಬೆಲೆ ೧ ರೂಪಾಯಿ.

ಶಕ್ತಿಮಯಿಯ-ಸ್ವರೂಪಾವಲೋಕನ.

ಕರ್ನಾಟಕ ವಾಙ್ಮಯೋದ್ಯಾನದಲ್ಲಿ ಹೊಸದಾಗಿ ಹೂಳಲ್ಪಟ್ಟ ಮನೋವೇಧಕ, ಹಾಗೂ ಮಾರ್ಮಿಕವಾದ ಈ ಶಕ್ತಿಮಯಿ ಕಾದಂಬರಿಯ ಉಪಯುಕ್ತತೆಯನ್ನು ಚಂದ್ರಿಕೆಯ ವಾಚಕರಿಗೆ ವಿಶೇಷವಾಗಿ ಮಾಡಿಕೊಡುವ ಅವಶ್ಯವಿಲ್ಲ. ಉದ್ಯಾನದಲ್ಲಿಯ ವೃಕ್ಷ-ಲತೆಗಳು ಫಲಪುಷ್ಪಾದಿಗಳಿಂದ ಭರಿತವಾಗಿ ವನವಿಹಾರಿಗಳನ್ನು ಸಂತೃಪ್ತಿಗೊಳಿಸುವಂತೆ, ನಮ್ಮ ವಾಙ್ಮಯೋದ್ಯಾನದಲ್ಲಿ ಸ್ಥಿರವಾಗಿ ಹೂಳಲ್ಪಟ್ಟ "ವಂಗ ಐತಿಹಾಸಿಕ ಕಾದಂಬರೀ" ವೃಕ್ಷವಿದು ತನ್ನಲ್ಲಿ ಗರ್ಭಿತವಾದ ಅನೇಕ ಉಪಯುಕ್ತ ಗುಣವೈಶಿಷ್ಟ್ಯದಿಂದ ಕರ್ನಾಟಕ ವಾಙ್ಮಯೋದ್ಯಾನದಲ್ಲಿ ವಿಹರಿಸುವ ಪ್ರತಿಯೊಬ್ಬ ಮನುಷ್ಯನನ್ನು ಆನಂದಗೊಳಿಸದೆ ಇರಲಾರದೆಂದು ಸ್ಪಷ್ಟವಾಗಿ ಹೇಳಬಹುದು.

ಈ ಕಥಾನಕದಲ್ಲಿಯ ಗಣೇಶದೇವನ ಗಂಭೀರ ಹಾಗೂ ಶಾಂತವೃತ್ತಿ, ಯೋಗಿನಿಯ ಅತುಲ ಹಾಗೂ ಪವಿತ್ರಸಾಹಸ, ನಿರೂಪಮೆಯ ಪತಿಭಕ್ತಿ, ಸವತೀಮತ್ಸರದ ಅಭಾವ ಮೊದಲಾದ ಸದ್ಗುಣವೈಶಿಷ್ಟ್ಯದ ಮೂಲಕವಾಗಿಯೂ; ಶಕ್ತಿಮಯಿಯಲ್ಲಿಯ ಸ್ತ್ರೀಸ್ವಭಾವಕ್ಕೆ ಮೀರಿದ ಸಾಹಸ, ಕುತುಬನ ಕಾಪಟ್ಯ ಮುಂತಾದ ತ್ಯಾಜ್ಯಗುಣಗಳಿಂದಲೂ ಈ ಗ್ರಂಥವು ಮನೋಹರವೂ, ಮನೋವೇಧಕವೂ ಆಗಿರುವದಲ್ಲದೆ, ಇದನ್ನು ಓದುವ ಪ್ರತಿಯೊಬ್ಬ ಕನ್ನಡಿಗ ಸ್ತ್ರೀ-ಪುರುಷರು ದುಃಸ್ವಭಾವಗಳನ್ನು ತೊರೆದು ಸನ್ಮಾರ್ಗಪ್ರವೃತ್ತರಾಗದೆ ಇರಲಾರರು.

ಹಾಗೂ ಸದ್ಯದ ರಾಷ್ಟ್ರೀಯ ವಾತಾವರಣದಲ್ಲಿ ಪ್ರಚಾರವಾಗುತ್ತಲಿದ್ದ ಸ್ವಾತಂತ್ರ್ಯದ ತತ್ವಗಳಿಗೆ ಆಚರಣೆಯ ಅವಲೋಕನವೂ ಈ ಪುಸ್ತಕದಲ್ಲಿ ಕಂಡುಬರುವದರಿಂದ ರಾಷ್ಟ್ರದೇವಿಯ ಪವಿತ್ರಸೇವೆಗೆ ತತ್ಪರನಾಗಬೇಕೆನ್ನುವ ಪ್ರತಿಯೊಬ್ಬ ಕನ್ನಡಿಗನು ಇದನ್ನು ಮನಮುಟ್ಟಿ ಅವಲೋಕಿಸಿದರೆ, ಅವನ ಪ್ರಬಲ ಹಾಗೂ ಉದಾತ್ತ ಧ್ಯೇಯಕ್ಕೆ ತಕ್ಕ ಸಹಾಯವಾಗುವದರಲ್ಲಿ ಸಂದೇಹವಿಲ್ಲ.

ಗೋ. ಹ. ಹೊಸೂರ,

ತಾ|| ೨೬-೧೨-೧೯೧೦. ಕರ್ನಾಟಕ ವಿದ್ಯಾವಿನೋದಿ.

ಪ್ರಸ್ತಾವನೆ.

ಇದೊಂದು ಬಂಗಾಲೀ ಭಾಷೆಯಲ್ಲಿಯ ಅತ್ಯುತ್ಕೃಷ್ಟ ಕಾದಂಬರಿಯ ಅನುವಾದವು. ಬಂಗಾಲೀ ಭಾಷೆಯನ್ನು ಸ್ವಂತ ಪ್ರಯತ್ನದಿಂದ ಅಭ್ಯಾಸಿಸುವಾಗ, ಈ ಕಾದಂಬರಿಯ ಮೂಲ ಪ್ರತಿಯು ಅನಪೇಕ್ಷಿತವಾಗಿ ನನಗೆ ಓದಲಿಕ್ಕೆ ಸಿಕ್ಕಿತು. ಅದು ಒಳ್ಳೇ ಮನೋಹರವಾಗಿತೋರಿದ್ದರಿಂದ ಅದನ್ನೇ ಸ. ಚಂದ್ರಿಕೆಯಲ್ಲಿ ಪ್ರಸಿದ್ಧಿಸುವದಕ್ಕಾಗಿ ಯಥಾಮತಿಯಿಂದ ಕನ್ನಡದಲ್ಲಿ ಬರೆದು ವಾಚಕರ ಮುಂದಿರಿಸಿರುವೆನು. ಪ್ರಾಜ್ಞರ ದೃಷ್ಟಿಯಿಂದ ಇದರಲ್ಲಿ ಹಲಕೆಲವು ದೋಷಗಳು ದೊರೆಯಬಹುದಾಗಿವೆ. ಆದರೂ ಅವನ್ನು ಅವರು ತಿಳಿಸಿದಲ್ಲಿ ಕೃತಜ್ಞತೆ ಪೂರ್ವಕವಾಗಿ ಸ್ವೀಕರಿಸಿ, ಬೇಗನೆ ತೆಗೆಯಬೇಕಾದ ಈ ಪುಸ್ತಕದ ಎರಡನೇ ಆವೃತ್ತಿಯಲ್ಲಿ ಸುಧಾರಿಸುವ ಯತ್ನಮಾಡುವೆನು.

ಈ ಕಾದಂಬರಿಯ ಕಥಾನಕದ ವಿಷಯವಾಗಿ ನಾನು ನನ್ನ ಸ್ವಂತ ಶಬ್ದಗಳಿಂದ ಹೇಳುತ್ತ ಕೂಡ್ರುವ ಕಾರಣವು ಉಳಿದಿರುವದಿಲ್ಲ. ಯಾಕಂದರೆ, ಅದನ್ನು ನಮ್ಮ ಮಿತ್ರರೊಬ್ಬರು ಶಕ್ತಿಮಯಿಯ ಸ್ವರೂಪಾವಲೋಕನದಲ್ಲಿ ಕೊಟ್ಟಿರುತ್ತಾರೆ. ವಾಚಕರು ಅದನ್ನು ನೋಡುವದರಿಂದ ಈ ಪುಸ್ತಕದ ಸ್ವರೂಪವು ಅವರಿಗೆ ಸಹಜವಾಗಿ ತೋರಿಬರಬಹುದು.

ಈ ಕಾದಂಬರಿಯಲ್ಲಿ ಅಡಗಿಸಿರುವ ಪದ್ಯಗಳನ್ನೆಲ್ಲ ನಮ್ಮ ಪ್ರಿಯ ಮಿತ್ರರಾದ ಮ. ರಾ. ರಾ. ಮುರಾರಿಭಟ್ಟ ಶಿವಪೂಜಿ, ಇವರು ಪ್ರಸಂಗಕ್ಕೆ ತಕ್ಕಂತೆ ಮಾಡಿಕೊಟ್ಟಿರುವರು. ಅದಕ್ಕಾಗಿ ನಾನು ಅವರ ಅಭಾರ ಮನ್ನಿಸದೆ ಇರಲಾರೆನು.

ಸಾಧುಕಿಂಕರ,

ಲೇಖಕ.

ಅನುಕ್ರಮಣಿಕೆ.

ಪ್ರಕರಣ.	ವಿಷಯ.	ಪುಟ.
೧	ರಾಜಾ-ರಾಣಿಯರ ಆಟ.	೧
೨	ಆಸ್ತ್ರೋತ್ಸವ.	೮
೩	ಮನಸ್ಸಿನ ಹೊಯ್ದಾಟ.	೧೫
೪	ಅಭಿಶಾಪ.	೨೭
೫	ನಿರಾಶೆಯಲ್ಲಿ ಆಶೆ.	೩೩
೬	ಯೋಗಿನಿಯೊ, ಕಲಂಕಿನಿಯೋ?	೪೪
೭	ಯುದ್ಧಸನ್ನಾಹ.	೫೩
೮	ವಿರಹತಾಪ.	೬೬
೯	ಮುದಿಹುಚ್ಚು.	೭೫
೧೦	ಸುಖವೋ, ದುಃಖವೋ?	೮೧
೧೧	ಪುಷ್ಕರಿಣಿಯ ದಂಡೆಯಲ್ಲಿ.	೯೪
೧೨	ಬಾದಶಹನ ಅಂತವು.	೧೧೩
೧೩	ಪುನರ್ಯುದ್ಧ.	೧೨೩
೧೪	ಸೆರೆಯಾಳಾದ ಗಣೇಶದೇವನು.	೧೩೫
೧೫	ಸಂಶಯಪಿಶಾಚ	೧೪೫
೧೬	ಸನ್ಯಾಸಿನೀ, ತಥಾಸ್ತು!	೧೫೭
೧೭	ಸಂಹಾರ.	೧೬೯
	ಉಪಸಂಹಾರ.	೧೭೯

ಆನಂದವನ-ಅಗಡಿಯ ಶ್ರೀ ಶೇಷಾಚಲ ಪ್ರಿಂಟಿಂಗ ಪ್ರೆಸ್ಸಿನಲ್ಲಿ

೦ ಘ. ಪ. ಕಾಳೆ ಇವರಿಂದ ಛಾಪಿಸಲ್ಪಟ್ಟಿತು.

ಶಕ್ತಿಮಾಲಿನಿ

ಅಥವಾ

ಸ್ವಾತಂತ್ರೀಕರಿಸಿಕೊಳ್ಳುವ ಸಾಹಸ.

೧ನೆಯ ಪ್ರಕರಣ.

ರಾಜಾ-ರಾಣಿಯರ ಆಟ.

ಫಾಲ್ಗುಣಮಾಸವು; ಚಳಿಯೊತ್ತಾಗಿದೆ; ರಣಗುಟ್ಟುವ ಬಿಸಿಲಿನಿಂದ ಗಿಡಬಳ್ಳಿಗಳು ಒಣಗಿ ಎಲೆಗಳು ಬಳಬಳ ಉದುರುತ್ತಿವೆ; ಮಾವಿನ ಹೂಗಳಸುಗಂಧವು ದಶದಿಶೆಗಳಲ್ಲಿ ಪಸರಿಸುತ್ತಲಿದೆ; ಕೋಗಿಲೆ, ಪಾಪಿಹಾ ಮುಂತಾದ ಪಕ್ಷಿಗಳ ಇಂಪಾದ ಸ್ವರವು ಕೇಳಬರತೊಡಗಿದೆ; ಮಂದ ಮಾರುತವು ಸುಳಿದಾಡುತ್ತಿದೆ. ಇಂಥ ಈ ರಮ್ಯವಾದ ಸಮಯದಲ್ಲಿ ಮಹೀಪಾಲ ಸರೋವರದ ದಂಡೆಯ ಮೇಲಿರುವ ವೃಕ್ಷಗಳ ದಟ್ಟವಾದ ನೆಳಲಲ್ಲಿ ಇಬ್ಬರು ಬಾಲಕಿಯರು ನಿಂತುಕೊಂಡಿದ್ದರು. ಸರೋವರದ ಸ್ವಾಭಾವಿಕ ಕಪ್ಪುವರ್ಣದ ನೀರಮೇಲೆ, ದಂಡೆಯ ಮೇಲಿನ ಘನವಾದ ಬಕುಲವೃಕ್ಷದ ದಟ್ಟವಾದ ನೆಳಲು ಬಿದ್ದಿದೆ. ಆ ಸ್ಥಳದಲ್ಲಿ ಒಂದು ಚಿಕ್ಕ ನಾವು ಇದ್ದು, ಅದು ಹಗ್ಗದಿಂದ ದಂಡೆಯ ಮೇಲಿನ ಒಂದು ಕಂಟಿಗೆ ಕಟ್ಟಲ್ಪಟ್ಟಿದೆ. ನಸು ಗಾಳಿಯಿಂದ ಆ ನಾವು ಅಲೆದಾಡಿ ಸರೋವರದಲ್ಲಿ ತೆರೆಗಳನ್ನುಂಟುಮಾಡುತ್ತಲಿದೆ. ಅದು ಒಮ್ಮೆ ದಂಡೆಗೆ ಅಪ್ಪಳಿಸುತ್ತ, ಮತ್ತೊಮ್ಮೆ ಕಟ್ಟಿದ ಹಗ್ಗಕ್ಕೆ ಜೋರಿನಿಂದ ಜೋಕುಹೊಡೆಯುತ್ತ ಇರುವದನ್ನು ನೋಡಿ

ದರೆ, ದೈವಯೋಗದಿಂದ ವ್ಯರ್ಥಮನೋರಥಳಾದ ಮಹಾರಾಣಿಯು ಅಂತಃಪುರದ ಕಿಟಕಿಯೊಳಗಿಂದ ಪುನಃಪುನಃ ಹೊರಗೆ ಹಣಿಕಿನೋಡಿ ಮನಸ್ಸಿನ ಆವೇಶವನ್ನು ಕಳಕೊಳ್ಳಲು ಯತ್ನಿಸುವಂತೆಯೊ. ಅಥವಾ ಯಾವದೊಂದು ಕಿಡಿಗೇಡಿ ಕೂಸುಕೂತಲ್ಲಿ ಕೂಡದೆ ನಿಂತಲ್ಲಿ ನಿಲ್ಲದೆ ಅತ್ತಿಂದಿತ್ತ ಇತ್ತಿಂದತ್ತ ಸುಮ್ಮನೆ ಎಡತಾಕುವಂತೆಯೊ ಭಾಸವಾಗುತ್ತಿತ್ತು.

ಬಾಲಿಕೆಯರಿಬ್ಬರು ಬಕುಲವೃಕ್ಷದ ಬುಡದಲ್ಲಿ ನಿಂತು ಜನವಿರಹಿತವಾದ ಆ ನೌಕೆಯನ್ನು ನೋಡಿ ಖಿನ್ನಮನಸ್ಕರಾದರು. ಆಗ ಅವರಲ್ಲೊಬ್ಬಳು—"ಅಕ್ಕಾ ಇಲ್ಲಿಗೆ ರಾಜಕುಮಾರನು ಬಂದಿದ್ದಾನೆಯೇ?" ಎಂದು ತೊದಲು ನುಡಿಯಿಂದ ಪ್ರಶ್ನಮಾಡಿದಳು. ಹೀಗೆ ಮಾತಾಡಿದ ಹುಡುಗಿಯು ಎಂಟು ವರ್ಷದವಳು. ಆದರೂ ಆಕೆಯಿನ್ನೂ ತೊದಲುಮಾತುಗಳನ್ನೇ ಆಡುತ್ತಿದ್ದಳು. ಆಗ ಆಕೆಯ ಆ ಬಾಲಭಾಷೆಯು, ಆಕೆಗಿಂತಲೂ ವಯಸ್ಸು-ರೂಪ ಮುಂತಾದವುಗಳಿಂದ ಶ್ರೇಷ್ಠಳಾದ ಇನ್ನೊಬ್ಬ ಕನ್ನೆಗೆ ರುಚಿಸಲಿಲ್ಲ. ನಿರೂಪಮೆಯಮಾತನ್ನು ಕೇಳಿದಾಗೆಲ್ಲ ಶಕ್ತಿಮಯಿಗೆ ನಗೆಬರುತ್ತಿತ್ತು. ಅದರಿಂದ ಆಕೆಯು ನಿರೂಪಮೆಗೆ ಮೋರೆ ಸೊಟ್ಟ ಸೊಟ್ಟಮಾಡಿ ಅಣಕಿಸಹತ್ತುತ್ತಿದ್ದಳು. ಆದ್ದರಿಂದ ನಾಚಿಗೊಂಡುನಿರೂಪಮೆಯು ಮಾತೇ ಆಡುತ್ತಿರಲಿಲ್ಲ. ಆದರೆ ಶಕ್ತಿಯು ಹೋದಲ್ಲಿ-ಬಂದಲ್ಲಿ ಕೇವಲ ನೆಳಲಿನಂತೆ ನಿರೂಪಮೆಯು ಹಿಂಬಾಲಿಸತಕ್ಕವಳೇ. ಅವರಿಬ್ಬರನ್ನು ಒಂದು ಅಜ್ಞಾತಶಕ್ತಿಯು (ಪ್ರೇಮವು) ಜಗಿದಿತ್ತು. ಅಂತೇ ಶಕ್ತಿಯನ್ನು ಬಿಟ್ಟು ನಿರೂಪಮೆಯೂ, ನಿರೂಪಮೆಯನ್ನು ಬಿಟ್ಟು ಶಕ್ತಿಯೂ ಒಂದು ಕ್ಷಣ ಸಹ ಅಗಲಿ ಇರುತ್ತಿರಲಿಲ್ಲ. ಅವರಿಬ್ಬರು ಪರಸ್ಪರರನ್ನು ಹೀಗೆ ಅಖಂಡವಾಗಿ ಪ್ರೀತಿಸುವಂತೆ ದಿನಾಜಪುರದ ಯುವರಾಜನಾದ ಗಣೇಶದೇವನಲ್ಲಿಯೂ ಅವರೀರ್ವರ ಪ್ರೇಮವು ವಿಶೇಷವಾಗಿ

ತ್ತು. ಊಟೋಪಚಾರಗಳ ಪರಿವೆಯಿಲ್ಲದೆ ಅವರು ಯಾವಾಗಲೂ ಆಪಸೊಡನೆ ಆಡುವದರಲ್ಲಿಯೂ, ಅಪ್ಯಾಡುವದರಲ್ಲಿಯೂ ತಲ್ಲೀನ ರಾಗಿರುತ್ತಿದ್ದರು. ಗಣೇಶದೇವನಿಗೂ ಶಕ್ತಿ-ನಿರೂಪಮೆಯರಲ್ಲಿನ ಕಾಸ ರಟುತಾಸುಗಳನ್ನು ಕಳೆಯುವದು ಕಠಿಣವಾಗಿತ್ತು. ಇಂದು ಅವನು ಆ ಬಾಲಿಕೆಯರೊಡನೆ ಆಟವಾಡುವದಕ್ಕಾಗಿ ತನ್ನ ಚಿಕ್ಕನಾವನ್ನು ತಕೊಂಡು ಆ ಮಹೀಪಾಲಸರೋವರಕ್ಕೆ ಬಂದಿದ್ದನು.

ನಿರೂಪಮೆಯ ಪ್ರಶ್ನೆಗೆ ಶಕ್ತಿಯು ಉತ್ತರವನ್ನೇ ಕೊಡಲಿಲ್ಲ. ಅದನ್ನು ಅವಳು ಕೇಳಿಯೂ ಕೇಳದಂತೆ ನಟಿಸಿ,—''ತಂಗೀ, ನಡೆ; ನಾವು ಸರೋವರದಲ್ಲಿಳಿದು ಕಮಲಗಳನ್ನು ಕೊಯ್ಯುವಾ'' ಎಂದು ನುಡಿಯಲು, ನಿರೂಪಮೆಯು—'ಒಲ್ಲೆ. ನೀರಿನಲ್ಲಿ ಬೀಳುತ್ತೇನೆ ನಾನೊಲ್ಲೆ' ಎಂದು ಕಂಪಿತದನಿಯಿಂದ ಉತ್ತರಕೊಟ್ಟಳು. ಇದನ್ನು ಕೇಳಿ ಒಂಬತ್ತೇವರ್ಷದ ಅತ್ಯಂತ ತೇಜಸ್ವಿನಿಯಾದ ಆ ಶಕ್ತಿಮಯಿ ಯು ಹುಬ್ಬುಗಂಟಿಕ್ಕಿ—''ಬರುವದಿಲ್ಲವೆ? ಕಮಲಕೊಯ್ಯಲಿಕ್ಕೆ ಬರುವದಿಲ್ಲವೆ? ಎಂದು ವಿಲಕ್ಷಣಸ್ವರದಿಂದ ಅಪಡುಗಚ್ಚಿ ಕೇಳಿದಳು. ಆಗ ನಿರೂಪಮೆಯು ತನ್ನ ಮುತ್ತಕ್ಕಿಯ ತೀರಕಠೋರಮಾತುಗಳಿಗೂ ಅಂಜದಷ್ಟು ಅಂಜಿ—'ನಾನೊಲ್ಲೆನು, ನಾ···' ಎಂದುಭಯಕಂಪಿತ ದನಿಯಿಂದ ಹೇಳಿದ್ದನ್ನು ಕೇಳಿ, ಅಪಮಾನಹೊಂದಿ ಅವಸಾನಗೆಟ್ಟ ಮಾನಿಸ್ತ್ರೀಯು ಕಾಲುಗಳನ್ನಪ್ಪಳಿಸುವಂತೆ ಶಕ್ತಿಯು ಕಾಲು ಅಪ್ಪ ಳಿಸಿ—''ಎಲೇ ಗಯ್ಯಾಳಿ, ಬರುವದಿಲ್ಲವೆ?'' ಎಂದು ಗಟ್ಟಿಯಾಗಿ ಕೂಗಿ ಆಕೆಯ ಕೈಹಿಡಿದು ಆಕೆಯನ್ನು ದರದರ ಎಳೆಯುತ್ತ ಸರೋ ವರದಕಡೆಗೆ ಒಯ್ಯಹತ್ತಿದಳು. ಆಗ ನಿರೂಪಮೆಯು ಅಳಹತ್ತಿದಳು. ಗಿಡದಮೇಲೆ ಹತ್ತಿ ಪುಷ್ಪಗಳನ್ನು ಎತ್ತುತ್ತಿದ್ದ ಮತ್ತೆ ಇಬ್ಬರು ಬಾಲಿಕೆಯರು ಕೂಡಲೆ ಗಿಡದಿಂದಿಳಿದುಬಂದು ಶಕ್ತಿಯನ್ನು ಕು ರಿತು—ಶಕ್ತೀ, ಎಲೇ ಶಕ್ತೀ, ಇವಳನ್ನೆಲ್ಲಿಗೆ ಎಳೆದೊಯ್ಯುತ್ತೀ?

ಯಾಕೆ ಒಯ್ಯುತ್ತೀ?" ಇತ್ಯಾದಿ ಪ್ರಶ್ನೆಮಾಡಿದರು. ಆಗ ಶಕ್ತಿಯು ನಿರೂಪಮೆಯು ಕೈಬಿಟ್ಟು "ನೋಡಿರಿ, ಬರುವದಿಲ್ಲವಂತೆ? ಸರೋವರ ದಲ್ಲಿಳಿದು ಕಮಲಗಳನ್ನು ತರೋಣವೆಂದರೆ ಈ ಅವ್ವಾಳಿಯು ಒಲ್ಲ ಳಂತೆ" ಎಂದಳು. ಗಿಡದಿಂದ ಇಳಿದುಬಂದ ಬಾಲಿಕೆಯರಲ್ಲಿ ಕುಸು ಮೆಯೆಂಬವಳು ಶಕ್ತಿಗೆ—ಆಕೆಯು ಚಿಕ್ಕವಳು. ಆದ್ದರಿಂದ ಆಕೆ ಯನ್ನು ಬಿಡು; ನಡೆ, ನಾನೂ-ನೀನೂ ಹೋಗಿ ಕಮಲಗಳನ್ನು ತರು ವಾ, ಎಂದಳು. ಕೂಡಲೆ ಕುಸುಮೆ-ಶಕ್ತಿಯರು ಸರೋವರದಲ್ಲಿಳಿದು ಪದ್ಮಗಳನ್ನು ಕೊಯ್ಯುಹತ್ತಿದರು. ಕಾಮಿನಿಯು ನಿರೂಪಮೆ ಯ ಮೋರೆಯಮೇಲೆ ಕೈಯಾಡಿಸಿ—ತಂಗೀ ಆ ದುಷ್ಟ ಹುಡುಗೆಯು ಕೂಡಹೋಗಬೇಡವ್ವಾ. ನಾನೂ ನೀನೂ ಕೂಡಿ ಇಲ್ಲಿಯೇ ಈ ಬಕುಲಪುಷ್ಪಗಳಿಂದ ಮಾಲೆಯನ್ನು ಕಟ್ಟೋಣ, ಎಂದು ಸಂತೈಸ ಲು, ನಿರೂಪಮೆಯ ದುಃಖವೆಲ್ಲ ಅಡಗಿ ಆಕೆಯ ಮೋರೆಯ ಮೇಲೆ ಹಾಸ್ಯರೇಖೆಯು ಮಿನುಗಹತ್ತಿತು. ಆಗ ನಿರೂಪಮೆಯು ತನ್ನ ಎಡ ಗೈಮುಷ್ಟಿಯನ್ನು ಮುಂದೆಮಾಡಿ ಅದರಲ್ಲಿಯ ದಾರವನ್ನು ಕಾಮಿ ನಿಗೆ ತೋರಿಸಿ, "ಇಗೋ ಅಕ್ಕಾ ಇದರಿಂದ ಮಾಲೆಯನ್ನು ಹೆಣೆದು ರಾಜಕುಮಾರನಿಗೆ ಕೊಡುತ್ತೇನೆ" ಎಂದು ನಗುತ್ತಹೇಳಿದಳು.

ಸೂರ್ಯನು ಅಸ್ತಾಚಲವನ್ನು ಸೇರಲನುವಾಗಿದ್ದಾನೆ; ಸರೋ ವರದ ಪಶ್ಚಿಮ ತಟಾಕದ ವೃಕ್ಷಗಳ ಶಿಖರಪ್ರದೇಶಗಳು ಶಾಂತವಾ ದಸೂರ್ಯರಶ್ಮಿಗಳಿಂದ ಝಗಝಗಿಸುತ್ತಲಿವೆ. ಪೂರ್ವತಟಾಕದಲ್ಲಿ ಪದ್ಮಪತ್ರಗಳಿಂದ ಮುಚ್ಚಲ್ಪಟ್ಟ ಜಲರಾಶಿಯ ಹೃದಯವನ್ನು ದಿನಕ ರನು ತನ್ನ ಉದ್ಭಿನ್ನ ಸ್ವರ್ಣ ಕರಗಳಿಂದ ಎಳೆಯುತ್ತಿರುವನೆಂಬಂತೆ ಆತನ ಕಿರಣಗಳು ನೀರಲ್ಲಿ ದೂರದವರೆಗೆ ಚಾಚಿರುತ್ತವೆ. ಅರಳಿಪ್ರಫು ಲ್ಲಿತವಾದ ಶತದಳಗಳು, ಹಾಗು ಸುಹಾಸ್ಯದಿಂದ ಪ್ರಫುಲ್ಲಿತಗಳಾದ ಬಾಲಕಿಯರ ಆಗಿನ ಮುಖಗಳು ಸೂರ್ಯಕಿರಣಗಳ ಮನೋಹರ

ವಾದ ಸ್ಪರ್ಧೆಯಿಂದ ಪರಸ್ಪರರ ಸೌಂದರ್ಯವನ್ನು ವೃದ್ಧಿಗೊಳಿಸುತ್ತಿದ್ದವು.

ಸ್ವಲ್ಪ ಹೊತ್ತಿನ ಮೇಲೆ ಆರ್ದ್ರ ಕೇಶಗಳುಳ್ಳ, ಆರ್ದ್ರವಸನ ವೇಷ್ಟಿತರಾದ, ಸ್ನಾನದಿಂದ ದಿವ್ಯರೂಪಗಳುಳ್ಳವರಾಗಿ ತೋರುವ ಶಕ್ತಿ ಹಾಗು ಕುಸುಮೆಯರು ಕಾಮಿನೀ-ನಿರೂಪಮೆಯರಿದ್ದಲ್ಲಿಗೆ ಬಂದು ತಮ್ಮ ಬೊಗಸೆಗಳೊಳಗಿನ ಕಮಲಗಳನ್ನು ನೆಲದಮೇಲೆ ಸುರುವಿದರು. ಆಗ ನಿರೂಪಮೆಯು—"ನಾನು ಇದರೊಳಗಿನದೊಂದು ಕಮಲವನ್ನು ಒಯ್ದು, ರಾಜಕುಮಾರನಿಗೆ ಕೊಡಲ್ಯಾ" ಎನ್ನಲು, "ನಾವು ಕಷ್ಟಬಟ್ಟು ಕೊಯ್ದುಕೊಂಡು ಬರಬೇಕಂತೆ, ಈ ಚಲುವೆಯು ಅವನ್ನೊಯ್ದು ರಾಜಕುಮಾರನಿಗೆ ಕೊಡುತ್ತಾಳಂತೆ. ನೋಡಿರಿ, ಈ ನಾಚಿಕೆಗೇಡಿಯ ಮುಖವನ್ನಾದರೂ ನೋಡಿರಿ" ಎಂದು ವ್ಯಂಗ್ಯ ಹಾವಭಾವಗಳನ್ನು ಮಾಡುತ್ತ ಶಕ್ತಿಯು ನುಡಿದಳು. ಆಗ ಪುನಃ ನಿರೂಪಮೆಯು ಅಳಮೋರೆಮಾಡಿದಳು. ಅಷ್ಟರಲ್ಲಿ ಕುಸುಮೆಯು—ತಂಗೀ ತಕ್ಕೋ, ನಾನು ತಂದುತಂದ ಈ ಪದ್ಮರಾಶಿಯೊಳಗಿಂದ ಬೇಕಾದಷ್ಟು ಕಮಲಗಳನ್ನು ತಕ್ಕೋ, ಎಂದು ಹೇಳಿ ನಿರೂಪಮೆಯನ್ನು ಸಮಾಧಾನಪಡಿಸಿದಳು.

ಕುಸುಮೆ-ಕಾಮಿನಿಯರಿಬ್ಬರು ವಿವಾಹಿತರು. ಆದರೂ ಅವರ ವಯಸ್ಸು ಅನುಕ್ರಮವಾಗಿ ೧೧-೧೨ ವರ್ಷಗಳದ್ದಿತ್ತು ಮಾತ್ರ. ಆ ಬಾಲಿಕೆಯರೆಲ್ಲರೂ ಕೂಡಿ ಆಗ ರಾಜಾರಾಣಿಯ ಆಟವನ್ನು ಆಡಹತ್ತಿದರು. ಕಾಮಿನಿಯು ರಾಣಿಯ ತಾಯಿಯಾದಳು. ಕುಸುಮೆಯು ರಾಣಿಯ ಸಖಿಯಾದಳು. ಅವರಿಬ್ಬರು ಕೂಡಿ ನಿರೂಪಮೆಯನ್ನು ರಾಣಿಯಾಗಿಯೂ, ಶಕ್ತಿಯನ್ನು ರಾಣಿಯ ದಾಸಿಯನ್ನಾಗಿಯೂ ಮಾಡಬೇಕೆಂದು ಯೋಚಿಸಿ, ಹಾಗೆ ಅಂದುತೋರಿಸಿದರು. ಕೂಡಲೆ ಕ್ರುದ್ಧ ಹಾಗು ಅಭಿಮಾನ ಸ್ವಭಾವದ ಶಕ್ತಿಯು ಆಷ್ಟ

ಕಪ್ಪುಬಣ್ಣದ ಕಣ್ಣುಗುಡ್ಡೆಗಳೊಳಗಿಂದ ಭಯಂಕರವಾದ ಅಗ್ನಿಯು ಹೊರಟಂತಾಗಿ, ಅವು ಕೆಂಪಡರಿದವು. ಆಗ ಅವಳು ಅಭಿಮಾನಯುಕ್ತ ವಾಣಿಯಿಂದ—ಆ! ಹಾಗಲ್ಲ, ನಾನೇ ರಾಣಿಯು, ಅವಳೇ ದಾಸಿಯು, ಎಂದಳು.

ಹೀಗೆ ಅವರಲ್ಲಿ ಮಾತುಗಳು ನಡೆದಿರಲು, ಕೊಳಲುಬಾರಿಸುತ್ತ ಬರುವ ಗಣೇಶದೇವನು ಅವರ ಕಣ್ಣಿಗೆ ಬಿದ್ದನು. ಅವನು ಕೊಳಲಲ್ಲಿ ಹೀಗೆ ಹಾಡುತ್ತಿದ್ದನು:—

||ಪದ|| "ಹೊಲದಕಷ್ಟವನ್ನು ಕುರಿತು" ಎಂಬಂತೆ

ನಾನು ಏನು ಮಾಡಲೀಗ ಹೇಳು ಗೆಳತಿಯೆ|
ಗಾನಲಹರಿಯೇಳುತಿಹುದು ಹೃದಯದಲ್ಲಿಯೆ ||೧||
ನನ್ನ ಮನಸಿನೊಲವಿನಂತೆ ನಾನು ಹಾಡುವೆ|
ಇನ್ನು ರೂಪಕೆಣೆಯು ತಾನದೆಲ್ಲಿ ಇಲ್ಲವೆ ||೨||
ದಿವ್ಯರೂಪನೋಡೆಮನವು ಪ್ರಾಣವೆಲ್ಲವು|
ಅವ್ಯವಸ್ಥೆಗೊಳ್ಳುತಿಹುದು ಮೂರು ಲೋಕವು ||೩||
ಮನಸಿನೊಲವಿಗಾಗಿ ಹಗಲುರಾತ್ರಿಯೆಲ್ಲವು|
ಘನಸುಮೂರ್ತಿನುತಿಯು ಪದವು ಗಾನವಾದ್ಯವು ||೪||
ಆವತೆರದಿಗಾನವೆನಗಲೀಗ ಕೇಳುವೆ|
ನೀವೆ ಕೇಳ್ವಿರಂತೆ ಎನ್ನ ಕೊಳಲನೂದುವೆ ||೫||
ಕೊಳಲಲಹರಿಯಿಂದ ನಿನಗೆ ತೋಷದೋರಲಿ|
ಗೆಳತಿ ನಿನ್ನ ಪಾದವಶಕೆ ಪ್ರಾಣಹೋಗಲಿ ||೬||
ಕೆಳದಿಕೊಳಲದೀಗಲೆನಗೆ ತ್ರಾಸಕೊಡುವದು|
ಘಳಿಲನೂದಿದಂತೆ ತಾನೆಯೂದಲೊಲ್ಲದು ||೭||
ಸಹಜವಾಗಿ ಕೊಳಲನೂದೆ ಕೃಷ್ಣನೆಂಬುದು|
ಅಹಹನಿಯೆ ಮಾಡಲೇನು ಬೇಗ ಪೇಳ್ವುದು ||೮||

ಅದನ್ನು ಕೇಳಿ ನಿರೂಪಮೆಯು ಅತ್ಯಾನಂದದಿಂದ—"ಅಯ್ಯೊ, ರಾಜಕುಮಾರನೇ ಬಂದನು! ಎಂದು ನಾಚಿಗೊಂಡಳು. ಆಗ ಕುಸುಮ-ಕಾಮಿನಿಯರು—ನಿರೂಪಮೇ ನಿನ್ನನ್ನೇ ವರಿಸುವಂತೆ ನಾವು ರಾಜಕುಮಾರನಿಗೆ ಹೇಳುವೆವಮ್ಮಾ ಎಂದು ನುಡಿದರು. ಅಷ್ಟರಲ್ಲಿ ಕುಮಾರನು ಅವರ ಹತ್ತಿರಕ್ಕೆ ಬಂದೇಬಿಟ್ಟನು. ಅವರು ಕುಮಾರನಿಗೆ ತಮ್ಮ ಆಟದ ಸಂಗತಿಯನ್ನೆಲ್ಲ ಹೇಳಿ ಅವನನ್ನು ಕುರಿತು—"ಕುಮಾರ, ನಿನ್ನ ರಾಣಿಯು ನಿರೂಪಮೆಯೋ ಶಕ್ತಿಯೋ?" ಎಂದು ಕೇಳಿದರು. ಗಣೇಶನೇನನ್ನೂ ಅರಿಯದವನಂತೆ ನಟಿಸಿ—ನಾನಂತೂ ರಾಜನೇ; ಆದರೆ ರಾಣಿಯಾರೆಂಬುದನ್ನು ನೀವೇ ಹೇಳಿರಿ, ಎಂದು ನಗುತ್ತ ಕೇಳಿದನು.

ಅಷ್ಟರಲ್ಲಿ ತನ್ನ ಕೈಯಲ್ಲಿದ್ದ ಮಾಲೆಯನ್ನು ನಿರೂಪಮೆಯು ರಾಜಕುಮಾರನ ಕೊರಳಲ್ಲಿ ಹಾಕಿದಳು. ಕೂಡಲೆ ಅವನು ಅದನ್ನು ತೆಗೆದು ಶಕ್ತಿಯ ಕೊರಳಿಗೆ ಹಾಕಿ—"ನೋಡಿರಿ, ಈಕೆಯೇ ನನ್ನ ರಾಣಿಯು" ಎಂದು ನುಡಿದು ಶಕ್ತಿಯನ್ನು ಅಪ್ಪಿಕೊಂಡು ಮುದ್ದಿಸಿದನು.

ಆಗಿನ ಶಕ್ತಿಯ ಮುಖಮಂಡಲದ ಗಂಭೀರಯುಕ್ತ ಆಹ್ಲಾದದತೇಜಸ್ಸು ಯುವತಿಯರ ಗಂಭೀರ ತೇಜಸ್ಸನ್ನು ಕೂಡ ಹಿಂದೂಡುವಂತಿತ್ತು. ಆಗ ನಿರೂಪಮೆಯ ಕಣ್ಣೊಳಗಿಂದ ಒಂದೆರಡು ಅಶ್ರುಬಿಂದುಗಳುದುರಿದವು. ಶಕ್ತಿಯು ಕೂಡ ರಾಜಕುಮಾರನ ವಿವಾಹವು ನಿಜವಾಗಿಯೇ ಆಯಿತೆಂದು ಆಕೆಯು ಭಾವಿಸಿದಳು. ಆಗ ನಿರೂಪಮೆಯು ಕುಮಾರನನ್ನು ಕುರಿತು—"ಒಳ್ಳೇದು, ಶಕ್ತಿಯೇ ರಾಣಿಯಾಗಲಿ; ನಾನು ಇಂದಿನಿಂದ ನಿನ್ನ ದಾಸಿಯಾಗುವೆನು" ಎಂದು ನಿರ್ಮಲಾಂತಃಕರಣದಿಂದ ಹೇಳಿದಳು.

೨ನೆಯ ಪ್ರಕರಣ.

ಅಸ್ತ್ರೋತ್ಸವ.

ಕ್ರಿ. ಶ. ಹದಿನಾಲ್ಕನೆಯ ಶತಕದ ಮಧ್ಯದಲ್ಲಿ ಬಂಗಾಲಪ್ರಾಂತವು ದಿಲ್ಲಿಯ ಅಧೀನತೆಯಿಂದ ಮುಕ್ತವಾಗಿತ್ತು. ೧೩೩೮ರಲ್ಲಿ ಸುವರ್ಣಪುರದ ಅರಸನಾದ ಬಹಿರಾಮಖಾನನು ತೀರಿಕೊಳ್ಳಲು, ಅವನ ಅನುಯಾಯಿಯಾದ ಫಕೀರಉದ್ದೀನನು ಪೂರ್ವಬಂಗಾಲವನ್ನೆಲ್ಲ ಸ್ವಾಧೀನಪಡಿಸಿಕೊಂಡನು. ಅದೇ ಕಾಲಕ್ಕೆ ಲಕ್ಷ್ಮಣಾವತಿಯ ಅರಸನಾದ ಖಾದರಖಾನನನ್ನು ಕೊಂದು ಆಲೀಉದ್ದೀನ ಆಲಿಶಹನೆಂಬವನು ಪಶ್ಚಿಮ ಬಂಗಾಲದ ಅಧಿಪತಿಯಾಗಿ ಗೌಡದೇಶದ ಒಳಿಯಲ್ಲಿರುವ ಪಾಂಡುಯಾಯುಎಂಬ ಪಟ್ಟಣವನ್ನು ರಾಜಧಾನಿಯಾಗಿ ಮಾಡಿಕೊಂಡನು. ಆಲೀಉದ್ದೀನನ ದಾಸೀಪುತ್ರನಾದ ಶಮುಸುದ್ದೀನ ಇಲಿಯಾಸಶಹನು ಕ್ರಿ. ಶ. ೧೩೫೨ರಲ್ಲಿ ಸುವರ್ಣಪುರದ ಅರಸನನ್ನು ಗೆದ್ದು ಇಡಿಯ ಬಂಗಾಲವನ್ನು ಏಕಛತ್ರಾಧಿಪತ್ಯಕ್ಕೊಳಪಡಿಸಿದನು. ಆಗ ದಿಲ್ಲಿಯಲ್ಲಿ ಫಿರೋಜಶಹನು ಸಾರ್ವಭೌಮನಿದ್ದನು. ಅವನು ಮೋಸದಿಂದ ಒಮ್ಮೆ ಬಂಗಾಲದಮೇಲೆ ಸ್ವಾರಿಮಾಡಿದನು. ಈ ಸುದ್ದಿಯು ಪಾಂಡುಯಾಯನಗರವಾಸಿಗಳಿಗೆ ಮುಟ್ಟಲು ಅವರು ಬೆದರಿದರು. ವಂಗೇಶ್ವರನು ರಾಜಧಾನಿಯಿಂದ ೧೧ ಹರದಾರಿದೂರದಲ್ಲಿದ್ದ ಏಕದಲಾಎಂಬ ದುರ್ಗವನ್ನು ಆಶ್ರಯಿಸಿದನು. ಈ ದುರ್ಗದ ಭದ್ರತೆಯನ್ನು ನೋಡಿ ಅದು ತನಗೆ ಸಹಜವಾಗಿ ಕೈವಶವಾಗಲಿಕ್ಕಿಲ್ಲೆಂದು ತಿಳಿದ ಫಿರೋಜಶಹನು, ವಂಗೇಶ್ವರನಿಂದ ಕೆಲವು ಕಪ್ಪುಕಾಣಿಕೆಗಳು ತನಗೆ ಸಲ್ಲುವಂತೆ ಒಡಂಬಡಿಕೆಮಾಡಿಕೊಂಡು ಸ್ವದೇಶಕ್ಕೆ ಹೊರಟುಹೋದನು.

ಹೀಗೆ ಕೆಲವು ದಿವಸಗಳವರೆಗೆ ದಿಲ್ಲಿಯ ಮಾಂಡಲಿಕನಾದ

ವಂಗೇಶ್ವರನು ೧೩೬೧ರಲ್ಲಿ ದಿಲ್ಲಿಯ ಅಧೀನತೆಯನ್ನು ಕಿತ್ತೊಗೆದು, ಸ್ವತಂತ್ರನಾದನು; ಹಾಗು ಆಗ ಅವನು ದೇಶದಲ್ಲೆಲ್ಲ ಮಹೋತ್ಸವಗನ್ನು ಮಾಡಿ, "ಸುಲ್ತಾನ" ಎಂಬ ಶ್ರೇಷ್ಠವಾದ ಬಿರುದನ್ನು ಧರಿಸಿದನು. ಈ ವಿಜಯೋತ್ಸವದ ಸ್ಮಾರಕವೆಂದು ಪ್ರತಿವರ್ಷವೂ ರಾಜಧಾನಿಯಲ್ಲಿ ಆ ಮಿತಿಗೆ ಉತ್ಸವಗಳು ಮಾಡಲ್ಪಡುತ್ತಿದ್ದವು. ಮಲ್ಲಯುದ್ಧ, ದಾಂಡಪಟ್ಟೆ, ಕುದುರೆಪತ್ತುವದು ಮೊದಲಾದ ಆಟಗಳು ಆ ಉತ್ಸವದ ಮುಖ್ಯ ಅಂಗಗಳಾಗಿದ್ದವು. ಮಲ್ಲಯುದ್ಧದಲ್ಲಿಯೂ ಅಸ್ತ್ರಾದಿಯುದ್ಧಗಳಲ್ಲಿಯೂ ವಿಜಯಹೊಂದಿದವರನ್ನು ಪಾರಿತೋಷಕಗಳೇ ಮೊದಲಾದವುಗಳಿಂದ ವಂಗೇಶ್ವರನು ಚನ್ನಾಗಿ ಸನ್ಮಾಸಿಸುತ್ತಿದ್ದನು.

ಇಂದು ಪಾಂಡುಯಾಯ ರಾಜಧಾನಿಯಲ್ಲಿ ವಿಜಯೋತ್ಸವವು; ತಳಿರುತೋರಣಗಳಿಂದಲೂ, ಧ್ವಜಪತಾಕೆಗಳಿಂದಲೂ ದುರ್ಗಪ್ರದೇಶವು ಸುಶೋಭಿತವಾಗಿದೆ. ಪ್ರೇಕ್ಷಕರು ಸಂದಣಿತರಾಗಿದ್ದಾರೆ. ಈ ಒಳಗಾಗಿ ಆಲಿಯೊಸ ಶಹನು ಮೃತನಾದ್ದರಿಂದ ಅವನ ಮಗನಾದ ಸುಲ್ತಾನ ಶಿಕಂದರಶಹನು ಈಗಿನ ವಂಗೇಶ್ವರನು. ಎತ್ತರವಾದ ಮಂಚದಮೇಲೆ ನಾನಾತರದ ಪುಷ್ಪಗುಚ್ಛಗಳಿಂದ ಪರಿವೇಷ್ಟಿತವಾದ ಅತ್ಯುಚ್ಚ ಸಿಂಹಾಸನದಲ್ಲಿ ಸುಲ್ತಾನನು ಕುಳಿತಿದ್ದಾನೆ. ವಂಗದೇಶದ ನಾನಾಪ್ರದೇಶಗಳಿಂದ ಆಮಂತ್ರಿತರಾದ ಮಾಂಡಲಿಕರಾಜರೂ, ಸರದಾರರೂ, ಜಮೀನದಾರರೂ, ಪ್ರತಿಷ್ಠಿತ ಗೃಹಸ್ಥರೂ ಬಂದು ಯೋಗ್ಯತೆಯ ಪ್ರಕಾರ ಸುಲ್ತಾನನ ಪಾರ್ಶ್ವಭಾಗಗಳಲ್ಲಿ ಕುಳಿತಿದ್ದಾರೆ. ಕುಸ್ತೀಜಟ್ಟಿಗಳ ಅರ್ಭಟವೂ, ಕತ್ತಿಗಳ ಖಣಖಣಾಟವೂ, ಪ್ರೇಕ್ಷಕಗಣದ ಭಲೆ, ಶಾಬಾಸ್, ವಾಹವ್ವಾ ಎಂಬ ಉತ್ಸಾಹಜನಕ ಶಬ್ದಗಳ ಧ್ವನಿಯೂ ಸಮ್ಮಿಲಿತವಾಗಿ ಆ ಪ್ರದೇಶವೆಲ್ಲ ನಿನಾದಮಯವಾದಂತೆ ಭಾಸವಾಗುತ್ತಿತ್ತು.

ದುರ್ಗದ ನಾಲ್ಕೂ ಕಡೆಗಳಲ್ಲಿ ತರತರದ ಅಂಗಡಿಗಳು ಸಾಲ್ಗೊಂಡಿದ್ದವು. ಕೆಲವುಗಳಲ್ಲಿ ತಿಂಬುಂಬುವ ಪದಾರ್ಥಗಳೂ, ಕೆಲವುಗಳಲ್ಲಿ ಮನೋಹರವಾದ ಚಿತ್ರಗಳೂ ಇದ್ದರೆ, ಬೇರೆ ಕೆಲವು ಅಂಗಡಿಗಳಲ್ಲಿ ಲಕಲಕಿಸುವ ನಾನಾ ಜಾತಿಯ ಶಸ್ತ್ರಾಸ್ತ್ರಗಳು ರಾಶಿಗಟ್ಟಲೆ ಒಟ್ಟಿದ್ದವು. ಇಂದಿನ ವಿಜಯೋತ್ಸವದ ನಿಮಿತ್ತವಾಗಿ ಎಲ್ಲ ಪ್ರಕಾರದ ಉದ್ಯೋಗಸ್ಥರು ತಮ್ಮ ತಮ್ಮ ಸರಕುಗಳೊಡನೆ ಆ ದುರ್ಗಪ್ರವೇಶಕ್ಕೆ ಬಂದು ಅಂಗಡಿಗಳನ್ನಿಟ್ಟು ವ್ಯಾಪಾರವನ್ನು ನಡಿಸಿದ್ದರು. ಈ ದಿವಸ ವಿಶೇಷ ಜನರು ಕೂಡುವದರಿಂದ ತಮ್ಮ ವ್ಯಾಪಾರವು ಹೆಚ್ಚಾಗಬೇಕು, ತಮ್ಮ ವ್ಯಾಪಾರವು ಹೆಚ್ಚಾಗಬೇಕು ಎಂಬ ಮೇಲಾಟವು ಅವರಲ್ಲಿ ಸ್ವಾಭಾವಿಕವಾಗಿ ಕಂಡು ಬರುತ್ತಿತ್ತು. ಹೀಗೆ ಅಲ್ಲಿಯ ಅಂಗಡಿಗಳೆಲ್ಲ ಸಾಲಂಕೃತವಾಗಿ ಶೋಭಿಸುತ್ತಿರಲು, ಕಟ್ಟಕಡೆಯ ಒಂದು ಅಂಗಡಿಯಲ್ಲಿ ಒಬ್ಬ ಸಾಮುದ್ರಿಕ ಹೇಳುವ ಜೋಯಿಸನು ಕುಳಿತಿದ್ದನು. ಭವಿಷ್ಯದ ಬಗ್ಗೆ ಪ್ರಾಚೀನದಿಂದಲೂ ಆಸ್ತಿಕ ಭಾವವುಳ್ಳ ನಮ್ಮ ಹಿಂದೂಜನರು, ಜೋಯಿಸನು ಹೀಗೆ ಅಂಗಡಿಯಲ್ಲಿ ಬಂದು ಕುಳಿತಿರಲು ಆ ಸುಸಂಧಿಯನ್ನು ಕಳಕೊಳ್ಳುವರೇ? ಎಲ್ಲ ಅಂಗಡಿಗಳಿಗಿಂತಲೂ ಜೋಯಿಸನ ಅಂಗಡಿಗೆ ಹೆಚ್ಚು ಗಿರಾಕಿಗಳು ಕಲೆತರು. ಬಿನ್ ಭಾಂಡವಲದ ಆ ವ್ಯಾಪಾರದಿಂದ ಅವನಿಗೆ ವಿಶೇಷ ಪ್ರಯೋಜನವಾಗುತ್ತಿದ್ದರೂ ಬೆಳಗಿನಿಂದ ಬಂದೇಸವನೆ ಸಾಮುದ್ರಿಕ ಹೇಳಿಹೇಳಿ ಅವನು ಬೇಸತ್ತಿದ್ದನು. ಇನ್ನು ಅವನು ಗುಡಚಾಪಿ ಕಟ್ಟತಕ್ಕವನು, ಅಷ್ಟರಲ್ಲಿ ಒಬ್ಬ ತರುಣೀಮಣಿಯು ಅಲ್ಲಿಗೆ ಬಂದು ಆ ಗಣಕನ ಮುಂದೆ ಕೈನೀಡಿದಳು. ಸುಂದರಿಯರ ಭಿಡೆಯು ಮಹಾಭಿಡೆಯಷ್ಟೆ? ಜೋಯಿಸನಿಂದ ಆಕೆಯ ಕೈನೋಡದೆ ಹೋಗುವದಾಗಲಿಲ್ಲ. ಆಗ ಅವನು ಆಕೆಯ ಎಡಗೈಯನ್ನೂ, ರಾಜರಾಜೇಶ್ವರೀಸಮಾನ ಲಕ್ಷಣಗಳುಳ್ಳ ಹಾಗು ತನ್ನ ಸೌಂದರ್ಯದ ಸೊಬಗಿನಿಂದ ಭೂಮಂಡಲ

ದ ಅನಾಹುತಕ್ಕೆ ಕಾರಣವಾಗುವಂಥ ಚಿಹ್ನಗಳುಳ್ಳ ಆಕೆಯ ಮೋರೆಯನ್ನು ದಿಟ್ಟಿಸಿ ನೋಡತೊಡಗಿದನು. ಯುವತಿಯು ಆ ಗಣಕನ ಕೈಯಲ್ಲಿ ಕಿಂಚಿತ್ ದ್ರವ್ಯವನ್ನಿಟ್ಟಳು. ಕೂಡಲೆ ಅವನು—"ತಂಗೀ ನೀನು ರಾಜರಾಜೇಶ್ವರಿಯಾಗುವದು ಖಂಡಿತವು" ಎಂದನು.

ಅದೇ ಕಾಲಕ್ಕೆ ಒಬ್ಬ ಅಶ್ವಾರೂಢನು ಕುದುರೆಯನ್ನು ಸಾವಕಾಶವಾಗಿ ನಡೆಸುತ್ತ ಆ ಅಂಗಡಿಯ ಮುಂಭಾಗದಲ್ಲಿ ನಡೆದಿದ್ದನು. ಅಕಸ್ಮಾತ್ತಾಗಿ ಅವನು ಆ ತರುಣಿಯನ್ನು ನೋಡಿದನು. ಕೂಡಲೆ ಅವನು ಕುದುರೆಯನ್ನು ತಡೆದು ಆಕೆಯ ಕಡೆಗೆ ಏಕಾಗ್ರಚಿತ್ತದಿಂದ ನೋಡಹತ್ತಿದನು. ಅಷ್ಟರಲ್ಲಿ ಅಂಗಡಿಯಿಂದ ಜೋಯಿಸನು ಹೊರಟುಹೋದದ್ದರಿಂದ ಅಲ್ಲಿಯ ಜನಸಮೂಹವು ಕಡಿಮೆಯಾಯಿತು. ಆ ಸುಂದರಿಯು ಅವನಿಗೆ ತೀರ ಅಪರಿಚಿತಳು. ಕಣ್ಣು ಕುಕ್ಕುವಂತಿರುವ ಆಕೆಯ ಆ ಮನೋಹರ ರೂಪವನ್ನು ಅವನು ಈ ಮೊದಲು ನೋಡಿದ್ದಿಲ್ಲ. ಪೂರ್ವಜನ್ಮದಲ್ಲಿ ಈಕೆಯನ್ನು ಎಲ್ಲಿಯಾದರೂ ನೋಡಿದ್ದೆನೋ ಏನೋ ಎಂಬದನ್ನು ಜ್ಞಾಪಿಸಿಕೊಳ್ಳುವವನಂತೆ ಅವನು ಆಕೆಯನ್ನು ಒಂದೇಸವನೆ ನೋಡುತ್ತ ಮನಸಿನಲ್ಲಿ ಏನೋ ಆಲೋಚಿಸುತ್ತ ನಿಂತುಬಿಟ್ಟನು. ಆಗ ಅವನಿಗೆ ದೇಹಭಾನವು ಸಹ ಉಳಿಯಲಿಲ್ಲ. ಬಹಳ ಹೊತ್ತಿನಮೇಲೆ ಅವನಿಗೆ ಸ್ವಪ್ನಭಾಸವಾದಂತಾಯಿತು. ಜನವಿರಹಿತವಾದ ಸರೋವರ, ಸುರಮ್ಯವಾದ ಉಪವನ, ಪ್ರಶಾಂತವಾದ ಸಮಯ, ಆದ್ರ್ರಕೇಶಗಳಿಂದಲೂ ಆದ್ರ್ರವಸನಗಳಿಂದಲೂ ಸುಸ್ನಾತ ದಿವ್ಯರೂಪದಿಂದಲೂ ಸಹಚರಿಯರಿಂದಲೂ ಒಪ್ಪುವ ಬಾಲಿಕೆಯ ಮೂರ್ತಿಯೊಂದು ತನ್ನ ಕೈಯನ್ನು ಕೈ ಇಕ್ಕಿನಿಂತಂತೆ ಅವನಿಗೆ ಭಾಸವಾಯಿತು. ಅಷ್ಟರಲ್ಲಿ ಕುದುರೆಯು ಯಾವಕಾರಣದಿಂದಲೋ ಬೆದರಿ ಗೋಣನ್ನು ಮೇಲೆಮಾಡಿ ಮೈನಡುಗಿಸಲು, ಆ ಸವಾರನ ಸ್ವಪ್ನಭಾಸವು ಲಯವಾಯಿತು. ಅಷ್ಟೆಯೋ

ದ್ಧಾರರ ಚೀತ್ಕಾರದನಿಯಿಂದಲೂ, ಬಟ್ಟಂಗಿಗಳು ಉಚ್ಚ ಹಾಗು ಗಂಭೀರ ಸ್ವರದಿಂದ ಹೇಳುತ್ತಿದ್ದ ಪರಾಕುಗಳಿಂದಲೂ ಅವನ ಚಿತ್ತಭೇದವಾಯಿತು. ಕೂಡಲೆ ಅವನು ಆ ರಮಣಿಯ ಕಡೆಗೆ ಮತ್ತೊಮ್ಮೆ ನೋಡಿ ನಸುನಕ್ಕು ಕುದುರೆಯನ್ನು ಚಪ್ಪರಿಸಲು, ಅದು ಒತ್ತರದಿಂದ ನಡೆದು ಅಸ್ತ್ರಯುದ್ಧದ ಪಟಾಂಗಣವನ್ನು ಸೇರಿತು.

ಕುಸ್ತೀಆಟ, ದಾಂಡಪಟ್ಟಾ ಮುಂತಾದ ಆಟಗಳೆಲ್ಲ ಮುಗಿದು, ಗುರಿಹೊಡೆಯುವ ತೀರ ಕೊನೆಯ ಆಟವೊಂದೇ ಉಳಿದಿತ್ತು. ಆಗ ಸಿಕಂದರಶಹನು ಸಿಂಹಾಸನದಿಂದಿಳಿದು ಸಮೀಪದಲ್ಲಿಯೇ ಇದ್ದ ಪಟ್ಟದಕುದುರೆಯನ್ನೇರಿದನು; ಸಾಮಂತವರ್ಗದವರೂ ತಮ್ಮ ತಮ್ಮ ವಾಹನಗಳನ್ನೇರಿ ಬಾದಶಹನ ಪಾರ್ಶ್ವಗಳಲ್ಲಿ ನಿಂತರು. ಎದುರಿಗೆ ಸ್ತ್ರೀರೂಪದ ಒಂದು ಪಾಷಾಣಮೂರ್ತಿಯು ನಿಲ್ಲಿಸಲ್ಪಟ್ಟಿದ್ದು, ಆದರ ಕಪೋಲಪ್ರದೇಶದ ಮೇಲೆ ಕುಳಿತಿರುವ ಪಕ್ಷಿಯನ್ನು ಅದು ಚುಂಬಿಸುವಂತೆ ಮಾಡಿದ್ದರು. ಆ ಪಕ್ಷಿಯ ಕಣ್ಣು ಒಡೆಯುವದೇ ಅಂದಿನ ಗುರಿಯಾಗಿತ್ತು. ಅಸ್ತ್ರದ ಆಘಾತವು ಆ ಪಾಷಾಣಮೂರ್ತಿಯ, ಆದರಂತೆ ಪಕ್ಷಿಯ ಇತರ ಯಾವ ಅವಯವಗಳ ಮೇಲೂ ಆಗದಿರುವ ನಿರ್ಬಂಧವು ಇಡಲ್ಪಟ್ಟಿತ್ತು. ಹೀಗೆ ಈ ಪಣದ ಗುರಿಯಾಟವೇ ಇಂದಿನ ಎಲ್ಲ ಆಟಗಳಲ್ಲಿ ಮಹತ್ವದ್ದಾದ್ದರಿಂದ, ಇದನ್ನು ನೋಡಲು ಬಹಳಜನರು ಕಲೆತಿದ್ದರು. ಆಗ ವಂಗೇಶ್ವರನ ದರಕದಾರನು ಗೊಗ್ಗರದನಿಯಿಂದ ಜನರನ್ನು ಕುರಿತು—"ಈ ಗುರಿಯನ್ನು ಭೇದಿಸಿ ಸನ್ಮಾನಿತರಾಗ ಬಯಸುವವರು ಮುಂದೆ ಬರಬೇಕೆಂದು ಸುಲ್ತಾನಸಾಹೇಬರ ಆಜ್ಞೆಯಾಗಿರುತ್ತದೆ" ಎಂದು ಮೂರುಮೂರುಸಾರೆ ಹೇಳಿದನು. ಇಂಥ ಕಠಿಣವಾದ ಪಣವನ್ನು ಗೆದ್ದೇಗೆಲ್ಲುವೆನೆಂಬ ಮನೋನಿಶ್ಚಯವು ನೆರೆದ ಜನರಲ್ಲೊಬ್ಬರಲ್ಲೂ ಉಂಟಾಗದ್ದರಿಂದ ಯಾರೂ ಮುಂದಕ್ಕೆ ಬರಲಿಲ್ಲ. ಕಡೆಗೆ ನಮ್ಮ ಆ ತೇಜಸ್ವಿಯಾದ ಅಶ್ವಾರೂ

ಥನು ತನ್ನ ಕುದುರೆಯನ್ನು ಎಲ್ಲಕ್ಕೂ ಮುಂದೆ ನೂಕಿದನು. ಕೂಡಲೆ ಕುದುರೆಯು ಹೇಕರಿಸುತ್ತ ಬಾದಶಹನ ಸನಿಯಕ್ಕೆ ಬರಲು, ಈ ವರೆಗೆ ಕೇವಲ ಮುಗ್ಧಭಾವವನ್ನು ಧರಿಸಿದ್ದ ಜನಸಮೂಹವು ಏಕಸಮಯಕ್ಕೆ ವಜ್ಜೋದದಿಂದ "ರಾಜಕುಮಾರ ಗಣೇಶದೇವಕೀ ಜಯ" ಎಂಬ ಜಯಘೋಷವನ್ನು ಮಾಡಿತು. ಆ ಅಶ್ವಾರೋಹಿಯಾದ ಯುವಕನು ನೆಟ್ಟಗೆ ವಂಗೇಶ್ವರನಬಳಿಗೆ ಬಂದು ಅವನನ್ನು ತ್ರಿವಾರ ಅಭಿವಂದಿಸಿ ಆಮೇಲೆ ಗುರಿಯಕಡೆಗೆ ದಿಟ್ಟಿಸಿನೋಡಿ ತನ್ನ ನಿಡಿದಾದ ಬಾಣವನ್ನು ಬಿಟ್ಟನು. ಬಾಣದ ಸೂ ಶಬ್ದವು ಅಡಗುವಷ್ಟರಲ್ಲಿ ಪುನಃ "ರಾಜಕುಮಾರ ಗಣೇಶದೇವಕೀಜಯ" ಎಂಬ ಜಯಘೋಷವಾಯಿತು. ಬಳಿಕ ಎಲ್ಲ ಜನರು ಪಾಷಾಣಮೂರ್ತಿಯ ಚತುಷ್ಪಾರ್ಶ್ವಗಳಲ್ಲಿ ಸುತ್ತು ವರೆದು ನೋಡುತ್ತಾರೆ, ಬಾಣವು ಪಕ್ಷಿಯ ಕಣ್ಣನ್ನು ಮಾತ್ರ ಒಡೆದು ಪಾರಾಗಿಹೋಗಿದೆ; ಉಳಿದ ಯಾವ ಅವಯವಗಳಿಗೂ ಬಾಣದ ಆಘಾತವಾಗಿರಲಿಲ್ಲ! ಆಗ ಎಲ್ಲರಮುಖದಿಂದಲೂ "ದಿನಾಜಪುರದ ರಾಜಕುಮಾರನಾದ ಗಣೇಶದೇವನು ಈ ಪಣವನ್ನು ಗೆದ್ದನು. ಧನ್ಯ! ಧನ್ಯ!" ಎಂಬ ಶಬ್ದಗಳು ಹೊರಡಹತ್ತಿದವು. ಅವನ ಸನ್ಮಾನಕ್ಕಾಗಿ ಪ್ರೇಕ್ಷಕವೃಂದವು ಜಯಜಯಕಾರಮಾಡುತ್ತಿರಲು, ಸಭಾಸದರು ಪುಷ್ಪವೃಷ್ಟಿಗರೆಯುತ್ತಿರಲು, ಗಣೇಶದೇವನು ತನ್ನ ಅಶ್ವದಿಂದಿಳಿದು ಬಾದಶಹನ ಹತ್ತಿರಕ್ಕೆ ಹೋದನು. ಆಗ ಸುಲ್ತಾನನೂ ಕುದುರೆಯಿಂದಿಳಿದು ಆ ರಾಜಕುಮಾರನನ್ನು ಗೌರವಿಸತೊಡಗಿದನು. ವಂಗೇಶ್ವರನು ಕುಮಾರನಿಗೆ 'ರಾಯಬಹದ್ದೂರ' ಎಂಬ ಬಿರುದನ್ನು ದಯಪಾಲಿಸಿದ್ದಲ್ಲದೆ, ಒಂದು ಅಮೂಲ್ಯಖಡ್ಗವನ್ನು ತನ್ನ ಸ್ವಂತಕಯ್ಯಿಂದ ಅವನ ಟೊಂಕದಲ್ಲಿ ಕಟ್ಟಹತ್ತಿದನು. ನಾಲ್ಕೂಕಡೆಯಿಂದ ಪುನಃ ಜಯಜಯಕಾರಶಬ್ದವೂ, ಪುಷ್ಪವೃಷ್ಟಿಯೂ ಆಗಹತ್ತಿದವು. ಇಷ್ಟೊತ್ತಿನವರೆಗೆ ದೂರನಿಂತು ಕುಮಾರನು ಗುರಿಹೊಡೆಯುವದನ್ನು ನೋಡು

ತ್ತಿದ್ದ ಒಬ್ಬ ರಮಣೀಮಣಿಯು, ಈಗ ಆ ಸಭೆಯ ತೀರ ಹತ್ತಿರಕ್ಕೆ ಬಂದು, ಅಲ್ಲಿದ್ದ ಒಂದು ಎತ್ತರವಾದ ಬಂಡೆಗಲ್ಲಮೇಲೆ ನಿಂತು ರಾಜಕುಮಾರನನ್ನು ಸನ್ಮಾನಿಸುವದಕ್ಕಾಗಿ ತನ್ನ ಕೊರಳೊಳಗಿನ ಒಂದು ಬಣಹೂವಮಾಲೆಯನ್ನು ತೆಗೆದು ಕುಮಾರನ ಕೊರಳೊಳಗೆ ಬೀಳುವಂತೆ ಅದನ್ನು ನಿಂತಲ್ಲಿಂದಲೇ ತೂರಿದಳು. ಆದರೆ ಒಣಗಿ ಬಾಡಿದ್ದ ಆ ಮಾಲೆಯು ಕುಮಾರನಕೊರಳಲ್ಲಿ ಹೋಗಿಬೀಳದೆ, ಸುಲ್ತಾನನ ಮೈಗೆ ತಾಕಿ ನೆಲಕ್ಕೆಬಿತ್ತು. ಆದರಿಂದ ಕುಮಾರನಿಗೆ ಖಡ್ಗವನ್ನು ಕಟ್ಟುತ್ತಿದ್ದ ಸುಲ್ತಾನನ ಲಕ್ಷ್ಯಭೇದವಾಗಲು, ಅವನ ಕೈಯಿಂದ ಖಡ್ಗವು ಜಾರಿ ನೆಲಕ್ಕೆಬಿತ್ತು. ಕೂಡಲೆ ಅವನು ತನ್ನ ಬೊಗ್ಗಿದಮುಖವನ್ನು ಮೇಲೆಮಾಡಿ ಸುತ್ತಲೂ ನೋಡಹತ್ತಿದನು. ಸುಲ್ತಾನನಿಗೆ ತಾಕುವಂತೆ ಮಾಲೆ ಒಗೆದಿದ್ದ ಆ ತರುಣಿಯನ್ನು ಸಭಿಕರೆಲ್ಲರೂ ಸಿಟ್ಟಿನಿಂದ ನೋಡಹತ್ತಿದರು. ಆಗ ಸುಲ್ತಾನ ಪುತ್ರನಾದ ನಬಾಬ ಗಾಯಸುದ್ದೀನನು ನೆಲದಮೇಲೆ ಬಿದ್ದಿದ್ದ ಆ ಒಣಮಾಲೆಯನ್ನು ಕೈಯಲ್ಲಿ ತಕ್ಕೊಂಡು—"ಕುಮಾರಗಣೇಶದೇವ, ಆದಾರು ಈ ಒಣಮಾಲೆಯನ್ನು ನಿನ್ನಸನ್ಮಾನಕ್ಕಾಗಿ ಅರ್ಪಿಸಿರುವರು?" ಎಂದು ಹಾಸ್ಯಪೂರ್ವಕ ಪ್ರಶ್ನಮಾಡಿದನು. ಸುಲ್ತಾನಪುತ್ರನ ನಗೆಯಿಂದ ಸಭಿಕರಲ್ಲಿಯ ಸಿಟ್ಟು ಇಳಿಯಿತು. ಆಗ ಸುಲ್ತಾನನೂ ನಕ್ಕು ಮತ್ತೆ ಖಡ್ಗವನ್ನು ಗಣೇಶದೇವನಿಗೆ ಕಟ್ಟತೊಡಗಿದನು ಪುನಃ ಜಯಜಯಕಾರವಾಯಿತು. ಜನರು ಹೂಗಳನ್ನು ತೂರಿದರು. ಅಷ್ಟರಲ್ಲಿ ಸಂದಟಿತವಾದ ಜನರೊಳಗಿಂದ ಒಬ್ಬ ತರುಣಿಯು-ಬಕುಲಮಾಲೆಯನ್ನು ತೂರಿದ ತರುಣಿಯು-ಕಾಲುಗಳನ್ನಪ್ಪಳಿಸಿ ತನ್ನ ಬರವನ್ನು ವ್ಯಕ್ತಗೊಳಿಸುತ್ತ ನಬಾಬ ಗಾಯಸುದ್ದೀನನ ಸನಿಯಕ್ಕೆ ಬಂದಳು. ಅವಳು ಅವನನ್ನು ಅಭಿವಂದಿಸಿ—"ನನ್ನ ಹೂಮಾಲೆಯು ನನಗೆ ಮರಳಿದೊರೆಯುವ ಆಜ್ಞೆಯಾಗಬೇಕು" ಎಂದು ದಿಟ್ಟತನದಿಂದ

ಕೇಳಿಕೊಂಡಳು. ಹಾಗು ಗಣೇಶದೇವನ ಕಡೆಗೆ ನೋಡಿ ನಾಚಿ ತುಸ ಮೋರೆಯನ್ನು ಬೊಗ್ಗಿಸಿನಿಂತಳು. ಸಭಾಮಧ್ಯದಲ್ಲಿ ಬಂದು ಪ್ರತ್ಯಕ್ಷ ಸುಲ್ತಾನಸಪುತ್ರನನ್ನೇ ಈ ಪ್ರಕಾರಪ್ರಶ್ನಮಾಡಿದ ಆ ಲಲನಾಮಣಿಯ ಸಾಹಸಕ್ಕೆ ನೆರೆದ ಜನರೆಲ್ಲರೂ ಬೊಟ್ಟುಕಚ್ಚಿದರು. ಆಗ ಗಾಯಸುದ್ದೀನನು ಅವಳ ಆ ಶುಷ್ಕಬಕುಲಮಾಲೆಯನ್ನು ಅವಳಿಗೆ ತಿರುಗಿಕೊಟ್ಟನು. ಮಾಲಾಧಾರಿಣಿಯಾದ ಯುವತಿಯು ಗಣೇಶದೇವನಕಡೆಗೆ ಓರೆನೋಟದಿಂದ ಒಮ್ಮೆ ನೋಡಿ, ಭರದಿಂದ ತೆರಳಿದಳು.

೩ನೆಯ ಪ್ರಕರಣ.

ಮನಸ್ಸಿನ ಹೊಯ್ದಾಟ.

ಸಂಧ್ಯಾಕಾಲವು, ಹಗಲೆಲ್ಲ ಒಂದೇಸವನೆ ದಾರೀಕ್ರಮಿಸಿ ದಣಿದಿದ್ದ ಆಕಾಶರಾಜನಾದ ಸೂರ್ಯನು ವಿಶ್ರಾಂತಿಗಾಗಿ ಪಶ್ಚಿಮಾಚಲವನ್ನು ಆಶ್ರಯಿಸುತ್ತಿದ್ದನು; ಅವನ ಸ್ವರ್ಣವರ್ಣದ ಕಿರಣಗಳು ನದಿಯ ಪ್ರವಾಹದಲ್ಲಿ ಪರಾವರ್ತನ ಹೊಂದಿ, ವಿರುದ್ಧ ದಿಕ್ಕಿನತೀರದ ವೃಕ್ಷಗಳ ಶಿಖರಗಳನ್ನು ಬೆಳಗುತ್ತಲಿವೆ. ಕುಮಾರ ಗಣೇಶದೇವನು ಈವರೆಗೆ ವೇಗದಿಂದ ಬಿಟ್ಟಿದ್ದ ತನ್ನ ಕುದುರೆಯನ್ನು ನಿವಾಸಸ್ಥಳವು ಸಮೀಪಿಸಿದ್ದರಿಂದಲೋ, ಸಂಧ್ಯಾಸಮಯದ ಪ್ರಶಾಂತಶೋಭೆಯನ್ನು ನೋಡುವದಕ್ಕೋ ಈಗ ಅದನ್ನು ಮಂದಮಂದವಾಗಿ ನಡಿಸಹತ್ತಿದ್ದನು. ಅವನ ಮನಸ್ಸು ಮಧ್ಯಾಹ್ನದಲ್ಲಿ ನಡೆದ ವಿಜಯೋತ್ಸವದ ಶೋಭೆಯನ್ನು ನೋಡುವದರಲ್ಲಿ ತೊಡಗಿದ್ದಿಲ್ಲ; ತನಗೇ ವಿಜಯವಾಗಿ ತಾನು ವಂಗೇಶ್ವರನಿಂದ ಬಹಳ ಗೌರವಪಟ್ಟೆನೆಂಬ ಸ್ವಾಭಿಮಾನದಿಂದ ಆವರಿಸಿದ್ದಿಲ್ಲ; ಆದರೆ ಅದು ಸಭಾಮಧ್ಯದಲ್ಲಿ ಆಕ

ಲ್ಪಿತವಾಗಿ ಬಂದಿದ್ದ ಆ ದೀನವೇಷದ ಆದರೆ ಅತ್ಯಂತ ಚಲುವೆಯಾದ ಯುವತಿಯ ಜಿಜ್ಞಾಸೆಯಲ್ಲಿ ತೊಡಗಿತ್ತು. ಯುವಕರ, ಆದರಲ್ಲಿಯೂ ರೂಪ, ತಾರುಣ್ಯ, ಅಧಿಕಾರ, ಸಂಪತ್ತುಗಳಿಂದ ಯುಕ್ತರಾದ ಯುವಕರ ಆಲೋಚನೆಗೆ ಕಾಮಿನಿಯರೇ ಕಾರಣರಲ್ಲವೆ? ಅವನ ಮನಸಿನಲ್ಲಿ ಆ ತರುಣಿಯ ಸುಸ್ವರೂಪ, ಅಪರಿಚಿತರಲ್ಲಿಯೂ ಪರಿಚಿತಭಾವದಿಂದ ನಡೆಯುವ ವಿಲಕ್ಷಣ ಸಾಹಸ, ಸಭಾಮಧ್ಯದಲ್ಲಿ ಶುಷ್ಕ ಮಾಲೆಯ ತೂರುವಿಕೆ, ಅಲ್ಲಿಂದ ಪುನಃ ಒಯ್ಯೋಣ, ಸಭಾಮಂಟಪದಲ್ಲಿ ಬರುವಾಗ ಸಹ ತನ್ನ ಗರ್ವದ ಇರವನ್ನು ತೋರಿಸುವ ಆಕೆಯ ದೃಢಪದಕ್ಷೇಪ ಇವೆಲ್ಲವುಗಳು ಕ್ರಮವಾಗಿ ಬಂದು ಅವನನ್ನು ಆಲೋಚನೆಗೆ ಗುರಿಮಾಡಿದ್ದವು. ಹೀಗೆ ವಿಸ್ಮಯದ್ಯೋತಕಳಾದ ಆ ಅಪರಿಚಿತ ಯುವತಿಯು ಯಾರೆಂಬದನ್ನು ತಿಳಿಯುವದು ಅವನಿಗೆ ಬಹು ಕಠಿಣವೆನಿಸಿತು. ಆಕೆಯ ಆ ದೀನವೇಷ, ವಿಚಾರಾರ್ಹವಾದ ವ್ಯವಹಾರ, ಪುನಃ ಪುನಃ ನೋಡುವಂತಿರುವ ಹಾವಭಾವ, ಅದರಂತೆ ಆಕೆಯ ಕಡೆಗಣ್ಣನೋಟ, ದೃಢಪದಕ್ಷೇಪ ಇವುಗಳಿಂದಲೂ, ಆಕೆಯ ಅಂಚಿನ ಸೀರೆಯಿಂದಲೂ ಆಕೆಯು ಸನ್ಯಾಸಿನಿಯು ಅಲ್ಲೆಂಬದು ಸ್ಪಷ್ಟವಾಗುತ್ತಿತ್ತು. ಅಲ್ಲದೆ ಆಕೆಯಲ್ಲಿ ತ್ರಿಪುಂಡ್ರಗಳು, ಜಟಾ (ಅಥವಾ ಕೇಶವಿಹೀನ) ವಿಭೂತಿ-ರುದ್ರಾಕ್ಷಮಾಲೆ ಮುಂತಾದ ಸನ್ಯಾಸಲಕ್ಷಣದ್ಯೋತಕ ಚಿಹ್ನಗಳೊಂದೂ ಇದ್ದಿಲ್ಲ. ಆಕೆಯು ತನ್ನ ಸೂಕ್ಷ್ಮ ಸೀರೆಯ ಸೆರಗನ್ನು ತಲೆಯಮೇಲೆ ಹಾಕಿಕೊಂಡಿದ್ದರೂ ಸಡಿಲಾಗಿ ಕಟ್ಟಿದ್ದ ಆಕೆಯ ಹೆಳಲಗಂಟು ಎದ್ದು ಕಾಣುತ್ತಿತ್ತು. ಆಕೆಯ ಮುಂಗುರುಳುಗಳು ಸೆರಗಿನಿಂದ ಮುಚ್ಚದೆ ಇದ್ದ ಮುಂದಲೆಯಿಂದ ಜರಿದು ಕೆಲವು ಹಣೆಯಮೇಲೂ, ಕೆಲವು ಗಲ್ಲಗಳಮೇಲೂ ಬಿದ್ದು, ಕಮಲದಂತಿರುವ ಆಕೆಯ ಮುಖಮಂಡಲದ ಸೌಂದರ್ಯವನ್ನು ಹೆಚ್ಚಿಸುತ್ತಿದ್ದವು. ಆಕೆಯು ಅವಿವಾಹಿತಳೋ, ತೀರ್ಥ-

ಯಾತ್ರಾರ್ಥಿನಿಯಾದ ವಿಧವೆಯೋ ಎಂಬದು ಕೂಡ ಅವನಿಗೆ ತಿಳಿಯದಾಯಿತು. ವಿಧವೆಯಾಗಿದ್ದರೆ ಆಕೆಯ ಕೈಯಲ್ಲಿ ಎರಡುಸುತ್ತಿನ ಬಂಗಾರದ ಬಳೆಗಳೇಕೆ? ಒಂದುವೇಳೆ ಬಾಲವಿಧವೆಯಾಗಿದ್ದರೆ ತಾಯಿತಂದೆಗಳು ಮೋಹದಿಂದ ಆಕೆಯನ್ನು ಅಲಂಕಾರಹೀನಳಾಗಮಾಡಿರಲಿಕ್ಕಿಲ್ಲವೆನ್ನಬಹುದು; ಅಥವಾ ಆಕೆಯು ಸಧವಾ-ಲಗ್ನವಾದ ಹೆಣ್ಣುಮಗಳಾಗಿದ್ದರೆ, ಹೀಗೆ ದೀನವೇಷಧರಿಸಿ ಭಿಕ್ಷುಕರಂತೆ ಕಂಡಕಂಡಲ್ಲಿ ಅಲೆಯುತ್ತಿದ್ದಳೇಕೆ? ಆದ್ದರಿಂದ ಆ ರಮಣಿಯು ಕುಮಾರಿಯೇ ಇರಲಿಕ್ಕೆಬೇಕೆಂದು ಆ ರಾಜಪುತ್ರನು ಭಾವಿಸಿದನು. ಆದರೆ ಯೌವನಪ್ರಾಪ್ತಳಾದ ಹಿಂದೂ ಕನ್ಯೆಯು ಅವಿವಾಹಿತಳಾಗಿರುವಳೆಂಬದು ಆ ಕಾಲದ ಅವನಿಗೆ ಹ್ಯಾಗೆ ಸಮ್ಮತವಾಗಬೇಕು? ಕಡೆಗೆ ಅವನು ಅನುಮಾನಿಸಿದ್ದೇನಂದರೆ-ಇವಳು ಯಾವಳೊಬ್ಬ ಉಚ್ಚಕುಲಪ್ರಸೂತಳಾದ ಪುರವಾಸಿನಿಯಾದ ವಿಧವೆಯೇ ಇರಲಿಕ್ಕೆಬೇಕು. ಇದದರಲ್ಲಿ ಸಂದೇಹವಿಲ್ಲ. ಉತ್ತರಕ್ಷಣದಲ್ಲಿ ಆಕೆಯ ಆತ್ಮಮರ್ಯಾದಾದ್ಯೋತಕ ದೃಢಪದತಾಡನವೂ ತೇಜಗರ್ವಗಳಿಂದ ಮಿಂಚುವ ಓರೆನೋಟವೂ ಅವನಕಣ್ಣಿಗೆ ಕಟ್ಟಲು, ಪ್ರೇಮಪೂರ್ವಕವಾಗಿ ತನ್ನನ್ನು ನೋಡಿದ ಅವಳು ನಿಶ್ಚಯವಾಗಿ ವಿಧವೆಯಲ್ಲ; ಕುಮಾರಿಯೇ ಸರಿ ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತ ಸಾಗಿದನು. ಮನೋದ್ಘಾಟನಮಾಡುವ ಕಟಾಕ್ಷವುಳ್ಳ ಸುಂದರಿಯರ ಜೀವಿತವೇ ಪರಮರಹಸ್ಯವು! ಆ ರಹಸ್ಯದ ಜ್ಞಾನವು ಯಾವಪುರುಷನಿಗೂ ಆಗದೆಂದರೆ ಮಿಥ್ಯಾವಾದವಾಗಲಿಕ್ಕಿಲ್ಲ. ಇರಲಿ.

ಈ ಪ್ರಕಾರ ಕುಮಾರಗಣೇಶದೇವನು ಮನದಲ್ಲಿ ಯೋಚಿಸುತ್ತ, ನಡನಡುವೆ ಸಂಧ್ಯಾರಾಗದ ಸೊಬಗನ್ನು ಕಣ್ಣಿನಿಂದ ನೋಡುತ್ತ ನಡೆದಿರಲು, ಅವನ ಕುದುರೆಯು ಗಕ್ಕನೆ ನಿಂತಿತು. ಕಾರಣವೇನೆಂದು ನೋಡುವಷ್ಟರಲ್ಲಿ ಯಾವಯುವತಿಯನ್ನು ಇಂದುಮಧ್ಯಾಹ್ನ

ಷ್ಣದಲ್ಲಿ ಅವನು ನೋಡಿದ್ದನೋ, ಹಾಗೂ ಯಾವಳ ನಿಜಧ್ಯಾನದಲ್ಲಿ ಅವನ ಮನಸ್ಸು ತೊಡಗಿತ್ತೋ ಅದೇ ಆ ಲಾವಣ್ಯವತಿಯು ಒಂದು ಗಿಡದಕೆಳಗೆ ಮೂರ್ತಿಮತ್ತಾಗಿ ನಿಂತು ತನ್ನನ್ನು ನಗೆಮೊಗದಿಂದ ನೋಡುತ್ತಿರುವಂತೆ ಅವನ ಕಣ್ಣಿಗೆ ಬಿತ್ತು. ಆಗ ರಾಜಕುಮಾರನಿಗೆ ಇಂದು ತಾನು ಬೆಳಗಿನಿಂದ ಸ್ವಪ್ನಸೃಷ್ಟಿಯಲ್ಲಿರುವೆನೋ ಏನೋ ಎಂಬಂತೆ ತೋರಿದ್ದು ಆಶ್ಚರ್ಯವಲ್ಲ. ಕುದುರೆಯನ್ನು ತರುಬಿದ ರಮಣಿಯು ಕುಮಾರನ ಆಶ್ಚರ್ಯವಿಸ್ಮಯಗಳಿಗೆ ಅವಕಾಶವನ್ನು ಕೊಡದೆ, ಅವನ ಹತ್ತಿರಕ್ಕೆ ಬಂದು ಮೃದುಹಾಸ್ಯಮಾಡಿ—ಕುಮಾರ, ಗುರ್ತುಹತ್ತಲೊಲ್ಲದೇನು? ಎಂದು ಕೇಳಿದಳು. ಅದರಿಂದಮತ್ತಿಷ್ಟು ವಿಸ್ಮಯಾಶ್ಚರ್ಯಚಕಿತನಾದದರಿಂದ ಅವನಬಾಯಿಂದ ಶಬ್ದಗಳೇ ಹೊರಡದಾದವು. ಆಗ ಅವಳೇ ಪುನಃ ನುಡಿದಳೇನಂದರೆ—ಮಹೀಪಾಲಸರೋವರದ ಬಳಿಯ ಆಟಗಳು ನೆನಪಾಗುತ್ತವೆಯೇನು?

ನಿದ್ದೆಯಿಂದೆಚ್ಚತ್ತವನಂತೆ ಕುಮಾರನು ಎಚ್ಚತ್ತು ಮೆಲ್ಲಗೆ ಹೀಗೆ ನುಡಿದನು:—ಬಾಲ್ಯಸಖೀ ಶಕ್ತಿಮಯೀ!

ಶಕ್ತಿ—ಕುಮಾರ, ನೀನು ನನ್ನನ್ನು ಮರೆತಿರಬಹುದೆಂದು ತಿಳಿದಿದ್ದೆನು. ನಾನು ಮಾತ್ರ ನಿನ್ನನ್ನು ನೋಡಿದಕೂಡಲೆ ಗುರ್ತಿಸಿದೆನು.

ಕ್ಷಣದಲ್ಲಿ ಕುಮಾರನ ಹೃದಯವು ಒಂದು ತರದ ಆವೇಗದಿಂದ ಕಾತರಿಸಿತು. ಉತ್ತರಕ್ಷಣದಲ್ಲಿ ಪುನಃ ಸ್ಥಿರವಾಯಿತು. ಆ ಸಂಧ್ಯಾಸಮಯದ ನಿರ್ಜನಪ್ರದೇಶದಲ್ಲಿ ಕುಮಾರನೇ ಕುಮಾರನು, ಶಕ್ತಿಯೇ ಶಕ್ತಿಯು. ಹೀಗಾದ್ದರಿಂದ ಅವನ ಭಾವನೆಯು ಮಟ್ಟನ್ನು ತಿಳಿಯದಷ್ಟು ಚಂಚಲವಾಯಿತು. ಆದರೆ ಒಂದುಕಾಲದಲ್ಲಿ ಯಾವಳೊಡನೆ ಬಾಲ್ಯದಲ್ಲಿ ಆಟಪಾಟಗಳಲ್ಲಿ-ಮಾತುಕಥೆಗಳಲ್ಲಿ-ಸಂಚಾರವಿಹಾರಗಳಲ್ಲಿ ನಿಶ್ಶಂಕೆಯಿಂದ ಹಗಲಿರುಳುಗಳನ್ನು ಕಳೆಯುತ್ತಿದ್ದನೋ,

ಆದೇ ಅವಳು ಈಗ ಪ್ರೌಢದೆಸೆಯಲ್ಲಿ ವಿವಾಹಬಂಧನದಿಂದ ಪರಸ್ತ್ರೀಯಾಗಿರಲು, ಅವಳಕೂಡ ಮಾತಾಡಲಿಕ್ಕೆ ಇಷ್ಟೇ ಅಲ್ಲ-ಅವಳಕಡೆಗೆ ನೋಡಲಿಕ್ಕೆ ಕೂಡ ಆ ಸಮಾಜಬಂಧನಭೀರುವಾದ ಕುಮಾರನಿಗೆ ಬಹಳ ಸಂಕೋಚವೆನಿಸಹತ್ತಿತು. ಒಂದುಕಡೆಗೆ ಬಾಲ್ಯ ಸಖಿತ್ವದ ಮೂಲಕ ಉಂಟಾದ ಸ್ವಾಭಾವಿಕ ಉತ್ಸಾಹವೂ, ಮತ್ತೊಂದುಕಡೆಗೆ ಸಮಾಜಬಂಧನಕ್ಕಾಗಿ ವಹಿಸಬೇಕಾದ ಸಂಕೋಚಭಾವವೂ ಅವನಲ್ಲಿ ಹುಟ್ಟಿ ಆವೆರಡರ ವಿರುದ್ಧ ಪ್ರವಾಹಗಳ ಆಘಾತದಿಂದ ಅವನಮನಸ್ಸು ಮತ್ತಿಷ್ಟು ವಿಕ್ಷಿಪ್ತವಾದ್ದರಿಂದ ಅವನಿಗೆ ಶಕ್ತಿಯ ಮಾತುಕಥೆಗಳು ಕೂಡ ಬೇಡಾದವು.

ಆದರೆ ಶುದ್ಧಾಂತಃಕರಣದ, ಸಮಾಜಬಂಧನಗಳ ಸಂಪೂರ್ಣಜ್ಞಾನವಿಲ್ಲದ ಶಕ್ತಿಯಮನಸ್ಸಿನಲ್ಲಿ ಈ ತರದ ಸಂಕೋಚವು ಲೇಶಮಾತ್ರವೂ ಇರಲಿಲ್ಲ. ಆದರಿಂದ ಆಕೆಯು ಸ್ವಾಭಾವಿಕವಾಗಿ—ವೀರನೇ, ಕುದುರೆಯಿಂದಿಳಿದು ತುಸುಹೊತ್ತು ನಿಲ್ಲುವದಿಲ್ಲೇನು? ಈ ದಿವಸ ವಿಜಯುವನ್ನು ಸಂಪಾದಿಸಿ ಬಹುದೊಡ್ಡ ಸನ್ಮಾನಹೊಂದಿದ ಮಾತ್ರದಿಂದ, ನನ್ನ ಈ ಹೂಮಾಲೆಯು ನಿನಗೆ ತುಚ್ಛವಾಯಿತೇ?

ಆಗ ಕುಮಾರನ ಸಂಕೋಚಭಾವವು ತನ್ನಷ್ಟಕ್ಕೇ ಅಡಗಲು ಅವನು- "ಈ ಶುಷ್ಕಹೂಮಾಲೆಯನ್ನು ನನ್ನ ಸನ್ಮಾನಕ್ಕಾಗಿಯೇ ತೂರಿದ್ದಿಯೇನು? ಎಂದು ಕೇಳಿದನು.

ಶಕ್ತಿ—ಅದಕ್ಕಾಗಿಯೇ ಬುದ್ಧಿಪೂರ್ವಕವಾಗಿ ತೂರಿದ್ದೆನು; ಆದರೆ ಅದು ಕುಂಠಿತಗತಿಯಾಗಿ ನಿನ್ನವರೆಗೆ ಬರದೆ, ಅಸ್ವಸ್ಥಾನದಲ್ಲಿ ಬಿದ್ದದರಿಂದ ಅದರ ಕುಸುಮಗಳು ಉದುರಿಹೋದವು.

ಆಗ ಕುಮಾರನು ಕುದುರೆಯಿಂದಿಳಿದುನಗುತ್ತ ನಗುತ್ತ-ಒಣಗಿದ ಹೂಮಾಲೆಯ ಕಾಣಿಕೆಯೇ? ಇದು ಸನ್ಮಾನವೋ ಉಪಹಾಸವೋ?

ಶಕ್ತಿಯು ಅದಕ್ಕೇನೂ ಉತ್ತರಕೊಡಲಿಲ್ಲ. ಬಳಿಕ ಅವಳು-

ಕುದುರೆಯನ್ನು ಹಿಡಕೊಂಡು ನನ್ನ ಸಂಗಡ ಬಾ. ಅಕೋ ಅಲ್ಲಿ ಕೂತು ಕೆಲಹೊತ್ತು ಮಾತಾಡೋಣವಂತೆ, ಎಂದು ನುಡಿದು ಮುಂದೆ ಸಾಗಲು ಕುಮಾರನು ಶಕ್ತಿಯ ಹಿಂದೆಹಿಂದೆ ಹೋಗಿ, ಕುದುರೆಯ ಲಗಾಮುವನ್ನು ಅಲ್ಲಿಯ ಒಂದುಕಂಟೆಗೆ ಕಟ್ಟಿದನು. ನದೀತೀರದದಟ್ಟವಾದ ಗಿಡಗಳ ಮಧ್ಯದಲ್ಲಿ ಆಗಲೆಕೊಡಲಿಯಿಂದ ಕಡಿದು ಉರಳಿಸಿದ ಒಂದು ಹುಣಶೀಮರವಿತ್ತು. ಅದರ ಒಪ್ಪಾರೆಯು ನೀರಿನಲ್ಲಿಯೂ ಉಳಿದಭಾಗವು ನೆಲದಮೇಲೆಯೂ ಬಿದ್ದಿತ್ತು. ಶಕ್ತಿಯು ಅಲ್ಲಿಗೆಬಂದು ಆದರಬೊಡ್ಡೆಯಮೇಲೆ ಕುಳಿತಳು. ಕುಮಾರನು ಶಕ್ತಿಯಹತ್ತಿರ ಮರದಒಂದು ಕೊಂಬೆಯನ್ನು ಹಿಡಕೊಂಡುನಿಂತನು. ಸೂರ್ಯನು ಅಸ್ತಂಗತನಾಗಿದ್ದನು. ಆದರೆ ನಿಶಾಕಾಲದ ಧೂಮ್ರವರ್ಣವುಪೃಥ್ವಿಯನ್ನು ಇನ್ನೂ ಆವರಿಸಿದ್ದಿಲ್ಲ. ಪಶ್ಚಿಮದಿಕ್ಕಿನ ಆಕಾಶದಲ್ಲಿ ಪ್ರಕಾಶಿಸುವ ಕೆಂಪುಬಣ್ಣದ ತೇಜೋಮೇಘಗಳು ಸಾಲುಗೊಂಡಿದ್ದವು. ಅವುಗಳ ಕಾಂತಿಯಿಂದ ಜಲ, ಸ್ಥಳಗಳು ಒಟ್ಟೀಕೆಂಪಾಗಿ ತೋರುತ್ತಿದ್ದವು. ಆದರೆ ಶಕ್ತಿಯ ಸುಂದರವಾದ ಮುಖದಮೇಲೆ ಆರಕ್ತಕಾಂತಿಯು ಶೋಭಿಸಿದಷ್ಟು ಮತ್ತೆಲ್ಲಿಯೂ ಅದು ಶೋಭಿಸಿರಲಿಕ್ಕಿಲ್ಲ.

ಶಕ್ತಿಕುಮಾರಿಕೆಯು ಬಂಗಾಲದ ಸರ್ವಸಾಧಾರಣ ಹೆಂಗಸರಂತೆ ಸಂಪಿಗೆಯ ಬಣ್ಣದ ಅಥವಾ ಬಿಳಿಛಾಯೆಯುಕ್ತ ಅರಿಶಿನ ಮೈಬಣ್ಣದ ಹೆಣ್ಣುಮಗಳಾಗಿದ್ದಿಲ್ಲ; ಆಕೆಯ ಮೈಬಣ್ಣವು ಇರಾಣೀ ಹೆಂಗಸರಂತೆ ತೇಜೋಮಯ-ಪ್ರಫುಲ್ಲ-ಪ್ರದೀಪ್ತವಾದ ಸುವರ್ಣಕಾಂತಿಯುಳ್ಳದ್ದಾಗಿತ್ತು. ಬರೇ ಮೈಕಾಂತಿಯೇ ಅಲ್ಲ, ಅವಳ ಹವಣಿಯ ನಿಡಿದಾದ ಸರಳ ಮೂಗು, ವಕ್ರರೇಖೆಯಂತೆ ಮುಚ್ಚಲ್ಪಟ್ಟ ಓಷ್ಠಾಧರಗಳು, ಬೇರೆ ಬೇರೆಯಾಗಿ ಕಾಣುವ ಸಾಧಾರಣ ಗಲ್ಲಗಳು, ಕರಿಯ ಹುಬ್ಬುಗಳೆಂಬ ಧನುಷ್ಯಗಳಿಂದ ಪರಿವೇಷ್ಟಿತಗಳಾದ ಕಮಲ

ಗಳನ್ನು ನಾಚಿಸುವಂತಹ ನೀಲನಯನಗಳು ಇವೆಲ್ಲವುಗಳು ಅತ್ಯಂತ ಗರ್ವಯುಕ್ತವಾದ ಆಕೆಯುಶ್ರೇಷ್ಠ ಸೌಂದರ್ಯವನ್ನು ಹೊರಚೆಲ್ಲುತ್ತಿದ್ದವು. ಆಕೆಯ ಮುಖದ ಈ ಪ್ರಕಾರದ ತೇಜಸ್ಸು, ಮಾಸಿದ ಆಕೆಯ ಸೀರೆ, ಕೊಂಕಿದಮುಂಗುರುಗಳ ಸ್ಪರ್ಶದಿಂದಯುಕ್ತವಾದ ಕಣ್ಣುಗಳ ಪ್ರೇಮಚಾಂಚಲ್ಯ, ತುಟಿಗಳ ಆನಂದವಿಸ್ಫೂರಿತಭಾವ ಇವುಗಳಲ್ಲಿ ಅತಿಮಧುರವಾದ ಕೋಮಲ ಲಾವಣ್ಯವನ್ನು ಉಂಟುಮಾಡುತ್ತಿತ್ತು. ಆಕೆಯ ಈ ಪ್ರಕಾರದ ಅತ್ಯುತ್ಕೃಷ್ಟರೂಪವನ್ನು ನೋಡಿದ ಕುಮಾರನಿಗೆ ಅರಣ್ಯವಾಸಿನಿಯಾದ ಶಕುಂತಲೆಯನ್ನು ನೋಡಿದ ದುಷ್ಯಂತನು ಹೊರಡಿಸಿದ ಉದ್ಗಾರವು ನೆನಪಿಗೆ ಬರಲು, ಅವನು—

ಸರಸಿಜಮನುವಿದ್ಧಂ ಶೈವಲೇನಾಪಿ ರಮ್ಯಂ|
ಮಲಿನಮಪಿ ಹಿಮಾಂಶೋರ್ಲಕ್ಷ್ಮ ಲಕ್ಷ್ಮೀಂ ತನೋತಿ||
ಇಯಮಧಿಕಮನೋಜ್ಞಾ ವಲ್ಕಲೇನಾಪಿ ತನ್ವೀ|
ಕಿಮಿವಹಿ ಮಧುರಾಣಾಂ ಮಂಡನನ್ನಾಕೃತೀನಾಂ ||೧||

ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಿರಲು ಅವನಲ್ಲಿ ದೇಹಭಾನವು ಇಲ್ಲದಾಯಿತು. ಯಾವ ಶಕ್ತಿಯು ತಾನು ಹದಿನಾಲ್ಕು ವರ್ಷದವನಿರುವಾಗ ಸರೋವರತೀರದ ಉಪವನದಲ್ಲಿ ತನ್ನ ಬಾಲ್ಯಸಖಿಯೂ ರಾಣಿಯೂ ಆಗಿದ್ದಳೋ, ಆಕೆಯೇ ಈಗ ಇಲ್ಲಿ ಬಂದಿರುವಳಲ್ಲ, ಎಂಬ ಆನಂದದಿಂದ ಮಗ್ನನಾದ ಅವನು, ಮೆಲ್ಲಮೆಲ್ಲನೆ ನಿಂತಸ್ಥಳಬಿಟ್ಟು ಆಕೆಯ ತೀರ ಸಮೀಪಕ್ಕೆ ಹೋಗಿ ಕುಳಿತುಕೊಂಡದ್ದು ಕೂಡಅವನಿಗೆ ಸ್ಮರಣದಲ್ಲುಳಿಯಲಿಲ್ಲ. ಯಾವಾಗಶಕ್ತಿಯು— "ರಾಜಕುಮಾರ ಆಗಿನಂತೆ ಈಗಾದರೂ ಕೊಳಲೂದುತ್ತಿರುವೆಯಾ?" ಎಂದು ಪ್ರಶ್ನೆಮಾಡಿದಳೋ ಆವಾಗ ಅವನಿಗೆ ದೇಹಭಾನಉಂಟಾದಂತಾಯಿತು. ಆಗ ಅವನು ಒಂದು ದೀರ್ಘ ನಿಶ್ವಾಸವನ್ನು ಬಿಟ್ಟು ತುಸಸರಿದು ಕುಳಿತನು. ಆದರೆ ಕೂಡಲೆ ಅಲ್ಲಿಂದೆದ್ದು ತನ್ನ ಪೂರ್ವದ

ಸ್ಥಳಕ್ಕೆ ಹೋಗಿನಿಂತುಕೊಳ್ಳಲಿಲ್ಲ. ಶಕ್ತಿಯು ಮತ್ತೆ—ಕುಮಾರ, ನಿನ್ನ ಕೊಳಲು ಎಲ್ಲಿದೆ? ಹಿಂದಿನಂತೆ ಈಗ ಕೊಳಲನ್ನೂದುವದಿಲ್ಲವೆ?

ಕುಮಾರನು ಪುನಃ ನಿಟ್ಟುಸಿರುಬಿಟ್ಟು—ಪೂರ್ವದಂತೆಯೇ ಆ ದಿವಸಗಳು ಈಗ ಅವೆಯೇನು? ರಾತ್ರಿಯು ಮುಗಿಯುತ್ತಲೆ ಸ್ವಪ್ನವಾದರೂ ಮುಗಿಯುವದಿಲ್ಲವೆ?

ಶಕ್ತಿ—ಆದರೆ ಆ ರಾತ್ರಿಯು ಪುನಃ ಯಾವಾಗ ಬರುವದು? ಹಾಗು ಆ ಕನಸು ಮತ್ತೆ ಕಾಣದೆ?

ಕುಮಾರ—ರಾತ್ರಿಯು ಬರುತ್ತಲೇ ಇದೆ; ಆದರೆ ಹಿಂದಿನ ರಾತ್ರಿಯ ಆ ಸ್ವಪ್ನವು ಮುಂದೆ ಕಾಣಲಿಕ್ಕಿಲ್ಲವೆಂಬದು ಸಿದ್ಧಾಂತವು.

ಕುಮಾರನ ಭಾಷಣದಿಂದ ಶಕ್ತಿಯ ಹೃದಯವು ಆನಂದವೂ ರಿತವಾಯಿತು. "ಹ್ಯಾಗಾದರೂ ಆಗಲಿ, ರಾಜಕುಮಾರನ ವಿರಹ ದಿಂದ ನಾನೆಷ್ಟು ಬಳಲಿರುವನೋ, ಅವನಾದರೂ ನನ್ನ ವಿರಹದಿಂದ ಅಷ್ಟೇಬಳಲಿರುವನು" ಎಂದು ಸಂಸಾರದ ಕುಟಿಲಭಾವವನ್ನು ತಿಳಿಯದ ಶಕ್ತಿಯು ಅಂದುಕೊಂಡಳು. ಬಳಿಕ ಅವಳು—ಆಪ್ರಕಾರ ಸಾಹಸ ವನ್ನೇ ಮಾಡಿದರೆ ಪೂರ್ವದ ಆ ಸ್ವಪ್ನವು ಪುನಃ ಪ? ಕಾಣಬಾರ ದು? ಅದಕ್ಕೋಸ್ಕರ ನೀನು ಎಲ್ಲ ಬಗೆಯಿಂದ ಸಾಹಸಪಟ್ಟಿರುವೆ ಯೇನು?" ಎನ್ನಲು, ಕುಮಾರನು-ಎಲ್ಲ ಪ್ರಕಾರದಿಂದಸಾಹಸಮಾಡುವ ದೊತ್ತಟ್ಟಿಗಿರಲಿ, ತುಸುಮಟ್ಟಿಗಾದರೂ ಸಾಹಸಪಡಲಿಕ್ಕೆ ನನಗೆ ಸಮ ಯವಿಲ್ಲ. ಯಾಕಂದರೆ ಈಗ ನಾನು ವಯಸ್ಸಿಗೆ ಬಂದಿರುವದರಿಂದ ರಾಜ್ಯಭಾರವು ನನ್ನ ಕೊರಳಿಗೆ ಬಿದ್ದದೆ. ಪ್ರಜೆಗಳ ಸುಖದುಃಖಗ ಳನ್ನು ನೋ[illegible] ಬಾಲ್ಯದಲ್ಲಿಯಂತೆ ಕೇವಲ ಆಟ-ಊಟಗಳಲ್ಲಿ[illegible] ಕೊಳಲೂದುವದರಲ್ಲಿಯೂ ನನ್ನಿಂದ ಕಾಲಹರಣಮಾಡಲಾದೀತೆ?"

ರಾಜಕುಮಾರನಿಗೆ ಇಪ್ಪತ್ತುವರುಷಗಳು ಏರಿದ್ದವು. ಆದರೆ ಅವನಲ್ಲಿಯಬಾಲಸ್ವಭಾವವು ಅವನ ಹೃದಯದಿಂದ ಇನ್ನೂ ಪೂರ್ಣ

ವಾಗಿ ಆಳಿದಿದ್ದಿಲ್ಲ. ಆದರೂ ಅವನು ಮಂದಿಯಕೂಡ ಭಾಷಣಮಾಡುವಾಗ ತನ್ನ ಪ್ರೌಢಿಯನ್ನು ತೋರಿಸಿ ಅವರನ್ನು ಸಂತೋಷಗೊಳಿಸುತ್ತಿದ್ದನು. ಬಳಿಕಶಕ್ತಿಯು—ನಿನಗೆ ಕೊಳಲನ್ನೂದು ಪೇಕ್ಷೆಯಿಲ್ಲವಷ್ಟೆ? ಆದರೆನನಗೆ ಮಾತ್ರ ಅದನ್ನು ಕೇಳುವ ಇಚ್ಛೆಯು ಇನ್ನೂ ಪೂರ್ಣವಾಗಿಲ್ಲ. ಕುಮಾರ ನೀನು ಈಗ ಕೊಳಲನ್ನುಬಿಟ್ಟು ಕೈಯಲ್ಲಿ ದಂಡವನ್ನೇಕೆ ಧರಿಸಿದೆ?

ಆಗ ಕುಮಾರನು ನಕ್ಕು—ಹಾಗೆ ನಿನಗೆ ಕಾಣುತ್ತಿದ್ದರೂ ನಾನು ಕೊಳಲನ್ನು ತುಚ್ಛೀಕರಿಸಿರುವದಿಲ್ಲ, ಎಂದು ನುಡಿದು ತನ್ನ ಅಮೂಲ್ಯ ಪೋಷಾಕಿನೊಳಗಿಂದ ಕಟ್ಟಿಗೆಯ ಕೊಳವೆಯ ಎರಡು ಸಾಧಾರಣ ತುಂಡುಗಳನ್ನು ತೆಗೆದು ಒಂದಕ್ಕೊಂದು ಜೋಡಿಸಹತ್ತಿದನು. ಅದನ್ನು ನೋಡಿ ಶಕ್ತಿಯು ಆಹ್ಲಾದದಿಂದ ಇದು ನನ್ನ ಬಿದರ ಕೊಳಲು! ಅಲ್ಲವೆ?

ಕುಮಾರ—ಹೌದು! ಇದು ನಿನ್ನ ಕೊಳಲೇ.

ಬಾಲ್ಯದಲ್ಲಿ ಊದಕಲಿಯಲಿಕ್ಕೆಂದು ಶಕ್ತಿಯು ಈ ಬಿದರಿನ ಕೊಳಲನ್ನು ಕುಮಾರನಬಳಿಗೆ ತಂದಿದ್ದಳು. ಆದರೆ ಫೂ ಫೂ ಎಂದು ಒಂದೆರಡುದಿನ ಊದುವಷ್ಟರಲ್ಲಿ ಆಕೆಯ ಆ ಉಮೇದು ಮುಗಿದದ್ದರಿಂದ ಆ ಕೊಳಲು ಅಂದಿನಿಂದ ಕುಮಾರನಬಳಿಯಲ್ಲೇ ಉಳಿದಿತ್ತು. ಅದು ಸಾಧಾರಣ ಬಿದರಿನ ಕೊಳಲು, ಆದರೂ ಅದು ಅವನ ಸುವರ್ಣದ ಕೊಳಲಿಗಿಂತ ಊದುವದಕ್ಕೆ ಚನ್ನಾಗಿತ್ತು.

ಶಕ್ತಿ—ಈಗ ನೀನು ರಾಜನಾಗಿರುವೆ; ಮಹಾರಾಜ, ಸಾಮಾನ್ಯಬಿದರಿನ ಈ ಕೊಳಲು ನಿನ್ನ ಕೈಯಲ್ಲಿ ಶೋಭಿಸುವದೆಂತು? ಆಟದಲ್ಲಿಯ ಈ ದರಿದ್ರ ಕೊಳಲನ್ನೊಡೆದು ಈ ನೀರಿನಲ್ಲಿ ಚೆಲ್ಲಿಬಿಡಬೇಕೆಂದು ನನಗನಿಸುತ್ತದೆ. ಛೀ, ರಾಜನಕೈಯಲ್ಲಿ ಈ ದರಿದ್ರ ಕೊಳಲೇ? ಇದೇನು ಚೇಷ್ಟೆಯೋ?

ಕುಮಾರನು ತನಗೆ ಇಂದೇ ಕಾಣಿಕೆಯಾಗಿ ದೊರೆತ ಅಮೂಲ್ಯಖಡ್ಗಕ್ಕೆ ಕೈನೀಡಿ—ಶಕ್ತೀ, ಈ ಬಹುಮೂಲ್ಯಖಡ್ಗಕ್ಕಿಂತಲೂ ಈ ಸಾಮಾನ್ಯಕೊಳಲು ನನಗೆ ಹೆಚ್ಚು ಬೆಲೆಯುಳ್ಳದ್ದಾಗಿದೆ. ಈ ಖಡ್ಗವನ್ನು ಬೇಕಾದರೆ ನೀರಿನಲ್ಲಿ ಚೆಲ್ಲುವೆನು; ಆದರೆ ಈ ಕೊಳಲು ದೇಹದಂತೆ ಯತ್ನಪೂರ್ವಕವಾಗಿ ಸಂಗ್ರಹಿಸಿಡತಕ್ಕ ಸಾಮಗ್ರಿಯಾಗಿದೆ. ನಿನ್ನ ಪೂರ್ವದ ಸ್ನೇಹದ ನೆನಪಿಗಾಗಿ ನನ್ನ ಬಳಿಯಲ್ಲಿ ಇದೊಂದೇ ವಸ್ತುವು ಉಳಿದಿರುತ್ತದೆ.

ಕುಮಾರನ ಈ ಸಂಭಾಷಣದಿಂದ ಮೊದಲೇ ಕಾಂತಿಮಯವಾಗಿದ್ದ ಶಕ್ತಿಯ ಕಪೋಲಗಳು ಮತ್ತಿಷ್ಟು ಸಸುಗೆಂಪಿನ ಪ್ರಭೆಯಿಂದ ಶೋಭಿಸಹತ್ತಿದವು. ಆಗ ಆಕೆಯು ನಗುತ್ತ ತಲೆಯಮೇಲಿನ ಸೆರಗನ್ನು ಬದಿಗೊತ್ತಿ ಕೊರಳಲ್ಲಿದ್ದ ಹೂಮಾಲೆಯನ್ನು ಕೈಯಿಂದ ಹಿಡಿದು—"ಕುಮಾರ, ಕೊಳಲು ನಿನಗೆ ಹೇಗೆಪ್ರಿಯವೋ ಹಾಗೆಯೇ ನನಗೆ ಈ ಶುಷ್ಕ ಹೂಮಾಲೆಯು; ಇದು ನಿನ್ನ ಕೈಯಿಂದ ಬಂದ ಕಾಣಿಕೆಯು. ಇದರಷ್ಟು ಬೆಲೆಯುಳ್ಳ ಪದಾರ್ಥಗಳು ನನ್ನಲ್ಲಿ ಬೇರೊಂದಿಲ್ಲ. ಇಂಥ ಅಮೂಲ್ಯ ಹಾರವನ್ನು ಇಂದು ಮಧ್ಯಾಹ್ನ ನಿನ್ನ ವಿಜಯಕಾಲಕ್ಕೆ ನಿನಗೊಪ್ಪಿಸಿ ನನ್ನ ಆಹ್ಲಾದವನ್ನು ವ್ಯಕ್ತಪಡಿಸಿದ್ದೆನು. ಹೀಗಿರಲು ನೀನು ಒಣಮಾಲೆಯ ಕಾಣಿಕೆಯೇ? ಇದು ಸನ್ಮಾನವಲ್ಲ, ಉಪಹಾಸವೆಂದು ಅಂದೆಯಲ್ಲ?"

ಇದನ್ನು ಕೇಳಿದಾಗ ಒಂದುತರದ ವಿದ್ಯುತ್ಪ್ರವಾಹವು ಕುಮಾರನ ಹೃದಯವನ್ನು ಕಂಪಿಸಿಬಿಟ್ಟಿತು. ಅದರಿಂದ ಸುಖವಾಯಿತೋ ದುಃಖವಾಯಿತೋಎಂಬದನ್ನುಮಾತ್ರ ಅವನು ತಿಳಿಯದಾದನು. ನಿಮಿಷ ಮಾತ್ರದಲ್ಲಿ ಅವನ ಪ್ರಫುಲ್ಲ ಮುಖಬಿಂಬವು ವಿಲಕ್ಷಣವಾಗಿ ತೋರಿತು. ಅವನು ಶಕ್ತಿಯನ್ನು ಮರೆಯಲು ಶಕ್ತನಾಗಿದ್ದಿಲ್ಲವೆಂಬದು ಸತ್ಯವು. ಆದರೆ ಈ ವಿಷಯದಲ್ಲಿ ಅನ್ಯರ ದೋಷವು ಲವಮಾತ್ರವಿದ್ದಿಲ್ಲ;

ಏನಾದರೂ ದೋಷವಿದ್ದರೆ ಅದು ಅವನ ಸ್ವಂತದ್ದೇ ಆಗಿತ್ತು. ಅವನು ರಾಜಪುರುಷನು, ಶತವಿವಾಹಗಳಾದರೂ ಅವನಿಗೆ ಶಾಸ್ತ್ರ ಸಮ್ಮತವೇ ಆಗಿರಲು ಎರಡನೆಯ ಲಗ್ನಮಾಡಿಕೊಳ್ಳಲಿಕ್ಕೆ ಅವನಿಗೆ ಯಾವದೋಷವೂ ತಟ್ಟುವಂತಿದ್ದಿಲ್ಲ. ಆದರೆ ಯಾವಶಕ್ತಿಯು ಪರಸ್ತ್ರೀ ಯಾಗುವದಕ್ಕಿಂತ ಮೊದಲೇಅವನ ಹೃದಯವನ್ನು ಆಕ್ರಮಿಸಿದ್ದಳೋ ಆ ಶಕ್ತಿಯು ಇವಳಲ್ಲ. ಆಕೆಯು ಅವನ ಬಾಲ್ಯಸಖೀ-ಕುಮಾರಿ ಶಕ್ತಿಮಯಿಯು. ಆ ಶಕ್ತಿಮಯಿಯು ಈಗ ರಮಣಿಯಾಗಿ ಅನ್ಯ ರ ಸ್ತ್ರೀಯಾಗಿರಲು, ಈಗಲೂ ಆಕೆಯನ್ನು ಸ್ಮರಿಸುವದರಿಂದ ಇಹ ಲೋಕ ಪರಲೋಕಗಳಲ್ಲಿಯೂ ತಪ್ಪಿಗೆಗುರಿಯಾಗಬಹುದು ಎಂಬ ಅನೇಕವಿಚಾರಗಳಿಂದ ಬಾಡಿ ಕಪ್ಪಿಟ್ಟ ಆತನ ಮುಖಮಂಡಲವು ಶಕ್ತಿ ಯ ದೃಷ್ಟಿಗೆ ಬಿತ್ತು. ಆಕೆಯು ತನ್ನ ಕೊರಳೊಳಗಿನಮಾಲೆಯನ್ನು ತೆಗೆದು ಕೈಯಲ್ಲಿತಕ್ಕೊಂಡು ಇನ್ನು ಕುಮಾರನಕೊರಳಲ್ಲಿ ಹಾಕಬೇ ಕೆಂದಿದ್ದಳು; ಆದರೆ ಆಕೆಯಮಾಲೆಯು ಆಕೆಯ ಕೈಯಲ್ಲೇ ಉಳಿ ದುಬಿಟ್ಟಿತು. ಮುಂದೆ ಆಕೆಯ ಕೈಯು ಏಳಲೇಇಲ್ಲ.

ಕುಮಾರ—ಶಕ್ತಿ, ಅದು ಆಟದೊಳಗಿನಮಾಲೆ. ಆ ಆಟವು ಇನ್ನೂ ಮರೆತಿಲ್ಲವೆ? ಅದು ಹುಡುಗರ ಆಟ; ನೀನು ಅದನ್ನು ಮರೆ ತುಬಿಡುವದು ಯೋಗ್ಯವಾಗಿದೆ.

ಇದನ್ನು ಕೇಳಿ ಶಕ್ತಿಯಜೀವಕ್ಕೆ ಭಯಂಕರಬಾಧೆಯಾಗಲು ಆಕೆಯು—ನೀನು ಅದನ್ನು ಮರೆತು ಬಿಟ್ಟೆಯಾ?

ಕುಮಾರ—ಮರೆತಿಲ್ಲ-ಆದರೆ ಮರೆಯುವದು ಯೋಗ್ಯವೆಂದು ನಾನು ಅನ್ನುತ್ತೇನೆ. ಶಕ್ತೀ, ನೀನು ಯಾವಾಗ ಒಮ್ಮಿಂದೊಮ್ಮೆ ಈ ದೇಶಬಿಟ್ಟು ಹೋದೆಯೋ, ಆವಾಗ ನಾನು ನಿನ್ನನ್ನು ಎಷ್ಟುಹುಡುಕಿ ದೆನಲ್ಲ? ಆದರೂ ನೀನು ಸಿಗಲಿಲ್ಲ. ಆಗ ಪೂರ್ವನಿಮಿಷದಲ್ಲಿಯ ಆಘಾತವಾದ ವೇದನೆಗಳನ್ನು ಮರೆತು ಶಕ್ತಿಯು ಸ್ಫೂರ್ತಿ

ಯಿಂದ—“ಕುಮಾರ ನಾನು ಯಾವಕಾರಣದಿಂದಹೊರಟುಹೋದೆನೆಂಬದನ್ನು ನೀನರಿಯೆ. ಒಂದುದಿನ ಬೆಳಿಗ್ಗೆ ನನ್ನ ತಂದೆಯು ‘ನಾನು ತೀರ್ಥಯಾತ್ರೆಗೆ ಹೊರಡುವದಕ್ಕಾಗಿ ಒಂದು ನೌಕೆಯನ್ನು ಗೊತ್ತು ಮಾಡಿರುವೆನು. ನೀನೂ ನಮ್ಮೊಡನೆ ನಡೆ.’ ಎಂದನು. ಆಗ ನಾನು ಒಮ್ಮೆ ರಾಜಮಂದಿರಕ್ಕೆ ಬಂದು ನಿನ್ನನ್ನು ಕಂಡುಹೋಗಬೇಕೆಂದು ಬಹಳ ಪ್ರಯತ್ನಪಟ್ಟೆನು. ಆದರೆ ನನ್ನ ತಂದೆಯು ನನಗೆ ಸ್ವಲ್ಪವೂ ಅವಕಾಶಕೊಡದೆ ಕೂಡಲೆ ತನ್ನೊಡನೆ ನೌಕೆಯಲ್ಲಿ ಕೂಡಿಸಿಕೊಂಡು ನಡೆದನು. ಈಗ ಆರುವರ್ಷಗಳಿಂದ ನಾನು ಅವನೊಡನೆ ಅಲ್ಲಲ್ಲಿ ಅಡ್ಡಾಡಿದೆನು. ನಿತ್ಯದಲ್ಲೂ ನಾನು ಅವನಿಗೆ ‘ಮನೆಗೆ ಎಂದು ಹೋಗುವದು?’ ಎಂದು ಕೇಳುತ್ತಿದ್ದೆನು. ಅದಕ್ಕೆ ಅವನು —‘ಮುಂದಿನಕ್ಷೇತ್ರವನ್ನು ನೋಡಿಕೊಂಡು’ ಎಂದು ನಿಶ್ಚಿತ ಉತ್ತರವನ್ನು ಕೊಡುತ್ತಿದ್ದನು. ನಾನು ಈ ಆರುವರ್ಷಗಳನ್ನು ಎಷ್ಟುಕಷ್ಟದಿಂದ ಕಳೆದಿರುವೆನೆಂಬದು ಭಗವಂತನೊಬ್ಬನಿಗೆ ಗೊತ್ತು; ಹಾಗೂ ಈ ಒಣಹೂಮಾಲೆಗೊಂದು ಗೊತ್ತು.

ಆಕೆಯಮಾತು ಮುಗಿಯುವಷ್ಟರಲ್ಲಿ ಕುಮಾರನು ವಿಸ್ಮಯದಿಂದ—ನಿನ್ನ ವಿವಾಹವಾಗಿರುವದೆಂದು ನಾನು ಭಾವಿಸಿದ್ದೆನು. ಹಾಗಾದರೆ ನಿನ್ನ ಲಗ್ನವಿನ್ನೂ ಆಗಿಲ್ಲವೇನು?

ಶಕ್ತಿ—“ಹೆಂಗಸರಿಗೆಲ್ಲಾದರೂ ಎರಡುಸಾರೆ ಲಗ್ನವಾಗುವದುಂಟೇ? ” ಎಂದು ನುಡಿದು ನಕ್ಕಳು.

ನಾಲ್ಕನೆಯ ಪ್ರಕರಣ

ಅಭಿಶಾಪ.

ಕುಮಾರನು ತಲೆ ತಗ್ಗಿಸಿದನು. ಅನುತಾಪವೆಂಬ ತೀವ್ರ ವೃಶ್ಚಿಕದಂಶದ ಅಗ್ನಿಯಿಂದ ಅವನು ಉರಿಯಹತ್ತಿದನು. ಶಕ್ತಿಯು ಕುಮಾರನನ್ನು ಸ್ವಾಮಿಯೆಂದು ತಿಳಿದು ಈ ವರೆಗೂ ಕುಮಾರಿಯಾಗಿದ್ದಳು. ಆದರೆ ಕುಮಾರನು ಮಾತ್ರ ವಿವಾಹಿತನಾಗಿ ಸುಖದಲ್ಲಿ ಕಾಲಕಳೆಯುತ್ತಿದ್ದನು. ಆದರೆ ಅನುತಾಪಗ್ರಸ್ತನಾದ ಅವನು ಈಗ ಬಾಯಿಂದ ಒಂದು ಚಕಾರಶಬ್ದವನ್ನು ಕೂಡ ಉಚ್ಚರಿಸಲಿಲ್ಲ. ಹ್ಯಾಗೇ ಆಗಲಿ ಶಕ್ತಿಯು ಪರಸ್ತ್ರೀಯಳಲ್ಲವೆಂಬದನ್ನು ತಿಳಿದು ಮನಸ್ಸಿನಲ್ಲಿಯೇ ಅವನು ಸಂತೋಷಪಟ್ಟನು.

ಶಕ್ತಿ—"ರಾಜಕುಮಾರನ ವಿವಾಹವು ಆಗಿರಬಹುದಲ್ಲವೆ?" ಎಂದು ಕೇಳಲು, ಕ್ಷಣಹೊತ್ತು ಅವನ ತೇಜೋಭಂಗವಾದಂತಾಯಿತು. ಆಗ ಕಣ್ಣುಗಳಿಂದ ಅಶ್ರುಗಳನ್ನು ದುರಿಸುತ್ತ ಅವನು—ಶಕ್ತೀ, ನೀನೇಕೆ ಹೊರಟುಹೋದೆ?

ಶಕ್ತಿ—ಮತ್ತೂ ಅದನ್ನೇ ಕೇಳುತ್ತೀಯಲ್ಲ?

ಕುಮಾ—ಹಾಗಲ್ಲ. ಲಗ್ನಮಾಡಿಕೊಡುವದಕ್ಕಾಗಿಯೇ ನಿನ್ನ ತಂದೆಯು ನಿನ್ನನ್ನು ಪರಸ್ಥಳಕ್ಕೆ ಕರದೊಯ್ದನೆಂದು ತಿಳಿದಿದ್ದೆನು. ಅಂತೇ ನಾನು ನಿನ್ನನ್ನು ಪರಸ್ತ್ರೀಯೆಂದು ಭಾವಿಸಿದ್ದೆನು.

ಶಕ್ತಿಯತಂದೆಯ ವಾಸಸ್ಥಳವು ಇದ್ದ ದಿನಾಜಪುರವಲ್ಲ; ದಿನಾಜಪುರದ ಬಳಿಯಲ್ಲಿರುವ ದೇವಕೋಟಿಯು ಆತನಊರು. ಅವನು ರಾಜದರ್ಬಾರದಲ್ಲಿ ಕೆಲಸಮಾಡಬಂದ ಹತ್ತುವರ್ಷಗಳಿಂದ ದಿನಾಜಪುರದಲ್ಲಿಯೇ ವಾಸಮಾಡುತ್ತಿದ್ದನು.

ಶಕ್ತಿಯು ಕಷ್ಟದಿಂದ ಹೊರಹೊರಡುವ ಅಶ್ರುಗಳನ್ನು ತಡೆದು—ನಿನ್ನ ರಾಣಿಯಾವಳು?

ಕುಮಾರ—ನಿರೂಪಮೆಯು.

ಶಕ್ತಿಯ ಸುಂದರವಾದ ಮುಖವುಕೂಡಲೇ ಈರ್ಷ್ಯಾವಿಷ್ಕೃತವಾಯಿತು. ಆಗ ಅವಳು ಮನಸ್ಸಿನಲ್ಲಿ—ಭಗವಾನ್, ನೀನು ಪುರುಷರು ಹಾಗೂ ಹೆಂಗಸರು ಇವರಲ್ಲಿ ಈ ಪ್ರಕಾರದ ಅಸಮಾನ ಧರ್ಮವನ್ನೇಕೆ ಉಂಟುಮಾಡಿರುತ್ತೀ. ಒಬ್ಬರು ದುಃಖದಿಂದ ಬಳಲಿಬಳಲಿ ಸಾಯಬೇಕು, ಹಾಗೂ ಅದೇ ದುಃಖಕ್ಕಾಗಿ ಇನ್ನೊಬ್ಬರು ನಗಬೇಕು. ಒಬ್ಬರಿಗೆ ಕೇವಲ ಮಂದಿಯ ತೃಷ್ಣೆಯನ್ನು ಪೂರೈಸುವದಕ್ಕಾಗಿಯೇ ರಕ್ತವನ್ನು ಕೊಟ್ಟಿರುವೆ. ಮತ್ತೊಬ್ಬನು..............ದೇವಾ, ನಿನ್ನಲೀಲೆಯು ಅಗಾಧವಾದದ್ದು.

ಈರ್ಷೆಯಿಂದ ಹುಬ್ಬುಗಂಟಿಕ್ಕಿದ ಶಕ್ತಿಯಮುಖವನ್ನು ನೋಡಿ ಕುಮಾರನು ಮೆಟ್ಟಿಬಿದ್ದನು. ಹೃದಯಸ್ಥವಾದ ಯಾವಶಕ್ತಿಯ ಮೂರ್ತಿಯನ್ನು ಅವನು ಎಂದೂ ಮರೆಯುವಂತಿದ್ದಿಲ್ಲವೋ, ಆ ಮೂರ್ತಿಯು ಇದಾಗಿದ್ದಿಲ್ಲ. ಆ ಅತ್ಯಂತ ಸೌಂದರ್ಯದ ಮೂರ್ತಿಯಲ್ಲಿ ಈ ಪ್ರಕಾರದ ಸಂಹಾರಿಣೀ-ಭೀಷಣಮೂರ್ತಿಯನ್ನು ಅಡಗಿಸುವದಾಗದ್ದರಿಂದ ರಾಜಕುಮಾರನು ಅದನ್ನು ಸ್ವಪ್ನವೆಂದು ತಿಳಿಯಲಿಕ್ಕೆ ಸಹಶಕ್ತನಾಗಲಿಲ್ಲ.

ಕುಮಾರನು ಸ್ತಬ್ಧವಾದದ್ದನ್ನು ಕಂಡು ಹಾಲಾಹಲ ವಿಷಪೂರ್ಣ ಸ್ವರದಿಂದ ಶಕ್ತಿಯು—ನಿನಗೇ ತಕ್ಕದ್ದು ಇದು, ಸತ್ಯವಾಗಿ ನಾನು ನಿನ್ನನ್ನುನಂಬಿಕೊಂಡಿದ್ದೆನು; ಆದರೆನೀನು ಮಾತ್ರ ಪೀಡಿಸಹತ್ತಿರುವೆ. ನಾನು ನಿನ್ನ ಧ್ಯಾನದಲ್ಲಿಯೇ ಪ್ರಾಣಬಿಡುವೆನು; ನೀನು ಹೂಗಳೊಳಗಿನ ಮಧುವನ್ನು ಹೀರುವಂತೆ ಹೀರಿಕೊಳ್ಳುವೆ. ನಾನು ನಿನ್ನ ಕಾಲೊಳಗೆ ಬಿದ್ದುಕೊಳ್ಳುವೆನು; ನೀನು ತುಳಿಯುತ್ತ ಹೊರಟು

ಹೋಗುವೆ; ನಿನಗೆ ಆಟವು; ಆದರೆ ನನಗೆ ಮಾತ್ರ ಪ್ರಾಣಸಂಕಟವು!

ಕುಮಾರನ ಬಾಯಿಂದ ಶಬ್ದಗಳು ಹೊರಡದಾದವು. ಅರಳಿದ ಹೂವಿನಲ್ಲಿ ಸರ್ಪವನ್ನು ಕಂಡಂತೆ ಅವನು ವಿಸ್ಮಯಚಕಿತನಾದನು.

ಶಕ್ತಿಯ ಈ ಪ್ರಕಾರದ ಹುಬ್ಬುಗಂಟಿಕ್ಕಿದ ವಿಷಮಯಭಾವವನ್ನು ಕಂಡಕೂಡಲೆ ಈವರೆಗೆ ಮರೆತುಹೋಗಿದ್ದ ನಿರೂಪಮೆಯ ಭಕ್ತಿ-ಪ್ರೇಮ-ಕ್ಷಮಾ-ಕೋಮಲ ಕರುಣಾಯುಕ್ತ ಮುಖಮಂಡಲವು ಕುಮಾರನಿಗೆ ಕಾಣಹತ್ತಿತು. ಅವನು ಮನಃಶ್ಚಕ್ಷುಗಳಿಂದ ನೋಡಹತ್ತಿದನು; ಈ ಈರ್ಷೆಯಿಂದ ಕುರೂಪಳಾದ ಶಕ್ತಿಮಯಿಯು ತನ್ನ ರಾಣಿಯು; ಮತ್ತು ಆ ಸುಕುಮಾರ-ಸುಕೋಮಲವಾದ ನಿರೂಪಮಾ ಕುಸುಮವು ತನ್ನ ಆಲಿಂಗನಕ್ಕೆ ಪಾತ್ರವಾಗದೆ, ಕಾಲಲ್ಲಿ ತುಳಿಯಲ್ಪಟ್ಟು ಒಣಗಿ ಭೂಮಿಯಮೇಲೆ ಬಿದ್ದಿದೆ. ಇದರಿಂದ ಅವನ ಹೃದಯವು ನಡುಗಿತು.

ನಿರೂಪಮೆಯು ಅವನ ಲಗ್ನದ ಹೆಂಡತಿಯು, ಅವನ ಮಕ್ಕಳ ಮರಿಗಳ ತಾಯಿಯು, ಅವನ ಸುಖದುಃಖಗಳ ಪಾಲುಗಾರ್ತಿಯು. ಆದ್ದರಿಂದ ಅವಳಲ್ಲಿ ಕುಮಾರನ ಶ್ರದ್ಧೆ-ಭಕ್ತಿ-ಕರುಣಾ ಸ್ನೇಹಗಳು ಎಳ್ಳಷ್ಟಾದರೂ ಕಡಿಮೆ ಇದ್ದಿಲ್ಲ. ಅವನಿಗೆ ಬೇರೊಂದು ಕಾರಣದಿಂದಅವನಲ್ಲಿಆತ್ಮಪರಿಪೂರ್ಣವಾದ ಪ್ರೇಮದಕೊರತೆಯೊಂದೇ ಇತ್ತು. ಆದರೆ ನಿರೂಪಮೆಯಕೋಮಲಗುಣಗಳು, ಆಕೆಯ ಪರಿಪೂರ್ಣ ಆತ್ಮದಾನವು, ಆಕೆಗೆ ಕುಮಾರನ ಈ ಕೊರತೆಯನ್ನು ತೋರಗೊಟ್ಟಿದ್ದಿಲ್ಲ. ಈದಿನಕುಮಾರನಹೃದಯದಲ್ಲಿಯಾವಾಗನಿರೂಪಮೆಯ ಮೂರ್ತಿಯು ನೆಲೆಗೊಂಡಿತೋ, ಆವಾಗ ಆ ಮೂರ್ತಿಯು ತನ್ನ ದೋಷವನ್ನು ಎಲ್ಲಿ ಕಂಡುಹಿಡಿಯುವದೋ ಎಂಬಂತೆ ಅವಸಿಗಾಯಿತು. ಆದರೆ ಆ ಮೂರ್ತಿಯು ಅವನಈ ಕ್ಷುಲ್ಲಕದೋಷವನ್ನು ನೋಡಲಿಕ್ಕೆ ಮನಸ್ಸು ಮಾಡದೆ ಸ್ಥಿರವಾಗಿದ್ದಿತು. ಆಗ ಅವನು ತನ್ನನ್ನೂ ಮರೆತನು, ಜಗ

ತ್ರನ್ನೂ ಮರೆತನು, ನಿರೂಪಮೆಯನ್ನು ಕೂಡ ಮರೆತನು; ಆ ದೇವೀ ಸದೃಶಳಾದ ನಿರೂಪಮೆಯಲ್ಲಿಯೂ, ಅವಳ ಅಮೃತತುಲ್ಯ ಸೌಂದರ್ಯದಲ್ಲಿಯೂ ಅವನು ಕಾಣದಂತಾದನು.

ಈ ಪ್ರಕಾರದ ಕಷ್ಟದಿಂದಲೂ, ಈ ಪ್ರಕಾರದ ಕಠೋರ ತಿರಸ್ಕಾರ ಶಬ್ದಗಳಿಂದಲೂ ನಿಸ್ತಬ್ಧನಾಗಿ ನಿಂತಿದ್ದ ರಾಜಕುಮಾರನನ್ನು ನೋಡಿ ಶಕ್ತಿಯ ಉದ್ಧತಗರ್ವ, ಸಿಟ್ಟಿನಮುಖಜಯ ಇವುಗಳು ಹೇಳಹೆಸರಿಲ್ಲದಾಗಿ, ಆಕೆಯ ಕಣ್ಣುಗಳಿಂದ ಅಶ್ರುಗಳುದುರಹತ್ತಿದವು. "ನಾನು ದೊಡ್ಡವನು-ನಾನೇರೂಪವಂತನು" ಹೀಗೆ ಭಾವಿಸುವ ಉದ್ಧಟ ಹಾಗು ಡಾಂಭಿಕ ಜನರ ಗರ್ವವು ಪ್ರತಿಕೂಲ ಸಮಯದಲ್ಲಿ ನಮ್ರಪ್ರಕೃತಿಯವರಂತೆ ಸಹಜವಾಗಿ ಇಳಿದು ಹೋಗುವದು. ಸಂಸಾರದಲ್ಲಿ ಇದೊಂದು ಆಶ್ಚರ್ಯಕರವಾತಾಗಿದೆ.

ಶಕ್ತಿಯು ಸ್ತಬ್ಧಳೂ ಮರ್ಮಾಹತಳೂ ಆಗಿ ದುಃಖದಿಂದ ನಡಗುವ ದನಿಯಿಂದ—ಕುಮಾರ, ನನ್ನನ್ನು ತ್ಯಜಿಸಬೇಡ ನೀನು ಗಂಡಸು, ನೀನು ಇಚ್ಛಿಸಿದರೆ ನೂರಾರು ವಿವಾಹಗಳನ್ನಾದರೂ ಮಾಡಿಕೊಳ್ಳಲು ಶಕ್ತನು. ಹೀಗಿದ್ದು ಈ ಅಭಾಗಿನಿಯನ್ನು ಯಾಕೆ ಪರಿತ್ಯಜಿಸುತ್ತೀ? ಧರ್ಮದಿಂದ ನೀನೇ ನನ್ನ ಸ್ವಾಮಿಯು, ನನ್ನನ್ನು ಕಡಿಮೆ ಜಾತಿಯವಳೆಂದು ಭಾವಿಸಬೇಡ; ಯಾವಾಗ ನೀನು ನನ್ನನ್ನು ತ್ಯಜಿಸುವಿಯೋ, ಆವಾಗ ನನ್ನ ವಿವಾಹವು ಹಿಂದೂಧರ್ಮದಂತೆ ಬೇರೆಯಾರೊಡನೆಯಾದರೂ ಆಗಲೇಬೇಕಾಗುವದು. ಹೀಗೆ ಆಗುವ ವಿವಾಹವು ಧರ್ಮವಿವಾಹವಲ್ಲ; ಆ ಅಧರ್ಮಕ್ಕೂ ಪಾಪಕ್ಕೂ ನೀನೊಬ್ಬನೇ ಗುರಿಯಾಗುವೆಯೆಂಬದನ್ನು ಚೆನ್ನಾಗಿ ಲಕ್ಷ್ಯದಲ್ಲಿಡು.

ಹೀಗೆ ನುಡಿದು ಶಕ್ತಿಯು ತಡೆದಳು. ಆಕೆಯು ದುಃಖದಿಂದು ದುರಿಸುವ ಅಶ್ರುಗಳು, ಬಾಡಿದ್ದರೂ ತೇಜೋಮಯವಾಗಿತೋರುವ ಆಕೆಯ ಮುಖಮಂಡಲ ಇವುಗಳು ಕುಮಾರನ ದೃಷ್ಟಿಗೆ ಬಿದ್ದವು.

ಹಾಗು ಅವನ ಕಿವಿಗೆ ಆಕೆಯ ಆಕರುಣಾಸ್ವರವು ಕೇಳಿಸಿತು. ಕೂಡಲೆ ಶಕ್ತಿಯ ಮೊದಲಿನ ಆ ವಿದ್ರೂಪವನ್ನು ಅವನು ಮರೆತುಬಿಟ್ಟನು. ಇದರಂತೆ ಕ್ರಮವಾಗಿ ನಿರೂಪಮೆಯನ್ನೂ ಮರೆತನು. ಈಗ ಅವನಿಗೆ ಹಿಂದಿನ ಯಾವ ಸಂಗತಿಯ ನೆನಪು ತಿಲಮಾತ್ರವೂ ಉಳಿಯಲಿಲ್ಲ. ತೇಜೋಮಯವಾದ ಅಡವಿಯ ಪ್ರದೇಶದಲ್ಲಿ ಅವನು ಹಾಗೂ ಅವನ ಪ್ರಿಯತಮೆಯು ಹೀಗೆ ಇಬ್ಬರೇ ಇದ್ದದರಿಂದ ಅವನಿಗೆ ಒಂದು ತರದ ಅನುತಾಪದ ವೇದನೆಯಾಗಹತ್ತಿತು. ಅದರಿಂದ ಮಾತ್ರ ಅವನಿಗೆ ಚೈತನ್ಯವುಂಟಾಯಿತು. ವ್ಯಥಿತಾಂತಃಕರಣದಿಂದ ಕುಮಾರನು ಶಕ್ತಿಯ ತೀರ ಹತ್ತರಕ್ಕೆ ಬಂದು ಕುಳಿತುಕೊಂಡನು. ಹೃದಯದ ಕರುಣಾಪ್ರೇಮಕಣ್ಣುಗಳನ್ನು ಒಟ್ಟುಗೂಡಿಸಿ ಶಕ್ತಿಯಕಡೆಗೆ ನೋಡಿ, ಆಕೆಯ ಕೈಯನ್ನು ಹಿಡಿದು ಸಾಧಾರಣವಾಗಿ ನಡಗುವದನಿಯಿಂದ ಇನ್ನು ಅವನು ಏನೋ ಮಾತಾಡತಕ್ಕವನು, ಅಷ್ಟರಲ್ಲಿ ಆ ಇಬ್ಬರ ಪ್ರೇಮಪೂರ್ಣಹೃದಯಗಳನ್ನು ನಡುಗಿಸಿಬಿಡುವ ಹಾಗು ಆ ಸ್ತಬ್ಧನದೀತಟಾಕದಲ್ಲಿ ಪ್ರತಿಧ್ವನಿಯನ್ನುಂಟುಮಾಡುವ ''ಕುಲಾಂಗಾರ, ಪರಸ್ತ್ರೀಯ ಸ್ಪರ್ಶಮಾಡುತ್ತೀ!'' ಎಂಬ ಶಬ್ದವು ಒಮ್ಮೆಲೆ ಕೇಳಿಸಿದ್ದರಿಂದ ಅವನ ಬಾಯೊಳಗಿನ ಮಾತು ಬಾಯೊಳಗೇ ಉಳಿಯಿತು. ಮತ್ತೆ ಮಾತೇ ಆಡಲಿಲ್ಲ. ಕುಮಾರನು ಹೊರಳಿನೋಡುತ್ತಾನೆ, ಅವನ ತಾಯಿಯ ಕ್ರುದ್ಧಮೂರ್ತಿಯು ಅವನಿಗೆ ಕಂಡಿತು. ಅದರಿಂದ ಕುಮಾರನು ಬೆದರಿ ಲಜ್ಜಾಯಮಾನನಾದನು. ಆದರೆ ಶಕ್ತಿಯು ಮಾತ್ರ ಸ್ವಲ್ಪವೂ ಹೆದರದೆ, ಎದ್ದುನಿಂತು ಅಚಲದನಿಯಿಂದ— ''ತಾಯಿ, ನಾನು ಪರಸ್ತ್ರೀಯಲ್ಲ; ನಾನು ಯುವರಾಜನ ಧರ್ಮಪತ್ನಿಯು. ದೇವರಸಮಕ್ಷ ನಮ್ಮಿಬ್ಬರ ವಿವಾಹವಾಗಿರುತ್ತದೆ'' ಎಂದು ನುಡಿದಳು. ಆಗ ರಾಜಮಾತೆಯು ಸಿಟ್ಟಿನಿಂದ ತಪ್ತಳಾಗಿ—''ಗಣೇಶ, ಈಕೆಯು ಮನೋಹರಲಾಲನ ಮಗಳಲ್ಲವೆ? ಈಕೆಯು ನಿನಗೆ

ಧರ್ಮಪತ್ನಿಯೆಂದಾಗುವಳೋ,ಆ ದಿನ ಪ್ರತಾಪರಾಯದೇವನಪವಿತ್ರ ವಂಶವು ಚಂಡಾಲವಂಶಕ್ಕಿಂತಲೂಅಧಮವಾಗುವದು. ವನೋಪಹಾರೀ ಲಾಲನ ತಂಗಿಯು ಕುಲಕಲಂಕಿನಿಯು. ಆ ಲಜ್ಜೆಗಾಗಿಯೇ ಅವರೆಲ್ಲರು ದೇಶತ್ಯಾಗವನ್ನು ಮಾಡಿರುವರು. ಅವರ ಕನ್ಯೆಯು ನನ್ನ ಸೊಸೆಯೇ? ದಿನಾಜಪುರದ ಅರಸನ ರಾಣಿಯೇ? ಇದು ನಾನು ಜೀವ ದಿಂದಿರುವವರೆಗೆ ಆಗತಕ್ಕಮಾತಲ್ಲ. ನಿನ್ನ ಇಚ್ಛೆಯಿದ್ದರೆ ನೀನು ಈಕೆಯನ್ನು ಉಪಪತ್ನಿಯೆಂದು ಮಾತ್ರ ಇಟ್ಟುಕೊಳ್ಳಬಹುದು,''

ಶಕ್ತಿಯ ದೇಹವು ಸಿಟ್ಟು, ತಿರಸ್ಕಾರ, ಅಪಮಾನಇವುಗಳಿಂದ ಉರಿಯ ಹತ್ತಿತು. ಆಗ ಅವಳು-''ಮಹಾರಾಣೀ, ತಮ್ಮ ಮಹದ್ವಂಶಕ್ಕೆ ಯೋಗ್ಯವಾದ ಮಾತನ್ನೇ ನೀವಾಡಿದಿರಿ. ಆದರೆ ಪರಮೇಶ್ವರನು ದರಿದ್ರರಿಗೆಂದು ಒಂದು ಸ್ವತಂತ್ರನಿಯಮವನ್ನು ಮಾಡಿಲ್ಲ. ಪರಮೇಶ್ವರನ ಅಸ್ತಿತ್ವವು ನಿಜವಿದ್ದರೆ, ಹಾಗು ನಾನು ನಿಮ್ಮ ಮಗನನ್ನು ಒಮ್ಮನಸಿನಿಂದ ಪ್ರೀತಿಸುತ್ತಿದ್ದರೆ, ಎಂದಾದರೂಒಂದು ದಿನಇದರ ವಿಚಾರವನ್ನು ಆ ಈಶ್ವರನು ಮಾಡೇಮಾಡುವನು. ತಾಯಿ, ಈ ದಿವಸ ತಿರಸ್ಕಾರದಿಂದಯಾರನ್ನು ನೀಚಪದಕ್ಕೆ ಮುಟ್ಟಿಸಿರುವಿಯೋ, ಒಂದಿಲ್ಲೊಂದುದಿನ ನಿಮ್ಮ ಈ ಶ್ರೇಷ್ಠವಂಶದವರು ಆ ಹೀನ ವನೋಹಾರಿ ಲಾಲನ ವಂಶದವರ ಕಾಲಕೆಳಗೆ ಬಿದ್ದುಗೌರವವನ್ನು ಯಾಚಿಸಬೇಕಾದೀತು. ಹೀಗಾಗದಿದ್ದರೆ ಆ ಪರಮೇಶ್ವರನೇ ಇಲ್ಲೆಂದು ನಾನು ಖಂಡಿತವಾಗಿ ತಿಳಿಯುವೆನು.

ಶಕ್ತಿಯು ಹೀಗೆ ಅಭಿಶಾಪವನ್ನು ಕೊಟ್ಟು ದ್ರುತಪದದಿಂದ ಅಲ್ಲಿಂದ ಹೊರಟುಹೋಗಿ ಯಾವದೊಂದು ನೆಳಲಿನಂತೆ ಆಅರಣ್ಯದಲ್ಲಿ ಕಾಣದಾದಳು. ರಾಜಕುಮಾರನ ಹಾಗು ಅವನ ತಾಯಿಯ ಕಿವಿಯಲ್ಲಿ ಅವಳ ಆ ಅಭಿಶಾಪವು ಭಯಂಕರ ಪ್ರತಿಧ್ವನಿಮಾಡಹತ್ತಿತು.

ಐದನೆಯ ಪ್ರಕರಣ.

ನಿರಾಶೆಯಲ್ಲಿ ಆಶೆ.

ನಭೋಮಂಡಲದೊಳಗಿನ ನಕ್ಷತ್ರಗಳು ಕ್ಷಣಮಾತ್ರದಲ್ಲಿ ನಿಸ್ತೇಜವಾಗಿ ಕಾಣದಾಗುವಂತೆ, ರಾಜಮಾತೆಯಿಂದ ತಿರಸ್ಕೃತಳಾದ ಶಕ್ತಿಯು ಉತ್ತೇಜಿತಹೃದಯಗತಿಯಿಂದ ಅಡವಿಯ ಮಾರ್ಗವನ್ನು ಹಿಡಿದು ಹೊರಟವಳು ಕೆಲವು ಮಾರ್ಗವನ್ನು ಕ್ರಮಿಸುವಷ್ಟರಲ್ಲಿ ಆಕೆಯು ಸಂತಾಪದಿಂದ ಹುಚ್ಚಳಾದಳು. ಕೂಡಲೆ ಭೋಳಿಬಂದದ್ದರಿಂದ ಕಣ್ಣು ಎದುರಿಗಿನ ಪದಾರ್ಥಗಳೆಲ್ಲ ಚಕ್ರಾಕಾರವಾಗಿ ತಿರುಗುವಂತೆ ಆಕೆಗೆ ಕಾಣಿಸಿತು. ಆಗ ಅವಳು ಒಳ್ಳೇ ಸಾಹಸದಿಂದ ಒಂದು ಗಿಡವನ್ನು ಆಶ್ರಯಿಸುವಷ್ಟರಲ್ಲಿ ಎಚ್ಚರದಪ್ಪಿ ನೆಲಕ್ಕೆ ಬಿದ್ದುಬಿಟ್ಟಳು. ಜನ್ಮಾರಭ್ಯ ಶಕ್ತಿಗೆ ಈಪ್ರಕಾರ ಮೂರ್ಛೆಯು ಎಂದೂ ಬಂದಿದ್ದಿಲ್ಲ. ಈರಾತ್ರಿ ಜಗತ್ತೇ ಆಕೆಗೆ ಶಕ್ತಿಹೀನವೂ ಅಸಾಹಾಯವೂ ಆದದ್ದರಿಂದ ಅದರ ಕಡೆಗೆ ಆಕೆಯು ವಿಸ್ಮಿತಭಾವದಿಂದ ನೋಡುತ್ತಿರುವಂತೆ ತೋರಿತು. ಕೆಲಹೊತ್ತಿನಲ್ಲಿ ಶಕ್ತಿಯು ದೇಹಭಾನವುಳ್ಳವಳಾಗಲು, ಸುತ್ತಮುತ್ತಲು ಭಯಂಕರವೂ ನಿಬಿಡವೂ ಆದ ಅರಣ್ಯವೂ, ತಲೆಯಮೇಲೆ ಚಂದ್ರಶೂನ್ಯವಾದ ನಭೋಮಂಡಲದಲ್ಲಿ ಹೊಳೆಯುತ್ತಿರುವ ನಕ್ಷತ್ರಗಳೂ ಆಕೆಯ ಕಣ್ಣಿಗೆ ಕಂಡವು. ಭೂಮಿಯಿಂದ ಆಕಾಶದವರೆಗಿನಪ್ರತಿಯೊಂದು ಪದಾರ್ಥವನ್ನು ಆಕೆಯು ನೋಡುತ್ತಿದ್ದಳು. ಎಲ್ಲವೂ ಆಕೆಯ ಕಣ್ಣಗೊಂಬಿಗಳಲ್ಲಿ ಪ್ರತಿಬಿಂಬಿತವಾಗುತ್ತಿತ್ತು. ಆದರೂ ಆಕೆಗೇನೂ ಕಾಣುತ್ತಿದ್ದಿಲ್ಲ,—ತೋರುತ್ತಿದ್ದಿಲ್ಲ. ಯಾಕಂದರೆ ಹೊರಗಿನ ಪ್ರಕಾಶಾಂಧಃಕಾರಗಳೂ, ಸೌಂದರ್ಯಭಯಾನಕಗಳೂ ಆಕೆಯ ಅಂತರಂಗವನ್ನು ದಹಿಸುತ್ತಿರುವ ತಿರಸ್ಕಾರವನ್ನು-ಅತ್ಯಂತ ತಿರಸ್ಕಾರವನ್ನು, ಭೇದಿಸಿ ಆಕೆಗೆ ಇಂದ್ರಿ

ಯ ಬೋಧವನ್ನು ಮಾಡಿಕೊಡಲಿಕ್ಕೆ ಶಕ್ತವಾಗಲಿಲ್ಲ. ಶಕ್ತಿಯು ಕೇವಲ ತನ್ನ ಹೃದಯಗತಿಯಿಂದ ಸಚೇತನಳಾಗಿ ಮೆಲ್ಲಮೆಲ್ಲನೆ ಎದ್ದುಕುಳಿತು, ದೇಹವನ್ನು ಗಿಡದ ಬೊಡ್ಡೆಗೆ ಒರಗಿಸಿ, ಕಣ್ಣೀರುದುರಿಸುತ್ತ, ತನ್ನ ಬಲಗೈಕಡೆಗೆ ನೋಡಿದಳು. ಕುಮಾರನ ಕೊರಳೊಳಗೆ ಹಾಕುವದಕ್ಕಾಗಿ ತನ್ನ ಕೊರಳೊಳಗಿನ ಮಾಲೆಯನ್ನು ತೆಗೆದು ಆಕೆಯು ಆ ಕೈಯಲ್ಲಿ ಹೇಗೆ ಹಿಡದಿದ್ದಳೋ, ಹಾಗೆಯೇ ಅದು ಈಗಲೂ ಆ ಕೈಯಿಂದ ಹಿಡಿಯಲ್ಪಟ್ಟಿತ್ತು. ಮಾಲೆಯನ್ನು ಕಂಡು ಆಕೆಯ ಹೃದಯವು ಈಗ ಪ್ರೇಮಭರಿತವಾಗಲಿಲ್ಲ. ಶಕ್ತಿಯ ವಿಶೇಷ ಪ್ರೀತಿಯ—ಆದರದ ಆ ಅಮೂಲ್ಯ ಹೂಮಾಲೆಯು ಇದಾಗಿದ್ದಿಲ್ಲ. ಯಾವದು ಆಶಾವಿಶ್ವಾಸಗಳ ಸೂತ್ರದಿಂದ ಕಟ್ಟಲ್ಪಟ್ಟದ್ದರಿಂದ ಅದು ಅಮೂಲ್ಯವಾಗಿತ್ತೋ ಆ ಆಶಾವಿಶ್ವಾಸಗಳೇ ಕಡಿದು ಹೋದದ್ದರಿಂದ ಈಗ ಇದರಲ್ಲಿ ಮಹತ್ವವೇನೂ ಇರದೆ, ಸುಮ್ಮನೆ ಒಣ ಹೂಗಳಿಂದ ಪೋಣಿಸಲ್ಪಟ್ಟ ದರಿದ್ರ ಮಾಲೆಯಾಗಿತ್ತು. ಮಾಲೆಯನ್ನು ನೋಡಿ ಶಕ್ತಿಯ ಉರಿಯುವ ಹೃದಯವು ಮತ್ತಿಷ್ಟು ಉರಿಯಹತ್ತಿತು. ಆಕೆಯ ಕಣ್ಣೊಳಗಿನ ನೀರು ಆಟ್ಟಿಸಿಹೋದವು. ಆ ದಿನ ಸಾಯಂಕಾಲದ ಅಪಮಾನದ ನೆನಪಿನಿಂದ ಆಕೆಯ ಶಕ್ತಿಹೀನ ದೇಹವು ಕೂಡಲೆ ಅಸ್ವಾಭಾವಿಕರೀತಿಯಿಂದ ಚೇತನಾಪೂರ್ಣವಾಯಿತು. ಶಕ್ತಿಯು ಹಲ್ಲುಗಳಿಂದ ತುಟಿಯನ್ನು ಕಚ್ಚಿ ಹೂಮಾಲೆಯ ದಾರವನ್ನು ಹರಿದು, ಹೂಗಳನ್ನು ಕೈಯಿಂದ ತಿಕ್ಕಿ ನುಗ್ಗುನುಗ್ಗು ಮಾಡಿ ನೆಲದಮೇಲೆ ಬಸುಟಿಬಿಟ್ಟಳು. ಇದರಿಂದ ಆ ಹೂಗಳು ಕಣಕಣಗಳಾಗಿ ಮಣ್ಣೊಡನೆ ಕೂಡಿಹೋದವು. ಆಗ ಆಕೆಯು ಆ ಹೂಗಳ ಮೇಲೆ ಕಾಲಿಟ್ಟು ಗರ್ವಯುಕ್ತದೃಷ್ಟಿಯಿಂದ ಅವುಗಳನ್ನು ನೋಡತೊಡಗಿದಳು. ನೋಡನೋಡುವಷ್ಟರಲ್ಲಿ ! ಆಕೆಯ ಕ್ರೋಧಪೂರ್ಣ ಕಣ್ಣುಗಳಲ್ಲಿ ಪುನಃ ಅಶ್ರುಗಳುದುರಹತ್ತಿದವು.

ಅಪಮಾನದಿಂದ ಮುಚ್ಚಲ್ಪಟ್ಟ ತುಟಿಗಳು ನಿರಾಶೆಯ ವೇದನೆಯಿಂದ ನಡುಗಹತ್ತಿದವು. ಆಗ ಶಕ್ತಿಯು ಆ ಮಣ್ಣುಪಾಲಾದ ಹೂವಿನ ಕಣಗಳಮೇಲೆ ಬಿದ್ದು ಹೊರಳಾಡಿ ಬಿಕ್ಕಿಬಿಕ್ಕಿ ಅಳುತ್ತ—"ಕುಮಾರ, ಕುಮಾರ ಇದು ನಿನ್ನ ಪ್ರೇಮದ ಸ್ಮೃತಿಯು, ಎಂದು ನುಡಿದಳು. ಅರಕ್ಷಣದಲ್ಲಿ ಸಿಟ್ಟಿನ ಆವೇಶವು ಉಂಟಾಗಲು, ಮತ್ತೆ ಅವಳ ಕರುಣಾದುಃಖಗಳು ಅಡಗತೊಡಗಿದವು. ಆಕೆಯು ಕೈಮುಷ್ಟಿಯಿಂದ ತನ್ನ ಎದೆಗೆ ಗುದ್ದಿಕೊಂಡು ತೀವ್ರಸ್ವರದಿಂದ—"ಎಲ್ಲಿಯ ನೆನವು? ಎಲ್ಲಿಯ ಸ್ಮೃತಿಯು? ಸ್ಮೃತಿಯೇ ಈಗ ಸೇಡಾಗಿ ಪರಿಣಮಿಸುವದು. ಭಗವಾನ್ ಸೇಡು-ಸೇಡು!!" ಎಂದು ಒದರಿದಳು. ತನ್ನ ಶಬ್ದಾಘಾತದಿಂದ ತನಗೇ ಅಂಜಿಕೆ ಬರಲು, ಶಕ್ತಿಯು ನಿರ್ವಾಕ್ ನಿರ್ಜೀವ, ನಿತ್ರಾಣಳಾಗಿಬಿಟ್ಟಳು. ನಿಸ್ತಬ್ಧವಾದ ರಾತ್ರಿಯಲ್ಲಿ ಆ ಕ್ರುದ್ಧಸ್ವರವು "ಸೇಡು! ಸೇಡು!! ಸೇಡು!!!" ಎಂದು ಅರಣ್ಯದಲ್ಲಿ ಪ್ರತಿಧ್ವನಿಗೊಡಹತ್ತಿತು.

ಹೀಗೆ ಕಂಪಿತಹೃದಯದ ಶಕ್ತಿಯು ಆ ಅರಣ್ಯದಲ್ಲಿ ಒಂದು ಗಿಡದ ಕೆಳಗೆ ನೆಲದಮೇಲೆ ಬಿದ್ದುಕೊಂಡಿರಲು, ಯಾವನೋ ಒಬ್ಬನು ಒಂದು ಆಕೆಯ ಹಸ್ತಸ್ಪರ್ಶ ಮಾಡಿದ ಹಾಗಾಯಿತು. ಆಗ ಅವಳು ಆಶ್ಚರ್ಯಗೊಂಡು, ಮೋರೆಯನ್ನೆತ್ತಿ ಕ್ರುದ್ಧಸ್ವರದಿಂದ—"ನೀನು ಯಾರು?" ಎಂದು ಪ್ರಶ್ನೆಮಾಡಿದಳು.

ಕೂಡಲೆ "ನಾನು ಮುಸಲ್ಮಾನನು" ಎಂಬ ಉತ್ತರವು ಪ್ರಾಪ್ತವಾಯಿತು.

ಮತ್ತೊಬ್ಬ ಸ್ತ್ರೀಯಾಗಿದ್ದರೆ ಈ ಸ್ಥಿತಿಯಲ್ಲಿ ಅಂಜಿಕೊಂಡು ನೆತ್ತಿಯಿಂದಲೇ ಪ್ರಾಣಬಿಡುತ್ತಿದ್ದಳು. ಆದರೆ ಶಕ್ತಿಯು ಸ್ವಾಭಾವಿಕವಾಗಿ ಸಾಹಸಿಯಾಗಿದ್ದಳಲ್ಲದೆ, ಸಂಕಟಪರಂಪರೆಗಳೊಳಗೆ ಬಿದ್ದಾಗಿನಿಂದ ಆಕೆಯ ಅಂಜಿಕೆಯೆಲ್ಲ ನಷ್ಟವಾಗಿ ಹೋಗಿತ್ತು. ಆದ್ದರಿಂದ

ಈ ಅಪರಿಚಿತ ವ್ಯಕ್ತಿಯನ್ನು ಕಂಡು ಆಕೆಯು ಕೊಂಚವೂ ಅಂಜಲಿಲ್ಲ. ಆಕೆಯು ಯವನನ ಸ್ಪರ್ಶದಿಂದ ಕ್ರುದ್ಧಳೂ, ತಿರಸ್ಕಾರ ಯುಕ್ತಳೂ ಮಾತ್ರ ಆಗಿ, ಸಿಟ್ಟಿನಿಂದ—"ಎಲ್ಲಿಯ ಹತಭಾಗ್ಯನು ನೀನು? ಯಾಕೆ ನನ್ನನ್ನು ಮುಟ್ಟಿದೆ?"

ಯವನನು ಮೆಲ್ಲ ಮೆಲ್ಲಗೆ ಮಾತಾಡತೊಡಗಿದನು:—"ನೀನು ಮೂರ್ಛಾಗತಳಾಗಿ ಬಿದ್ದಿರುವೆಯೆಂದು ನಾನು ತಿಳಕೊಂಡಿದ್ದೆನು."

ಅವನ ಮಾತು ಮುಗಿಯುವಷ್ಟರಲ್ಲಿ ಶಕ್ತಿಯು- "ನನ್ನ ಮೂರ್ಛೆಯು ತಿಳಿದಿರಲಿ ಅಥವಾ ಹಾಗೇ ಇರಲಿ, ನಿನಗೇತಕ್ಕೆ ಆ ಗೊಡವೆಯು? ನೀನು ಯವನನಾಗಿದ್ದು ನನ್ನನ್ನೇಕೆ ಮುಟ್ಟಿದೆ?"

ಆಗ ಆ ಯವನನು ಆ ಗಿಡದಕೆಳಗೆ ಕುಳಿತು ತನ್ನ ತಲೆಯಮೇಲಿನ ಮುಂಡಾಸವನ್ನು ತೆಗೆದುನೆಲದಮೇಲೆ ಅಂಗಾತವಾಗಿಟ್ಟು ಕೆಲ ಹೊತ್ತಿನಮೇಲೆ ಮತ್ತೆ ಅದನ್ನು ಚೆನ್ನಾಗಿ ತಲೆಗೆ ಸುತ್ತಿದನು. ಬಳಿಕ ಅವನು—ಮುಟ್ಟಿದ್ದರಲ್ಲಿ ದ್ರೋಹವೇನು? ನಿನ್ನನ್ನು ಯಾವ ದೇವರು ಯಾವ ಘಟಕಗಳಿಂದ ನಿರ್ಮಿಸಿರುವನೋ ನನ್ನನ್ನೂ ಅದೇ ದೇವರು ಅವೇ ಘಟಕಗಳಿಂದ ನಿರ್ಮಿಸಿರುವನು. ನೀನು ಹ್ಯಾಗೆ ಮನುಷ್ಯಳೋ ಹಾಗೆಯೇನಾನೂ ಮನುಷ್ಯನು. ನಿನ್ನ ನನ್ನಸ್ಪರ್ಶಗಳಲ್ಲಿದೋಷವೇನು?

ಶಕ್ತಿ—ಮೂರ್ಖಾ, ನೀನು ಗಂಡಸು, ನಾನು ಹೆಂಗಸು; ನೀನು ಮುಸಲ್ಮಾನ, ನಾನು ಹಿಂದೂ; ನೀನು ನೀಚವಂಶದವನೂ ನೀಚಧರ್ಮದವನೂ ಇರುವೆ; ನನ್ನ ವಂಶವೂ ಧರ್ಮಗಳೂ ಪರಮ ಶ್ರೇಷ್ಠವಾದವುಗಳು. ಭಗವಂತನೇ ನಮ್ಮಿಬ್ಬರನ್ನೂ ಸೃಷ್ಟಿಸಿರುವದು ನಿಜವು. ಆದರೆ ಒಬ್ಬರಂತೆ ಮತ್ತೊಬ್ಬರನ್ನು ಮಾಡಿಲ್ಲ. ನೀನೂ ಸ್ವತಂತ್ರ ಮನುಷ್ಯನು; ನಾನೂ ಸ್ವತಂತ್ರ ಮನುಷ್ಯಳು.

ಕತ್ತಲೆಯೊಳಗೆ ಶಕ್ತಿಯು ಕೆಂಪಡರಿದ ಕಣ್ಣುಗಳು ಯವನನಿಗೆ ಕಾಣಲಿಲ್ಲ. ಆದರೆ ಆಕೆಯ ಕಠೋರಧ್ವನಿಯು ಮಾತ್ರ ಸ್ಪಷ್ಟವಾಗಿ

ಕೇಳಿಸಿತು. ಆಗ ಆವನು—ಹೌದು, ಈಶ್ವರನು ಎಲ್ಲರನ್ನೂ ಸ್ವತಂತ್ರರನ್ನಾಗಿ ನಿರ್ಮಿಸಿರುವದೇನೋ ಸತ್ಯವು; ಆದರೆ ಸ್ವತಂತ್ರ ನಿಯಮದಿಂದ ಮಾತ್ರ ಯಾರನ್ನೂ ನಿರ್ಮಿಸಿರುವದಿಲ್ಲ. ಹಿಂದೂ- ಮುಸಲ್ಮಾನ, ಶ್ರೀಮಂತ-ದರಿದ್ರ ಇವರಲ್ಲೆಲ್ಲ ಒಂದೇ ಚೈತನ್ಯವು ಸಂಚರಿಸುತ್ತದೆ. ಒಂದೇ ಪ್ರಕಾರದ ನ್ಯಾಯಧರ್ಮಗಳು ಅವರನ್ನು ಪರಿಪಾಲಿಸುತ್ತವೆ. ದೇವರಿಗೆ ಎಲ್ಲರೂ ಸಮಾನರೇ.

ಗಣೇಶದೇವನ ತಾಯಿಯಿಂದ ಅಪಮಾನಹೊಂದಿದ ಶಕ್ತಿಯು ಕೆಲಹೊತ್ತಿನ ಪೂರ್ವದಲ್ಲಿ ಅಂತರಂಗದಲ್ಲಿ ಇದೇ ತತ್ವವನ್ನು ವಿಚಾರಿಸುತ್ತಿದ್ದಳು. ಈಗ ಯುವನನ ಬಾಯಿಂದಾದರೂ ತನ್ನ ಅಭಿಪ್ರಾಯದ ಪುನರಾವೃತ್ತಿಯಾದಂತೆ ಆಕೆಗೆ ಕೇಳಿಸಿತು. ಆಗ ಆವಳು ತುಸು ಬೆಟ್ಟಿಬಿದ್ದಳು; ಮತ್ತು ಈ ಮುಸಲ್ಮಾನನು ಸಾಮಾನ್ಯ ಮನುಷ್ಯನಲ್ಲೆಂದು ಆಕೆಯು ಕಂಡು ಹಿಡಿದಳು. ತನ್ನ ಮನೋಗತವು ಇವನಿಗೆ ಗೊತ್ತಿರುವದೆಂದು ಆಕೆಯ ನಿದರ್ಶನಕ್ಕೆ ಬಂತು.

ಆ ಕೂಡಲೆ ಆವಳು—ಹಾಗಾದರೆ ಪ್ರಪಂಚದಲ್ಲಿ ನಾವೆಲ್ಲರೂ ಸಮಾನರಾಗಿದ್ದರೆ ಈ ಭೇದಭಾವವೇಕೆ ಇರುತ್ತಿತ್ತು?

“ಅಜ್ಞಾನ-ಮಾಯಾ ಇದೇ ಇದಕ್ಕೆ ಕಾರಣವು” ಎಂದು ಪ್ರತ್ಯುತ್ತರವು ಪ್ರಾಪ್ತವಾಯಿತು.

ಶಕ್ತಿ—ಈ ಮಾಯೆಯ ಅವಶ್ಯಕತೆಯೇನು? ಈ ಮಾಯೆಯೇ ಇಲ್ಲಿಯ ಎಲ್ಲ ದುಃಖಗಳಿಗೆ ಕಾರಣವಾಗಿರಲು, ಭಗವಂತನು ಈ ಮಾಯೆಯ-ಅಜ್ಞಾನವ-ನ್ನು ಸಂಸಾರದಿಂದ ಯಾಕೆ ತೆಗೆದು ಹಾಕಿರುವದಿಲ್ಲ?

ಮುಸಲ್ಮಾನ—ಮಾಯೆಯನ್ನು ಕಿತ್ತೊಗೆದರೆ ಸೃಷ್ಟಿಯಲ್ಲಿ ಉಳಿಯುವದೇನು? ತನ್ನ ಸೃಷ್ಟಿಯ ರಕ್ಷಣಕ್ಕಾಗಿಯೂ, ತನ್ನ ಉದ್ದೇಶ ಸಾಧಿಸುವದಕ್ಕಾಗಿಯೂ ಭಗವಂತನಿಗೆ ಈ ಮಾಯೆಯು

ಅವಶ್ಯಕವಾಗಿದೆ.

ಶಕ್ತಿ—ನಮಗೆ ಯಾವದರಿಂದ ಅನಂತ ಕಷ್ಟಗಳಾಗುವವೋ ಆ ಮಾಯೆಯೇ ಭಗವಂತನ ಉದ್ದೇಶಸಿದ್ಧಿಗೆ ಕಾರಣವೋ? ಹಾಗಾದರೆ ಈಶ್ವರನು ದಯಾಮಯನಲ್ಲ; ಅವನು ನಿಷ್ಠುರನೂ ಅಂತಃಕರಣಹೀನನೂ ಆಗಿರುತ್ತಾನೆ.

ಮುಸಲ್ಮಾನ—ಅವನು ನಿಷ್ಠುರನೂ ಅಲ್ಲ; ದಯಾಮಯನೂ ಅಲ್ಲ. ಅವನ ಉದ್ದೇಶದಂತೆ ಯಾರು ನಡೆಯುವರೋ ಅವರಿಗೆ ಸುಖವಾಗುವದು; ಹಾಗೂ ಯಾರು ಅದಕ್ಕೆ ವಿರುದ್ಧವಾಗುವರೋ ಅವರಿಗೆ ದುಃಖವಾಗುವದು.

ಮುಸಲ್ಮಾನನ ಈ ಭಾಷಣದ ಭಾವವು ಶಕ್ತಿಯ ತಲೆಯಲ್ಲಿ ಚೆನ್ನಾಗಿ ಬಿಂಬಿಸಲಿಲ್ಲ. ಯಾಕಂದರೆ ಅವಳ ಲಕ್ಷ್ಯವು ಬೇರೆಕಡೆಗೆ ಹರಿಯುತ್ತಿತ್ತು. ಆದ್ದರಿಂದ ಅವಳು ತಿರಸ್ಕಾರಯುಕ್ತವಾಗಿ—ಭಗವಂತನಾದರೂ ಸೇಡನ್ನು ಬಯಸುವನೋ? ಅದು ಎಲ್ಲಿಯೂ ಬಿಟ್ಟಿಲ್ಲವಷ್ಟೇ? ಹಾಗಾದರೆ ಈ ಕ್ಷುದ್ರಬಾಲೆಯ ಸೇಡಿನ ಇಚ್ಛೆಯಾದರೂ ದೋಷಯುಕ್ತವಾಗಲಾರದು.

ಮುಸಲ್ಮಾನ—ಅದು ದೋಷವೇ ಆಗಿದ್ದರೆ ಭಗವಂತನು ಅಂಥ ಪ್ರವೃತ್ತಿಯನ್ನಾದರೂ ಏಕೆ ಕೊಡುತ್ತಿದ್ದನು? ಅನ್ಯಾಯಕ್ಕೆ ಯೋಗ್ಯ ಪ್ರತಿಫಲ ಕೊಡದಿದ್ದರೆ ಆ ಭಗವಂತನಾದರೂ ನ್ಯಾಯಿಯೆಂದು ಹ್ಯಾಗೆ ಅನ್ನಿಸಿಕೊಳ್ಳುತ್ತಿದ್ದನು! ನ್ಯಾಯವೇ ಅನ್ಯಾಯದಸೇಡು.

ಶಕ್ತಿ—ನಾನು ಅದನ್ನೇ ಬಯಸುವೆನು. ಸೇಡು, ದೇವರೇ ನಾನು ಸೇಡನ್ನು ಬಯಸುತ್ತೇನೆ; ಆದರೆ ಆ ವಿಶ್ವಾಸಘಾತಕನ-ಆ ಹೃದಯಭೇದಕನ ಸೇಡು ತೀರುವ ಬಗೆಯು ಈ ಸಂಸಾರದಲ್ಲಿ ಯಾವ ಪ್ರಕಾರದಿಂದಾದರೂ ಸಾಧಿಸಬಹುದೋ?

ಮುಸಲ್ಮಾನನುಗಂಭೀರಸ್ವರದಿಂದ(ದೈವವಾಣಿಯಂತೆ)—ಶಕ್ತಿ

ಪಾತ-ರಕ್ತಪಾತವನ್ನು ಮಾಡಿದರೂ ಭಗವಾನನು ನಿನ್ನನ್ನು ಕ್ಷಮಿ...

ಶಕ್ತಿಯಿಂದ ಮುಂದಿನ ವಚನಗಳನ್ನು ಕೇಳುವದಾಗಲಿಲ್ಲ. ಫಕೀರವೇಷಧಾರಿಯಾದ ಮುಸಲ್ಮಾನನ ಅಂತರಂಗದ ಸೇಡಿನ ಸ್ವರೂಪವನ್ನು ತಿಳಿದ ಶಕ್ತಿಯ ಹೃದಯವು ಸಿಟ್ಟಿನಿಂದಲೂ ಅಪಮಾನದಿಂದಲೂ ಕಂಪಿಸತೊಡಗಿತು. ಆಗ ಅವಳು—ಇಲ್ಲ; ನಾನು ಅವನ ಮರಣವನ್ನು ಬಯಸುವದಿಲ್ಲ. ಅವನ ವಿಷಯದ ನನ್ನ ಸೇಡು ಅವನ ಮರಣವನ್ನು ಕುರಿತು ಇರುವದಿಲ್ಲ. ನಾನು ಅವನನ್ನು ಪ್ರೀತಿಸುತ್ತೇನೆ. ಗಣೇಶದೇವನು ನನ್ನಲ್ಲಿಯ ಪ್ರೇಮದಿಂದ ಉನ್ಮತ್ತನಾಗಿ ಎಂದಿಗೆ ತಾಯಿ, ಬಂಧುಬಳಗ, ಮುಂತಾದವರನ್ನು ಕೂಡ ಬಿಡಲಿಕ್ಕೆ ಸಿದ್ಧನಾಗುವನೋ ಮತ್ತು ಅವನು ನನ್ನ ವಾಕ್ಯವೇ ಅನುಗ್ರಹವಾಕ್ಯವೆಂದು ಭಾವಿಸಿ ಪ್ರತ್ಯಕ್ಷ ನರಕದಲ್ಲಿ ಬೀಳಲಿಕ್ಕೆ ಕೂಡ ಹಿಂದೆಮುಂದೆ ನೋಡಲಿಕ್ಕಿಲ್ಲವೋ ಅದೇ ದಿವಸ ನನ್ನ ಹೃದಯದ ಆಶೆಯು ತೀರಿದಂತಾಗುವದು. ಇದೇ ನನ್ನ ಸೇಡು. ಇದರ ವಿನಃ ಮತ್ತೇನನ್ನೂ ನಾನು ಬಯಸುವದಿಲ್ಲ.

ಮುಸಲ್ಮಾನನು ವ್ಯಂಗ್ಯವಾಗಿ ನಕ್ಕು—ಇಚ್ಛಿಸಿದರೆ ನೀನು ಇಂಥನೂರಾರು ರಾಜಮಹಾರಾಜರ ಹೃದಯಗಳನ್ನು ಕಾಲಿನಿಂದ ತುಳಿಯಬಲ್ಲೆ. ಈ ಸಾಮಾನ್ಯನ ಅನುಗ್ರಹವನ್ನು ಬಯಸುವ ಭಿಕ್ಷುಕಿಯೇ, ಇದೇ ಏನು ನಿನ್ನ ಸೇಡಿನ ಗುಟ್ಟು?

ಮುಸಲ್ಮಾನನ ಮಾತನ್ನು ಕೇಳಿ ಶಕ್ತಿಗೆ ಪುರಾತನ ಸಂಗತಿಯು ನೆನಪಿಗೆ ಬಂತು. ಹುಟ್ಟಿದಾಗಿನಿಂದ ಆಕೆಯನ್ನು ನೋಡಿದ ಎಲ್ಲ ಜ್ಯೋತಿರ್ವಿದರು ಆಕೆಗೆ "ನೀನು ರಾಜರಾಜೇಶ್ವರಿಯಾಗುವೆ" ಎಂಬದೊಂದೇ ಮಾತನ್ನು ಹೇಳುತ್ತಬಂದಿದ್ದರು. ಜೋಯಿಸರು "ಈಕೆಯ ಹದಿನೈದನೆಯ ವರ್ಷ ಈಕೆಯ ಸ್ವಯಂವರವಾಗುವದೆಂದು" ಈಕೆಯ ಜನ್ಮಕುಂಡಲಿಯಲ್ಲಿ ಬರೆದಿಟ್ಟ ಮಾತಿನಲ್ಲಿ ವಿಶ್ವಾಸ

ವನ್ನಿಟ್ಟು ಶಕ್ತಿಯ ತಂದೆಯು ಈವರೆಗೆ ಈಕೆಯ ವಿವಾಹವನ್ನು ಮಾಡಿದ್ದಿಲ್ಲ. ಶಕ್ತಿಗಾದರೂ ಈಹೊತ್ತಿನವರೆಗೆ ಆ ಮಾತಿನಲ್ಲಿ ಸಂಪೂರ್ಣವಿಶ್ವಾಸವಿತ್ತು. ಆದರೆತನ್ನ ಪ್ರಿಯನು—ಗಣೇಶದೇವನು, ತನ್ನನ್ನು ಧಿಃಕರಿಸಿದ್ದರಿಂದ ಆಕೆಗೆ ಅದೆಲ್ಲ ಈ ದಿವಸ ಸುಳ್ಳೆಂದು ಮನವರಿಕೆಯಾಯಿತು. ಆಕೆಯ ಎಲ್ಲ ಆಶಾಕಲ್ಪನೆಗಳೂ ಈ ದಿನ ಸುಳ್ಳಾದವು. ಆದ್ದರಿಂದ ಮುಸಲ್ಮಾನನ ಮಾತಿನಿಂದ ಆಕೆಯಲ್ಲಿ ಆಹ್ಲಾದವುಂಟಾಗುವದರ ಬದಲು ಕಡುಕೋಪವುಂಟಾಗಲು, ಅವಳು— ಈ ಸಂಗತಿಯನ್ನು ಈ ವೊದಲೇ ನಾನು ಅನೇಕರ ಬಾಯಿಂದ ಕೇಳಿರುವದರಿಂದ ಈಗ ಪುನಃ ಇದನ್ನು ಕೇಳಲು ಇಚ್ಛಿಸುವದಿಲ್ಲ. ಸಾಧುಸಂತರ ಬಾಯಿಂದ ಈ ತರದ ಉಪಹಾಸೋಕ್ತಿಗಳು ಹೊರಡಬಹುದೇ? ಒಬ್ಬನ ಹೃದಯವನ್ನು ಕೂಡ ವಶೀಕರಣಮಾಡಿಕೊಳ್ಳಲಿಕ್ಕೆ ಯಾವಳು ಅಶಕ್ತಳೂ, ಅಸಮರ್ಥಳೂ ಆಗಿರುವಳೋ, ಅವಳು ನೂರಾರು ಜನ ರಾಜಮಹಾರಾಜರುಗಳ ಹೃದಯಗಳನ್ನು ಹ್ಯಾಗೆ ತುಳಿದಾಳು?

ಮುಸಲ—ಇದು ಉಪಹಾಸವಲ್ಲ, ಅನೇಕ ಜನರ ಸುಖದುಃಖಗಳನ್ನು ಒರೆಹಚ್ಚಿನೋಡುವದಕ್ಕಾಗಿಯೇ ದೇವರು ನಿನ್ನನ್ನು ಸೃಷ್ಟಿಸಿರುವನು. ಕ್ಷಮೆಯೇ ನಿನ್ನ ಏಕನಿಷ್ಠ ಆಳು. ನೀನು ರಾಜರಾಜೇಶ್ವರಿಯು........

ಶಕ್ತಿಯು ತುಸು ಅವಿಶ್ವಾಸತಾಳಿ ನಕ್ಕಳು. ಆ ನಗೆಯಲ್ಲಿ ನಿರಾಶೆಯ ಹೊಳಪು ಸ್ಪಷ್ಟವಾಗಿ ತೋರುತ್ತಿತ್ತು. ಆಗ ಅವಳು— ದೇವರು ನನ್ನನ್ನು ಕ್ಷಮಾಶೀಲಳನ್ನಾಗ ಮಾಡುವನೇ? ಹೀಗಾದೀತೆಂದು ನಾನೂ ಒಮ್ಮೆ ಮನಸ್ಸಿನಲ್ಲಿ ಭಾವಿಸಿದ್ದೆನು. ಆದನೆ ಈಗ ನೋಡಿದರೆ ನನ್ನ ಆ ಭಾವನೆಯು ಕೇವಲ ಅಸಂಭವವೆಂದು ಮಾತ್ರ ತೋರುತ್ತದೆ. ದರಿದ್ರಕನ್ಯೆಯಾದ ಈ ಶಕ್ತಿಮಯಿಯು ರಾಜರಾಜೇ

ಶ್ವರಿಯಾಗುವ ಬಗೆಯಾದರೂ ಹ್ಯಾಗೆ?

ಮುಸ—ಮತ್ಸ್ಯಗಂಧೆಯು ರಾಜರಾಣಿಯೂ, ರಾಜಮಾತೆಯೂ ಆಗಲಿಕ್ಕೆಯಾವಪ್ರಯತ್ನವನ್ನು ಮಾಡಿದಳೆಂಬದನ್ನು ಬಲ್ಲೆಯಾ? ನನ್ನ ದಿವ್ಯ ದೃಷ್ಟಿಗೆ ಈ ವಿಸ್ತೀರ್ಣ ಬಂಗಾಲ ಪ್ರಾಂತದ ಪ್ರತಿಯೊಂದು ಕಡೆಯಲ್ಲಿ ನಿನ್ನ ಕ್ಷಮಾಗುಣವು ತೇಜೋಮಯವಾಗಿ ಪಬ್ಬಿದಂತೆ ಕಾಣುತ್ತದೆ. ಎಲೈ ಶಕ್ತಿಮಯೀ, ರಾಜರಾಜೇಶ್ವರಿಯಾದ ವಂಗೇಶ್ವರೀ.

ಶಕ್ತಿಯು ಸುಮ್ಮನಾದಳು. ಆಕೆಗೆ ಮುಸಲ್ಮಾನನ ಮಾತು ಸತ್ಯವಾಗಿ ತೋರಿತು. ಆದರಿಂದ ಆವಳು ಈವರೆಗಾದ ಅಪಮಾನದ ವೇದನೆಯನ್ನೂ ನಿರಾಶೆಯ ದುಃಖವನ್ನೂ ಮರೆತು ಕುತೂಹಲದಿಂದ ಯುಕ್ತವಾದ ಆಹ್ಲಾದವನ್ನು ತೋರ್ಪಡಿಸುತ್ತ—“ನಾನು ಬಂಗಾಲದ ಭಾಗ್ಯವನ್ನು ಹೆಚ್ಚಿಸುವೆನೆ? ನಾನು ವಂಗೇಶ್ವರಿಯೇ? ಫಕೀರಜೀ, ಇಷ್ಟು ದೊಡ್ಡ ಆಶೆಯು ನನ್ನದಿಲ್ಲ. ಎಷ್ಟು ಭಾಗ್ಯವು ನನ್ನದದೆಯೋ ಅಷ್ಟೇ ಇರಲಿ. ನಾನು ಹೆಚ್ಚು ಇಚ್ಛಿಸುವದಿಲ್ಲ. ಆದರೆ ಇದ್ದದ್ದು ಕೂಡ ಈ ದಿವಸ ನಷ್ಟವಾಯಿತಲ್ಲ? ಇನ್ನೇನು ಗತಿ?

ಮುಸಲ್ಮಾನ—ನನ್ನ ಸುದೈವದಿಂದಲೇ ಅದು ನಷ್ಟವಾಗಿದೆ. ಸಾಮಾನ್ಯನ ಪ್ರೇಮಕ್ಕೊಳಗಾಗುವದು ನಿನ್ನ ಜೀವಿತದ ಉದ್ದೇಶವಾಗಿಲ್ಲ. ಸುಲ್ತಾನ ಪುತ್ರನು ನಿನ್ನ ವಿಷಯದ ಪ್ರೇಮದಿಂದ ಮತ್ತನಾಗಿದ್ದಾನೆ. ಅವನು ನಿನ್ನನ್ನು ವರಿಸಬೇಕೆಂದಿದ್ದಾನೆ. ನಾನು ಅವನ ಸೇವಕನು. ಆ ಕೆಲಸಕ್ಕಾಗಿಯೇ ನಿನ್ನ ಬಳಿಗೆ ಬಂದಿದ್ದೇನೆ.

ಮುಸಲ್ಮಾನನ ಈ ವರೆಗಿನ ಸಂಭಾಷಣೆಯನ್ನು ಶಕ್ತಿಯು ಲಕ್ಷ್ಯಗೊಟ್ಟು ಕೇಳುತ್ತಿದ್ದಿಲ್ಲ. ಯಾಕಂದರೆ ಈ ಫಕೀರನು ತನ್ನ ಸಾಧುಸ್ವಭಾವಕ್ಕನುಸರಿಸಿ ಗತಜೀವಿತದೇವನನ್ನೇ—ಮನಸ್ಸಿನಿಂದ ಭಾವಿಸಿದ ಪತಿಯನ್ನೇ—ನಿಷ್ಕಪಟವರ್ತನನಾಗಿ ಹೊಂಗು, ಇತ್ಯಾದಿ ನಾನಾ

ಗಳನ್ನು ಹೇಳಿ ತನ್ನ ಮನಸ್ಸನ್ನು ಸಮಾಧಾನಪಡಿಸುತ್ತಿರಬಹುದೆಂದು ತಿಳಿದೇ ಆಕೆಯು ಅವನ ಭಾಷಣದಲ್ಲಿ ಅಷ್ಟು ದುರ್ಲಕ್ಷಮಾಡಿದ್ದಳು. ಆದರೆ ಯವನನ ಈ ಕಪಟಯವಾಕ್ಯದಿಂದ ಅವಳಲ್ಲಿ ವಿಸ್ಮಯವುಂಟಾಗಲಿಲ್ಲ. ತಾನು ವಿಪುಲಸಂಪತ್ತಿನ ಮಾಲಿಕಳೂ, ವಂಗದೇಶದ ಸಾರ್ವಭೌಮ ಪತ್ನಿಯೂ ಆಗುವದರಿಂದ, ಹೀನದೀನನಾದ ರಾಜಕುಮಾರ ಗಣೇಶದೇವನ ಹಾಗೂ ಅವನ ತಾಯಿಯ ಗರ್ವವನ್ನು ಕ್ಷಣದಲ್ಲಿ ತೊಲಗಿಸಿಬಿಡಬಹುದೆಂದು ಅವಳು ಮನಸ್ಸಿನಲ್ಲಿ ಭಾವಿಸಿದಳು. ಹೀಗೆ ಮನೋಗತವಾದ ಭಾವನೆಯಸ್ಫೂರ್ತಿಯಿಂದ ಅವಳ ಮುಖದಲ್ಲಿತೋರಿದ ಅತ್ಯಂತ ಗರ್ವಯುಕ್ತ ಹಾಗು ಆಹ್ಲಾದದ ಕಳೆಯು ಆಕೆಯು ಪ್ರತ್ಯಕ್ಷ ವಂಗೇಶ್ವರಿಯೊಡಾಗಾದರೂ ತೋರುವುದೋ-ಇಲ್ಲೋ ಎಂಬದು ತಿಳಿಯದಾಯಿತು.

ಶಕ್ತಿಯು ಬಾಲ್ಯದಿಂದಲೂ ಎರಡು ಸಂಗತಿಗಳ ಬಗ್ಗೆ ಬಹಳ ದೃಢವಾಗಿ ಪ್ರಯತ್ನಿಸುತ್ತಿದ್ದಳು. ರಾಜಕುಮಾರನಲ್ಲಿ ಅಚಲವಾದ ಪ್ರೇಮದಿಂದ ನಡೆಯುವದು ಮೊದಲನೇದು, ತಾನು ಸರ್ವಶ್ರೇಷ್ಠಳಾಗಬೇಕೆಂಬ ವಾಸನೆಯು ಎರಡನೇದು. ಶಕ್ತಿಯು ಈ ಎರಡೂ ತನ್ನ ಬಯಕೆಗಳನ್ನು ಈ ವರೆಗೆ ತನ್ನ ಹೃದಯದಲ್ಲಿರಿಸಿಕೊಂಡು ಬಹಳ ಆಸ್ಥೆಯಿಂದ ಅವನ್ನು ಪೋಷಿಸುತ್ತ ಬಂದಿದ್ದಳು. ಒಂದು ಕ್ಷಣದ ಹಿಂದೆ ಆಕೆಯ ಆಶೆಯು ಅಂದರೆ ರಾಜಕುಮಾರನಲ್ಲಿಯ ಆಕೆಯ ಅಸ್ಖಲಿತ ಪ್ರೇಮವು ಭಂಗವಾಯಿತು. ಆದರೆ ಉತ್ತರ ಕ್ಷಣದಲ್ಲಿ ವಿಪುಲವಾದ ಐಶ್ವರ್ಯವು ಆಕೆಗೆ ಕೈಗೊಡಲು, ಆಕೆಯಿಂದ ಆ ಸಂಪತ್ತಿನ ಕೈ ಬಿಡುವದಾದೀತೇ? ಶಕ್ತಿಯು ಕೆಲವು ನಿಮಿಷಗಳನ್ನು ಏನೂ ಮಾತಾಡದೆ ಕಳೆದಳು. ಆ ಮೇಲೆ ಅವಳು—

ಆದರೆ ಸುಲ್ತಾನಪುತ್ರನು ಮುಸಲ್ಮಾನನು; ನಾನು ಹಿಂದುವು.

ಮುಸ—ಅದು ಮನಸ್ಸಿನ ಭ್ರಾಂತಿಮಾತ್ರ, ಭಗವಂತನು ಒಬ್ಬನೇ, ಎಲ್ಲರೂ ಅವನನ್ನೇ ಭಜಿಸತಕ್ಕವರು; ಕೇವಲ ನಾಮಭೇದವು.

ಶಕ್ತಿಯು ಯುವನನ ಭಾಷಣವನ್ನು ಮನಸ್ಸು ಗೊಟ್ಟು ಕೇಳುತ್ತಿರಲಿಲ್ಲ. ಆಕೆಯು ಮನಸ್ಸಿನ ಅಂತರಂಗದಲ್ಲಿ ಪ್ರವೇಶಿಸಿ ಯೋಚಿಸುತ್ತಿದ್ದಳು. ಐಶ್ವರ್ಯದ ಆಲಿಂಗನದಿಂದ ಆಕೆಗೆ ಸಮಾಧಾನವಾಗಲೊಲ್ಲದು, ಕುಮಾರಗಣೇಶದೇವನಿಲ್ಲದೆ ಆಕೆಗೆ ಎಲ್ಲವೂ ವ್ಯರ್ಥವಾಗಿ ತೋರಿತು. ಆಗಅವಳು—"ನಾನು ಗಣೇಶದೇವನನ್ನೇ ಒಯಸುತ್ತೇನೆ" ಎಂದು ನುಡಿದಳು.

ಮುಸ—ನೀನು ಅವನನ್ನು ಹೊಂದಲಾರೆ.

ಶಕ್ತಿ—ಎಂದೂ ಹೊಂದಲಾರೆನೇ?

ಮುಸ—ಎಂದೂ ಹೊಂದಲಾರೆ.

ಶಕ್ತಿ—ಸುಳ್ಳು ಹೇಳುತ್ತೀ.

ಮುಸ—ನಾನು ಸುಳ್ಳಾಡುವೆನೇ? ಅವನು ನಿನ್ನನ್ನು ಪತ್ನಿಯೆಂದು ಎಂದೂ ವರಿಸಲಾರನು. ಅದಿರಲಿ, ನೀನು ಸುಲ್ತಾನಿಯಾಗುವೆಯೋ ಇಲ್ಲವೋ? ಹೇಳು.

ಅವನ ಮಾತು ಮುಗಿಯುವಷ್ಟರಲ್ಲಿ ಸಿರಾಜಿಯಲ್ಲಿ ಆಶೆಯನ್ನು ತಾಳಿದ ಶಕ್ತಿಯು ಕುಳಿತಸ್ಥಳದಿಂದ ಎದ್ದುನಿಂತು—ಈಗ ನಾನು ಹೊರಟುಹೋಗುತ್ತೇನೆ. ನಿನ್ನ ಈ ಪ್ರಶ್ನೆಯ ಉತ್ತರವನ್ನು ನಾನು ನಾಳೆ ಕೊಡುವೆನು.

ಆರನೆಯ ಪ್ರಕರಣ.

ಯೋಗಿನಿಯೊ, ಕಲಂಕಿನಿಯೋ?

ಬಾಲಿಕೆಯು ಆ ಭೀಷಣವಾದ ಕತ್ತಲೆಯಲ್ಲಿ ಒಬ್ಬಳೇ ನಡೆದಳು. ಯಾವದೋ ಒಂದು ಅದೃಶ್ಯವಾದ ಪ್ರತಿಛಾಯೆಯು ಆ ಭಯಂಕರವಾದ ಕಗ್ಗತ್ತಲಲ್ಲಿ ಆಕೆಯನ್ನು ಹಿಂಬಾಲಿಸಿ ಅಟ್ಟಹಾಸದಿಂದ ನಗುವಂತೆಯೂ, "ಹೊಂದಲಾರೆ, ಅವನನ್ನು ನಿಶ್ಚಯವಾಗಿ ಹೊಂದಲಾರೆ" ಎಂದು ನುಡಿಯುವಂತೆಯೂ ಕೇಳಬರುತ್ತಿತ್ತು. ಅದರಿಂದ ಶಕ್ತಿಯ ಕಲ್ಲೆದೆಯು ಕೂಡ ಅರಕ್ಷಣ ನಡುಗುತ್ತಿತ್ತು. ಆಗ ಅವಳು ಚಕಿತ ನೇತ್ರದೃಷ್ಟಿಯಿಂದ ಸುತ್ತುಮುತ್ತಲಿನ ಗಿಡಗಳ ಕಡೆಗೆ ಕ್ಷಣಹೊತ್ತು ನೋಡುತ್ತ, ತೀವ್ರ ನಡಿಗೆಯಿಂದ ನಡೆದು ಯಾವದೊಂದು ಗಿಡದ ಬಳಿಯಲ್ಲಿ ಕ್ಷಣಹೊತ್ತು ನಿಲ್ಲುತ್ತ ಮಾರ್ಗವನ್ನು ಕ್ರಮಿಸುತ್ತಿದ್ದಳು.

ನಟ್ಟಡವಿಯಲ್ಲಿ ಮರಗಳಿಗೆ ಬಂಪಿದ್ದ ಪುರಾತನದ ಒಂದು ಕಾಳಿಯ ಗುಡಿಯಿತ್ತು. ಬಾಲಿಕೆಯು ಆ ಗುಡಿಯಬಾಗಿಲಿಗೆ ತಲುಪಿದಳು. ಬಾಗಿಲವು ತೆರವಿದ್ದದ್ದನ್ನು ನೋಡಿ ಕೂಡಲೆ ಅವಳು ಒಳಗೆ ಪ್ರವೇಶಿಸಿದಳು. ಆ ಗುಡಿಯಲ್ಲಿ ಮಣ್ಣಿನ ಅಥವಾ ಕಲ್ಲಿನ ದೇವ-ದೇವತೆಯ ಮೂರ್ತಿಯು ಇದ್ದಿಲ್ಲ. ದೀಪದ ಬೆಳಕಿನಲ್ಲಿ ಕೃಷ್ಣಾಜಿನದ ಮೇಲೆ ಕುಳಿತ ಒಂದು ಕರುಣಾರೂಪದ ರಮಣಿಯ ಮೂರ್ತಿಯು ಪ್ರಶಾಂತ ಸೌಂದರ್ಯದಿಂದ ಒಪ್ಪುತ್ತಿತ್ತು. ಶಕ್ತಿಯು ಬಂದೊಡನೆ ಗುಡಿಯೊಳಗಿನ ಯೋಗಿನಿಯು ತಿರಸ್ಕಾರದಿಂದ ಆಕೆಗೆ—ತಂಗೀ, ನಾನು ನಿನಗೋಸ್ಕರ ಬಹಳ ಬೇಜಾರ ಪಡುತ್ತಿರುತ್ತೇನೆ. ಇಷ್ಟು ರಾತ್ರಿಯಾದರೂ ನೀನು ಎಲ್ಲಿ ಹೋಗಿದ್ದೆ? ನೀನು ಈ ಪ್ರಕಾರ ಸ್ವೇಚ್ಛಾ

ರಿಣಿಯೆಂದೇ ನಿನ್ನನ್ನು ನಿನ್ನ ತಂದೆಯು ಎಲ್ಲಿಯೂ ಕಳಿಸಲಿಕ್ಕೆ ಸಮ್ಮತಿಸುವದಿಲ್ಲ.

ಶಕ್ತಿಯ ತಂದೆಯು ಆಕೆಯನ್ನು ಈ ಯೋಗಿನಿಯ ಬಳಿಯಲ್ಲಿಟ್ಟು ಕೆಲವು ದಿವಸ ಬೇರೂರಿಗೆ ಹೋಗಿದ್ದನು.

ಶಕ್ತಿಯು ಸಮಾಧಾನದಿಂದ ಯೋಗಿನಿಯ ತಿರಸ್ಕಾರದ ಮಾತನ್ನು ಕೇಳಿ, ಆತ್ಮದೋಷದ ಕ್ಷಾಲನಕ್ಕೆ ಸ್ವಲ್ಪವೂ ಪ್ರಯತ್ನಿಸದೆ, ಸಹಜವಾಗಿ ನುಡಿದಳೇನಂದರೆ—ರಾಜಕುಮಾರನು ಬಂದಿದ್ದನು. ಶಕ್ತಿಯು ಹೆಚ್ಚಿಗೆನೂ ಹಾಡುವ ಆವಶ್ಯಕತೆಯೇ ಉಳಿಯಲಿಲ್ಲ. ಮಂದಿರಕ್ಕೆ ಈ ವರೆಗೂ ಆಕೆಯು ಬಾರದಿರುವ ಕಾರಣವನ್ನು ಯೋಗಿನಿಯು ಈ ಮೊದಲೇ ತಿಳಿದಿದ್ದಳು; ಮತ್ತು ಯಾವಕಾರಣದಿಂದಲೋ ಕುಮಾರನು ಶಕ್ತಿಯೊಂದೊಡಗೂಡಿ ಅರಮನೆಗೆ ಹೋಗಿರಬಹುದೆಂದೂ ಅವಳು ತರ್ಕಿಸಿದ್ದಳು. ತನ್ನ ತರ್ಕವನ್ನು ಒರೆಹಚ್ಚುವದಕ್ಕಾಗಿಯೋ ಅವಳು ಶಕ್ತಿಯನ್ನು ಕುರಿತು—ಕುಮಾರನ್ಯಾರು? ಎಂದು ಕೇಳಿದಳು.

ಶಕ್ತಿ—ಬಾಲಸಖನಾದ ಗಣೇಶದೇವನು, ದಿನಾಜಪುರದ ಈಗಿನ ಅರಸನು.

ಯೋಗಿನಿ—ಹಾಗಾದರೆ, ಸೂರ್ಯದೇವನು ಇಷ್ಟರಲ್ಲಿ ಮರಣ ಹೊಂದಿದನೇನು?

ಶಕ್ತಿಯು ಗೋಣನ್ನು ಅಲ್ಲಾಡಿಸಿ ಸಮ್ಮತಿಯನ್ನು ಸೂಚಿಸಿದಳು. ಯೋಗಿನಿಯು ಗಾಬರಿಗೊಂಡು ಮೆಲ್ಲಗೆ—"ಓಂ ಶಾಂತಿಃ ಓಂ ಶಾಂತಿಃ|" ಎಂದು ನುಡಿದು ಸುಮ್ಮನೆ ಕುಳಿತುಬಿಟ್ಟಳು.

ಶಕ್ತಿ—"ತಾವು ಆವರನ್ನು ಬಲ್ಲಿರಷ್ಟೇ?" ಎಂದು ಕೇಳಿದಳು. ಅದಕ್ಕೆ ಯೋಗಿನಿಯು ಏನೂ ಉತ್ತರಕೊಡದೆ—ತಂಗೀ, ನೀನು ಹರೆಯದ ಹುಡುಗಿ. ರಾಜಕುಮಾರನು ನಿನ್ನ ಬಾಲಸಖನಾಗಿದ್ದರೂ ಈಗ ಅವನೊಡನೆ ಹೀಗೆ ನಡುರಾತ್ರಿಯವರೆಗೆ ಏಕಾಂತ

ವಾಸದಲ್ಲಿರುವದು ಶುದ್ಧ ತಪ್ಪು.

ಶಕ್ತಿ—ಅವನು ನನ್ನ ವಿವಾಹಿತ ಪತಿಯು.

ಆಶ್ಚರ್ಯ ಚಕಿತಳಾದ ಯೋಗಿನಿಯು—ಲಗ್ನದ ಗಂಡನೇ? ನಿನ್ನ ತಂದೆಯಿಂದ ಈಸಂಗತಿಯನ್ನು ನಾನು ಈ ವರೆಗೂ ಕೇಳಿರುವದಿಲ್ಲವಲ್ಲಾ!!

ಶಕ್ತಿ—ಅವನು ಜದನ್ನರಿಯನು. ನಮ್ಮಿಬ್ಬರಲ್ಲಿ ಗಾಂಧರ್ವ ವಿವಾಹವಾಗಿದೆ. ಬಳಿಕ ಶಕ್ತಿಯು ತಮ್ಮ ಆಟದೊಳಗಿನ ವಿವಾಹದ ಸಂಗತಿಯನ್ನು ನಿವೇದಿಸಿದಳು. ಅದನ್ನುಕೇಳಿ ಯೋಗಿನಿಯು ತುಸು ಕರುಣಾದ್ಯೋತಕನಗೆ ನಕ್ಕು—ತಂಗೀ, ಇದರಲ್ಲಿ ನಿನ್ನ ತಪ್ಪುಇಲ್ಲ. ಈ ಸಂಸಾರವೇ ಆಟವು; ಸ್ವತಃ ಭಗವಂತನೇ ಆಟದ ಪುರಸ್ಕರ್ತನಾಗಿರಲು, ನೀನಂತೂ ಕೇವಲ ಅನನುಭವಿಕ ಹುಡಿಗಿ. ನೀನು ಆಟವನ್ನೇ ಸತ್ಯವೆಂದು ತಿಳಿದದ್ದರಲ್ಲಿ ಆಶ್ಚರ್ಯವೇನಿದೆ? ಆದರೆ ಕುಮಾರನಾದರೂ ಹಾಗೆಯೇ ಭಾವಿಸುವನೇನು? ಮತ್ತು ಅವನು ಆಟದೊಳಗಿನ ಆ ವಧುವನ್ನು ಈಗ ಪ್ರತ್ಯಕ್ಷ ವರಿಸಲಿಕ್ಕೆ ಸಿದ್ಧನಿರುವನೇನು?

ಯೋಗಿಯಾದರೂ ಶಕ್ತಿಯಲ್ಲಿ ಉಂಟಾದ ಸಂದೇಹವನ್ನೇ ಆಡಿ ತೋರಿಸಿದಳು. ಯಾರಿಂದಲೂ ಶಕ್ತಿಗೆ ಸಮಾಧಾನವಾಗುವಂಥ ವಚನಗಳೇ ಹೊರಡಲೊಲ್ಲವು. ಎಲ್ಲರಲ್ಲಿಯೂ ಅದೇ ಸಂದೇಹವು. ಎಲ್ಲರೂ—"ಹೊಂದಲಾರೆ, ಅವನನ್ನು ಹೊಂದಲಾರೆ" ಎಂದೇ ನುಡಿಯುತ್ತಿದ್ದರು.

ಈ ಶಬ್ದವನ್ನು ಕೇಳಿ ಕೇಳಿ ಶಕ್ತಿಗೆ ಹುಚ್ಚು ಹಿಡಿದಂತಾಯಿತು. ನಿರಾಶೆಯಕಡುವೇಗ-ಪ್ರಬಲವಾಯುವು ಬೀಸಿಬೀಸಿ ಆಕೆಯ ಹೃದಯಸ್ಥ ಕೋಮಲಕರುಣಾಭಾವವನ್ನು ಕಠೋರವಾಗಿ ಮಾಡಿಬಿಟ್ಟಿತು. ಆಗ ಅವಳು ಸಿಟ್ಟಿನಿಂದ ನುಡಿದಳೇನಂದರೆ—ಹಾಗೆ ಅವನು ನಡೆಯಲಿಕ್ಕೆ ಒಪ್ಪದಿದ್ದರೆ, ನಾನು ಅವನ ನಾಶವನ್ನು ಮಾಡ

ಲಿಕ್ಕೆ ಕೂಡ ಹಿಂಜರಿಯಲಿಕ್ಕಿಲ್ಲ.

ಕ್ಷಣಹೊತ್ತಿನ ಮುಂಚೆ ಇದೇ ಮಾತನ್ನು ಮುಸಲ್ಮಾನನು ಆಡಿದ್ದಕ್ಕೆ ಶಕ್ತಿಗೆ ಪಾಗತ್ಯವೆನಿಸಿದಂತಾಗಿತ್ತು. ಆದರೆ ಆ ಕಠೋರ ನುಡಿಯನ್ನು ಈಗ ಆವಳೇ ನಿಶ್ಶಂಕೆಯಿಂದ ನುಡಿದಳು. ಬಳಿಕ ಶಕ್ತಿಯು ಸಂತಾಪವೇಗವನ್ನು ತಡೆಯುವದಕ್ಕಾಗಿ ಸ್ವಲ್ಪ ಹೊತ್ತು ಸುಮ್ಮನಾದಳು. ಆ ಮೇಲೆ ಅವಳು—ದೇವೀ, ಯೋಗಿನಿ, ನಾನು ನಿಮಗೆ ಆ ಸಂಗತಿಯನ್ನೇ ತಿಳಿಸಬಂದಿರುವೆನು. ಇಂದು ನಾನು ಅವನಿಂದ ತಿರಸ್ಕೃತಳಾಗಿರುವೆನು, ಜರಿಯಲ್ಪಟ್ಟಿರುವೆನು. ಅದಕ್ಕಾಗಿ ನಾನು ಸೇಡು ಬಯಸುವೆನು; ನಾನು ಅವನನ್ನು ಇಚ್ಛಿಸುತ್ತೇನೆ. ಅವನು ನನ್ನ ವಶವಾಗಬೇಕೆಂದು ಬಯಸುತ್ತೇನೆ. ಅದು ಸಾಧ್ಯವಾಗದಿದ್ದರೆ ಮಾತ್ರ ನಾನು ಸೇಡು........

ಯೋಗಿನಿ—ತಂಗೀ, ಶಾಂತಳಾಗು. ಕೋಮಲ ಶರೀರದ ಸ್ತ್ರೀಯರಿಗೆ ಸೇಡು ತೀರಿಸಿಕೊಳ್ಳುವ ಹವ್ಯಾಸವು ಶೋಭಿಸುವದಿಲ್ಲ. ಅದು ಅವರಿಗೆ ತೀರ ಅಯೋಗ್ಯವು. ನಿನ್ನ ಮನೋಗತದಂತೆಯೇ ಈ ಸೃಷ್ಟಿಯು ನಡೆಯಬೇಕೆಂದು ನೀನು ಬಯಸುತ್ತೀಯೇನು? ಭಗವಂತನ ಸೃಷ್ಟಿನಿಯಮಗಳಿಗೆ ವಿರೋಧವಾಗಿನಡೆಯುವದರಿಂದಲೇ ನೀನು ಮನುಷ್ಯಜನ್ಮವನ್ನು ಅದರಲ್ಲಿಯೂ ಸ್ತ್ರೀಜನ್ಮವನ್ನು ಎತ್ತಿರುವಿ. ಬಾಲ್ಯದಲ್ಲಿ ಕುಮಾರನು ನಿನ್ನೊಡನೆ ಆಡಿದ ಮಾತ್ರದಿಂದ ಅವನು ಈಗ ನಿನ್ನನ್ನು ವಿವಾಹಮಾಡಿಕೊಳ್ಳಲೇಬೇಕೆಂದು ಆಗ್ರಹಪಡುತ್ತೀಯೇನು? ನಿನ್ನ ಇಚ್ಛೆಯನ್ನು ತೃಪ್ತಿಗೊಳಿಸುವದು ಕುಮಾರನ ಕರ್ತವ್ಯವಲ್ಲ. ನಿನ್ನ ಕರ್ಮಫಲವೇ ನಿನ್ನ ಈ ದುಃಖಕ್ಕೆ ಕಾರಣವಾಗಿರುವದು. ಅವನನ್ನು ದೋಷಿಯಾಗಿ ಭಾವಿಸುವದು ವ್ಯರ್ಥವು. ಸೇಡಿನ ಹವ್ಯಾಸದಿಂದ ಜರ್ಜರವಾಗುವದು ಅಕರ್ತವ್ಯವು. ಮನಸ್ಸಿನಲ್ಲಿ ಯೋಚಿಸಿ ನೋಡು, ಭಿಕ್ಷುಕಿಯ ಅಧಿಕಾರವೆಷ್ಟೆಂಬದನ್ನು. ಈ

ಪ್ರಸಂಗದಲ್ಲಿ ಅವನು ನಿನಗೆ ಯಾವ ಬಗೆಯ ಅನ್ಯಾಯವನ್ನೂ ಮಾಡಿರುವದಿಲ್ಲ. ನೀನು ಮಾತ್ರ ಅವನೊಡನೆ ಈಗ ಸುಮ್ಮ ಸುಮ್ಮನೆ ದ್ವೇಷ ಬೆಳಿಸುತ್ತೀ.

ಶಕ್ತಿ:—ನಾನೇ ದ್ವೇಷ ತಾಳುವೆನೇ? ವಿಶ್ವಾಸಕ್ಕೆ ಪಾತ್ರನೂ, ಪ್ರೇಮಕ್ಕೆ ಯೋಗ್ಯನೂ, ಹೃದಯದ ಅಧಿಕಾರಿಯೂಎಂದು ಯಾವ ನನ್ನು ಈ ಬಡ ಭಿಕ್ಷುಕಿಯು ನಂಬಿದ್ದಳೋ, ಆ ನೀಚನೇ ನನಗೆ ಪ್ರತಿರೋಧವನ್ನು ಮಾಡಿದ ಬಳಿಕ ನಾನು ಅವನ ದ್ವೇಷಮಾಡದೆ, ಮತ್ತೇನು ಮಾಡಬೇಕೆನ್ನುವೆ?

ಯೋಗಿನಿ—ತಂಗೀ, ನಿನಗೆ ಮರುಳು ಹಿಡಿದದೆ. ಹೃದಯ ಧರ್ಮವು ಉಚ್ಚಧರ್ಮವು, ಇದರಲ್ಲೇನೂ ಸಂದೇಹವಿಲ್ಲ. ಆದರೆ ಹೃದಯಧರ್ಮವೆಂದು ಯಾವುದಕ್ಕೆ ನೀನು ಕರೆಯುತ್ತೀ? ಪರಸ್ಪರರ ದೃಢಪ್ರೇಮವೇ ಹೃದಯ ಧರ್ಮವಾಗಿದೆ. ನೀನು ಯಾರನ್ನು ಪ್ರೀತಿಸುವೆಯೋ ಅವರೂ ಅದರಂತೆ ನಿನ್ನನ್ನು ಪ್ರೀತಿಸಿದರೆ ಮಾತ್ರ ಅದಕ್ಕೆ ಹೃದಯಧರ್ಮವೆಂತಾಗಲಿ, ಪ್ರಣಯಧರ್ಮವೆಂತಾಗಲಿ ಹೇಳಬಹುದು; ಮತ್ತು ಈ ಪ್ರಕಾರದ ಪ್ರೇಮವು ಪರಸ್ಪರರಲ್ಲಿ ಉಂಟಾದಾಗಲೇ ಒಬ್ಬರು ಇನ್ನೊಬ್ಬರ ಹೃದಯದ ಅಧಿಕಾರಿಯಾಗುವರು. ಈ ಬಂಧನಕ್ಕೊಳಪಟ್ಟವರು ಹೃದಯಧರ್ಮವನ್ನು ಭಿನ್ನಮಾಡಿದರೆ ಮಾತ್ರ ವಿಶ್ವಾಸಘಾತಕ, ಕರ್ತವ್ಯಪರಾಙ್ಮುಖ, ಧರ್ಮಭ್ರಷ್ಟ ಮುಂತಾದ ನೀಚ-ಕೋಟಿಗಳಲ್ಲಿ ಗಣಿಸಲ್ಪಡುವರು. ಆದರೆ ಬಾಲ್ಯಕಾಲದಲ್ಲಿ ನಿನ್ನೊಡನೆ ಆಟವಾಡಿದ ಮಾತ್ರದಿಂದ ಅವನು ನಿನ್ನೊಡನೆ ಪ್ರೇಮಸೂತ್ರದಿಂದ ಬಿಗಿಯಲ್ಪಟ್ಟಿರುವನೆಂದು ನೀನು ಕಲ್ಪಿಸಿಕೊಳ್ಳುವದು ತೀರ ಅಸಂಗತವು. ಪುರುಷರ ಪ್ರೇಮವು ವಿಶೇಷವಾಗಿ ಯೌವನಾವಸ್ಥೆಯ ಪುರುಷರ ಪ್ರೇಮವು ವಿಚಿತ್ರವಾಗಿರುತದು. ಕೆಲವುಕಾಲದಿಂದ ನೀನು ಅವನಿಂದ ದೂರವಾಗಿದ್ದದರಿಂದ

ನಿನ್ನೊಡನೆ ಅನುರಾಗದಿಂದ ನೋಡುಲಿಕ್ಕೆ ಅವನಿಗೆ ಅವಕಾಶವೇ ಉಳಿದಿರುವದಿಲ್ಲ; ಹಾಗೂ ನಿನ್ನೊಡನೆ ಯಥಾಶಾಸ್ತ್ರದಲ್ಲಿ ವಿಧಾನವಿಧಿಯಿಂದ ಅವನು ವಿವಾಹವನ್ನೂ ಮಾಡಿಕೊಂಡಿರುವದಿಲ್ಲ. ಅದ್ದರಿಂದ ಹೃದಯದಿಂದಾಗಲಿ, ಸಮಾಜಬಂಧನದಿಂದಾಗಲಿ ಅವನು ನಿನಗೆ ಯಾವ ಪ್ರಕಾರದ ಅನ್ಯಾಯವನ್ನೂ ಮಾಡಿರುವದಿಲ್ಲ; ನಿನ್ನ ಈ ವ್ಯರ್ಥ ಪ್ರೇಮಕ್ಕೆ ಯಾವ ಬಗೆಯಿಂದಲೂ ಅವಕಾಶ ಸಿಗುವದಿಲ್ಲ. ಅದರಿಂದ ನೀನು ಅವನ ಅನುಗ್ರಹದ ಭರವಸೆಯನ್ನೇ ಬಿಟ್ಟುಬಿಡುವದು ಶ್ರೇಷ್ಠವಾದದ್ದೇನೋ ಸತ್ಯವು; ಆದರೆ ನ್ಯಾಯದಿಂದ ಸಂಪ್ರಾಪ್ತವಾದದ್ದನ್ನೇ ಅತಿಶಯವೆಂದು ತಿಳಿದು ಸಮಾಧಾನಪಡುವದು ಧನ್ಯರ ಧರ್ಮವು. ನ್ಯಾಯದಿಂದ ಸಂಪ್ರಾಪ್ತವಾದದ್ದನ್ನು ಅನ್ಯಾಯದಿಂದಾದರೂ ಸಂಪಾದಿಸುವದು ಧಿಕ್ಕೃತರ [illegible] ರಕ್ಕೂ ಏರಿಸಿದ್ದೇನು. ಹೀಗೆ ಉತ್ತಮವಾದ [illegible] ಯಾರಾದರೂ ವಂಚಿಸಿದರೆ, ಅವರನ್ನೇ ನಿಂದ್ಯರೆಂದು ನೀನು [illegible]ದು ಎಷ್ಟಿಯು ಧಿಕ್ಕೃತ ಧರ್ಮವು?

ಶಕ್ತಿ——ಅವನ-ನನ್ನಲ್ಲಿ ಯಾವಪ್ರಕಾರದ ಪ್ರೇಮವಿಲ್ಲವೇ? ಹಾಗಾದರೆ ಬಾಲ್ಯದಲ್ಲಿ ಅವನು ನನ್ನನ್ನು ಪ್ರತಿನಿತ್ಯ ಏಕೆ ಪ್ರೀತಿಸುತ್ತಿದ್ದನು? ಆ ದಿವಸ ಆ ಹೂವಮಾಲೆಯನ್ನು ನನ್ನ ಕಂಠದಲ್ಲಿ ಹಾಕಿ ನನ್ನನ್ನು ರಾಣಿಯೆಂದೇಕೆ ಕರೆದುಕೊಂಡನು?

ಯೋಗಿನಿ——ತಂಗೀ, ಕುಮಾರಾವಸ್ಥೆಯ ಅನುರಾಗದ ಪ್ರೇಮವದು; ನೀವು ಆಗಿನಕಾಲದ ಕೋಮಲ ಬುದ್ಧಿಯ ಬಾಲಕರೆಷ್ಟೆ? ನಿಮ್ಮ ಯೌವನಕಾಲದ ಈ ಸ್ನೇಹವಿರುವದೆತ್ತ?

ಶಕ್ತಿ——ನಾವು ಆಗ ಕೇವಲ ಚಿಕ್ಕಬಾಲಕರಾಗಿದ್ದಿಲ್ಲ, ಕುಮಾರನು ನನ್ನನ್ನು ರಾಣಿಯೆಂದು ಕರೆದಾಗಿನಿಂದಲೇ ನಾನು ಅವನನ್ನು ಮನಃಪೂರ್ವಕವಾಗಿ ಪ್ರೀತಿಸುತ್ತಿರುತ್ತೇನೆ; ನನ್ನ

ಅವನಾದರೂ ನನ್ನನ್ನು ಈಗ ಕೆಲವು ತಾಸುಗಳ ಪೂರ್ವದವರೆಗೆ ಹಾಗೆಯೇ ಪ್ರೀತಿಸುತ್ತಿದ್ದನು. ಆದರೆ ಈ ದಿವಸ ಸಾಯಂಕಾಲದಲ್ಲಿ ಆ ಹೇಡಿಯೂ, ನೀಚನೂ, ವಿಶ್ವಾಸಘಾತಕನೂ ಆದ ರಾಜಕುಮಾರನು ತನ್ನ ತಾಯಿಯ ಭಯದಿಂದ ನನ್ನನ್ನು ಹೀಯಾಳಿಸಿಬಿಟ್ಟನು. ಇಷ್ಟೇ ಅಲ್ಲ; ಆ ಕುಟಿಲಹೃದಯದ ತಾಯಿಮಕ್ಕಳು ನನ್ನ ಸೋದರತ್ತೆಯೊಬ್ಬಳು ಕುಲಕಲಂಕಿನಿಯಾಗಿರುವಳೆಂಬ ಸುಳ್ಳು ಅಪವಾದವನ್ನು ಹೊರಿಸಿ ನನ್ನ ಕುಲಕ್ಕೇ ಕಲಂಕವನ್ನಿಟ್ಟು ಜರೆದಿರುವರು. ತಾಯೀ, ಯೋಗಿನಿ, ಭಗವಂತನು ಈ ಲೋಕದಲ್ಲಿದ್ದದ್ದೇ ಸತ್ಯವಾದರೆ, ಆ ಕುಮಾರ ಗಣೇಶದೇವನ ವಂಶದವರು ಒಂದಿಲ್ಲೊಂದುದಿನ ನನ್ನ ವಂಶದವರ ಕಾಲಿನಿಂದ ತುಳಿಯಲ್ಪಡಲೇ ಬೇಕು. ಹೀಗಾಗದಿದ್ದರೆ ಆ ಭಗವಂತನಲ್ಲಿ ನ್ಯಾಯನಿಷ್ಠುರತೆಯು ಎಲ್ಲಿಉಳಿಯುವದು?"

ಈ ಪ್ರಕಾರ ಮಾತಾಡಿ ಶಕ್ತಿಯು ಒಂದು ದೀರ್ಘ ನಿಶ್ವಾಸವನ್ನು ಬಿಟ್ಟು ಸ್ವಲ್ಪ ಹೊತ್ತು ಸುಮ್ಮನೆ ಕುಳಿತಳು; ಯೋಗಿನಿಯ ಬಾಯಿಂದಲೂ ಕೆಲವು ನಿಮಿಷಗಳ ವರೆಗೆ ಮಾತುಹೊರಡದಿರಲು, ಆ ಅರಣ್ಯಮಧ್ಯದೊಳಗಿನ ಗುಡಿಯೊಳಗೆ ಆ ನಡುರಾತ್ರಿಯಲ್ಲಿ ಮೃಗಶ್ವಾಪದಗಳ ಭಯಂಕರ ಕೋಲಾಹಲವು ಪ್ರತಿಧ್ವನಿಗೊಡಹತ್ತಿತು. ಬಳಿಕ ಯೋಗಿನಿಯು ಮಾತಾಡಲಾರಂಭಿಸಿದಳು:—"ತಂಗೀ, ನಮ್ಮ ಕರ್ಮಾನುಸಾರವಾಗಿ ನಮಗೆ ಸುಖದುಃಖಗಳುಂಟಾಗುತ್ತವೆ; ಮತ್ತು ಹಾಗೆ ಆಗುವದು ಭಗವಂತನ ನ್ಯಾಯಶಾಸನಕ್ಕೆ ತಕ್ಕದ್ದಿರುತ್ತದೆ. ಆದರಂತೆ ರಾಜಕುಮಾರನಾದರೂ ನಿನ್ನೊಡನೆ ವಿಶೇಷವಾಗಿ ಪ್ರೀತಿಯಿಂದ ನಡೆಯುತ್ತಿದ್ದರೂ, ನಿನ್ನಲ್ಲಿಯ ಒಂದು ವಿಶೇಷ ಅವಗುಣದ ಸಲುವಾಗಿ ಅವನು ನಿನ್ನನ್ನು ತಿರಸ್ಕಾರಮಾಡಿ ಬಿಟ್ಟದ್ದೇ ನ್ಯಾಯವಾಗಿದೆ. ಹೀಗೆ ಮಾಡುವದರಲ್ಲಿ ಅವನ ಜೀವಕ್ಕೆ ಸಮಾಧಾನವಾಗಿರುವದೆಂತಲ್ಲ; ಆದರೆ ಅದನ್ನು ಅವನು ಕೇವಲ ಕರ್ತವ್ಯಕ್ಕಾಗಿ

ಮಾಡಿರುವನು. ಆದ್ದರಿಂದ ಅವನು ಯಾವ ವಿಧದಿಂದಲೂ ಸೇಡಿಗೆ ಪಾತ್ರನಲ್ಲ; ಅವನು ವಿಶೇಷವಾದ ಆದರಾರ್ಹನೇ ಆಗಿರುವನು. ಕರ್ತವ್ಯಕ್ಕಾಗಿ ಶ್ರೀ ರಾಮಚಂದ್ರನೇನು ಮಾಡಿದನೆಂಬದನ್ನು ಬಲ್ಲಿಯಾ? ನಿನ್ನೊಡನೆ ವಿವಾಹಬೆಳಿಸುವದರಿಂದ ಕುಮಾರನ ವಂಶಕ್ಕೆ ಕಲಂಕವುಂಟಾಗುವದರಿಂದ ಅವನು ನಿನ್ನನ್ನು ಉದಾಸೀನಮಾಡಿಬಿಡುವದು ಅವನ ಧರ್ಮವಾಗಿರುತ್ತದೆ.

ಶಕ್ತಿಯು ಸಿಟ್ಟಿನಿಂದ ಬೆಂಕಿಯಾಗಿ—ಅವನು ಆದರಾರ್ಹನೇ; ಅವನು ತೀರ ಪಶುವಿನಂತೆ ವರ್ತಿಸುತ್ತಿದ್ದರೂ ಅವನು ಕರ್ತವ್ಯದಕ್ಷನೂ ಆದರಕ್ಕೆ ಪಾತ್ರನೂ ಆಗಿರುವನಲ್ಲವೆ? ಶ್ರೀ ರಾಮನು ಸೀತೆಯನ್ನು ಅರಣ್ಯಕ್ಕೆ ಅಟ್ಟಿದ್ದು ಮಹಾ ಪೌರುಷಮಾಡಿದಹಾಗಾಯಿತೇನು? ಅದರಿಂದ ಅವನ ಹೇಡಿತನವು ಮಾತ್ರ ಚನ್ನಾಗಿ ವ್ಯಕ್ತವಾಗುವಂತಿದೆ. ಅವನ ಈ ಅವಿಚಾರಕ್ಕಾಗಿ ಅವನ ಪೂಜ್ಯ ದೇವನಾಮವು ಕೂಡ ಕಲಂಕಿತವಾಗುವದೆಂದು ನಾನು ಭಾವಿಸಿರುವೆನು. ಸೀತೆಯು ಅವನ ಧರ್ಮಪತ್ನಿಯಾಗಿದ್ದಂತೆ, ನಿಷ್ಠಾವಂತೆಪ್ರಜೆಯೂ ಆಗಿದ್ದಳು. ಲೋಕಾಪವಾದದ ಭಯಕ್ಕಾಗಿ ನಿರ್ದೋಷಿಯಾದ ಅವಳನ್ನು ತ್ಯಜಿಸಿದ ಅವನು ಪತಿಯ ಕರ್ತವ್ಯ, ರಾಜಕರ್ತವ್ಯ ಮತ್ತು ದೇವಕರ್ತವ್ಯ ಹೀಗೆ ಎಲ್ಲ ಕರ್ತವ್ಯಗಳಿಂದ ಭ್ರಷ್ಟನಾದನು. ಬಿಡು, ಆ ಕಾಪುರುಷನ ಹೆಸರನ್ನು ಕೂಡ ಎತ್ತಬೇಡ. ಇದರಂತೆ ಅವನನ್ನೇ ಪತಿಯೆಂದು ತಿಳಿದು, ಅವನ ಧ್ಯಾನದಲ್ಲಿಯೇ ಕಾಲಹರಣಮಾಡುತ್ತಿರುವ ನನ್ನನ್ನು ಮಿಥ್ಯಾಪವಾದದ ಭಯದಿಂದ ತ್ಯಜಿಸಿದ ಕುಮಾರ ಗಣೇಶದೇವನು ತಾನೊಬ್ಬನೇ ಕರ್ತವ್ಯಭ್ರಷ್ಟನಾದನಂತಲ್ಲ, ಹೃದಯಪೂರ್ವಕವಾಗಿ ವರಿಸಿದ ಪತಿಯನ್ನು ಬಿಟ್ಟುಬಿಟ್ಟು ಸಮಾಜಾಚಾರಕ್ಕಾಗಿ ಅನ್ಯಪತಿಯನ್ನು ವರಿಸಹಚ್ಚಿ ನನ್ನನ್ನು ವ್ಯಭಿಚಾರಕೃತ್ಯಕ್ಕೆ ಪ್ರೇರಿಸಿ, ಧರ್ಮ-ನೀತಿಭ್ರಷ್ಟಳನ್ನಾಗ ಮಾಡುತ್ತಿರುವನು. ಇಂಥ

ಧೃಷ್ಟನು ನನಗೆ ಕುಲಕಲಂಕಿನಿಯೆಂದರೆ ಅದು ಸತ್ಯವಾಗಬಹುದೇ? ಅದು ಸುಳ್ಳು; ಕೇವಲ ಸುಳ್ಳು ಅಪವಾದವಾಗಿರುವದು!! ಆ ನನ್ನ ಪುಣ್ಯವತಿ ಸೋದರತ್ತೆಯು ಇಷ್ಟರಲ್ಲಿ ಸ್ವರ್ಗಾರೋಹಣವನ್ನು ಮಾಡಿ ಅಖಂಡ ಸುಖವನ್ನು ಅನುಭೋಗಿಸುತ್ತಿರಬಹುದು.

ಶಕ್ತಿಯು ಒಳ್ಳೇ ರೊಚ್ಚಿನಿಂದ ಮಾತಾಡಿದ್ದರಿಂದ ಆಕೆಯ ಶಬ್ದಗಳು ಬಹಳ ಗಟ್ಟಿಯಾಗಿ ಉಚ್ಚರಿಸಲ್ಪಡುತ್ತಿದ್ದವು. ಆದರಿಂದ ಆ ಗುಡಿಯೊಳಗೆ ಏಕೋಪ್ರಕಾರದ ಪ್ರತಿಧ್ವನಿಯಾಗಹತ್ತಿತು. ಕೆಲ ಹೊತ್ತಿನ ಮೇಲೆ ಆ ಧ್ವನಿಯಡಗಲು, ಯೋಗಿನಿಯು ಸಾಧಾರಣ ಸಣ್ಣಗಿನ ಧ್ವನಿಯಿಂದ—"ಮಡುಗೀ, ಕುಮಾರನ ಆ ಮಾತುಸುಳ್ಳಲ್ಲ; ಮಿಥ್ಯಾಪವಾದವಾಗಿರುವದಿಲ್ಲ. ನಾನೇ ಆ ಕುಲಕಲಂಕಿನಿಯಾದ ಮನೋಹಾರೀಲಾಲನ ತಂಗಿಯು, ನಿನ್ನ ಸೋದರತ್ತೆಯು. ಇನ್ನೂ ಜೀವಂತಳಿರುವೆನು. ಸ್ವರ್ಗಕ್ಕೆ ಹೋಗುವೆನೋ ಇಲ್ಲವೋ ಎಂಬದನ್ನರಿಯೆನು; ಆದರೆ ನರಕಕ್ಕಂತೂ ಈ ವರೆಗೂ ಇಳಿದಿಲ್ಲ" ಎಂದು ನುಡಿದು ತನ್ನ ವೃತ್ತಾಂತವನ್ನು ಹೇಳತೊಡಗಿದಳು;

"ತಂಗೀ, ನನ್ನ ಕಲಂಕಿತ ಚರಿತ್ರವನ್ನು ಸಾವಧಾನದಿಂದ ಕೇಳು. ಪೂರ್ವ ವಯಸ್ಸಿನಲ್ಲಿ ನಾನೂ ನಿನ್ನಂತೆಯೇ ಹೃದಯಧರ್ಮವೇ ಶ್ರೇಷ್ಠವಾದದ್ದೆಂದು ತಿಳಿದು ಈ ಕುಮಾರಗಣೇಶದೇವನ ತಂದೆಯಾದ ಸೂರ್ಯದೇವನೊಡನೆ ರಮಿಸಬಯಸಿ ಅಧಃಪತನವನ್ನು ಹೊಂದಿದ್ದೆನು; ನಾನು ಆ ಧರ್ಮಭ್ರಷ್ಟತೆಗಾಗಿಯೇ ಹೀಗೆ ಲೋಕೋತ್ತರ ಅಪವಾದ—ಅಪಕೀರ್ತಿಗಳನ್ನು ಹೊಂದಿದೆನು. ಇದರಲ್ಲಿ ದೇವರ ಇಲ್ಲವೆ ಭಾವಿತ ಪುರುಷನ ತಪ್ಪು ಯಾವ ಪ್ರಕಾರದ್ದು ಇರುವದಿಲ್ಲ. ಉಚ್ಛೃಂಖಲಪ್ರವೃತ್ತಿಯುಳ್ಳವಳಾದ ನನ್ನ ಆ ತಪ್ಪಿಗಾಗಿ ಈ ವರೆಗೂ ನಾನು ಸಮಾಜದಿಂದ ಬಹಿಷ್ಕೃತಳಾಗಿ ಇದ್ದು, ದಯಾಮಯನಾದ ಭಗವಂತನಲ್ಲಿ ಕ್ಷಮೆಯನ್ನು ಯಾಚಿಸುತ್ತಿರುವೆನು..."

ಯೋಗಿನಿಯ ಸಂಪೂರ್ಣ ವೃತ್ತಾಂತವನ್ನು ಸಾವಧಾನದಿಂದ ಕುಳಿತು ಕೇಳುವದು ತೀರ ಉಚ್ಛೃಂಖಲ ಸ್ವಭಾವದ ಶಕ್ತಿಯಿಂದಾಗಲಿಲ್ಲ. ಆಕೆಯ ಮನಸ್ಸಿನಲ್ಲಿ "ಈಕೆಯು ಯೋಗಿನಿಯೋ, ಕಲಂಕಿನಿಯೋ?" ಎಂಬ ಸಂಶಯುವು ದೃಢವಾಗಹತ್ತಲು ಆವಳು ಅಲ್ಲಿಂದ ತಟ್ಟನೆ ಎದ್ದು ಕಾಣದಂತಾದಳು.

ಏಳನೆಯ ಪ್ರಕರಣ.

ಯುದ್ಧ ಸನ್ನಾಹ.

ಯೋಗಿನಿಯ ಸಮಗ್ರ ವೃತ್ತಾಂತವನ್ನು ಕೇಳುವದನ್ನು ಬಿಟ್ಟು ಕೊಟ್ಟು ಒಮ್ಮೆಲೆ ಅಲ್ಲಿಂದ ಎದ್ದ ಶಕ್ತಿಯು ಆ ಪಾಳು ಕಾಳಿಯ ಮಂದಿರದ ಹಿಂಭಾಗದಲ್ಲಿರುವ ಮತ್ತೊಂದು ಪುಟ್ಟದೇವಾಲಯುವನ್ನು ಸೇರಿದಳು. ಆಕೆಯ ಹಿಂದಿನಿಂದಲೇ ಮತ್ತೊಂದು ವ್ಯಕ್ತಿಯು ಕೊಂಚವೂ ಸಪ್ಪಳಮಾಡದೆ ಆ ಗುಡಿಯನ್ನು ಪ್ರವೇಶಿಸಿ ಗರ್ಭಗುಡಿಯೊಳಗಿನ ದೇವರ ಹಿಂದಿನ ಮರೆಯ ಸ್ಥಳದಲ್ಲಿ ಅಡಗಿಕೊಂಡಿತು. ಶಕ್ತಿಯ ಚಿತ್ತವು ಬಹಿರ್ವ್ಯಾಪಾರದಿಂದ ವಿಮುಖವಾಗಿದ್ದರಿಂದ ಆಕೆಗೆ ಇದು ತಿಳಿಯಲಿಲ್ಲ. ದೀಪವಿಲ್ಲದ ಆ ಜೀರ್ಣಗುಡಿಯಲ್ಲಿ ಆಕಾಶದೊಳಗಿನ ನಕ್ಷತ್ರಗಳ ಬೆಳಕು ತಕ್ಕಮಟ್ಟಿಗೆ ಬಿದ್ದಿತ್ತು. ಶಕ್ತಿಯು ಅಂಥ ಆ ಮಂದಪ್ರಕಾಶದಲ್ಲಿಯೇ ದೇವಿಯ ಮೂರ್ತಿಯನ್ನು ನೋಡಿ ದೇವಿಗೆ ದಂಡವತ್‌ನಮಸ್ಕರಿಸಿದಳು. "ಮನಸಿನಂತೆ ಮಹಾದೇವ" ಎಂಬ ನಾಣ್ಣುಡಿಯಂತೆ ಆ ದೇವಿಯಮೂರ್ತಿಯು ಸ್ವಾಭಾವಿಕವಾದ ನಿಡಿದಾದ ರಕ್ತವರ್ಣದ ಜಿಹ್ವೆಯು ಎದ್ದುಕಾಣಿಸಲು, ದೇವಿಯೂ ತನ್ನಂತೆ ಸೇಡುಬಯಸುವಳೆಂದೂ, ಹಲವು ಪ್ರಕಾರಗ ಪಿಶಾಚಿ

ಗಣಗಳು ದೇವಿಗೆ ಆ ಕಾರ್ಯಕ್ಕಾಗಿ ಸಹಾಯಮಾಡುತ್ತಿರುವವೆಂದೂ ಶಕ್ತಿಯು ಮನಸಿನಲ್ಲಿ ಕಲ್ಪಿಸಿದಳು. ಹೀಗೆ ವಿಕೃತ ಚಿತ್ತದ ಅವಳು ದೇವಿಯನ್ನು ಹೆಚ್ಚಾಗಿ ದಿಟ್ಟಿಸಿನೋಡಹತ್ತಲು, ಆ ದೇವಿಯ ಬಾಯಿಯಿಂದ—"ಸೇಡು! ಸೇಡು!!" ಎಂಬಶಬ್ದಗಳು ಹೊರಟು ಆ ಮುರಕಗುಡಿಯನ್ನು ನಡುಗಿಸಿ ಬಿಟ್ಟವು; ಹಾಗು ಆ ಗುಡಿಯ ಕತ್ತಲಭಾಗದಲ್ಲೆಲ್ಲ ಪಿಶಾಚಿಗಳು ತಾಂಡವನೃತ್ಯಮಾಡುತ್ತಿರುವಂತೆ ಆಕೆಯ ದೃಷ್ಟಿಗೆ ಗೋಚರವಾಯಿತು. ಅದರಿಂದ ಶಕ್ತಿಯು ಮೈ ಮರೆತಳು. "ಸೇಡು, ಸೇಡು" ಎಂಬ ಶಬ್ದದ ಪ್ರತಿಧ್ವನಿಯಿಂದ ಆಕೆಯ ಹೃದಯವು ಅತ್ಯಂತ ಉತ್ತೇಜಿತವಾಯಿತು. ಆಗ ಅವಳೂ—"ಸೇಡು, ಸೇಡು; ಹೌದು ನಾನು ಸೇಡನ್ನೇಬಯಸುತ್ತೇನೆ" ಎಂದು ಒದರಿದಳು.

ಶಕ್ತಿಯ ದನಿಯು ಅಡಗುವಷ್ಟರಲ್ಲಿ "ತಥಾಸ್ತು; ನಿನ್ನಪೇಕ್ಷೆಯು ಈಡೇರುವದು. ನೀನು ಪ್ರಯತ್ನಮಾಡಿದರೆ ಅವನ ಸಂಹಾರವುಕೂಡ ಆಗಬಹುದು" ಎಂದು ಮೃದು-ಗಂಭೀರವಾದ ದೇವವಾಣಿಯಾಯಿತು.

ಶಕ್ತಿಯ ದೇಹವು ಪುಳುಕಿತವಾಯಿತು. ಆಗ ಅವಳು ವಿಸ್ಮಯಚಕಿತ ದೃಷ್ಟಿಯಿಂದ ಆ ದೇವಾಲಯದ ಎಲ್ಲ ಭಾಗವನ್ನು ನೋಡತೊಡಗಿದಳು. ಎಲ್ಲಿಯೂ ಏನೂ ಕಾಣಲೊಲ್ಲದು. ನಿರ್ವಾಕ್ ಹಾಗು ನಿಸ್ತಬ್ಧವಾದ ದೇವಿಯ ಪಾಷಾಣಮೂರ್ತಿಯೊಂದು ಎದುರಿಗೆ ನಿಂತಿತ್ತು. ದೇವಿಯ ಆರಕ್ತವಾದ ನಾಲಿಗೆಯು ಈಗಲೂ ಹಾಗೆಯೇ ಕಾಣುತ್ತಿದ್ದು, ದೇವಿಯು ಕೋಪಾವೇಷ್ಟಿತಳಾಗಿರುವಹಾಗೆ ಶಕ್ತಿಗೆ ಭಾಸವಾಯಿತು. ಆಗ ಅವಳು—ದೇವೀ, ನಾನು ಸೇಡನ್ನು ಬಯಸುವೆನು; ಆದರೆ ರಕ್ತಪಾತವನ್ನುಮಾತ್ರ ಇಚ್ಛಿಸುವದಿಲ್ಲ. ನಾನು ಕುಮಾರನನ್ನೇ ಇಚ್ಛಿಸುವೆನು. ಅವನು ನನಗೆ ವಶವಾಗುವಂತೆ ವರ

ವನ್ನು ಪಾಲಿಸು.'' ಎಂದು ಗದ್ಗದ ದನಿಯಿಂದ ಪ್ರಾರ್ಥಿಸಿದಳು.

''ಹೊಂದಲಾರೆ—ಅವನನ್ನು ಎಂದೂ ಹೊಂದಲಾರೆ'' ಎಂಬ ಉತ್ತರವು ವಜ್ರ-ಗಂಭೀರ ಸ್ವರದಲ್ಲಿ ಕೇಳಬಂತು. ಇದನ್ನು ಕೇಳಿ ಶಕ್ತಿಯ ಮೈಯೊಳಗಿನ ರಕ್ತವೆಲ್ಲ ಕಾದುಹೋಯಿತು. ಆಗ ಅವಳು ಅತ್ಯಂತ ಸಿಟ್ಟಿನಿಂದ—ಇದು ದೇವಿಯ ವಾಕ್ಯವಲ್ಲ; ಆದಾರು ಮಾತಾಡುವವ ನೀನು? ಎಂದು ಕೇಳಿದಳು.

ಬಳಿಕ ಅವಳು ದೇವಿಯ ಮೂರ್ತಿಯ ಹಿಂಬದಿಯಲ್ಲಿ ದಿಟ್ಟಿಸಿ ನೋಡಲು ರಕ್ತವರ್ಣವಸ್ತ್ರದಿಂದ ಪರಿವೇಷ್ಟಿತನೂ, ಜಟಾಧರನೂ ಆದ ಒಬ್ಬ ಶಾಕ್ತಸನ್ಯಾಸಿಯು ಕಂಡನು. ಅವನು ಹಣೆಗೆ ಕೆಂಪು ಚಂದನವನ್ನು ಭವ್ಯವಾಗಿ ಹಚ್ಚಿಕೊಂಡಿದ್ದನು; ಕೊರಳಲ್ಲಿ ಭೀಷಣವಾದ ರುಂಡಮಾಲೆಯನ್ನು ಧರಿಸಿದ್ದನು. ಕೆಲಹೊತ್ತಿನವರೆಗೆ ಶಕ್ತಿಯು ಅವನನ್ನು ಮಿಕಿಮಿಕಿನೋಡಿ—''ಸೀನ್ಯಾರು!'' ಎಂದು ಪುನಃ ಗಟ್ಟಿಯಾಗಿ ಒದರಿ ಕೇಳಿದಳು.

''ನಾನು ದೇವಿಯ ದಾಸನು. ದೇವಿಯ ಪ್ರೇರಣೆಯಂತೆ ದೇವವಾಣಿಯನ್ನು ನುಡಿಯುತ್ತ ನಾನು ಇಲ್ಲಿಯೇ ವಾಸಿಸುತ್ತೇನೆ. ಇಂದು ನಿನ್ನ ದೈವವು ತೆರೆಯಿತೆಂದೇ ನಾನು ಭಾವಿಸುವೆನು. ನಿನ್ನ ಮನೋಬಯಕೆಯು ಪೂರ್ಣವಾಗುವದಕ್ಕಾಗಿ ನೀನು ಕಾಳಿಯ ಉಪಾಸನೆಯನ್ನು ಮಾಡು. ದೇವಿಯ ಕೃಪೆಯಿಂದ ನೀನು ನಿನ್ನ ಹಗೆಯ ಸೇಡನ್ನು ಚೆನ್ನಾಗಿ ತೀರಿಸುವೆ; ಹಾಗು ಶ್ರೇಷ್ಠ ಪತಿಯನ್ನು ಹೊಂದುವೆ. ಆದರೆ ಕ್ಷುಲ್ಲಕನ ಹರಿಗೆ ಮಾತ್ರ ಬೀಳಬೇಡ. ಅವನಿಂದ ನೀನೆಂದೂ ಆದರ ಹೊಂದಲಾರೆ; ಅನಾದರಕ್ಕೆ ಮಾತ್ರ ನಿಶ್ಚಯವಾಗಿ ಪಾತ್ರಳಾಗುವೆ. ಅವನ ಪತ್ನಿಯಾಗುವದೊತ್ತಟ್ಟಿಗೇ ಇರಲಿ, ಉಪಪತ್ನಿಯೆಂದು ಕೂಡ ನಿನ್ನನ್ನು ಅವನು ಗ್ರಹಿಸಲಾರನು. ಈ ವಚನವು ಖಂಡಿತವೆಂದು ತಿಳಿದುಕೋ.'' ಎಂದನು.

ಇದನ್ನು ಕೇಳಿ ಶಕ್ತಿಯು ಸಾಯಂಕಾಲದಂತೆ ಪುನಃ ದೀಪ ಧ್ಯಾನವನ್ನು ಮರೆತಳು. ಆಗ ಅವಳು ಕಡುಕೋಪದಿಂದ— “ನೀನು ಸನ್ಯಾಸಿಯೋ ಪಿಶಾಚಿಯೊ!” ಎಂದು ಅನ್ನುವಷ್ಟರಲ್ಲಿ ದೇವಿಯ ಮೂರ್ತಿಯ ಹಿಂಬದಿಯಿಂದ ಮತ್ತೊಂದು ವ್ಯಕ್ತಿಯು ಕಾಣತೊಡಗಿತು. ಅದು ಕೂಡಲೆ—“ಪಾಪ, ಆ ಸನ್ಯಾಸಿಯ ಮೇಲೇಕೆ ಸಿಟ್ಟಾಗುವೆ? ಕುಮಾರ ಗಣೇಶದೇವನ ದಾಸಿಯಾಗುವದಕ್ಕಿಂತ ನನ್ನ ಪ್ರಾಣೇಶ್ವರಿಯಾಗಬಾರದೇ?” ಎಂದು ನುಡಿಯಿತು. ಈ ವ್ಯಕ್ತಿಯೇ ವಂಗೇಶ್ವರ ಸುಲ್ತಾನಪುತ್ರನಾದ ಗಾಯಸುದ್ದೀನನು.

ರಾತ್ರಿಯ ಭಯಾನಕವು ಅಡಗಿತು; ಅರುಣೋದಯದ ನಸುಗೆಂಪಿನ ಪ್ರಭೆಯು ಆ ಹಾಳುಗುಡಿಯಲ್ಲಿ ನಿಂತಿದ್ದ ಶಕ್ತಿ ಹಾಗೂ ಸುಲ್ತಾನಪುತ್ರನಾದಗಾಯಸುದ್ದೀನಇವರಮೇಲೆ ಬೆಳಗಿತು. ಸುಲ್ತಾನಪುತ್ರನು ಅಡಗಿದಸ್ಥಳದಿಂದ ಎದ್ದುಬಂದು, ಶಕ್ತಿಯ ಕೈಹಿಡಿದು— ಸುಂದರೀ, ನೀನು ವಂಗೇಶ್ವರಿಯಾಗುವೆಯೋ ಇಲ್ಲವೋ? ಹೇಳು. ನೀನು ವಶಳಾಗದಿದ್ದರೆ ನನ್ನ ರಾಜ್ಯ, ಸಂಪತ್ತು, ಅಧಿಕಾರ ಹಾಗೂ ಈ ದೇಹವೂ ಕೂಡ ವ್ಯರ್ಥವೇ ಸರಿ” ಎಂದು ನುಡಿದನು.

ಕ್ಷಣಹೊತ್ತು ಶಿಲಾಪ್ರತಿಮೆಯಂತೆ ಶಕ್ತಿಯು ಸ್ತಬ್ಧವಾದವಾಗಿ ನಿಂತುಬಿಟ್ಟಳು. ಒತ್ತಟ್ಟಿಗೆ ರಾಜ್ಯಸಂಪತ್ತುಗಳು ಪ್ರೇಮ-ಸನ್ಮಾನಗಳೂ, ಮತ್ತೊತ್ತಟ್ಟಿಗೆ ಅಖಂಡ ದಾರಿದ್ರ್ಯ ಹಾಗೂ ಅಪಮಾನ-ತಿರಸ್ಕಾರಗಳೂ; ಒಬ್ಬನು ತನಗಾಗಿ ಸರ್ವಸ್ವವನ್ನು ಅರ್ಪಿಸಿ ದಾಸನಾಗುವಂತೆಯೂ ಮತ್ತೊಬ್ಬನ ಸಲುವಾಗಿ ತನ್ನ ಜೀವಿತವನ್ನು ಕೂಡ ಅರ್ಪಿಸಿದರೂ ಅವನು ಹೊಂದಲಾರನು, ಹೊಂದುವ ಆಶೆಯೂ ಇಲ್ಲ. ಈ ಪ್ರಸಂಗದಲ್ಲಿ ತನ್ನ ಭಾಗ್ಯವನ್ನು ಹೆಚ್ಚಿಸಿಕೊಳ್ಳುವಬಗ್ಗೆ ಶಕ್ತಿಗೆ ಬಹಳ ಹೊತ್ತು ವಿಚಾರಮಾಡುತ್ತ ಕೂಡ್ರಬೇಕಾಗಲಿಲ್ಲ.

ಕೂಡಲೆ ಆವಳು ಮೃದುನುಡಿಯಿಂದ—"ಜಹಾಂಪನಾಹ, ನಾನು ನಿಮ್ಮವಳಾಗುವೆನು." ಎಂದು ಹೇಳಿದಳು. ತತ್ಕ್ಷಣದಲ್ಲಿ ಸುಲ್ತಾನಪುತ್ರನು ತನ್ನ ಕೊರಳೊಳಗಿನ ಅಮೂಲ್ಯವಾದ ರತ್ನದ ಹಾರವನ್ನು ತೆಗೆದು ಶಕ್ತಿಯ ಕಂಠದಲ್ಲಿ ಹಾಕಿದನು. ಆ ಕೂಡಲೆ ಆಕೆಯ ಮೊಗವು ಸ್ವರ್ಣವರ್ಣದ ಕಾಂತಿಯಿಂದ ಹೊಳೆಯಹತ್ತಿತು; ಮುಚ್ಚಲ್ಪಟ್ಟ ಓಷ್ಠಾಧರಗಳೂ ಕಮಲದಳಗಳಂತೆ ಕಂಪಿತವಾಗ ತೊಡಗಿದವು!!

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಅತ್ತ ಯೋಗಿನಿಯು ತನ್ನ ಆತ್ಮವೃತ್ತವನ್ನು ಹೇಳುತ್ತಲೇ ಇದ್ದಳು;"......ಪಾಪದಿಂದ ಪಾಪ ಕ್ಷಯವೂ, ಅನ್ಯಾಯದಿಂದ ನ್ಯಾಯಸಾಧನವೂ ಎಂದೂ ಆಗಲಾರವು. ಹೀಗೆ ಮಾಡುವದರಿಂದ ಪಾಪದ ಭಾರವೂ, ಅನ್ಯಾಯದ ಭಾರವೂ ಹೆಚ್ಚುತ್ತ ಮಾತ್ರ ಹೋಗುವವು. ಪುಣ್ಯದಿಂದ ಪುಣ್ಯವೂ ಪಾಪದಿಂದ ಪಾಪವೂ ಬೆಳೆಯುವವೆಂಬ ಪ್ರಾಚೀನರ ಉಕ್ತಿಯು ಸುಳ್ಳಲ್ಲ.........."

ಈ ಪ್ರಕಾರ ಯೋಗಿನಿಯು ಮನದಲ್ಲಿ ಆಲೋಚಿಸುತ್ತಿರಲು, ಆಕೆಯ ಕಿವಿಗೆ ದೂರದಿಂದ ವೇಗವಾಗಿ ಬರುತ್ತಿರುವ ಕುದುರೆಗಳ ಖುರಪುಟಗಳ ಸಪ್ಪಳವು ಕೇಳಿಸಿತು. ಇಷ್ಟರಲ್ಲಿ ಅರುಣೋದಯದ ನಸುಗೆಂಪು ಒಡೆಯಿತು. ಆಗ ಅವಳು ಮಂದಿರದ ಹೊರಕ್ಕೆ ಬಂದು ನೋಡುವಷ್ಟರಲ್ಲಿ ಒಬ್ಬ ಮುಸಲ್ಮಾನ ಸ್ವಾರನು ಆಕೆಯ ಸನ್ನಿಧಿಗೆ ಬಂದು—"ಅವ್ವನವರೇ, ತುಸ ಹೊರಗೆ ಬನ್ನಿರಿ. ಬಾದಶಹರವರ ಅಪ್ಪಣೆಯನ್ನು ಕೇಳಿಕೊಳ್ಳಿರಿ" ಎಂದನು.

ಆದರೆ ಯೋಗಿನಿಯು ಹೊರಗೆ ಬರಲಿಲ್ಲ. ಅವಳು ಬಾಗಿಲಲ್ಲೇ ನಿಂತು ಎದುರಿಗೆ ದೂರದವರೆಗೆ ನೋಡಹತ್ತಿದಳು. ಹತ್ತರದಲ್ಲಿಯೇ ಒಂದು ಆಲದ ಮರದ ಕೆಳಗೆ ಒಂದು ಸೈನ್ಯವು ಬೀಡು

ಬಿಟ್ಟಿದ್ದು, ಈಗ ಪ್ರಾತಃಕಾಲವಾದ್ದರಿಂದ ಸೈನಿಕರೆಲ್ಲರೂ ಎದ್ದು ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ ಶಿಬಿರದ ಬಳಿಯಲ್ಲಿ ಕೂಡಹತ್ತಿದ್ದರು. ಆಗ ಯೋಗಿನಿಯು ಸ್ವಾರನನ್ನು ಕುರಿತು—ಈ ಸೈನ್ಯವು ಯಾರದು? ಎಂದು ಕೇಳಿದನು.

"ತಮ್ಮ ಮಂದಿರದಲ್ಲಿ ಅತ್ಯಂತ ಲಾವಣ್ಯವತಿಯಾದ ಯುವತಿಯೊಬ್ಬಳು ಇರುವಳಷ್ಟೆ? ಅವಳೊಡನೆ ಲಗ್ನ ಮಾಡಿಕೊಳ್ಳುವದಕ್ಕಾಗಿ ಬಾದಶಹನು ಅವಳನ್ನು ಕರಕೊಂಡು ಹೋಗುವದಕ್ಕೆಂದು ತನ್ನ ದಂಡಿನೊಡನೆ ಬಂದಿರುತ್ತಾನೆ" ಎಂದು ಆ ಸ್ವಾರನು ನುಡಿದನು.

ಸದಾಶಾಂತವಾದ ಯೋಗಿನಿಯ ಮುಖಮುದ್ರೆಯು ಕೂಡ ಈ ಮಾತನ್ನು ಕೇಳಿ ತುಸ ವಿಕೃತವಾಯಿತು. ಆಗ ಅವಳು ರೋಷದಿಂದ—ಆಕೆಯು ಹಿಂದೂ ಕನ್ಯೆಯೆಂಬದು ಬಾದಶಹನಿಗೇಕೆ ತಿಳಿಯದು? ಆಕೆಯು ಕೂಡ ಅವನ ವಿವಾಹವಾಗುವದುಂಟೆ?

ಸ್ವಾರ—ಮುಸಲ್ಮಾನರಿಗೆ ಹಿಂದೂ ಕನ್ಯೆಯೊಡನೆ ವಿವಾಹ ಬೆಳೆಸಲಿಕ್ಕೆ ಬಾಧಕವಿಲ್ಲ. ಮುಸಲ್ಮಾನೀ ಧರ್ಮವು ಅತ್ಯಂತ ಉದಾರ ಧರ್ಮವು; ಜಗತ್ತಿನ ಧರ್ಮಗಳಲ್ಲಿ ಶ್ರೇಷ್ಠವಾದದ್ದು. ಯಾವನು ಈ ಧರ್ಮದಂತೆ ನಡೆಯುವನೋ ಅವನು ಜಗತ್ತನ್ನೇ ತನ್ನ ಧರ್ಮಕ್ಕೆ ಎಳೆದುಕೊಳ್ಳಲು ಶಕ್ತನಾಗುತ್ತಾನೆ. ನಾನು ಆ ಯುವತಿಯನ್ನು ಇಲ್ಲಿಂದ ಹೊರಡಿಸಿಕೊಂಡು ಹೋಗಲಿಕ್ಕೆ ನಿಮ್ಮೆಡೆಗೆ ಬಂದಿರುತ್ತೇನೆ.

ಆಗ ನಿಶ್ಚಯಾತ್ಮಕ ಸ್ವರದಿಂದ ಯೋಗಿನಿಯು—ಆಗದು, ಅದು ನಿನ್ನಿಂದಾಗದು. ಆಕೆಯ ತಂದೆಯು ಅವಳನ್ನು ನನಗೊಪ್ಪಿಸಿ ಬೇರೂರಿಗೆ ಹೋಗಿರುವದರಿಂದ, ಅವನು ಮರಳಿ ಬರುವವರೆಗೆ ನಾನು ಆಕೆಯನ್ನು ನಿಮಗೊಪ್ಪಿಸಲಾರೆನು.

ಸ್ವಾರ—ನೀವು ಈ ವಿಷಯದಲ್ಲಿ ರಾಜಾಜ್ಞೆಯನ್ನು ಭಂಗ ಮಾಡುತ್ತಿರುವಿರಿ. ರಾಜೀಖುಷಿಯಿಂದ ನೀವು ಅವಳನ್ನೊಪ್ಪಿಸದಿದ್ದರೆ, ನಾನು ಆಕೆಗಾಗಿ ಈ ಗೃಹಪ್ರವೇಶಮಾಡಬೇಕಾಗುತ್ತದೆ. ನೋಡಿಕೊಳ್ಳಿರಿ ಮುಂದಿನ ಪರಿಣಾಮವನ್ನು.

ಯೋಗಿನಿ—ಪ್ರಜೆಗಳನ್ನು ಕಾಪಾಡುವದು ರಾಜನ ಆದ್ಯಕರ್ತವ್ಯವು. ಪ್ರಜೆಗಳ ಮೇಲೆ ಜುಲುಮೆ-ಅತ್ಯಾಚಾರ ಮಾಡುವದು ರಾಜಧರ್ಮವಲ್ಲ. ನಾನು ಅವಳನ್ನು ಕೊಡುವದಿಲ್ಲ. ಹೋಗು, ಹೀಗೆಂದು ನೀನು ಸುಲ್ತಾನಶಹನಿಗೆ ಅರುಹು.

ಸ್ವಾರ—ತಾಯಿ, ಒಳ್ಳೇ ಮಾತಿನಿಂದ ನೀನು ಆ ಯುವತಿಯನ್ನೊಪ್ಪಿಸಿಬಿಡು. ಇಲ್ಲದಿದ್ದರೆ ರಾಜದ್ರೋಹಿಯೆಂದು ನಿನ್ನನ್ನೇ ಪ್ರತಿಬಂಧಿಸುವ ಪ್ರಸಂಗ ಬಂದೀತು, ಎಂದು ನುಡಿದು ಸ್ವಾರನು ಕುದುರೆಯಿಂದಿಳಿದನು. ಅದನ್ನು ಕಂಡು ಯೋಗಿನಿಯು ವಿದ್ಯುದ್ವೇಗದಿಂದ ಆ ಮಂದಿರದ ಹಿಮ್ಮಗ್ಗಲಿರುವ ಕಾಲಿಯ ಗುಡಿಗೆ ಹೊರಟಳು. ಆದರೆ ಅಲ್ಲಿ ಶಕ್ತಿಯು ಯಾವನೋ ಒಬ್ಬ ಯವನ ರಾಜಪುತ್ರನ ಕೈಯಲ್ಲಿ ಕೈಯಿಕ್ಕಿ ನಿಂತದ್ದು ಕಂಡಿತು. ಕೂಡಲೆ ಯೋಗಿನಿಯು ಪ್ರಾಹಾರಿ—ಶಕ್ತೀ, ಇದೇನು? ಎಂದು ಕೇಳಿದಳು. "ಈ ಯುವರಾಜ ಗಾಯುಸುದ್ದೀನನೇ ನನ್ನ ವಿವಾಹಿತ ಪತಿಯು" ಎಂದು ಶಕ್ತಿಯು ನುಡಿದಳು.

ಆಯಿತು, ಯೋಗಿನಿಯು ಚಿತ್ರಪಟದೊಳಗಿನ ಗೊಂಬಿಯಂತೆ ಸುಮ್ಮನೆ ನಿಂತುಬಿಟ್ಟಳು. ಸುಲ್ತಾನ ಪುತ್ರ ಗಾಯುಸುದ್ದೀನನು ಶಕ್ತಿಯನ್ನು ಕರಕೊಂಡು ಅರಣ್ಯದಲ್ಲಿ ಗುಪ್ತನಾದನು. ಯೋಗಿನಿಯು ವಿಸ್ಮಯದಿಂದ ವಿಚಾರಮಗ್ನಳಾದಳು. ಬಹಳ ಹೊತ್ತಾದರೂ ಆಕೆಯ ದೇಹವು ಲವಮಾತ್ರವಾದರೂ ಚಲಿಸಲಿಲ್ಲ. ನಿಂತಲ್ಲಿಯೇ ಆಕೆಗೆ ಸಮಾಧಿಯು ಹತ್ತಿದಂತಾಯಿತು! ಕೆಲಹೊತ್ತಿನ

ಮೇಲೆ ಯೋಗಿನಿಯನ್ನು ಬಂಧಿಸಿಕೊಂಡು ಆ ಸ್ವಾರನು ಬಾದಶಹನ ಬಳಿಗೆ ಬಂದನು. ತನ್ನ ಹಿರಿಯ ಮಗನಾದ ಗಾಯಸುದ್ದೀನನೇ ತನ್ನ ಇಚ್ಛಿತ ಪಾತ್ರವನ್ನು-ಶಕ್ತಿಮಯಿಯನ್ನು ಹರಣಮಾಡಿಕೊಂಡು ಅರಣ್ಯದಲ್ಲಿ ಗುಪ್ತನಾದನೆಂಬ ಸುದ್ದಿಯು ಬಾದಶಹನಿಗೆ ತಿಳಿಯಲು ಅವನು ಕ್ರೋಧದಿಂದ ಉರಿಯ ಹತ್ತಿದನು. ಸುಲ್ತಾನನು ತನ್ನ ಮಗನ ವಿಷಯಕ್ಕೆ ಅಂತರಂಗದಲ್ಲಿ ದ್ವೇಷವನ್ನು ತಾಳಿ, ಅವನನ್ನು ಹಿಡಿದು ಶಿಕ್ಷಿಸುವದನ್ನು ಗೊತ್ತುಪಡಿಸಿದನು. ಬಳಿಕ ಅವನು "ಗಾಯಸುದ್ದೀನನನ್ನು ಹುಡುಕಿ ಹಿಡತರಬೇಕೆ"ಂದು ಸೈನಿಕರಿಗೆ ಆಜ್ಞಾಪಿಸಿದನು. ಕೂಡಲೆ ಸೈನಿಕರು ತಂಡತಂಡಾಗಿ ಆ ಅರಣ್ಯವನ್ನೆಲ್ಲ ಸುತ್ತಹತ್ತಿದರು. ಆ ಸೈನ್ಯದ ಡಂಗುರದವರು ಆಗಾಗ್ಗೆ ಡಂಗುರ ಬಾರಿಸುತ್ತ—"ನಬಾಬ ಗಾಯಸುದ್ದೀನನು ರಾಜದ್ರೋಹಿಯಾಗಿರುವನು. ಸುಲ್ತಾನಶಹನ ಅಪ್ಪಣೆಯ ಪ್ರಕಾರ ಅವನೊಡನೆ ಯುದ್ಧವಾಗತಕ್ಕದ್ದದೆ, ದಂಡಿನಲ್ಲಿ ಸೇರಲಿಚ್ಛಿಸುವವರು ಬೇಗನೆಸೇರಿಕೊಳ್ಳಿರಿ" ಎಂದು ಸಾರುತ್ತಿದ್ದರು.

ಡಂಗುರದ ಈ ಸಪ್ಪಳವು ಅದೇ ಅರಣ್ಯದ ಒಂದು ಭಾಗದಲ್ಲಿ ತನ್ನ ಚಿಕ್ಕ ದಂಡಿನೊಡನೆ ತಳವೂರಿದ್ದ ಒಬ್ಬ ವ್ಯಕ್ತಿಗೆ ಅಸ್ಪಷ್ಟವಾಗಿ ಕೇಳಿಸಿತು. ಆಗ ಆ ವ್ಯಕ್ತಿಯು ಬಾದಶಹನ ದಂಡು ಸಾಗಿದ್ದ ಮಾರ್ಗಕ್ಕೆ ಬಂದು ಡಂಗುರದವನನ್ನು ಕುರಿತು—ಅದೇನು ಡಂಗುರ ಹೊಡೆಯುವೆ? ನಬಾಬ ಗಾಯಸುದ್ದೀನನು ಏನು ತಪ್ಪು ಮಾಡಿರುವನು? ಎಂದು ಕೇಳಿದನು.

"ನಿನ್ನೆ ಅಸ್ತ್ರೋತ್ಸವದಲ್ಲಿ ಯಾವ ಹಿಂದೂ ಲಾವಣ್ಯವತಿಯನ್ನು ಬಾದಶಹನು ಮಿಕಿ ಮಿಕಿ ನೋಡಿದ್ದನೋ ಇಂದು ಅವಳೊಡನೆ ಅವನು ವಿವಾಹ ಬೆಳಿಸಬೇಕೆಂದಿರಲು, ನಬಾಬ ಗಾಯಸುದ್ದೀನನು ಆ ರಮಣಿಯನ್ನು ತನ್ನವಳನ್ನಾಗಿ ಮಾಡಿಕೊಂಡು ರಾಜ

ದ್ರೋಹಿಯಾಗಿರುವನು'' ಎಂದು ಡಂಗುರದವನ ಉತ್ತರವನ್ನು ಕೇಳಿ ಆ ವ್ಯಕ್ತಿಯು ಪಾಷಾಣಮೂರ್ತಿಯಂತೆ ಸ್ತಂಭಿತವಾಯಿತು. ಶಕ್ತಿಮಯಿಯನ್ನು ಗಾಯಸುದ್ದೀನನು ವರಿಸಿದರೂ ಅಷ್ಟೇ, ಬಾದಶಹನು ವರಿಸಿದರೂ ಅಷ್ಟೇ; ಆ ಆಗಂತುಕ ವ್ಯಕ್ತಿಯು ೞ ಸುದ್ದಿಯಿಂದ ಇಷ್ಟೇಕೆ ಎದೆಯೊಡಕೊಳ್ಳಬೇಕು? ಆದರೆ ಸಂಬಂಧವಿಲ್ಲದೆ ಯಾರು ಯಾರ ವಿಷಯಕ್ಕೂ ಮರಗುವದಿಲ್ಲ, ಚಿಂತೆಮಾಡುವದಿಲ್ಲ. ಆದ್ದರಿಂದ ಶಕ್ತಿಯ ವಿಷಯದ ಆ ಸುದ್ದಿಯನ್ನು ಕೇಳಿ ಅತ್ಯಂತ ಅಸಮಾಧಾನತಾಳಿದ ಆ ವ್ಯಕ್ತಿಯು ಬೇರೆ ಯಾರೂ ಆಗಿರದೆ, ದಿನಾಜ ಪುರದ ರಾಜಪುತ್ರನಾದ ನಮ್ಮ ಗಣೇಶದೇವನೇ ಆಗಿದ್ದನೆಂಬದನ್ನು ವಾಚಕರು ಊಹಿಸಿರಬಹುದು. ಇರಲಿ.

ಕುಮಾರ ಗಣೇಶದೇವನು ಡಂಗುರದವನು ಸಾರಿದ ಸಂಗತಿಯನ್ನು ಕೇಳಿ ವಿಸ್ಮಿತನಾಗಿ ನಿಂತಿರಲು, ಅವನಲ್ಲಿ ಅದಕ್ಕೂ ಹೆಚ್ಚು ವಿಸ್ಮಯವುಂಟಾಗುವ ಮತ್ತೊಂದು ಪ್ರಸಂಗವು ಒದಗಿತು. ''ನನ್ನೆದುರಿಗಿರುವ ವ್ಯಕ್ತಿಯಾವದಿದು? ಮಹಾರಾಜ ಗಣೇಶದೇವನಲ್ಲವೆ? ನಿನ್ನ ಸಮುಕ್ಷಮದಲ್ಲಿ ಈ ಅವಿಚಾರವೇ? ಸ್ತ್ರೀಯರಿಗೆ ಈ ಪ್ರಕಾರದ ಅಪಮಾನವೇ? ಹೀಗೆ ಅವಹೇಲನೆಯು ನಡೆದಿದ್ದರೂ ನೀನು ಪ್ರಸ್ತರ ಮೂರ್ತಿಯಂತೆ ನಿಂತಿರುವೆಯಲ್ಲ! ಕುಮಾರ, ಥೂ ನಿನ; ನಿನ್ನ ಬಾಳಿಗೆ ಎಷ್ಟು ಛೀ ಹಾಕಿದರೂ ಕಡಿಮೆಯೇ. ನೀನೇಯೇನು ವಂಗಮಾತೆಯ ಕುಲದೀಪಕ ರಾಜಕುಮಾರನು? ಎಲೆ ಅಭಾಗಿನಿಯಾದ ಜನ್ಮಭೂಮಿಯೇ, ನಿನ್ನದೆಂಥ ದುರ್ದೆಸೆಯಿದು? '' ಎಂಬ ಉದ್ಗಾರಗಳು ಬಹು ಕರುಣಾಯುಕ್ತ ಧ್ವನಿಯಿಂದ ಕುಮಾರನಿಗೆ ಕೇಳಿಸಿದವು. ಕುಮಾರನು ಅತ್ತ ಕಡೆಗೆ ಹೊರಳಿ ನೋಡಲು, ಸಮೀಪದಲ್ಲಿಯೇ ಒಬ್ಬ ತೇಜಃಪುಂಜಳಾದ ಯೋಗಿನಿಯು ಆ ಸೈನಿಕರ ಪ್ರತಿಬಂಧದಲ್ಲಿದ್ದದ್ದು ಕಂಡಿತು. ಕೂಡಲೆ ಅವನು ಸೈನಿಕರಿಗೆ—''ಇದೇನು? ಈಕೆಯನ್ನು ಪ್ರತಿಬಂಧಿಸಿರುವದೇಕೆ?'' ಎಂದು ವಿಸ್ಮಯಾಶ್ಚರ್ಯದಿಂದಕೇಳಿದನು.

ಸೈನಿಕರು ಬಾದಶಹನ ಹುಕುಮನ್ನೂ, ಯೋಗಿನಿಯ ವರ್ತನವನ್ನೂ, ಸಾದ್ಯಂತವಾಗಿ ಕುಮಾರನಿಗೆ ತಿಳಿಸಿ—ಮೆಹರಬಾನ, ಬಾದಶಹರವರ ಅಪ್ಪಣೆಯ ಮೇರೆಗೆ ನಾವು ಇವಳನ್ನು ಬಂಧಿಸಿಕೊಂಡು ನಡೆದಿದ್ದೇವೆ, ಎಂದರು. ಆಗ ಯೋಗಿನಿಯು ನಡುವೆಬಾಯಿ ಹಾಕಿ-ಒಬ್ಬರು ಕಳವು ಮಾಡಬೇಕು. ಇನ್ನೊಬ್ಬರಿಗೆ ಗಲ್ಲು ವಿಧಿಸಬೇಕು. ಇದೇ ಅಲ್ಲವೇ ನಿಮ್ಮ ಸುವಿಚಾರದ ನ್ಯಾಯವು? ಎಂದಳು.

ಯೋಗಿನಿಯನ್ನು ನಿಷ್ಕಾರಣವಾಗಿ ಬಂಧಿಸಿದ್ದನ್ನು ನೋಡಿ ಸಹಿಸಲಾರದ ಆ ವೀರ ಧೀರನಾದ ಕುಮಾರನು, ತನ್ನ ಟೊಂಕದ ಖಡ್ಗವನ್ನು ಬಿಚ್ಚಿ ಕೈಯಲ್ಲಿ ಹಿಡಿದು ವೇಗದಿಂದ ಝಳಪಿಸುತ್ತ ಸೈನಿಕರನ್ನು ಬದಿಗೆಮಾಡುತ್ತ ಯೋಗಿನಿಯ ತೀರ ಸನಿಯಕ್ಕೆ ಹೋಗಹತ್ತಿದನು. ಈ ಕೃತಿಯಿಂದ ಸೈನಿಕರಿಗೆ ಅವನ ಉದ್ದೇಶವು ತಿಳಿಯಲು, ಅವರು ಕುಮಾರನನ್ನು ಕುರಿತು ದೈನವಾಣಿಯಿಂದ—ಧರ್ಮರಾಜ ಮಹಾರಾಜ, ಈಕೆಯನ್ನು ಹೀಗೆ ಬಿಡಿಸಿಕೊಂಡು ಹೋಗಿ ನೀವು "ಶರಣಾಗತ ರಕ್ಷಕ"ರಾಗಿ ಧರ್ಮಕಾರ್ಯ್ಯಂತಾಗುವದು ಸತ್ಯವು; ಆದರೆ ಹೀಗೆ ಮಾಡುವದರಿಂದ ಬಡಪ್ರಾಣಿಗಳಾದ ನಮ್ಮ ಮೇಲೆ ಮಾತ್ರ ನೀವು ಭಯಂಕರ ಸಂಕಟವನ್ನು ತರುವಿರಿ. ಈಕೆಯನ್ನು ಬಿಟ್ಟುಕೊಟ್ಟರೆ ಫೌಜದಾರ ಸಾಹೇಬರು ನಮ್ಮ ಮೇಲೆ ವಿಷಕಾರುವರು" ಎಂದು ನುಡಿಯುತ್ತ ಕುಮಾರನ ಕೈಯ ಹದನಾದ ಶುಭ್ರ ಖಡ್ಗದ ಪೆಟ್ಟುಗಳು ತಾಕದಂತೆ ಹಿಂದೆ ಹಿಂದೆ ಸರಿಯಹತ್ತಿದರು. ಹೀಗೆ ಸೈನಿಕರೆಲ್ಲರೂ ಸನ್ಯಾಸಿನಿಯಿಂದ ದೂರ ಸರಿದು ನಿಂತರು. ಆಗ ಕುಮಾರನು ಅವಳ ಬಳಿಗೆ ಹೋಗಿ ಅವಳ ರಟ್ಟೆಗೆ ಹಚ್ಚಿರುವ ಹಗ್ಗಗಳನ್ನು ತುಂಡರಿಸಿ ಅವಳನ್ನು ಬಂಧಮುಕ್ತವಾಗಿ ಮಾಡಿ ನುಡಿದನೇನಂದರೆ;—ದಂಡಾಳುಗಳೇ ನನ್ನ ಈಕೃತ್ಯಕ್ಕಾಗಿ ನೀವು ಅಂಜುವ ಕಾರಣವಿಲ್ಲ; ಈ ವಿಷಯದಲ್ಲಿ ನಿಮ್ಮದೇನೂ ತಪ್ಪಿಲ್ಲೆಂದು ನಾನು ಸೇನಾಪತಿಗೆ ತಿಳಿಸುವೆನು.

ಆದರೂ ಸೇನಾಪತಿಯು ನಿಮಗೆ ದಂಡಿಸಬಂದರೆ ನೀವು ಅವನ ದಂಡಿನೊಳಗಿನ ಚಾಕರಿಯನ್ನು ಬಿಟ್ಟು ನನ್ನ ಬಳಿಗೆ ಬರ್ರಿ. ನನ್ನಲ್ಲಿ ನಿಮ್ಮನ್ನು ಚಾಕರಿಗೆ ಇಟ್ಟುಕೊಳ್ಳುವೆನು. ಈಗ ಸೇನಾಪತಿಯು ಎಲ್ಲಿರುವನು? ನಿಮಗೆ ಗೊತ್ತುಂಟೋ?

ಸೈನಿಕರು—ನಮಗೆ ಈಕೆಯನ್ನು ಹಿಡಕೊಂಡು ಹೋಗಲು, ಅಪ್ಪಣೆಕೊಟ್ಟು ಸೇನಾಪತಿಯು ಮನೆಗೆ ಹೋದಂತೆ ಕಾಣುತ್ತದೆ.

ಬಳಿಕ ಕುಮಾರನು ಯೋಗಿನಿಯನ್ನು ಕರಕೊಂಡು ಕೆಲದಾರೀ ಕ್ರಮಿಸಿದನು. ಆಗ ಅವನು ಯೋಗಿನಿಗೆ—ತಾಯಿ, ನಡೆಯಿರಿನ್ನು ನಿಮ್ಮ ಸ್ಥಾನಕ್ಕೆ ಹೋಗಿ ಸ್ವಸ್ಥವಾಗಿರ್ರಿ, ಎಂದು ಹೇಳಿ ತಾನು ತನ್ನ ಬಿಡಾರಕ್ಕೆ ಹೊರಟನು. ಅವನು ತನ್ನ ದಿವಾಣಖಾನೆಯನ್ನು ಹೊಕ್ಕು ನೋಡುತ್ತಾನೆ, ಅಲ್ಲಿ ಬಾದಶಹನ ಸೇನಾಪತಿಯಾದ ಅಜೀಮಖಾನನು ಬಂದು ಕುಳಿತಿದ್ದನು. ಸೇನಾಪತಿಯು ಕುಮಾರನಿಗೆ ಬಗ್ಗಿ ಮೂರು ಮೂರು ಸಾರೆ ಮುಜುರೆ ಮಾಡಿದನು. ಕುಶಲ ವಾರ್ತೆಗಳಾದ ಬಳಿಕ ಕುಮಾರನು—ಯಾಕೆ ಸೇನಾಪತಿಗಳೇ ಇತ್ತ ಯಾವ ಕಡೆಗೆ ಬಂದಿದ್ದಿರಿ? ಎಂದು ಕೇಳಿದನು.

ಸೇನಾಪತಿಯಾದ ಅಜೀಮಖಾನ,—ಮಹಾರಾಜರೇ, ಬಾದಶಹರವರ ಅಪ್ಪಣೆಯ ಮೇರೆಗೆ ತಮ್ಮೆಡೆಗೆ ಬಹು ಅವಸರದ ಕೆಲಸಕ್ಕಾಗಿ ಬಂದಿದ್ದೆನು; ಆದರೆ ಮಹಾರಾಜರು ಮನೆಯಲ್ಲಿರದ್ದರಿಂದ ಈ ವರೆಗೆ ದಾರೀಕಾಯುತ್ತ ಇಲ್ಲಿಯೇ ನಿಂತಿರಬೇಕಾಯಿತು. ಮಹಾರಾಜರು ಇಂಥ ನಸಕಿನಲ್ಲಿ ಅದಾವ ಕಡೆಗೆ ಹೊರಟಿದ್ದರು?

ಕುಮಾರ—ನಾನು ಸಹಜವಾಗಿ ಮಂದಿರದ ಹೊರಗೆ ಬಂದಿರಲು ನಿಮ್ಮ ಸೈನಿಕರ ಡಂಗುರವು ಕೇಳಿಸಿತು. ಆಗ ಅದೇನೆಂದು ದಂಡಿನ ಸಮೀಪಕ್ಕೆ ಹೋಗಿ ಕೇಳುತ್ತಿರಲು, ನವಾಬ ಗಾಯಸುದ್ದೀನನು ರಾಜದ್ರೋಹಿಯೆಂದು ತಿಳಿದುದಲ್ಲದೆ, ಪ್ರತಿಬಂಧಿಸಲ್ಪಟ್ಟ ಒಬ್ಬ

ಸನ್ಯಾಸಿನಿಯು ಕಣ್ಣಿಗೆ ಬಿದ್ದಳು. ಕೂಡಲೆ ಸೈನಿಕರಿಗೆ ಹೇಳಿ, ಅವರು ಬಿಡುವದಿಲ್ಲೆಂದರೂ ನಿಮ್ಮ ಸೇನಾಪತಿಗಳ ಮುಂದೆ ಹೇಳುವೆನೆಂದು ತಿಳಿಸಿ ಸನ್ಯಾಸಿನಿಯನ್ನು ಬಂಧವಿಮೋಚನ ಮಾಡಿದೆನು. ಅದರಿಂದ ತಿರುಗಿ ಬರಲಿಕ್ಕೆ ಸ್ವಲ್ಪ ತಡವಾಯಿತು.

ಅಜೀಮ—ತೋಬಾ, ತೋಬಾ, ಕುಮಾರ ನೀನು ಇದೇನು ಮಾಡಿ ಬಂದೆ? ನಬಾಬಗಾಯಸುದ್ದೀನನ ಪಾರುಪತ್ಯ ಮಾಡಲುಪಕ್ರಮಿಸಿದ ಬಾದಶಹನು, ನಿನ್ನನ್ನು ತನ್ನ ಸಹಾಯಕ್ಕೆ ಬರಮಾಡಿಕೊಳ್ಳಲಿಕ್ಕೆಂದು ನನ್ನನ್ನು ನಿನ್ನ ಬಳಿಗೆ ಕಳಿಸಿದ್ದನು. ಆದರೆ ಆ ರಾಜದ್ರೋಹಿಯಾದ ಸನ್ಯಾಸಿನಿಯನ್ನು ರಾಜಾಜ್ಞೆಯವಿನಃ ಬಂಧಮುಕ್ತಮಾಡಿ ನೀನೂ ರಾ ಜಾ ಪ ರಾ ಧ ಕ್ಕಾ ಗಿ ಗುರಿಯಾದೆಯಲ್ಲ? ಕುಮಾರ, ವಿಚಾರಮಾಡು; ಈ ಪ್ರಸಂಗದಲ್ಲಿ ನೀನು ಬಾದಶಹನಿಗೆ ಮನಮುಟ್ಟಿ ಸಹಾಯ ಮಾಡಿದರೆ ನೀನು ಬೇಗನೆ ಘನತೆಗೇರುವೆ? ಆದರೆ ಈಗಿನ ನಿನ್ನ ಈ ಕೃತಿಯಿಂದ ನಿನಗೆ ಯಾವ ಪ್ರಯೋಜನವೂ ಆಗದೆ, ಕೇವಲ ರಾಜದ್ರೋಹಿಯಾಗಿ ರಾಜಶಾಸನಕ್ಕೆ ಮಾತ್ರ ಗುರಿಯಾಗುವದು ಖಂಡಿತ. ಆದ್ದರಿಂದ ಕುಮಾರ ನೀನು ಈಗಿಂದೀಗಲೆ ಆ ಸನ್ಯಾಸಿನಿಯನ್ನು ಪುನಃ ನಮ್ಮ ದಂಡಾಳುಗಳ ವಶಕ್ಕೆ ಕೊಟ್ಟು ನಿನ್ನ ದಂಡಿನೊಡನೆ ಬಾದಶಹನ ಸಹಾಯಕ್ಕೆ ಬಾ.

ಕುಮಾರ—ಸೇನಾಪತಿ, ಅದಾಗದು; ಕಾಲತ್ರಯದಲ್ಲಿಯೂ ಆ ಸಂಗತಿಯು ನನ್ನಿಂದಾಗದು. "ಶರಣಾಗತ ರಕ್ಷಕ" ಧರ್ಮವು ನಮ್ಮ ಹಿಂದೂ ರಾಜರ ಮುಖ್ಯಧರ್ಮವಾಗಿದ್ದು, ಅದಕ್ಕಾಗಿ ಪ್ರಸಂಗಬಿದ್ದರೆ ನಾವು ನಮ್ಮ ರಾಜ್ಯ ಹಾಗು ಪ್ರಾಣಗಳನ್ನು ಕೂಡ ಕಳಕೊಳ್ಳಲಿಕ್ಕೆ ಹಿಂದುಮುಂದು ನೋಡಲಾರೆವು. ಮೇಲಾಗಿ ಆಸನ್ಯಾಸಿನಿಯು ಕೇವಲ ನಿರಪರಾಧಿಯಾದ್ದರಿಂದ ಆಕೆಯ ವಿಷಯದಲ್ಲಂತೂ ನಿಮ್ಮ ಆಲೋಚನೆಯನ್ನು ನಾನು ಎಂದೂ ಮನ್ನಿಸಲಾರೆನು.

ಕೂಡಲೆ ಅಬೀಮುಖಾನನು ಅಲ್ಲಿಂದೆದ್ದು ಹೊರಟನು. ಅವನು ಹೋಗ ಹೋಗುತ್ತ—ಕುಮಾರ, ಎಚ್ಚರ; ಬಹು ಎಚ್ಚರ. ರಾಜದ್ರೋಹಿಯಾದ ನಿನ್ನ ರಾಜ್ಯವು ನಾಳೆಯೋ ಮಣ್ಣುಪಾಲಾಗುವದೆಂಬದನ್ನು ನಿನಗೆ ಗೊತ್ತುಮಾಡಿಕೋ ಎಂದು ಹೇಳಿ, ಬಿರಿಬಿರಿ ಬಾದಶಹನ ಶಿಬಿರದ ಕಡೆಗೆ ನಡೆದನು. ಕುಮಾರನು ಅವನನ್ನು ಕಳಿಸಲಿಕ್ಕೆಂದು ತನ್ನ ದಿವಾನಖಾನೆಯ ಹೊರಗೆ ಬರಲು, ಎದುರಿಗಿನ ಒಂದು ಮರದ ಕೆಳಗೆ ತಾನು ಕೆಲವು ಹೊತ್ತಿನ ಪೂರ್ವದಲ್ಲಿ ಬಂಧಮುಕ್ತಮಾಡಿಸಿದ ಸನ್ಯಾಸಿನಿಯು ನಿಂತದ್ದನ್ನು ಕಂಡನು. ಅತ್ತ ಅಬೀಮುಖಾನನು ಮರೆಯಾಗಲು: ಸನ್ಯಾಸಿನಿಯು ಇತ್ತ ಕುಮಾರನ ಬಳಿಗೆ ಬಂದು—ಕುಮಾರ, ನನ್ನ ಕಿವಿಗೆ ಬಿದ್ದ ಕೆಲವು ಸಂಗತಿಗಳ ಮೇಲಿಂದ ನಾನು ಈಗ ನಿನಗೆ ಸೂಚಿಸುವದೇನಂದರೆ, ವಿಷಯಲೋಲುಪನಾದ ವೃದ್ಧ ಸುಲ್ತಾನಶಹನು ಹೆಣ್ಣಿನಾಶೆಗಾಗಿ ಸ್ವಂತದ ಮಗನ ವಿರುದ್ಧವಾಗಿ ಯುದ್ಧ ಮಾಡಿರುವನಷ್ಟೇ. ಶಕ್ತಿಮಯಿಯು ಆ ತಂದೆ-ಮಗನಿಗಿಂತಲೂ ನಿನಗೆ ಹೆಚ್ಚು ಪ್ರಿಯಕರಳಾಗಿರುವಳೆಂಬದನ್ನು ಸುಲ್ತಾನನು ಚನ್ನಾಗಿ ಬಲ್ಲನು. ಇದಕ್ಕಾಗಿ ಅವನು ನಿನ್ನನ್ನು ದ್ವೇಷಿಸ ಹತ್ತಬಹುದು. ಅಲ್ಲದೆ ನೀನು ಆಕಸ್ಮಾತ್ತಾಗಿ ಬಾದಶಹನ ಅಪ್ಪಣೆಯ ವಿರುದ್ಧವಾಗಿ ನನ್ನನ್ನು ಬಂಧಮುಕ್ತ ಮಾಡಿದ್ದರಿಂದಲೂ ಆ ಮುದುಕನು ನಿನ್ನಲ್ಲಿ ಇಲ್ಲದ ಸಂಶಯವನ್ನು ತಾಳಿ ನಿನ್ನೊಡನೆಯೂ ಕಾಳಗವೆಸಗಬಹುದಾಗಿದೆ. ಆದ್ದರಿಂದ ಕುಮಾರ, ನೀನು ತತ್‌ಕ್ಷಣವೇ ನಿನ್ನ ಶಿಬಿರವನ್ನು ಇಲ್ಲಿಂದ ಕಿತ್ತೊಯ್ದು ಬೇರೆ ಸುರಕ್ಷಿತಸ್ಥಳದಲ್ಲಿ ಸ್ಥಾಪಿಸಿಕೋ; ಹಾಗು ಯಾವ ಕಾಲಕ್ಕೆ ಬಾದಶಹನು ನಿನ್ನನ್ನು ರಾಜದ್ರೋಹಿಯೆಂದು ಕೂಗಿಸುವನೆಂಬದು ನಿಶ್ಚಿತವಿಲ್ಲದ್ದರಿಂದ ಪ್ರಸಂಗ ಬಂದರೆ ಅವನೊಡನೆ ಕಾದಲಿಕ್ಕೆ ನೀನು ಈಗಿನಿಂದಲೇ ಯುದ್ಧಸನ್ನಾಹವನ್ನು ಮಾಡಿಕೋ ಎಂದು ಹೇಳಿದಳು.

ಸನ್ಯಾಸಿನಿಯು ಈ ಅನುಮಾನವೇ ನಿಜವಾಯಿತೆಂಬದು ವಾಚಕರಿಗೆ ಮುಂದೆ ತಿಳಿಯಬಹುದು.

ಎಂಟನೆಯ ಪ್ರಕರಣ.

ವಿರಹತಾಪ.

ವಸಂತಕಾಲದ ಆಬ್ಬರವು ಮುಗಿದು ವರ್ಷಾ ಕಾಲವು ತಲೆ ಹಾಕಹತ್ತಿದೆ. ಸಾಯಂಕಾಲದ ಸಮಯವು; ಹಸರು ಚಿಗುರುಗಳಿಂದ ಸುಶೋಭಿತವಾದ ಕಾನನದಲ್ಲಿ ಪ್ರಫುಲ್ಲ ಮುಖಿಯರಾದ ರಮಣಿಯರು ಆನಂದದಿಂದ ವಿಹಾರ ಮಾಡುತ್ತಲಿದ್ದಾರೆ; ಸೂಜಿ ಮಲ್ಲಿಗೆ, ಚಂಪಕ, ಸುರಿಗೆ ಮೊದಲಾದ ಸುಗಂಧಪೂರಿತ ಹೂಗಳ ಮಾಲೆಗಳನ್ನು ಕಟ್ಟುವದರಲ್ಲಿ ಅವರು ತಲ್ಲೀನರಾಗಿದ್ದಾರೆ. ರಂಗಿಣಿಯ ಕಂಠವು ಬಹು ಇಂಪಾದ್ದರಿಂದಲೂ, ಆಕೆಯು ಗೀತಗಳನ್ನು ಬಹು ಸರಸವಾಗಿ ಅನ್ನುತ್ತಿದ್ದದರಿಂದಲೂ ಗೆಳತಿಯರೆಲ್ಲರೂ ಆಕೆಗೆ ಒಂದು ಹಾಡನ್ನು ಅನ್ನಲಿಕ್ಕೆ ಆಗ್ರಹದಿಂದ ಹೇಳುತ್ತಿದ್ದಾರೆ, ಆದರೂ ರಂಗಿಣಿಯು ಅವರ ಮಾತಿನ ಕಡೆಗೆ ತನ್ನ ಲಕ್ಷ್ಯವಿಲ್ಲದಂತೆ ನಟಿಸುತ್ತ ತನ್ನ ಮಾಲೆಯನ್ನು ಒತ್ತರದಿಂದ ಕಟ್ಟುತ್ತಿದ್ದಳು. ಆಗ ಕುಸುಮಾವತಿಯು ಅವಳನ್ನು ಕುರಿತು—

ಕುಸುಮ—ರಂಗಿಣೀ, ನಿನ್ನ ಕಿವಿಗಳು ಕೇಳುವದಿಲ್ಲೇನು?

ಗೆಳತಿಯರಲ್ಲಿ ಇನ್ನೊಬ್ಬಳು-ಕಾಮಿನಿಯು;—ಅದೇಕೆ? ವೃದ್ಧಪತಿಯನ್ನು ವರಿಸಿದಂದಿನಿಂದ ನಮ್ಮ ರಂಗೂ ತಾಯಿಯ ಕಿವಿಗಳಾದರೂ ಗಂಡನಂತೆಯೇ ತುಸ ಮಂದ ಆಗಿರಬಹುದೇನು?

ಮತ್ತೊಬ್ಬಳು-ಕಮಲಿನಿಯು—ಹಾಗಲ್ಲರೇ ತಾಯಿ, ರಂಗಿ

ಣಿಯ ಕಿವಿಗಳು ಚೆನ್ನಾಗಿ ಕೇಳುತ್ತವೆ. ಆದರೆ ಆ ಮುದುಕ ಗಂಡನ ಸಹವಾಸದಿಂದ ಅವಳಲ್ಲಿ ಎಡ್ಡತನವು ಮಾತ್ರ ಪೂರಾ ಮೈಯುಂಡು ಹೋಗಿದೆ. ಸಂಸಾರದಲ್ಲಿ ಎರಡನೇ-ಮೂರನೇ ಹೆಂಡಿರೇ ತಮ್ಮ ಗಂಡಂದಿರ ಮಾತು ಕೇಳುವದರಲ್ಲಿ ಎಡ್ಡರಾಗಿ ಮೈಯ್ಯುಳಿಸಿ ಕೊಳ್ಳುತ್ತಿರಲು, ನಮ್ಮ ರಂಗಿಣೀ ಬಾಯಿಯಂತೂ ಐದನೆಯ ಹೆಂಡತಿಯಾಗಿರುವದರಿಂದ ಈಕೆಯು ಇಷ್ಟು ಎಡ್ಡಳಾಗುವದೇ ನಾಶ್ಚರ್ಯವು?

ಕುಸುಮ—ಕಮಲಿನೀ, ನಮ್ಮ ರಂಗೂಬಾಯಿಯು ಹಾಗೇನೂ ಇಲ್ಲ; ಆದರೆ ಆಕೆಯ ಪತಿಯು ರಾಜಾಶ್ರಯದಲ್ಲಿ ಪ್ರಸಿದ್ಧ ಗಾಯಕನಿರುವದರಿಂದ ಅವನು ಕಂಡ ಕಂಡಲ್ಲಿ ಹಾಡುವನೇ? ಅದರಂತೆ ಅವನ ಹೆಂಡತಿಯಾದ ನಮ್ಮ ರಂಗಿಣೀಬಾಯಿಯಾದರೂ ರಾಜ್ಞಿಯ ಪ್ರಿಯ ಸಖಿಯಾದ ಗಾಯಿಕೆಯಾದ್ದರಿಂದ ನೀವು ಹಾಡು ಹಾಡಂದಲ್ಲಿ ಅವಳು ಹಾಡುವಳೇ?

ಕಾಮಿನಿ—ಹಾಗಲ್ಲ, ಸಖಿಯರೇ ಹಾಗಲ್ಲ. ರಂಗಿಣೀಬಾಯಿಯ ವೃದ್ಧ ಪತಿಯು ರಾಜಾಜ್ಞೆಯಂತೆ ನಡೆಯುವದರಲ್ಲಿ ತತ್ಪರನಾಗಿರುವಂತೆ, ನಮ್ಮ ತರುಣ ರಂಗಿಣೀಬಾಯಿಯಾದರೂ ರಾಜ್ಞಿಯ ಆಜ್ಞೆಯಂತೆ ತಪ್ಪದೇ ನಡೆಯುವಳು. ಆದ್ದರಿಂದ ನೀವು ಆಕೆಯಿಂದ ಗೀತವನ್ನನಿಸಿಕೊಳ್ಳಬೇಕಾದರೆ ನಿರೂಪಮಾ ರಾಣಿಗೆ ವಿನಂತಿ ಮಾಡಿಕೊಳ್ಳಿರಿ. ಅಂದರೆ ಅಕ್ಕಸಾಲಿಗನು ಮುರುವು ಚುಚ್ಚಿದಂತಾಗುವದು.

ಬಳಿಕ ಆ ಎಲ್ಲ ಗೆಳತಿಯರು ಅಲ್ಲಿಯೇ ಒತ್ತಟ್ಟಿಗೆ ಹೂಮಾಲೆಯನ್ನು ಕಟ್ಟುತ್ತ ಕುಳಿತಿದ್ದ ನಿರೂಪಮೆಗೆ ತಮ್ಮ ಆಶಯವನ್ನು ತಿಳಿಸಿದರು. ಕೂಡಲೆ ನಿರೂಪಮೆಯು ರಂಗಿಣಿಗೆ ಕಣ್ಣಾಸನ್ನೆಮಾಡಿ ಹಾಡಹೇಳಲು ಸೂಚಿದಳು.

ಆಗ ರಂಗಿಣಿಯು ತನ್ನ ಸಾರಂಗಿಯನ್ನು ಬಾರಿಸುತ್ತ ಹಾಡತೊಡಗಿದಳು.

(ಸಾಕಿ ಧಾಟಿ.)

ಗೆಳತೀ ನವ ಶ್ರಾವಣ ಮಾಸ |
ಹೊಳೆಯುವ ಮಿಂಚೂ ಗುಡುಗಿನ ಭಾಸ ||ಪಲ್ಲ||
ಹಗಲೂ ರಾತ್ರಿಯೊಂದೇ ಸವನೆ |
ಮೇಘದಿ ಮಳೆ ಬಹು ಸುರಿವುದು ತಾನೇ ||೧||
ತೀರ ಸಣ್ಣ ಮಳೆಯಾಗುವದರಿಂದ |
ತೋರುವದೈ ಮನೋಹರ ಸುನಾದ ||೨||
ಮಿಂಚಿನ ಬೆಳಕಿಂ ತುಂತುರಹನಿಗಳು |
ಸಂಚಿತ ನಿರ್ಮಿತ ಬೆಳ್ಳಿಯ ಗೊಲ್ಲಿಗಳು ||೩||
ನೋಡಿದೊಡೆಲ್ಲಿಯೂ ಬೆಳ್ಳಿಯ ಹೊಗೆಯಿಂ |
ಕೂಡಿರುವದು ಈ ಗಾಳಿಯು ಮಳೆಯಿಂ ||೪||
ಮಳೆಯಿಂ ಸರಸಿಯು ನೀರೇರುವದರಿಂ |
ಎಲೆಗಳು ಹರಸರ ದನಿಗೆಯ್ಯುವವು ||೫||
ಅತಿಯಾದೀ ಮಳೆನೀರನು ಧರಿಸಲು |
ಗತಿಗಾಣೆನು ತಾ ಕೊಳವೆಂದೆನ್ನಲು ||೬||
ಈ ಪರಿ ಚಳಿಮಳೆ ಬೀಳಲೇಕಾಂತದಿ |
ಪ್ರಿಯರಸ್ನೇಹಸ್ವಪ್ನಾಲಿಂಗನ ಭರದೀ ||೭||
ಇಂತೀ ಕಾಲದಿ ವಿರಹದಿ ನಾನಿದೆ |
ಚಿಂತೆಯೊಳೀಸಿಕೆ ಪೋಯಿತು ತೋರೇ ||೮||
ಕನಸಿನೊಳಿನಿಯರ ಸಂಘಟ್ಟನದೊ |
ಮನಸಿಗೆ ತಾಂ ಪರಮೋಲ್ಲಾಸಾದುದು ||೯||
ಅನಿತರೊಳಂಬರ ಪಟ್ ಖಡಲೆನ್ನುವ |
ದನಿ ಬರಲೆದೆ ಬಹು ನಡುಗಿತು ಶಿವ ಶಿವ ||೧೦||
ದಿಟ್ಟಿಸಿ ನೋಡಲು ತೋರಲು ಕಣ್ಣಿಗೆ |
ಕಟ್ಟಿನು ಹಾ ಹಾ ಪರಸ್ವಪ್ನದೊಳಗೆ ||೧೧||

ರಂಗಿಣಿಯ ಇಂಪಾದ ಈ ಗಾನವನ್ನು ಕೇಳಿ ಗೆಳತಿಯರೆಲ್ಲರೂ ಮೋದಗೊಂಡರು. ಅವರಲ್ಲಿಯ ಕೆಲವರು ರಂಗಿಣೀ ದೇವಿಯ ಕಂಠವು ಬಹು ಸರಸಾಗಿರುವದೆಂದರು, ಕೆಲವರು ಈಕೆಯು ಸಾರಂಗಿಯನ್ನು ಉತ್ಕೃಷ್ಟವಾಗಿ ಬಾರಿಸುತ್ತಾಳೆಂದರು. ಬೇರೆ ಕೆಲವರು ಅವಳು ಅಂದ ಪದ್ಯವನ್ನು "ಗೆಳತೀ ನವ ಶ್ರಾವಣ ಮಾಸ," ಎಂದು ಗುಣು ಗುಣು ಅನ್ನುತ್ತ ತಮ್ಮ ಮನಸ್ಸನ್ನು ರಮಿಸತೊಡಗಿದರು. ಅವರಲ್ಲಿಯೇ ಕೆಲವರು ನಾಗರಿಕತೆಗೆ ಮೂಗು ಮುರಿಯುವವರು ರಂಗಿಣಿಯ ಈ ದಿಟ್ಟತನಕ್ಕೂ, ಗಾನಕ್ಕೂ ಹೆಸರಿಟ್ಟು ಗೌಪ್ಯವಾಗಿ ಆಡಿಕೊಳ್ಳುಹತ್ತಿದ್ದರು. ಆದರೂ ಆ ಕೂಡಿದ ಯುವತಿಯರೆಲ್ಲರ ಮುಖಗಳು ಒಳ್ಳೇ ಆನಂದ ಪ್ರಭೆಯಿಂದ ತುಂಬಿತುಳುಕುತ್ತಿದ್ದವು; ಆ ಆನಂದಯುಕ್ತ ತರುಣಿಯರ ಸಹವಾಸದಿಂದ ಆ ಇಡಿ ಕಾನನವೇ ನಸುನಗುವಂತೆ ಭಾಸವಾಗುತ್ತಿತ್ತು!

ಈ ಪ್ರಕಾರ ಆ ಸ್ತ್ರೀಯರು ಮೋದದಿಂದ ಆ ನದೀ ತೀರದ ಅರಣ್ಯದಲ್ಲಿ ಕಾಲಹರಣ ಮಾಡುತ್ತಿರಲು, ಆ ಸ್ತ್ರೀಯರಲ್ಲಿ ಹೊಸದೊಂದು ಸುದ್ದಿಯು ಹೊರಟಿತು. "ಮೂರು ಮಂದಿ ಹೆಂಗಸರು ಕೂಡಿದಲ್ಲಿ ಮೂರು ಜಗತ್ತೇ ತಿರುವಿ ಬೀಳುವ" ವೆಂಬ ಮಾನ್ಯೋಕ್ತಿಯಂತೆ ಅವರ ಭಾಷಣದಲ್ಲಿ ಆ ಸುದ್ದಿ ಈ ಸುದ್ದಿಗಳು ಹೊರಟು ಕಡೆಗೆ ಶಕ್ತಿಯು ಗ್ರಾಮಸುದ್ದೀನನ ದಂಪತಿಯಾಗಲಿಕ್ಕೆ ಒಪ್ಪಿದ ವಾರ್ತೆಯೂ ಹೊರಬಿದ್ದಿತು. ಆಗ ಹೆಂಗಳೆಯರಲ್ಲಿ ಆ ವಿಷಯದ ಚರ್ಚೆಯು ವಿಶೇಷವಾಗಿ ನಡೆಯಿತು. ಅವರಲ್ಲಿ ಕೆಲವರು ಶಕ್ತಿಯನ್ನು ಮನದಣಿಯಾಗಿ ಹಳಿದರು; ಬೇರೆ ಕೆಲವರು ರಾಜಪುತ್ರ ಗಣೇಶ ದೇವನಿಗೂ, ಅವನ ತಾಯಿಗೂ ಹೆಸರಿಟ್ಟರು.

ಹೀಗೆ ಆ ನಿತಂಬಿನಿಯರು ಹಸನ್ಮುಖರಾಗಿ ಏನೇನೋ ಮಾತಾಡುತ್ತಿದ್ದರು ಇದು ಆ ಅರಣ್ಯದ ಮತ್ತೊಂದು ಕಥೆಯ ಪೂರ್ವವಾ

ಟಿಕೆಯಲ್ಲಿ ವಿಶ್ರಮಿಸಿದ್ದ ಕುಮಾರಗಣೇಶದೇವನಿಗೆ ಅಸ್ಪಷ್ಟವಾಗಿ ಕೇಳಬರುತ್ತಿತ್ತು. ಶಕ್ತಿಯ ಬಗ್ಗೆ ಇವರು ಏನೇನೋ ಆಡಿಕೊಳ್ಳು ತ್ತಿರುವರೆಂಬದು ಅವನಿಗೆ ತಿಳಿಯಿತು. ಆಗ ಅವನು ಶಕ್ತಿಮಯಿಯ ಹಾಗು ತನ್ನ ಪೂರ್ವ ವಯಸ್ಸಿನೊಳಗಿನ ಆಟನೋಟಗಳನ್ನು ಮನ ನಸ್ಸಿನಲ್ಲಿ ತಂದು ಶಕ್ತಿಯ ಅಖಂಡ ಪ್ರೇಮದ ಬಗ್ಗೆ ಯೋಚಿಸುತ್ತಿ ರಲು ಎಷ್ಟೋ ಹೊತ್ತಿನವರೆಗೆ ಬಾಹ್ಯ ಸೃಷ್ಟಿಯು ಅವನಿಗೆ ಶೂನ್ಯ ಮಯವಾಗಿ ತೋರಿತು. ಸಂಧ್ಯಾಕಾಲವೊದಗಿತು, ನಿಶಾಕಾಲದ ಭೀಷಣ ಸ್ವರೂಪವು ಸಂದಿಗೊಂದಿಗಳಲ್ಲಿ ಪ್ರಕಟವಾಗಹತ್ತಿತು. ಆದರೂ ಅದು ಶುಕ್ಲ ಪಕ್ಷವಾಗಿದ್ದು ಅಂದು ಪೂರ್ಣಿಮೆಯಾದ್ದ ರಿಂದ ತುಸ ಹೊತ್ತಿನಲ್ಲಿ ಪೂರ್ವ ದಿಕ್ಕಿನಲ್ಲಿ ದೊಡ್ಡ ಬಂಡಿಗಾಲಿಯ ಆಕಾರದ ಕೆಂಪನ್ನ ಚಂದ್ರ ಬಿಂಬವು ಪ್ರಕಾಶಿಸಹತ್ತಿತು. ಚಂದ್ರನು ತನ್ನ ಮೈ ಮೇಲಿನ ಕೆಂಪು ಆವರಣವನ್ನು ಬಿಸುಟಿ ಶುಭ್ರ ವಸ್ತ್ರ ವನ್ನು ಧರಿಸಲು ಅಲ್ಲಲ್ಲಿ ತಲೆಹಾಕುತ್ತಿದ್ದ ಕತ್ತಲೆಯು ನಾಚಿಕೊಂಡು ಮಾಯವಾಗಹತ್ತಿತು. ಹೀಗೆ ಸುಮಾರು ಎರಡು ತಾಸು ರಾತ್ರಿ ಯಾದರೂ ಶಕ್ತಿಮಯಿಯ ಧ್ಯಾನದಲ್ಲಿ ಏಕಾಗ್ರಚಿತ್ತನಾದ ಕುಮಾ ರನು ಸಮಾಧಿಯನ್ನು ಇಳಿಸಿದ್ದಿಲ್ಲ. ನಿರೂಪಮೆಯು-ಕುಮಾರನ ಪಟ್ಟ ದರಸಿಯು, ಸಂಧ್ಯಾಕಾಲದಲ್ಲಿಯೇ ತನ್ನ ಗೆಳತಿಯರೊಡನೆ ಬಿಡಾ ರಕ್ಕೆ ಹೋಗಿದ್ದಳು. ಆದರೆ ಎರಡು ತಾಸು ರಾತ್ರಿಯಾದರೂ ಕುಮಾ ರನು ಬಿಡಾರಕ್ಕೆ ಬಾರದಿರಲು, ಆಕೆಯು ಅವನೆಲ್ಲಿರುವನೆಂದು ಪರಿಚಾ ರಕರನ್ನು ವಿಚಾರಿಸಿದಳು. ಕುಮಾರನು ಸಾಯಂಕಾಲಕ್ಕೆ ಉಪವನ ದಲ್ಲಿ ವಿಹರಿಸಲಿಕ್ಕೆಂದು ಹೋದವನು ಇನ್ನೂ ಬಂದಿಲ್ಲವೆಂದು ಹೇಳಿದ ಸೇವಕರ ಮಾತನ್ನು ಕೇಳಿ, ಬಿಡಾರದಿಂದ ತೀರ ಸಮೀಪದಲ್ಲಿರುವ ಆ ಉಪವನಕ್ಕೆ ತಾನೊಬ್ಬಳೇ ಹೊರಟಳು. ನಿರೂಪಮೆಯು ಬಹು ಗಂ ಭೀರ ಸ್ವಭಾವದವಳು. ಆಕೆಯ ಮನಸಿನಲ್ಲಿ ಕುಕಲ್ಪನೆಗಳೇ ಬರುತ್ತಿ

ದ್ದಿಲ್ಲ. ಸದಾ ಶಾಂತಸ್ವಭಾವದ ಆ ಸುಗುಣ ಖನಿಯು ತನ್ನಂತೆ ಎರಡ ನೆಯವರೆಲ್ಲರೂ ಸರಳ ಸ್ವಭಾವದವರೇ ಇರುತ್ತಾರೆಂದು ಭಾವಿಸಿ ನಡೆಯುತ್ತಿದ್ದಳು. ಆದ್ದರಿಂದ ಆ ಪ್ರೇಮಲಮೂರ್ತಿಯು ಕುಮಾರನನ್ನು ಕೇವಲ ಪ್ರೇಮ ವಾತ್ಸಲ್ಯದಿಂದ ಹುಡುಕ ಬಂದಿದ್ದಳೇ ಹೊರತು, ಮತ್ತಾವ ಕುತ್ಸಿತ ನೆವಕ್ಕಾಗಿ ಬಂದಿದ್ದಿಲ್ಲ. ಆಕೆಯು ಉಪವನವನ್ನು ಹೊಕ್ಕಳು. ಕುಮಾರನೆಲ್ಲಿಯಾದರೂ ಗಾನ ಲೋಲುಪನಾಗಿ ವಿಶ್ರಮಿಸಿರಬಹುದೆಂದು ತಿಳಿದು ಆಕೆಯು ಅಲ್ಲಲ್ಲಿ ನಿಂತು ದನಿಯನ್ನು ಆಲಿಸಹತ್ತಿದಳು. ಯಾವ ಕಡೆಯಿಂದಲೂ ಆಕೆಗೆ ಸ್ವರವು ಕೇಳಿಸಲಿಲ್ಲ. ಬಳಿಕ ದಿನಾಲು ತಾನು ಕುಮಾರನೊಡನೆ ಸುಖಸಲ್ಲಾಪಗಳನ್ನಾಡುತ್ತ ವಿಹರಿಸುವ ಆ ಉಪವನದ ಮಧ್ಯಭಾಗದ ಕಡೆಗೆ ನಡೆದಳು. ಆ ಭಾಗದಲ್ಲಿ ಮಲ್ಲಿಗೆ, ಸಂಪಿಗೆ, ಜಾಜಿ, ಗುಲಾಬಿ, ಸುರಗಿ ಮುಂತಾದ ಅತ್ಯುತ್ತಮ ಪುಷ್ಪಗಳ ಲತಾಮಂಟಪಗಳು ಬಹು ಸೊಗಸಾಗಿ ಹಚ್ಚಲ್ಪಟ್ಟಿದ್ದವು ಅವುಗಳ ಮಧ್ಯದಲ್ಲಿ ಒಂದೆರಡು ಕಾರಂಜಿಗಳು ತುಂತುರವನಿಗಳನ್ನು ಚಿಮ್ಮುತ್ತಿದ್ದವು. ಕಾರಂಜಿಯ ಸುತ್ತಲು ಕೆಲವು ಅಂತರದ ಮೇಲೆ ಗೋಲಾಕಾರವಾಗಿ ಕಲ್ಲಿನ ಆಸನಗಳು ನಿರ್ಮಿಸಲ್ಪಟ್ಟಿದ್ದವು. ನಮ್ಮ ಕುಮಾರನಾದರೂ ಆ ಆಸನಗಳಲ್ಲೊಂದರಲ್ಲಿ ಧ್ಯಾನಸ್ಥನಾಗಿ ಕುಳಿತದ್ದು ನಿರೂಪಮೆಗೆ ಕಂಡಿತು.

ಆಗ ಅವಳು ತನ್ನ ಕಾಲ ಸಪ್ಪಳವನ್ನು ಮಾಡದೆ ಕುಮಾರನ ಹಿಂಬದಿಗೆ ಹೋಗಿ ತುಸು ಅಂತರದ ಮೇಲೆ ನಿಂತಳು. ಕುಮಾರನು ಇದಾವುದನ್ನೂ ಅರಿಯನು. ಅವನು ಶಕ್ತಿಯ ಬಗ್ಗೆ ಮನದಲ್ಲಿ ಯೋಚಿಸುತ್ತಿರಲು ಅವನ ಬಾಯಿಂದ ಅಕಸ್ಮಾತ್ತಾಗಿ—ಬಾ, ಇತ್ತ ಬಾ; ಮಿಂಚಿಹೋದ ಮಾತಿಗೆ ಚಿಂತಿಸಿ ಫಲವೇನು? ನಾನು ಏನು ಮಾಡಿದರೆ ನಿನಗೆ ಸಂತೋಷವೆನಿಸೀತು? ಹ್ಯಾಗೆ ನಡೆದರೆ ಹಿತವಾದೀತು? ಭಗವಾನ್, ನನ್ನ ಯಾವ ಅಪರಾಧದ ಸಲುವಾಗಿ ನನ್ನಿಂದ ಅವಳಿಗೆ

ಹೀಗೆ ತಾಪವನ್ನುಂಟು ಮಾಡಿದೆ? ಆಕೆಯ ಅಖಂಡ ಪ್ರೇಮಕ್ಕೆ ನನ್ನಿಂದ ಈ ತರದ ಸನ್ಮಾನವೇ? ಹಾಯ್ "ಏನು ಮಾಡಲಿ, ಹ್ಯಾಗೆ ಮಾಡಲಿ?" ಎಂಬ ದಶಾಕ್ಷರೀ ಮಂತ್ರವನ್ನು ಜಪಿಸುತ್ತ ಕುಳಿತುಕೊಳ್ಳಬೇಕಾಯಿತಲ್ಲ! ಎಂಬ ಶಬ್ದಗಳು ಹೊರಟವು.

ನಿರೂಪಮೆಗೆ ಕುಮಾರನ ಭಾಷಣದ ಮಥಿತಾರ್ಥವಾಗಲಿಲ್ಲ. ಅದರಿಂದ ಆಕೆಗೆ ವಿಷಾದವಾಗುವದೊತ್ತಟ್ಟಿಗೇ ಉಳಿದು, ಅವಳು ಪ್ರೇಮಭರದಿಂದ ನಿಸ್ತಬ್ಧವಾದ ಆ ಏಕಾಂತದಲ್ಲಿ ಒಮ್ಮೆಲೆ ಮುಂದರಿದು ಹಿಂಬದಿಯಿಂದಲೇ ಕುಮಾರನ ಕಣ್ಣು ಮುಚ್ಚಿದಳು. ಕುಮಾರನಿಗೆ ಶಕ್ತಿಯೇ ತನ್ನ ಕಣ್ಣು ಮುಚ್ಚಿರುವಳೆಂಬ ಭಾಸವಾಗಲು, ಆವನು-ಶಕ್ತೀ, ಎಲೆ ಶಕ್ತೀ, ಬಿಡು, ಕಣ್ಣು ಬಿಡು, ಎಂದನು.

ಕೂಡಲೆ ನಿರೂಪಮೆಯ ಎದೆಯು ಹಾರಹತ್ತಿತು. ಕೈಕಾಲುಗಳು ನಡುಗಹತ್ತಿದವು. ಸಿಟ್ಟಿನಿಂದ ತುಟಿಗಳು ಕಾತರ ಹೊಂದಿದವು. ಆಗ ಅವಳು ಕುಮಾರನನ್ನು ಕುರಿತು—"ನಾನು ನಿರೂಪಮೆಯು!" ಎಂಬದಿಷ್ಟೇ ಉತ್ತರವನ್ನು ಕೊಟ್ಟಳು.

ನಿರೂಪಮೆಯು ಸದಾ ಶಾಂತ ಸ್ವಭಾವದವಳೂ, ಸುಗುಣಪೂರ್ಣಳೂ ಆಗಿದ್ದರೂ ಆಕೆಯು ಹೀಗೆ ಕ್ರೋಧವಶಳಾದಳೇಕೆ? ಆವಳಾದರೂ ಸ್ತ್ರೀಸ್ವಭಾವದಂತೆ ಸವತಿ ಮತ್ಸರದಿಂದಲೇ ಹೀಗೆ ವರ್ತಿಸಿದಳೆಂದು ವಾಚಕರು ಅಂದುಕೊಳ್ಳಬಹುದು. ಆದರೆ ಹಾಗಲ್ಲ; ನಿರೂಪಮೆಯು ಕ್ರೋಧವಶಳಾಗಲಿಕ್ಕೆ ಸವತಿಮತ್ಸರವು ಕಾರಣವಾಗಿದ್ದಿಲ್ಲ. ಅಂಥ ದುಷ್ಟತನವು ಇದ್ದರೆ ಆಕೆಯು ಸದಾ ಶಾಂತಳೂ, ಸುಗುಣಪೂರ್ಣಳೂ ಹ್ಯಾಗಾಗುತ್ತಿದ್ದಳು? ಆದರೆ ಶಕ್ತಿಯು ಕುಮಾರನ ಬಾಲ ಸಖಿಯೂ, ಅತ್ಯಂತ ಪ್ರೇಮಪಾತ್ರಳೂ ಆಗಿದ್ದರೂ ಆ ಶಕ್ತಿಯು ಕೆಲವು ದಿವಸಗಳ ಮುಂಚೆ ಪರಪುರುಷನ-ಯುವಸನ ಅರ್ಧಾಂಗಿನಿಯಾಗಿರಲು, ಕುಮಾರನು ಅಂಥ ಆ ಭ್ರಷ್ಟಶಕ್ತಿಯ ಹೆಸರನ್ನೆತ್ತಿದ್ದನ್ನು ಕೇಳಿ ನಿರೂಪಮೆಗೆ ಸಿಟ್ಟು ಬಂದಿತು.

ಕುಮಾರನು ನಿರೂಪಮೆಯ ದನಿಯನ್ನು ಕೇಳಿ ಸಮಾಧಿಭ್ರಷ್ಟನಾದನು. ಎದುರಿಗೆ ಪೂರ್ಣಕಲೆಗಳಿಂದ ಸುಶೋಭಿತವಾದ ಚಂದ್ರಮಂಡಲವು ತೋರಿತು. ತತ್ಕ್ಷಣದಲ್ಲಿಯೇ ನವಯೌವನದ ಸಂಪೂರ್ಣ ಸೌಂದರ್ಯದ ಪುತ್ಥಳಿಯಾದ ನಿರೂಪಮೆಯೂ ಕಂಡಳು. ಆದರೆ ಪೂರ್ಣ ಚಂದ್ರನಲ್ಲಿಯೂ ಹರಿಣಾಂಕದಿಂದ ತುಸ ವಿದ್ರೂಪತೆಯು ದಿಟ್ಟಿಸಿ ನೋಡುವವರಿಗೆ ಕಾಣುವಂತೆ,ನಮ್ಮ ಆ ನಿರೂಪಮೆಯಲ್ಲಿಯೂ ಕ್ರೋಧದ ಸುಳುವು ಕುಮಾರನಿಗೆ ತೋರಿತು. ಇದರಿಂದ ಕುಮಾರನಲ್ಲಿ ಹೆಚ್ಚು ಅಸ್ವಸ್ಥತೆಯುಂಟಾಯಿತು. ಶಕ್ತಿಯ ವಿಷಯದ ಚಿಂತೆ, ನಿರೂಪಮೆಗೆ ವ್ಯೆಮರವಿನಿಂದ ಶಕ್ತಿಯೆಂದು ಭಾವಿಸಿ ಕರೆದ ಚಿಂತೆ ಇವುಗಳಿಂದ ಅವನು ಮನಸ್ಸಿನಲ್ಲಿ ಬಹಳವಾಗಿ ನೊಂದುಕೊಂಡನು. ಆದರೂ ಅದನ್ನು ಸರಳಸ್ವಭಾವದ ಆ ತನ್ನ ರಾಣಿಗೆ ತಿಳಿಸಲು ಧೈರ್ಯಸಾಲದ್ದರಿಂದ ಅವನು ತನ್ನ ಮನೋದುಃಖವನ್ನು ನುಂಗಿಕೊಳ್ಳುತ್ತ—ನಿರೂಪಮೇ ಬಾ, ಕುಳಿತುಕೋ; ಎಂದು ಔಪಚಾರಿಕವಾಗಿ ನುಡಿದನು.

ಆದರೆ ನಿರೂಪಮೆಗೆ ಗಂಡನ ಈ ವರ್ತನದಿಂದ ಸಮಾಧಾನವೆನಿಸಲಿಲ್ಲ. ಆಕೆಗೆ ಮತ್ತಿಷ್ಟು ದುಃಖವಾಯಿತು. ಅದರಿಂದ ಅವಳ ಕಪೋಲಗಳು ಅಶ್ರುಬಿಂದುಗಳ ಪ್ರವಾಹದಿಂದ ಹೊಳೆಯು ಹತ್ತಿದವು. ಆಕೆಯು ಕುಮಾರನ ಬಳಿಯಲ್ಲಿ ಕೂಡ್ರಲಿಲ್ಲ; ನಿಂತಲ್ಲಿಯೇ ಸ್ತಬ್ಧವಾಗಿ ನಿಂತುಬಿಟ್ಟಳು. ನಿರೂಪಮೆಯು ಈಗ ಹದಿನಾರು ವರ್ಷದ ತರುಣಿಯು. ಆದರೆ ಸಂಸಾರದ ಕುಟಿಲಾಚರಣೆಗಳೊಂದನ್ನೂ ಅರಿಯದ ಸರಳಸ್ವಭಾವದ ಆಕೆಯ ಮುಖವು ಇಂಥ ಈ ನಿಗ್ಗರದ ಸಮಯದಲ್ಲಿ ಕೂಡ ಕೇವಲ ಬಾಲಿಕೆಯಂತೆ ನೋಡುವವರಿಗೆ ಕಾಣಿಸದೆ ಇರುತ್ತಿದ್ದಿಲ್ಲ!

ಇತ್ತ ಕುಮಾರನ ಮನಸ್ಸಾದರೂ ಕಡು ಖೇದದಿಂದ ಆವರಿ

ಸಿರಲು, ಆವನು ನಿರೂಪಮೆಯು ಕುಳಿತುಕೊಂಡಳೋ ಇಲ್ಲವೋ ಎಂಬದನ್ನು ಕಂಡುಕೊಳ್ಳಲು ಸಮರ್ಥನಾಗಲಿಲ್ಲ. ಕೆಲವು ನಿಮಿಷಗಳನ್ನು ಅವರಿಬ್ಬರೂ ಮೌನದಿಂದ ಕಳೆದರು. ಬಳಿಕ ತನ್ನ ಮಾತಿನಂತೆ ನಿರೂಪಮೆಯು ಕೊಪ್ಪ್ರದೆ ಇನ್ನೂ ನಿಂತೇ ಇರುವಳೆಂಬದು ಕುಮಾರನ ನಿದರ್ಶನಕ್ಕೆ ಬರಲು, ಅವನು ತನ್ನ ದುಃಖವನ್ನು ಸಂಪೂರ್ಣವಾಗಿ ನುಂಗಿಕೊಂಡನು; ಹಾಗು ನಿರೂಪಮೆಯ ದುಃಖವನ್ನು ಶಾಂತಗೊಳಿಸುವದಕ್ಕಾಗಿ ತನ್ನ ಬಾಹುಗಳಿಂದ ಅವಳನ್ನು ಅಪ್ಪಿಕೊಂಡು ಒಳ್ಳೇ ಸ್ನೇಹದಿಂದ ಆಪಳಿಗೆ—

ಕುಮಾರ—ನಿರೂಪಮೇ, ನಿನಗೇನಾಯಿತು? ಹೀಗೇಕೆ ದುಃಖಪಡುವೆ? ಹೇಳಬಾರದೇ, ಎಂದನು.

ಆದರೂ ನಿರೂಪಮೆಯು ಪಿಟ್ಟೆಂದು ಮಾತಾಡಲಿಲ್ಲ. ಆಗ ಕುಮಾರನು ಆಕೆಯನ್ನು ಹಲವು ಬಗೆಯಿಂದ ರಮಿಸಿದನು. ತರತರದ ವಿನೋದಪರ ಭಾಷಣ ಮಾಡಿದನು. ಕೆಲಹೊತ್ತಿನ ಮೇಲೆ ಅವಳು ತನ್ನ ಅಶ್ರುಪೂರ್ಣದೃಷ್ಟಿಯಿಂದ ಅವನನ್ನು ನೋಡುತ್ತ—ಕುಮಾರ, ನೀನು ನನ್ನನ್ನು ಮನಃಪೂರ್ವಕವಾಗಿ ಪ್ರೀತಿಸುತ್ತೀಯೇನು? ಎಂದು ಕೇಳಿದಳು.

ನಿರೂಪಮೆಯ ಈ ಪ್ರಶ್ನೆಯಿಂದ ಕುಮಾರನ ಅಂತಃಕರಣಕ್ಕೆ ಬರೆಕೊಟ್ಟಂತಾಯಿತು. ಆದರೂ ಅವನು ನಿರೂಪಮೆಯ ಮುಂಗುರುಳುಗಳನ್ನು ತೀಡುತ್ತ—ಈಗೇಕೆ ಈ ಪ್ರಶ್ನೆಯನ್ನು ಕೇಳುವ ಪ್ರಸಂಗಬಂತು? ಎಂದನು.

ನಿರೂಪಮೆಯು ನಡುಗುವ ದನಿಯಿಂದ—ನೀನು ಯಾವಾಗ...ನೀನು ಯಾವಾಗ......

ಕುಮಾರನಿಂದ ಸ್ತಬ್ಧವಾಗಿ ನಿಂತು ಅವಳ ಮುಂದಿನ ಮಾತನ್ನು ಕೇಳುವದಾಗಲಿಲ್ಲ, ಕೂಡಲೆ ಅವನು ಅವಳ ಕಂಪಿತ ಓಷ್ಠಗಳನ್ನು

ಚುಂಬಿಸಿನು. ಆಗ ನಿರೂಪಮೆಯು ಅವನ ಎದೆಯಮೇಲೆ ತನ್ನ ಶಿರವನ್ನೊರಗಿಸಿ—ಕುಮಾರ, ಶಕ್ತಿಯು ಇಲ್ಲಿ ಇದ್ದರೆ ನೀನು ನಿಶ್ಚಯ ವಾಗಿ ನನ್ನನ್ನು ಮರೆತುಬಿಡುತ್ತಿದ್ದಿಯಲ್ಲವೆ? ಎನ್ನಲು, ಕುಮಾರನ ಚಿತ್ತವು ಮತ್ತೆ ಶಕ್ತಿಯನ್ನು ಆವರಿಸಲು, ಅವನು ಪುನಃ ಚಿತ್ರದೊಳಗಿನ ಗೊಂಬೆಯಂತೆ ವಿಚಾರಮಗ್ನನಾದನು. ಹೀಗೆ ಕುಮಾರ ಗಣೇಶದೇವನು ಶಕ್ತಿಯವಿರಹತಾಪದಿಂದ ಅಂದು ಬೆಂದುಬೆಂಡಾದನು.

ಒಂಬತ್ತನೆಯ ಪ್ರಕರಣ.

ಮುದಿ ಹುಚ್ಚು!

ಹಿಂದೆ ಏಳನೆಯ ಪ್ರಕರಣದ ಕೊನೆಯಲ್ಲಿ ಹೇಳಿದಂತೆ ಬಾದಶಹನ ಸೇನಾಪತಿಯಾದ ಆಜೀಮಖಾನನು ಕುಮಾರ ಗಣೇಶದೇವನ ಬಿಡಾರದಿಂದ ಹೊರಟು ನೆಟ್ಟಗೆ ರಾಜದರ್ಬಾರವನ್ನು ಸೇರಿದನು. ಬಾದಶಹನು ಮಗನ ವಿಶ್ವಾಸಘಾತಕತನದ ವಿಚಾರವನ್ನು ಮಾಡಿ ಅವನಿಗೆ ವಿಧಿಸಬಹುದಾದ ಶಿಕ್ಷೆಯನ್ನು ನಿರ್ಧರಿಸುವದಕ್ಕಾಗಿ ಇಂದು ದರ್ಬಾರವನ್ನು ಕೂಡಿಸಿದ್ದನು. ಆಜೀಮಖಾನನು ಆ ದರ್ಬಾರದಲ್ಲಿ "ಕುಮಾರ ಗಣೇಶದೇವನು ಬಾದಶಹನಿಗೆ ಸಹಾಯಮಾಡುವದೊತ್ತಟ್ಟಿಗೇ ಉಳಿದು, ಅವನು ನಮ್ಮ ಸೈನಿಕರಿಂದ ಪ್ರತಿಬಂಧಿಸಲ್ಪಟ್ಟ ಸನ್ಯಾಸಿನಿಯನ್ನು ಮುಕ್ತಮಾಡಿರುವನು." ಎಂದು ತಿಳಿಸಿದನು. ಇದನ್ನು ಕೇಳಿ ಬಾದಶಹನು ಸಿಟ್ಟಿನಿಂದ ಉರಿಯುತ್ತಿದನು. ಆಗ ಅವನು ನುಡಿದನೇನಂದರೆ—ಸೇನಾಪತೀ, ಅಪಮಾನದ ಮೇಲೆ ಅಪಮಾನವು; ನಮ್ಮ ಅಪ್ಪಣೆಯವಿನಃ ಸನ್ಯಾಸಿನಿಯನ್ನು ಬಂಧಮುಕ್ತಮಾಡಿದ ಆ ಕುಮಾರಗಣೇಶದೇವನು ಅಪರಾಧಿಯಲ್ಲವೆ? ಅಂಥವನನ್ನು ನೀನು

ಕಂಡೂಕಂಡು ಪ್ರತಿಬಂಧಿಸದೆ ಇದ್ದದರಿಂದ ನೀನೇನು ಸಾಮಾನ್ಯ ಅಪರಾಧಿಯೆ?

ಸೇನಾಪತಿಯು ತುಸ ಸಂಕೋಚದಿಂದ—ಜಹಾಪನಾ, ಸೇವಕನ ತಪ್ಪಾಗಿರುವದರಲ್ಲಿ ಸಂದೇಹವಿಲ್ಲ. ಆದರೆ ಈ ಕಾಲಕ್ಕೆ ವಿಶ್ವಾಸಘಾತಕನಾದ ನಬಾಬಗಾಯಸುದ್ದೀನನ ಕೂಡ ಯುದ್ಧವೆಸಗಬೇಕಾಗಿರುವದರಿಂದ ಗಣೇಶದೇವನನ್ನು ನಾವು ಈಗ ಪ್ರತಿಬಂಧಿಸಹೋದರೆ, ಅವನ ಕೂಡ ಸಹ ಯುದ್ಧಮಾಡಬೇಕಾಗುವದು. ಅವನೊಡನೆ ಯುದ್ಧಮಾಡದೆ ಅವನನ್ನು ಪ್ರತಿಬಂಧಿಸಿ ತರುವದು ಶಕ್ಯವಿಲ್ಲ. ಹೀಗೆ ಇತ್ತಂಡಗಳಲ್ಲಿ ನಮ್ಮ ಬಲಕ್ಷಯಮಾಡುವದರಿಂದ ನಮ್ಮ ನಾಶಕ್ಕೇ ನಾವು ಗುರಿಯಾಗಬೇಕಾದೀತು. ಅದಕ್ಕೋಸ್ಕರ ಈಗ ಸದ್ಯಕ್ಕೆ ನಾವು ಗಣೇಶದೇವನಿಂದ ಸಹಾಯಹೊಂದಿ ನಬಾಬನ ಪಾರುಪತ್ಯಮಾಡುವದೇ ಲೇಸು.

"ಬದ್‌ಮಾಷ! ಇಲ್ಲದ ಯುಕ್ತಿಗಳನ್ನು ನನಗೆ ಕಲಿಸಬರುತ್ತೀಯೇನು?" ಎಂದು ಬಾದಶಹನು ಸಿಟ್ಟಿನಿಂದ ಕೂಗಿ—ಅಜೀಮಖಾನ, ಗಣೇಶದೇವನಿಲ್ಲದಿದ್ದರೆ ನಿನ್ನಿಂದ ಶತ್ರುವಿನ ದಮನಮಾಡಲಿಕ್ಕಾಗಲ್ಲಿಕ್ಕಿಲ್ಲೆಂದೇ ನೀನು ಆ ರಾಜದ್ರೋಹಿಯನ್ನು ಬೇಕಂತ ಪ್ರತಿಬಂಧಿಸಿ ತರಲಿಲ್ಲೇನು? ಅಂತೇ ನೀನು ಈ ಒಣಡೌಲಿನ ಮಾತುಹೇಳುತ್ತೀಯಾ?

ಸೇನಾಪತಿ—ಜಹಾಪನಾ, ತಾವು ಹಾಗೆ ತಿಳಿಯಬಾರದು. ಕುಮಾರನನ್ನು ಹಿಡತರಬೇಕೆಂದು ತಮ್ಮ ಆಜ್ಞೆಯಿದ್ದಿಲ್ಲ, ಅದಕ್ಕಾಗಿ ಅದನ್ನು ದೊರಕಿಸುವ ಸಲುವಾಗಿಯೇ ಈಗ ನಾನು ತಮ್ಮೆಡೆಗೆ ಬಂದಿದ್ದೇನೆ.

ಬಾದಶಹ—ಸೇನಾಪತೀ, ಎಂಥ ಮೂರ್ಖನು ನೀನು? ಇಂಥ ಪ್ರಸಂಗದಲ್ಲಿ ಇಂಥ ಪ್ರತ್ಯಕ್ಷಾಪರಾಧಿಯ ಪ್ರತಿಬಂಧದ ವಿಷಯಕ್ಕೆ

ನನ್ನ ಆಜ್ಞೆಯ ಮಾರ್ಗನಿರೀಕ್ಷಣೆಮಾಡುವ ಅದೆಂಥ ಸೇನಾಪತಿಯು ನೀನು ? ಹೋಗು ಈಗಿಂದೀಗಲೇ ಆ ಗುಲಾಮನನ್ನು ಬಂಧಿಸಿಕೊಂಡು ಬಂದು ನನ್ನೆದುರಿಗೆ ನಿಲ್ಲಿಸು.

ಕೂಡಲೆ ಅಜೀಮಖಾನನು ಸಪರಿವಾರವಾಗಿ ಗಣೇಶದೇವನ ಬಿಡಾರಕ್ಕೆ ನಡೆದನು. ಗಣೇಶದೇವನು ಸನ್ಯಾಸಿನಿಯ ಸೂಚನೆಯಂತೆ ಈ ಮೊದಲೇ ಅಲ್ಲಿಂದ ತನ್ನ ಶಿಬಿರವನ್ನು ಕಿತ್ತಿ ಬೇರೊಂದುಸುರಕ್ಷಿತ ಸ್ಥಳದಲ್ಲಿ ಸ್ಥಾಪಿಸಿ ಯುದ್ಧಕ್ಕೆ ಸಿದ್ಧನಾಗಿದ್ದನು. ಆಗ ಸೇನಾಪತಿಯು ಹತಮುಖನಾಗಿ ತನ್ನ ದಂಡಿನಕಡೆಗೆ ಬರುತ್ತಿರಲು, ನಡುವೆ ನಬಾಬ ಗಾಯಸುದ್ದೀನನ ಸೈನ್ಯವನ್ನು ಕಂಡನು.

ಕೂಡಲೆ ಉಭಯ ಸೈನ್ಯಗಳಲ್ಲಿ ಯುದ್ಧಕ್ಕೆ ಆರಂಭವಾಯಿತು. ಎಷ್ಟೋಹೊತ್ತಿನವರೆಗೆ ಒಂದು ಪಕ್ಷದ ವೀರರು ಪರಪಕ್ಷದವರಮೇಲೆ ಬಾಣಗಳನ್ನೆರಚುತ್ತಿದ್ದರು. ಉಭಯ ಪಕ್ಷಗಳಲ್ಲಿ ಕೆಲಕೆಲವು ಸೈನ್ಯವು ಕ್ಷಯವಾದ ಬಳಿಕ ಸಂಧ್ಯಾಕಾಲವಾಗಲು, ಗಾಯಸುದ್ದೀನನು ಸಸೈನ್ಯವಾಗಿ ಆ ಅರಣ್ಯದಲ್ಲಿ ಕಾಣದಾದನು. ಎರಡನೇ ದಿವಸ ಬಾದಶಹನ ಹುಕುಮಿನಿಂದ ಆ ಅರಣ್ಯದಲ್ಲಿ ಅಲ್ಲಲ್ಲಿಗೆ ಬಾದಶಹನ ಸೈನಿಕರ ಟೋಳಿಗಳು ನಿಲ್ಲಿಸಲ್ಪಟ್ಟವು. ಗಣೇಶದೇವನಾದರೂ ಅದೇ ಅರಣ್ಯದಲ್ಲಿ ಭದ್ರವಾದ ಸ್ಥಳದಲ್ಲಿ ತನ್ನ ಶಿಬಿರವನ್ನು ಸ್ಥಾಪಿಸಿ, ದಿನಾಜಪುರ ರಾಜ್ಯದಿಂದ ಸೈನಿಕರನ್ನು ಬರಮಾಡಿಕೊಳ್ಳಹತ್ತಿದನು. ಇದರಿಂದ ಅವನ ಸೈನ್ಯವು ದಿನದಿನಕ್ಕೆ ಹೆಚ್ಚುತ್ತ ಹೋಯಿತು. ಈ ಪ್ರಸಂಗದಲ್ಲಿ ಬಾದಶಹನು ಒಂದು ಕಡೆಗೆ ತನ್ನ ಮಗನ ಸಂಗಡ, ಮತ್ತೊಂದು ಕಡೆಗೆ ಗಣೇಶದೇವನ ಸಂಗಡ ಯುದ್ಧಮಾಡಬೇಕಾಯಿತು.

ಬಾದಶಹನಿಗೆ ಸಾವು ಸಮಿಾಪಿಸಿತ್ತು. ಅಂತೇ ಅವನಿಗೆ ಈ ಪ್ರಕಾರದ ದುರ್ಬುದ್ಧಿಯಾಯಿತು. ಅವನು ಮನೆಯ ಒಳಗೂ, ಹೊರಗೂ ಶತ್ರುಗಳನ್ನು ಸಂಪಾದಿಸಿದನು. ಇಷ್ಟೇ ಅಲ್ಲ, ವೃದ್ಧಾ

ಷ್ಯದ ಮೂಲಕ ಅವನ ಮತಿಯು ಸ್ಥಿರವಿದ್ದಿಲ್ಲ. ನೀತಿಯಂತೂ ಅವನಿಂದ ಎಷ್ಟೋ ದೂರ ಓಡಿಹೋಗಿತ್ತು. ಕ್ಷಣಕ್ಷಣಕ್ಕೆ ಪರ ಸ್ಪರವಿರುದ್ಧವಾದ ಅವನ ಹುಕುಮುಗಳಿಂದ ಸೈನ್ಯಾಧಿಕಾರಿಗಳೆ ಲ್ಲ ಬೇಸತ್ತುಹೋಗಿದ್ದರು. ಈ ಪ್ರಕಾರದ ಬಾದಶಹನ ಹುಕುಮು ಗಳನ್ನು ಮನ್ನಿಸುವದರಿಂದ ತಮಗೆ ಜಯವಾಗದೆ ಅಪಜಯವು ಮಾ ತ್ರ ನಿಶ್ಚಯವಾಗಿ ಆಗುವದೆಂದು ಅವರು ಭಾವಿಸಿದ್ದರು. ಸಭಾಸ ದರೆಲ್ಲರೂ ಕ್ರುದ್ಧರೂ ಅಸಂತುಷ್ಟರೂ ಆಗಿದ್ದರು. ದಂಡಾಳುಗಳಾ ದರೂ ನಿರುತ್ಸಾಹಿಗಳೂ, ಚೈತನ್ಯ ಹೀನರೂ ಆದರು. ದೇಶದಲ್ಲೆಲ್ಲ ಅನ್ನಾಭಾವವಾಯಿತು. ಯುದ್ಧದಲ್ಲಿ ಭರತಿಯಾದ ದಂಡಾಳುಗಳು (ರಿಕ್ರೂಟ್ಸ) ಇಡೀ ವರ್ಷವನ್ನು ಸಮರಾಂಗಣದಲ್ಲಿಯೇ ಕಳೆದದರಿಂದ, ಕೃಷಿಕರ್ಮವನ್ನು ಹೆಂಗಸರೂ ಹುಡುಗರೇ ಮಾಡಬೇಕಾಯಿತು. ಆದರಿಂದ ಆ ವರ್ಷ ದೇಶದಲ್ಲೆಲ್ಲ ದುರ್ಭಿಕ್ಷವೇ ದುರ್ಭಿಕ್ಷ. ದಂಡಾ ಳುಗಳಿಗೆ ಸಿಧಾ ಸಾಮಗ್ರಿಗಳು ಬಾದಶಹನಿಂದ ಸರಿಯಾಗಿ ಸಿಗ ದಾದವು. ಬಾದಶಹನು ತನ್ನ ಸೈನಿಕರಿಗೆಲ್ಲ ಒಪ್ಪತ್ತೇ ಆಹಾರವನ್ನು ಕೊಡಹತ್ತಿದನು. ಭಾಗ್ಯಲಕ್ಷ್ಮಿಯು ಕೂಡ ಬಾದಶಹನಿಂದ ಜಾರ ಹತ್ತಿದಳು. ಆಗ ವೈರಿಗಳನ್ನು ಕೊಲ್ಲಬೇಕು ಇಲ್ಲವೆ ತಾವಾದರೂ ರಣದಲ್ಲಿ ಮಡಿಯಬೇಕು, ಎಂಬ ನಿಶ್ಚಯದಿಂದ ಬಾದಶಹನು ಯುದ್ಧ ವನ್ನು ನಡಿಸಬೇಕೆಂದು ಯೋಚಿಸಿದನು. ಆದರೆ ಸಭಾಸದರು ಬಾದ ಶಹನ ಈ ವಿಚಾರಕ್ಕೆ ಸಂಪೂರ್ಣವಾಗಿ ನಿಷೇಧಿಸಿದರು. ಅವರು ಗಣೇಶದೇವನೊಡನೆ ಸಂಧಿಯನ್ನು ಮಾಡಿಕೊಂಡು ಅವನ ಸಹಾಯ ದಿಂದ ನವಾಬನನ್ನು ಹಣಿಯಬೇಕೆಂದು ಬಾದಶಹನಿಗೆ ಹಲವು ಸಾರೆ ಆಲೋಚನೆಯನ್ನು ಹೇಳಿದರು. ಆದರೂ ಆ ದುರಾಗ್ರಹಿಯು ಇಂದಿನ ವರೆಗೆ ಅವರ ಮಾತಿನ ಕಡೆಗೆ ಲಕ್ಷ್ಯಗೊಟ್ಟಿದ್ದಿಲ್ಲ. ಇಂದು ಮೇಲೆ ಹೇಳಿದಂತೆ ತೀರ ಕಠಿಣಪ್ರಸಂಗವು ಬರಲು, ಅವನು ಸಭಾಸದರ ಆ ವಿಚಾರಕ್ಕೆ ಸಮ್ಮತಿಯನ್ನೀಯಬೇಕೆಂದನು.

ಆಗ ಬಾದಶಹನು ಒಂದು ದರ್ಬಾರವನ್ನು ನೆರಿಸಿದನು. ಎಲ್ಲ ಅಮೀರ-ಉಮರಾವರೂ ಮಾನಕರಿಯರೂ ಬಂದು ತಮ್ಮ ತಮ್ಮ ಪೀಠಗಳನ್ನಲಂಕರಿಸಿದರು ಭಾಟ ಜನರು ಜಯಜಯಕಾರಗಳನ್ನು ಮಾಡುತ್ತಿರಲು, ಬಾದಶಹನು ಒಳ್ಳೇ ಆಡಂಬರದಿಂದ ಸಭಾಗೃಹವನ್ನು ಪ್ರವೇಶಿಸಿ, ಸಿಂಹಾಸನದಲ್ಲಿ ಕುಳಿತನು. ಸಭಿಕರೆಲ್ಲರೂ ತೋರಿಕೆಯಲ್ಲಿ ಒಳ್ಳೇ ಹರುಷವನ್ನು ತೋರಿಸಲಿಕ್ಕೆ ಪ್ರಯತ್ನಿಸುತ್ತಿದ್ದರು. ನಿಜವಾದ ನಿಷ್ಠೆಯೂ ಪ್ರೇಮವೂ ವಿಶ್ವಾಸವೂ ಯಾರಲ್ಲಿಯೂ ಇರದ್ದರಿಂದ ಪ್ರತಿಯೊಬ್ಬರ ಮುಖಮಂಡಲಗಳು ನಿಸ್ತೇಜವಾಗಿದ್ದವು. ಬಳಿಕ ಬಾದಶಹ—ಸೇನಾಪತಿ, ಗಣೇಶದೇವನು ಇನ್ನೂ ನಮ್ಮಿಂದ ಜಿತನಾಗಲಿಲ್ಲವೆ?

ಸೇನಾಪತಿ—ಖಾವಂದ, ನಮ್ಮ ಸೈನ್ಯವು ದಿನಾಜಪುರವನ್ನು ಸುತ್ತುಗಟ್ಟಿತ್ತು. ಇನ್ನೆರಡು ದಿವಸ ತಡೆದಿದ್ದರೆ ಆ ರಾಜಧಾನಿಯು ನಿಸ್ಸಂದೇಹವಾಗಿ ನಮ್ಮ ಹಸ್ತಗತವಾಗುತ್ತಿತ್ತು. ಆದರೆ.........

ಆಜೀಮಖಾನನ ತಂದೆಯಾದ ವೃದ್ಧಮಂತ್ರಿಯು—ಬಾದಶಹ, ಯುವರಾಜ ಗಾಯಸುದ್ದೀನನನ್ನು ನಮ್ಮ ಸೈನಿಕರು ಈ ಅರಣ್ಯದಲ್ಲಿಯೇ ಮುತ್ತಿ ಹಣ್ಣುಮಾಡುತ್ತಿರಲು, ನೀನು ಸೇನಾಪತಿಗೆ ಯುವರಾಜನ ಸುವರ್ಣಗ್ರಾಮವನ್ನು ಮುತ್ತುವದಕ್ಕೇತಕ್ಕೆ ಆಜ್ಞಾಪಿಸಿದೆ?

ಬಾದಶಹ—ಆಗಿನ ನನ್ನ ವಿಚಾರವು ಸುಳ್ಳಾಯಿತು. ನನ್ನ ಎರಡನೇ ಮಗನಾದ ಸೇಫಸುದ್ದೀನನೇ ನನಗೆ ಆ ಭ್ರಾಮಕ ವಿಚಾರವನ್ನು ಸೂಚಿಸಿದನು.

ಮಂತ್ರಿ—ಸುಳ್ಳಲ್ಲ, ಆ ದಿನ ಗಾಯಸುದ್ದೀನನು ನಿಶ್ಚಯವಾಗಿ ಕೈವಶವಾಗುತ್ತಿದ್ದನು. ಆದರೆ ತಮ್ಮ ಆಜ್ಞಾನುಸಾರ ಸೈನ್ಯದವರು ಅಲ್ಲಿಂದ ಚಲಿಸಿದ್ದರಿಂದ ಅವನು ಪುನಃ ಭದ್ರವಾದ ಸ್ಥಳಕ್ಕೆನಡೆದನು.

ಬಾದಶಹ—ಆಜೀಮಖಾ, ಅದು ನಿನ್ನ ತಪ್ಪೇ; ಹಾಗೆ ಅವನು ಅಂದು ಕೈವಶವಾಗುತ್ತಿದ್ದರೆ ನೀನು ಪ್ರಯತ್ನವನ್ನೇಕೆ ಮಾಡಲಿಲ್ಲ?

ಅಜೀಮ—ಖಾವಂದ, ಇನ್ನು ಸ್ವಲ್ಪ ಹೊತ್ತಿನಲ್ಲಿ ನಾವು ನಬಾಬನನ್ನು ಸೆರೆಯಾಳಾಗಿ ಮಾಡುತ್ತಿದ್ದೆವು. ಆದರೆ ತಮ್ಮ ಅಕಲ್ಪಿತ ಆಜ್ಞೆಯನ್ನು ಕೇಳಿ, ಸೈನಿಕರೆಲ್ಲರು ನಿರುತ್ಸಾಹಿಗಳಾದರು. ವರ್ಷಾಕಾಲವಾದ್ದರಿಂದ ಮಳೆಯೂ ಅದೇ ಕಾಲಕ್ಕೆ ಧಾರೆಗಟ್ಟಿ ಸುರಿಯಹತ್ತಿತು. ಸ್ವಲ್ಪ ನಿಂತು ಪ್ರಯತ್ನಮಾಡಬೇಕೆನ್ನುವಷ್ಟರಲ್ಲಿ ಗಾಯಸುದ್ದೀನನು ಪಲಾಯನವನ್ನು ಹೇಳಿದನು. ಅದರಿಂದ ಆಗ ಅವನನ್ನು ಹಿಡಿಯುವದು ನನ್ನಿಂದಾಗಲಿಲ್ಲ.

ಬಾದಶಹ(ಸಿಟ್ಟಿನಿಂದ ಕಣ್ಣು ಕೆಂಪಗೆ ಮಾಡಿ)—ನಿನ್ನಿಂದಾಗಲಿಲ್ಲವೇ? ಈ ಪ್ರಕಾರದ ನಾಮರ್ದ ವಾಕ್ಯವನ್ನು ಈ ವೊದಲು ನಾನು ಯಾವ ಸೇನಾಪತಿಯ ಮುಖದಿಂದಲೂ ಕೇಳಿದ್ದಿಲ್ಲ. ಬೇಖೂಬ್, ನಿನ್ನನ್ನು ಸೇನಾಪತಿಯೆಂದು ನಿಯಮಿಸಿದ್ದೇ ನನ್ನ ತಪ್ಪಾಗಿದೆಯೆಂಬಂತೆ ತೋರುತ್ತದೆ.

ಸೇನಾಪತಿಯು ಏನನ್ನೂ ಮಾತಾಡಲಿಲ್ಲ. ಬಾದಶಹನ ಸಂತಾಪದ ವಾಕ್ಯವನ್ನು ಕೇಳಿ ನಿರುತ್ಸಾಹಿಯಾಗಿ ಕುಳಿತುಕೊಂಡನು. ಆಗ ಮಂತ್ರಿಯು ನುಡಿದನೇನಂದರೆ,—

ಮಂತ್ರಿ—ಖಾವಂದ, ಆಗಿ ಹೋದ ಮಾತಿನ ಬಗ್ಗೆ ಖೇದಪಡುತ್ತ ಕೂಡ್ರುವ ಸಮಯವಿದಲ್ಲ. ಪ್ರತಿಕ್ಷಣದಲ್ಲಿ ಗಾಯಸುದ್ದೀನನು ಮುಂದರಿಯುತ್ತಿರುವನು. ಅವನ ಸೈನ್ಯವು ಈಚೆಗೆ ನಮ್ಮಗಿಂತ ಎಷ್ಟೋ ಪಾಲು ಹೆಚ್ಚಾಗಿರುವದು, ಇನ್ನೂ ಹೆಚ್ಚುತ್ತಲೇ ಇರುವದು. ಆದ್ದರಿಂದ ಅವನ ಪ್ರತಿರೋಧಕ್ಕೆ ತಕ್ಕ ಉಪಾಯವನ್ನು ಜಾಗ್ರತೆಯಾಗಿ ಯೋಚಿಸುವದು ಉಕ್ತವಾಗಿದೆ.

"ಗರಜಕೂ ಅಕ್ಕಲ ನಹಿ" ಎಂಬಂತೆ ಆ ಮುದಿ ಹುಚ್ಚ-ಭ್ರಾಂತಿಷ್ಠ ಬಾದಶಹನು ಸಭಾಸದರ ವಿಚಾರದಂತೆ ಗಣೇಶದೇವನೊಡನೆ ಸಂಧಿಯನ್ನು ಮಾಡಿಕೊಳ್ಳಲಿಕ್ಕೆ ಒಪ್ಪಿದನು.

೧೧ನೆಯ ಪ್ರಕರಣ.

ಸುಖವೋ? ದುಃಖವೋ?

ಹಿಂದೆ ಎರಡನೆಯ ಪ್ರಕರಣದಲ್ಲಿ ವರ್ಣಿಸಿದ ಅಸ್ತ್ರೋತ್ಸವದ ದಿವಸ ಸಾಯಂಕಾಲದಲ್ಲಿ ಸುಲ್ತಾನ ಸೆಕಂದರಶಹನು ಅಜೀಮಖಾನನೊಡನೆ ಉದ್ಯಾನಕ್ಕೆ ನಡೆದನು. ಅವನು ಅಲ್ಲಿ ಶಕ್ತಿಯನ್ನು ಯಾವ ವಿಧದಿಂದ ಕೈವಶ ಮಾಡಿಕೊಳ್ಳಬೇಕೆಂದು ಸೇನಾಪತಿಯೊಡನೆ ಆಲೋಚಿಸುತ್ತಿದ್ದನು. ರಾಜಸಭಾ ಮಧ್ಯದಲ್ಲಿ ಬಂದು ತನ್ನ ಲಾವಣ್ಯದಿಂದ ಬೆಳಗಿದ್ದ ಶಕ್ತಿಯನ್ನು ಆಗಲೆ ತನ್ನ ಅಂತಃಪುರದಲ್ಲಿ ಸೇರಿಸಿಕೊಳ್ಳಬೇಕೆಂದು ಬಾದಶಹನು ಮನಸ್ಸು ಮಾಡಿದ್ದನು; ಆದರೆ ಪೂರ್ವಾಪರ ಸಂಗತಿಗಳನ್ನು ತಿಳಕೊಳ್ಳದೆ ಹಾಗೆ ಮಾಡುವದು ಅಯೋಗ್ಯವೆಂದು ಅವನಿಗೆ ಅನಿಸಿದ್ದರಿಂದ, ಅವನು ಆ ಮಾತನ್ನು ಅಲ್ಲಿಗೇ ನಿಲ್ಲಿಸಿದ್ದನು. ಸಾಯಂಕಾಲದಲ್ಲಿ ಅಸ್ತ್ರೋತ್ಸವದ ಕಾರ್ಯಗಳೆಲ್ಲ ಮುಗಿದು ಎಲ್ಲ ಜನರು ತಮ್ಮ ತಮ್ಮ ಬಿಡಾರಗಳಿಗೆ ತೆರಳಿದ್ದರಿಂದ ಮಧ್ಯಾಹ್ನದಲ್ಲಿ ತನ್ನ ಮನಸ್ಸಿನೊಳಗೆ ಬಂದ ಸಂಗತಿಯನ್ನು ಚರ್ಚಿಸುವದಕ್ಕಾಗಿ ಅಜೀಮಖಾನನೊಡನೆ ಅಲ್ಲಿಗೆ ಬಂದಿದ್ದನು. ಅದೇ ಕಾಲಕ್ಕೆ ಸುಲ್ತಾನ ಪುತ್ರನಾದ ನವಾಬ ಗಾಯುಸುದ್ದೀನನು ತನ್ನ ಬಿಡಾರಕ್ಕೆ ತೆರಳಬೇಕೆಂದು ತಂದೆಯ ಅಪ್ಪಣೆಯನ್ನು ಕೇಳಿಕೊಳ್ಳಲು ಬಂದನು; ಆದರೆ ಸುಲ್ತಾನನು ಸೇನಾಪತಿಯೊಡನೆ ಏಕಾಂತದಲ್ಲಿ ಆಲೋಚಿಸುವದನ್ನು ಅರಿತು ಅದೇನೆಂಬದನ್ನು ತಿಳಕೊಳ್ಳುವದರ ಸಲುವಾಗಿ ಅವನು ಅಲ್ಲಿಯೇ ಒತ್ತಟ್ಟಿಗೆ ಮರೆಗೆ ನಿಂತನು. ಕೂಡಲೆ ನವಾಬನಿಗೆ ಬಾದಶಹನ ಇಂಗಿತವು ತಿಳಿಯು ಬಂತು. ಶಕ್ತಿಯ ವಿಷಯಕ್ಕೆ ಸುಲ್ತಾನನು ಮನಸ್ಸು ಮಾಡಿ

ದಂತೆ ಸುಲ್ತಾನ ಪುತ್ರ ಗಾಯಸುದ್ದೀನನೂ ಮನಸ್ಸು ಮಾಡಿದ್ದನು. ತಂದೆಯು-ವೃದ್ಧಪಿತನು ಆ ತರುಣಿಯನ್ನು ಅಪಹರಿಸಬೇಕೆನ್ನುತ್ತಿರುವದನ್ನು ಕೇಳಿ ಗಾಯಸುದ್ದೀನನು ಸಿಟ್ಟಿನಿಂದ ಹುಚ್ಚನಾದನು. ಶಕ್ತಿಮಯಿಯ ಮೋಹದಿಂದ ಆ ತಂದೆ-ಮಕ್ಕಳಲ್ಲಿ ಎಂದೂ ಏಕೀಕರಣವಾಗದಂಥ ದ್ವಂದವು-ದ್ವೇಷವು ಉಂಟಾಯಿತು. ಸ್ತ್ರೀಮಾಯೆಯೇ ಅಂಥ ಬಲಿಷ್ಠವಾದದ್ದಲ್ಲವೇ! ಆಕೆಯನ್ನು ಒಲಿಸಿಕೊಳ್ಳುವದಕ್ಕಾಗಿ ಅವರು ತಮ್ಮ ಎಲ್ಲ ಐಶ್ವರ್ಯ, ರಾಜ್ಯ, ಹಾಗು ಪ್ರಾಣಗಳನ್ನು ಕೂಡ ಆಹುತಿಯಾಗಿ ಕೊಡಲಿಕ್ಕೆ ಸಿದ್ಧರಾಗಿದ್ದರು!! ಆಗ ನವಾಬನು ಮನಸ್ಸಿನಲ್ಲಿ ಯೋಚಿಸಹತ್ತಿದನು.-“ನಾನು ಈಕೆಗಾಗಿ ಸಾಯಬೇಕೋ, ಈಕೆಯ ಹಂಬಲವನ್ನು ಬಿಟ್ಟು ದೇಶಾಂತರ ತೆರಳಬೇಕೋ? ಛೀ, ಸತ್ತರೂ ಚಿಂತೆಯಿಲ್ಲ, ಆದರೆ ಬಿಟ್ಟು ಬಿಡುವದು ಸರಿಯಲ್ಲ” ಎಂಬ ವಿಚಾರವು ದೃಢವಾಗಲು, ಆದರಂತೆ ನಡೆಯಲಿಕ್ಕೆ ಅವನು ಟೊಂಕಕಟ್ಟಿದನು.

ನವಾಬ ಗಾಯಸುದ್ದೀನನಿಗೆ ಸುವರ್ಣಗ್ರಾಮವೆಂಬದು ಬಾದಶಹನಿಂದ ಉಂಬಳಿಯಾಗಿ ಕೊಡಲ್ಪಟ್ಟಿತ್ತು. ಆದ್ದರಿಂದ ನವಾಬನು ಯಾವಾಗಲೂ ಅಲ್ಲಿಯೇ ಇರುತ್ತಿದ್ದನು. ಈ ದಿನ ಅಸ್ರೋತ್ಸವಕ್ಕೆಂದು ಅವನು ರಾಜಧಾನಿಗೆ ಬಂದಿದ್ದನು. ಸುವರ್ಣಗ್ರಾಮದಲ್ಲಿ ಅವನ ಸಂಪೂರ್ಣ ಅಧಿಕಾರವಿತ್ತು; ಇಷ್ಟೇ ಅಲ್ಲ, ನವಾಬನು ತನ್ನ ಸ್ವಂತ ಹೆಸರಿನ ನಾಣ್ಯಗಳನ್ನು ಕೂಡ ಅಲ್ಲಿ ಪ್ರಚಾರದಲ್ಲಿ ತಂದಿದ್ದನು. ಆದರೂ ಬಾದಶಹನಿಂದ ಅವನಿಗೆ ಯಾವ ತರದ ಆತಂಕವೂ ಇದ್ದಿಲ್ಲ. ತನ್ನ ತರುವಾಯ ಇಡಿ ರಾಜ್ಯಕ್ಕೇ ಅಧಿಕಾರಿಯಾಗುವ ತನ್ನ ಹಿರಿಯ ಮಗನು-ಗಾಯಸುದ್ದೀನನು ಈಗ ಸುವರ್ಣಗ್ರಾಮದಲ್ಲಿ ಸರ್ವಾಧಿಪತ್ಯವನ್ನು ನಡಿಸಿಕೊಂಡರೆ ತಪ್ಪೇನು ಎಂದು ಸುಲ್ತಾನನು ಮನದಂದು ಗಾಯಸುದ್ದೀನನ ಉಸಾಬರಿಯನ್ನೇ ಮಾಡುತ್ತಿದ್ದಿಲ್ಲ.

ಆದರೆ ಯಾವ ಕಾರಣದದಿಂದಲೋ ಅವನು ತನ್ನ ಸೇನಾಪತಿಯಾದ ಆಜೀಮುಖಾನನಿಗೂ ಸುವರ್ಣ ಗ್ರಾಮದಲ್ಲಿಯೇ ಮನೆಮಾಡಿಕೊಂಡಿರಲಿಕ್ಕೆ ಹೇಳಿದ್ದನು.

ಮೇಲೆ ಹೇಳಿದಂತೆ ಗಾಯಸುದ್ದೀನನ ಕಿವಿಗೆ ತಂದೆಯ ಗುಪ್ತ ಆಲೋಚನೆಯು ಬೀಳಲು ಅವನು ಮುಂದೆ ಹೋಗಿ ತಂದೆಗೆ ಭೆಟ್ಟಿಯಾಗಲೇ ಇಲ್ಲ. ಸುಮ್ಮನೆ ತನ್ನ ಡೇರೆಗೆ ಬಂದು ಸುವರ್ಣ ಗ್ರಾಮಕ್ಕೆ ಹೊರಡುವ ಸಿದ್ಧತೆಯನ್ನು ನಡೆಸಿದನು. ತನ್ನ ಎಷ್ಟೋ ಸೈನ್ಯಸಾಮಾಂತಾದಿ ಪರಿವಾರವನ್ನು ಅಂದೇ ರಾತ್ರಿ ತನ್ನೂರಿಗೆ ರವಾನಿಸಿ ಬಿಟ್ಟನು. ಉಳಿದ ಸೈನ್ಯವನ್ನು ತನ್ನ ಸಂಗಡ ಒಯ್ಯುವದಕ್ಕೆ ಸಿದ್ಧಪಡಿಸಿಟ್ಟುಕೊಂಡು ತನ್ನ ಸ್ನೇಹಿತನಾದ ಕುತುಬನ-ಆಜೀಮುಖಾನನ ತಮ್ಮನ-ಹಾದೀ ನೋಡುತ್ತ ಕುಳಿತನು. ಕುತುಬನು ಬಹು ಬುದ್ಧಿವಂತನು. ಸ್ನೇಹಕ್ಕೆ ಯೋಗ್ಯನು. ಅದರಲ್ಲಿಯೂ ಆಶ್ರಿತನಲ್ಲಿರತಕ್ಕ ಮುಖ್ಯಗುಣವಾದ ಸಮಯೋಚಿತತನವು ಅವನಲ್ಲಿ ಹೆಚ್ಚಾಗಿದ್ದದರಿಂದ ಅವನು ಗಾಯಸುದ್ದೀನನ ಪರಮ ಸ್ನೇಹಿತನಾಗಿದ್ದನು. ಗಾಯಸುದ್ದೀನನ ಲಕ್ಷ್ಯವು ಶಕ್ತಿಯ ಕಡೆಗೆ ತಿರುಗಿದೆಯೆಂಬದು ಆ ಚಾಣಾಕ್ಷನಿಗೆ ತಿಳಿದ ಕೂಡಲೆ ಅವನು ಅವಳ ಮಟ್ಟನ್ನು ಪರೀಕ್ಷಿಸುವುದಕ್ಕಾಗಿ ಕಗ್ಗತ್ತಲೆಯಲ್ಲಿ ಆ ನಟ್ಟಡವಿಯೊಳಗೆ ಹೋಗಿ ಶಕ್ತಿಗೆ ಭೆಟ್ಟಿಯಾದನು. ಹಿಂದೆ ಐದನೆಯ ಪ್ರಕರಣದಲ್ಲಿ ವರ್ಣಿಸಿದಂತೆ ಅಡವಿಯಲ್ಲಿ ಭೋಳೀಬಂದು ಬಿದ್ದದ್ದ ಶಕ್ತಿಯ ಬಳಿಗೆ ಬಂದು ಆಕೆಯೊಡನೆ ಮಾತಾಡಿ ಆಕೆಯ ಇಂಗಿತವನ್ನು ತಿಳಕೊಂಡ ಮುಸಲ್ಮಾನನೇ ಈ ಕುತುಬನು. ಇಂಥ ಸಾಹಸಿಯಾದ ಹಾಗೂ ಯಜಮಾನನ ಕಾರ್ಯವನ್ನು ಕೇವಲ ಮನಮುಟ್ಟಿ ಮಾಡುವ ಕುತುಬನು ಗಾಯಸುದ್ದೀನನ ಪ್ರಾಣಪದಕವಾದದ್ದರಲ್ಲಿ ಆಶ್ಚರ್ಯವೇನು?

ಕುತುಬನು ಶಕ್ತಿಯ ಮಟ್ಟನ್ನು ತಿಳಿದು ಬಂದು ನಬಾಬನಿಗೆ ತಿಳಿಸಿದನು. ಆಕೆಯನ್ನು ಹ್ಯಾಗೆ ಅಪಹರಿಸಬೇಕೆಂಬುವ ಕುರಿತು ಅವರಲ್ಲಿ ಕೆಲಹೊತ್ತಿನವರೆಗೆ ಮಾತು-ಕಥೆಗಳಾದವು. ಆಕೆಯನ್ನು ಅಪಹರಿಸಿಕೊಂಡು ಒಮ್ಮೆ ತಮ್ಮ ಬೀಡಾರವನ್ನು ಸೇರಿದೆವೆಂದರೆ ತೀರಿತು. ಮುಂದಿನ ವಿಚಾರವನ್ನು ಮಾಡಲಿಕ್ಕೆ ಬಂದೀತು, ಎಂದು ನಿಶ್ಚಯಿಸಿ, ಕುತುಬನು ಮತ್ತೆ ಶಕ್ತಿಯ ಬೆನ್ನಟ್ಟಿ ಹೋದನು. ಶಕ್ತಿಯು ಆ ದಿವಸ ನಡುರಾತ್ರಿಯ ಕಗ್ಗತ್ತಲಲ್ಲಿ ಆ ಅರಣ್ಯದೊಳಗಿಂದ ಒಬ್ಬಳೇ ಹೊಗುತ್ತಿರಲು, ಅವನು ಆಕೆಯ ಹಿಂದಿನಿಂದ ಪ್ರತಿಛಾಯೆಯಂತೆ ನಡೆದಿದ್ದನು. ಅವಳು ಯೋಗಿನಿಯ ಮಂದಿರವನ್ನು ಸೇರುತ್ತಲೆ ಅವನು ಅಲ್ಲಿಯೇ ಒತ್ತಟ್ಟಿಗೆ ಮರೆಗೆ ನಿಂತುಕೊಂಡು ಅವರ ಭಾಷಣವನ್ನು ಕೇಳಿದನು; ಹಾಗು ಶಕ್ತಿಯು ಇನ್ನು ಕೆಲಹೊತ್ತಿನಲ್ಲಿ ಬದಿಯಲ್ಲಿದ್ದ ಕಾಲಿಯಗುಡಿಗೆ ಹೋಗುವಷ್ಟರಲ್ಲಿ ಕುತುಬನು ಗಾಯಸುದ್ದೀನನೆಡೆಗೆ ಬಂದು-“ ಚಿಗರೆಯು ಬಲೆಯೊಳಗೆ ಬೀಳುವಂತಿದೆ; ಆ ಬಗ್ಗೆ ತಿಲಮಾತ್ರವೂ ಸಂಶಯಬೇಡ; ಈಗ ಸರಿಯಾಗಿ ಬಲಿಯೊಡ್ಡಿ ಅದನ್ನು ಹಿಡಿ ತರುವದೊಂದೇ ಬಾಕಿಯದೆ” ಎಂಬ ಸುದ್ದಿಯನ್ನು ತಿಳಿಸಿದನು. ಆಗ ಅತ್ಯಂತ ಮುದಿತನಾದ ನವಾಬನು ತಾನು ಆ ಬಗ್ಗೆ ಈ ಪೂರ್ವದಲ್ಲಿ ಮಾಡಿಟ್ಟ ಸಿದ್ಧತೆಯನ್ನು ಕುತುಬನಿಗೆ ತಿಳಿಸಿ ಅವನನ್ನು ಬಹಳವಾಗಿ ಕೊಂಡಾಡಿದನು.

ಬಳಿಕ ಅವರೀರ್ವರೂ ಶಕ್ತಿಯನ್ನು ಅಪಹರಿಸುವದಕ್ಕಾಗಿ ಕಾಲಿಯ ಗುಡಿಯ ಕಡೆಗೆ ಸಾಗಿದರು. ನವಾಬನು ತನ್ನ ಬಳಿಯಲ್ಲಿರಿಸಿಕೊಂಡಿದ್ದ ಚಿಕ್ಕ ದಂಡಿನಸೇನಾಪತಿಗೆ ಕೆಲವೊಂದು ಗುಪ್ತಸಂಗತಿಯನ್ನು ಹೇಳಿ ಈ ಮೊದಲೇ ಕಳಿಸಿದ್ದನು. ಹಾಗು ತನ್ನ ಕೂಡ ಕೆಲವು ಜನ ಕುದುರೆಯ ಸವಾರರನ್ನೂ ಬರಮಾಡಿಕೊಂಡಿದ್ದನು. ಅವರು ಆ ಸವಾರರೊಡನೆ ಅರಣ್ಯದಲ್ಲಿ ಸದ್ದಾಗದಂತೆ ಸಾಗಿ ಕಾಲಿಯ ಗುಡಿಗೆ ತಲು

ಪಿದರು. ಕೂಡಲೆ ನವಾಬನ ಆಜ್ಞೆಯಂತೆ ಆ ಸವಾರರು ತಮ್ಮ ಕುದು ರೆಗಳೊಡನೆ ಅಲ್ಲಿಯೇ ಸಮೀಪದಲ್ಲಿ ಅಡಗಿಕೊಂಡು ಕುಳಿತರು; ಹಾಗು ಕುತುಬನು ಶಾಕ್ತ ಸನ್ಯಾಸಿಯ ವೇಷವನ್ನು ಹಾಕಿಕೊಂಡು ಕಾಲಿಯ ಮೂರ್ತಿಯ ಹಿಂಬದಿಗೆ ನಿಂತನು. ನವಾಬನೂ ಅವನ ಹಿಂದಿನಿಂದ ಹೋಗಿ ಅಲ್ಲಿಯೇ ಅಡಗಿಕೊಂಡನು. ಬಳಿಕ ಅವರು ಹಿಂದೆ ಏಳನೇ ಪ್ರಕರಣದಲ್ಲಿ ಹೇಳಿದಂತೆ ಶಕ್ತಿಯ ಮನವೊಲಿಸಿದರು. ಹಾಗು ಅವ ಳನ್ನು ನವಾಬನು ತನ್ನೊಡನೆ ಕರಕೊಂಡು ಹೋದದ್ದನ್ನು ಸುಲ್ತಾ ನನ ಸವಾರರು ನೋಡಿ ಆ ಸುದ್ದಿಯನ್ನು ಬಾದಶಹನಿಗೆ ತಿಳಿಸಲು ಆ ಪಿತಾ-ಪುತ್ರರಲ್ಲಿ ಯುದ್ಧಕ್ಕೆ ಪ್ರಾರಂಭವಾಯಿತು.

ನಬಾಬನು ಈ ಮೊದಲೇ ತನ್ನ ಸೇನಾಧ್ಯಕ್ಷನಿಗೆ ಹೇಳಿಕಳಿ ಸಿದ ಪ್ರಕಾರ ಆ ಸೇನಾಪತಿಯು-ಹುಸೇನಖಾನನು-ಪಾಂಡುಯಾ ರಾಜಧಾನಿಯ ಬಹಿರ್ಭಾಗದಲ್ಲಿರುವ ಬಾದಶಹನ ಮುಖ್ಯ ಮಂತ್ರಿ ಯ ಉಪವನದ ರಕ್ಷಕನನ್ನು ಹ್ಯಾಗೋ ಒಲಿಸಿಕೊಂಡು, ಆ ಉಪ ವನಮಧ್ಯದಲ್ಲಿರುವ ವಿಶಾಲವಾದ ಮಂದಿರದಲ್ಲಿ ನಬಾಬಶಹನ ವಿವಾ ಹದ ಸಿದ್ಧತೆಯನ್ನು ಮಾಡಿಟ್ಟಿದ್ದನು. ಸೂಚನೆಯ ಮೇರೆಗೆ ನಬಾ ಬನು ಶಕ್ತಿಯೊಡನೆ ಅಲ್ಲಿಗೆ ಬಂದನು. ಅಲ್ಲಿಯ ಆ ಐಶ್ವರ್ಯದ ಸೊಬಗಿನಿಂದ ಶಕ್ತಿಯ ಕಣ್ಣುಗಳು ಕುಕ್ಕಿದವು. ಅವಳಿಗೆ ಬಹಳ ಅಭಿಮಾನವೆನಿಸಿತು. ಆದರೆ ಆ ಆಶ್ಚರ್ಯ-ಸ್ಥಿತಿಯು ಅವಳಲ್ಲಿ ಬಹಳ ಹೊತ್ತಿನವರೆಗೆ ತಡೆದು ನಿಲ್ಲಲಿಲ್ಲ. ಕಣ್ಣುಮುಚ್ಚಿ ಕಣ್ಣುತೆರೆಯು ವಷ್ಟರಲ್ಲಿ ಅವಳ ಆ ಅಭಿಮಾನವು ನಾಮಶೇಷವಾಗಿ ಅವಳಲ್ಲಿ ಕಡು ಖೇದವು ಪ್ರಾದುರ್ಭವಿಸಿತು. ಜ್ಯೋತಿರ್ವಿದರ ಜ್ಯೋತಿಷದ ಪ್ರಕಾರ ಅವಳು ಮಹಾರಾಣಿಯಾಗುವದಕ್ಕಾಗಿಯೇ ಜನಿಸಿದ್ದಳು. ಮತ್ತು ಆ ಪ್ರಕಾರ ಈಗ ಅವಳು ಪ್ರತ್ಯಕ್ಷ ಮಹಾರಾಜ್ಞೆಯೂ ಆಗಿದ್ದ ಳು. ಆದರೆ ಆಕೆಗೆ ಅದರಿಂದ ನಿಜವಾದ ಸೌಖ್ಯವಾಗದೆ ಖೇದವೆನಿಸಿ ದ್ದರ ಕಾರಣವೇನಿರಬಹುದು?

ಕನ್ನಡಿಯ ಮಹಾಲು; ನಾಲ್ಕೂ ದಿಕ್ಕಿನ ಗೋಡೆಗಳಲ್ಲಿ ನಿಲುವುಗನ್ನಡಿಗಳು ಪರಿಶೋಭಿಸುತ್ತಲಿವೆ. ತೀರ ಸಮೀಪದಲ್ಲಿ ಗಿಡಬಳ್ಳಿಗಳಿಂದಲೂ, ಹೂಮಾಲೆಗಳಿಂದಲೂ ಪರಿವೇಷ್ಟಿತವಾದ ಅತ್ಯಂತ ಕೋಮಲ ಶಯ್ಯಾಸನವಿದೆ. ಮಂದಿರದಲ್ಲೆಲ್ಲ ಹೂಗಳಿಂದ ಶೃಂಗರಿಸಲ್ಪಟ್ಟ ಬೆಳ್ಳಿಗೆ ಶೋಭಿಸುವ ಕಾರಂಜಿಗಳಿದ್ದು, ಆ ಕಾರಂಜಿಗಳೊಳಗಿಂದ ಸುಗಂಧ ಪೂರಿತ ಪನ್ನೀರು ಚಿಮ್ಮುತ್ತಲಿದೆ. ಆ ಪನ್ನೀರಿನ ಸುಗಂಧವು ತರತರದ ಪುಷ್ಪಗಳ ಸುಗಂಧದೊಡನೆ ಕಲೆತು ಇಡಿ ಮಂದಿರವನ್ನೆಲ್ಲ ಸುಗಂಧದ ಆಗರವನ್ನೇ ಮಾಡಿಬಿಟ್ಟಿತ್ತು. ಬಹುಮೂಲ್ಯ ವಸ್ತ್ರಾಲಂಕಾರಗಳಿಂದ ಸುಶೋಭಿತವಾದ ನವತರುಣ ಸುಂದರ ಸಖೀಗಣವು ಸೇವೆಯನ್ನು ಮಾಡುವದಕ್ಕೆ ನಾಮುಂದೆ ನೀಮುಂದೆ ಎಂದು ಹಾತೊರೆಯುತ್ತಲಿದೆ. ಇದೆಲ್ಲ ಸಿದ್ಧತೆಯನ್ನು ಕಂಡ ಆ ಬಡ ಶಕ್ತಿಮಯಿಯು ತಾನು ಇಂದ್ರನ ನಂದನವನದಲ್ಲಿರುವೆನೋ ಏನೋ ಎಂಬದನ್ನು ತಿಳಿಯದಾದಳು. ಶಕ್ತಿಯು ಪುನಃ ನಾಲ್ಕೂದಿಕ್ಕಿಗೆ ದಿಟ್ಟಿಸಿ ನೋಡಹತ್ತಿದಳು. ಆಕೆಗೆ ಆ ಎದುರಿಗಿನ ನಿಲುವಗನ್ನಡಿಗಳಲ್ಲಿ ಆ ನಂದನವನದೊಳಗೆ ಸಾಲಂಕೃತರಾಗಿ ಸಿದ್ಧರಾದ ಅಪ್ಸರಾಂಗನೆಯರ ಮಧ್ಯದಲ್ಲಿ ಒಬ್ಬ ದೀನವೇಷದ ರಮಣಿಯು ಮುಖ್ಯ ಪೀಠದಲ್ಲಿ ವಿರಾಜಮಾನಳಾಗಿದ್ದಂತೆ ಕಂಡಿತು. ಆಗ ಆವಳು ಮುಗ್ಧಳಂತೆ ಸುಮ್ಮನಾಗಿ ಬಿಟ್ಟಳು. ಕೆಲಹೊತ್ತಿನವರೆಗೆ ಆಕೆಯು ಮನದಲ್ಲಿಯೇ ಈ ಪ್ರಕಾರ ವಿಚಾರ ಮಾಡಹತ್ತಿದಳು–''ಇದು ಮಾಯೆಯ ಆಟವು. ಕಣ್ಣಿನಿಂದ ನೋಡಲು ಅಸಾಧ್ಯವಾದ ಚಿತ್ರವಿದು. ಈ ದೀನಳ ಮನಸ್ತೃಪ್ತಿಗಾಗಿ ಇಷ್ಟು ಜನ ದಾಸದಾಸಿಯರ ಈ ಅಸಾಮಾನ್ಯ ಯೋಜನೆಯೇ? ಸಾವಿರಾರು ಜನರ ಒಡತಿಗೂ ಮೀರಿದ ಈ ಆದರವೇ?''

ಬಳಿಕ ಶಕ್ತಿಯು ಅಲ್ಲಿಂದ ಮಜ್ಜನಾಗರಕ್ಕೆ ಒಯ್ಯಲ್ಪಟ್ಟ ಳು. ನಾಲ್ಕು ಜನ ಧಾಸಿಯರು ಬೇರೆ ಬೇರೆ ಬಣ್ಣದ ರತ್ನಖಚಿತ ಗಳಾದ ಪೀತಾಂಬರಗಳನ್ನು ಅವಳೆದುರಿಗಿಟ್ಟು—''ಬೇಗಮಸಾಹೇ ಬ ಇವುಗಳಲ್ಲಿ ಯಾವ ಪೀತಾಂಬರವು ಸ್ನಾನಾನಂತರ ಧರಿಸಲಿಕ್ಕೆ ತಮಗೆ ಬೇಕಾದೀತು?'' ಎಂದು ವಿಜ್ಞಾಪಿಸಿಕೊಂಡರು. ಆಗ ಶಕ್ತಿಯು ಒಂದೊಂದಾಗಿ ಅವುಗಳನ್ನೆಲ್ಲ ತಿರುತಿರುವಿ ನೋಡಿ ಕಟ್ಟ ಕಡೆಗೆ—''ಇವೇನು ಅಷ್ಟೊಂದು ಅಂದವಾಗಿಲ್ಲ; ಬೇರೆ ವಸ್ತ್ರಗಳಿ ಲ್ಲವೇ?'' ಎನಲು, ದಾಸಿಯರೆಲ್ಲರೂ ಅದನ್ನು ಕೇಳಿ ಅತ್ಯಂತ ವಿಸ್ಮ ಯಗೊಂಡರು. ಅವರ ಬಾಯಿಂದ ಕೆಲಹೊತ್ತಿನವರೆಗೆ ಮಾತುಗಳೇ ಹೊರಡಲಿಲ್ಲ. ಬಳಿಕ ಅವರಲ್ಲಿ ಒಬ್ಬ ದಾಸಿಯು ಶಕ್ತಿಮಯಿಯ ನ್ನು ಕುರಿತು—''ಇವು ಹೊಲಸಾಗಿವೆಯೊ? ಈ ಇಂಥ ಅತ್ಯು ತ್ತಮ ವಸ್ತ್ರಗಳು ತಮಗೆ ಲಭಿಸಬೇಕೆಂದು ಮೂವರು ಬೇಗಮ್ಮರು ಬಲು ಸಾಹಸ ಪಟ್ಟಿದ್ದರು. ಆದರೆ ಅವರ ದುರ್ದೈವವು ಅವರಿಗೆ ಅವನ್ನು ಲಭಿಸಗೊಡಲಿಲ್ಲ'' ಎಂದಳು. ಮತ್ತೊಬ್ಬ ದಾಸಿಯು- ''ನಬಾಬಸಾಹೇಬರವರ ತಾಯಿಯವರಾದ ಸುಲತಾನಸಾಹೇಬರು ಉಟ್ಟುಕೊಂಡ ಪೀತಾಂಬರಗಳಿವು. ಅವರು ಗತಿಸಿದಬಳಿಕ ಎಷ್ಟೋ ಸುಲ್ತಾನಿಯರು ಇವುಗಳ ಮೇಲೆ ಕಣ್ಣಿಟ್ಟಿದ್ದರು. ಆದರೆ ನಬಾಬ ಸಾಹೇಬರು ತಮ್ಮ ತಾಯಿಯ ಸ್ಮರಣವೆಂದು ಇವನ್ನು ಯಾರಿಗೂ ಕೊಡದೆ ಇಟ್ಟುಕೊಂಡಿದ್ದರು. ಅಂಥ ಉತ್ತಮ ವಸ್ತ್ರಗಳಿವು. ಇವು ಹೊಲಸೆ?'' ಎಂದಳು. ಆದರೆ ಶಕ್ತಿಯು ಅವರ ಮಾತಿಗೆ ವಿಸ್ಮಯ ಪಡದೆ ತುಸನಕ್ಕು—''ಇವು ನನಗೆ ಅವಶ್ಯವಿಲ್ಲ. ನೂತನ ಬೇಗಮ್ಮರ ಕಾಣಿಕೆಯೆಂದು ಈ ವಸ್ತ್ರಗಳಲ್ಲಿ ಒಂದೊಂದನ್ನು ಇವನ್ನು ಅಪೇಕ್ಷಿಸಿದ್ದ ಆ ಪೂರ್ವದ ಬೇಗಮ್ಮರಿಗೆ ಕೊಟ್ಟು ಬಿಡಿ ರಿ.'' ಎಂದು ತಿಳಿಸಲು ದಾಸಿಯರು—''ಜೀ-ಹುಕುಂ'' ಎಂದು

ಹೇಳಿ ಅದರಂತೆ ಮಾಡಿದರು. ಬಳಿಕ ಮತ್ತೊಬ್ಬ ದಾಸಿಯು— ಬೇಗಮ್ಮ ಸಾಹೇಬ, ತಮಗೆ ಉಟ್ಟುಕೊಳ್ಳಲಿಕ್ಕೆ ಯಾವ ವಸ್ತ್ರವನ್ನು ತರಲಿ; ಎಂದು ಕೇಳುತ್ತ ನಾನಾನಾನಾ ವಿಧದ ವಸ್ತ್ರಗಳನ್ನು ತೋರಿಸುತ್ತಿದ್ದಳು. ಆಗ ಶಕ್ತಿಮಯಿಯು ಅವುಗಳೊಳಗಿಂದ ಪಚ್ಚದಂಚಿನ ಒಂದು ಮನೋಹರವಾದ ಶುಭ್ರಪತ್ತಲವನ್ನೂ ಬಂಗಾರಬಳಿಯ ಒಂದು ಸುಂದರ ಕುಪ್ಪಸವನ್ನೂ ತನಗಾಗಿ ತೆಗೆದಿಡಲಿಕ್ಕೆ ಸೂಚಿಸಿದಳು.

ಸ್ನಾನಾನಂತರ ಶಕ್ತಿಯು ಆ ವಸ್ತ್ರಗಳನ್ನು ಧರಿಸಿಕೊಂಡು ಹಾಸಿಗೆಯ ಮೇಲೆ ಲೋಡಿಗಾತು ಕುಳಿತು ವಿಶ್ರಾಂತಿಯನ್ನು ಹೊಂದುತ್ತಲಿದ್ದಳು. ಸಖಿಯರಲ್ಲಿ ಕೆಲವರು ಆಕೆಯ ಕೂದಲುಗಳನ್ನು ಒರಿಸುತ್ತಿದ್ದರು. ಕೆಲವರು ಅವಳ ಕೈಕಾಲುಗಳನ್ನು ಒರಿಸುತ್ತಿತ್ತಿದ್ದರು. ಬೇರೆ ಕೆಲವರು ಅವಳ ಕಾಲುಗಳಿಗೆ ಮದರಂಗಿಯ ಹೂಗಳ ಬಣ್ಣದಿಂದ ಜಾವಡಿಗೆಯನ್ನು ಹಚ್ಚುತ್ತಿದ್ದರು. ಮತ್ತೆ ಕೆಲವರು ಅತ್ತರ-ಗುಲಾಬಗಳನ್ನು ಆಕೆಗೆ ಹಚ್ಚುತ್ತಿದ್ದರು. ಇಬ್ಬರು ದಾಸಿಯರು ಬಳಿಯಲ್ಲಿಯೇ ಇದ್ದ ಗಹನವಾದ ತಿಜೋರಿಯೊಳಗಿಂದ ಅಮೂಲ್ಯ ವಸ್ತ-ಒಡವೆಗಳನ್ನು ತೆಗೆತೆಗೆದು ಶಕ್ತಿಮಯಿಗೆ ಇಡುತ್ತಿದ್ದರು. ಶಕ್ತಿಯು ಈ ಪ್ರಕಾರದ ಮಣಿರತ್ನಗಳ ಅನುಪಮ ಕಾಂತಿಯನ್ನು ಎಲ್ಲಿಯೂ ನೋಡಿದ್ದಿಲ್ಲ. ವಸ್ತ-ಒಡವೆಗಳನ್ನು ಧರಿಸುವದಾದ ಬಳಿಕ ಶಕ್ತಿಯು ಪುನಃ ಆ ಕನ್ನಡಿಯ ಮಹಾಲಿಗೆ ಬಂದಳು. ನವಾಬ ಗಾಯುಸುದ್ದೀನನು ಇಷ್ಟರಲ್ಲಿ ಅಲ್ಲಿಗೆ ಬಂದು ಕುಳಿತಿದ್ದನು. ಅವನ ಎದುರಿಗಿನ ಕನ್ನಡಿಗಳಲ್ಲಿ ಜಿಂದಿನಿಂದ ಬರುವ ಸಾಲಂಕೃತ ಶಕ್ತಿಯ ಮೂರ್ತಿಯು ಪ್ರತಿಬಿಂಬಿತವಾಯಿತು. ಆ ಪ್ರತಿಛಾಯೆಯನ್ನು ನೋಡಿ ಶಕ್ತಿಯು ತನ್ನನ್ನು ತಾನೇ ಗುರ್ತಿಸದಾದಳು. ಇದಕೆಪ ಭುವನ ಮೋಹಕ ಮೂರ್ತಿಯು!

ಆದರೆ ಶಕ್ತಿಮಯಿ, ಈ ಸುಂದರ ರೂಪವನ್ನು ನೀನು ಇಲ್ಲಿ ಯಾರಿಗೆ ತೋರಿಸ ಬಂದಿರುವೆ? ಯಾರ ಸಲುವಾಗಿ ಈ ನಿನ್ನ ಸಿದ್ಧತೆಯು? ಹಾಗು ಯಾವ ತರದ ಸುಖ ಭೋಗಿಸಬೇಕೆನ್ನುವೆ? ಮುಂತಾದ ವಿಚಾರಗಳು ಅವಳ ಮನಸ್ಸಿನಲ್ಲಿ ಮನೆ ಮಾಡಲು, ಒಂದೊಂದೇ ದುಃಖಾಶ್ರುಗಳು ಅವಳ ಕಣ್ಣುಗಳಿಂದ ಬಳ ಬಳ ಉದುರ ತೊಡಗಿದವು!

ಹಾಯ್! ಸುಖವೆಲ್ಲಿಯದು? ಎಲ್ಲಿಯ ವರೆಗೆ ಗಣೇಶದೇವನು ಅವಳ ಪರಿಣತ ಪತಿಯಾಗುವದಿಲ್ಲವೋ, ಅಲ್ಲಿಯವರೆಗೆ ವಿಪುಲ ದ್ರವ್ಯ-ಐಶ್ವರ್ಯ-ಅಧಿಕಾರಗಳಿಂದ ಆ ಅತ್ಯಂತ ಮಾನೀ ಸ್ವಭಾವದ ಶಕ್ತಿಮಯಿಗೆ ಸುಖವೆನಿಸಬಹುದೇ? ದುಡ್ಡಿನ ಸುಖವು ಯಾರಿಗೆ? ಯಾರು ಕೇವಲ ದ್ರವ್ಯಲೋಭಕ್ಕಾಗಿ, ಸುಖದ ಆಶೆಗಾಗಿ ಸ್ವದೇಶವನ್ನು ವಿಕ್ರಯ ಮಾಡಿಕೊಳ್ಳುವಂಥ ಗರ್ಹಣೀಯ ಕೆಲಸಕ್ಕೆ ಕೈ ಹಾಕಿ ಆತ್ಮ ಸನ್ಮಾನವನ್ನು ಕೂಡ ಮಣ್ಣುಪಾಲು ಮಾಡಲು ತತ್ಪರರಾಗುವರೋ ಅವರಿಗೇ ಆ ನಿರ್ಜೀವ ದುಡ್ಡಿನ ಸುಖವು; ಆದರೆ ಶಕ್ತಿಯು ದುಡ್ಡಿನ ಲೋಭದಿಂದ ನವಾಬನ ಕೈ ಹಿಡಿದಿದ್ದಳೇನು? ಇಲ್ಲ, ಹಾಗಿಲ್ಲ; ನವಾಬನನ್ನು ಕೈವಶಮಾಡಿಕೊಂಡು ಅವನಿಂದ ಕುಮಾರ ಗಣೇಶದೇವನ ಹಾಗು ಅವನ ತಾಯಿಯ ಸೇಡು ತೀರಿಸಿಕೊಳ್ಳುವ ಹವ್ಯಾಸಕ್ಕಾಗಿ ಅವಳು ಪ್ರಯತ್ನಪಡುತ್ತಿದ್ದಳು. ಆದರೆ ಈಗ ಸೇಡಿನ ಭ್ರಾಂತಿಯಡಗಿ ಆತ್ಮ ಮರ್ಯಾದೆಯು ಕೂಡ ಲೋಪವಾಗುವ ಪ್ರಸಂಗವು ಅವಳ ಕಣ್ಣಿಗೆ ಕಟ್ಟಲು ಅವಳು ತನ್ನನ್ನು ಕುರಿತು— ಶಕ್ತೀ, ಇದೇ ಏನು ನಿನ್ನ ಸೇಡುತೀರಿಸಿಕೊಳ್ಳೋಣವು? ಎರಡನೆಯವರನ್ನು ಕೊಲ್ಲಲಿಚ್ಛಿಸಿದ ನೀನು ಸ್ವತಃ ಸಾಯುತ್ತಿರುವಿಯಲ್ಲ? ಎಂದು ಹಿಯ್ಯಾಳಿಸಿಕೊಂಡಳು. ಆಕೆಯು ಈಗ ಒಬ್ಬ ಮುಸಲ್ಮಾನ ನವಾಬನ ಹೆಂಡತಿಯಾದ್ದರಿಂದ ಥಟ್ಟನೆ ಹೋಗಿ ಸ್ವಜನರನ್ನು ಕೂಡ ಕೂಡುವಂತಿದ್ದಿಲ್ಲ. ಅದರಿಂದ ಪಿಶಾಚಿಯಂತೆ ಅವಳ ಮನಸ್ಸು ಚಂಚಲವಾಯಿತು. ಕೆಲ ಹೊ

ತ್ರಿನ ಮೇಲೆ ಅವಳ ಹೃದಯವು ಅನಂತ ವಿರುದ್ಧ ವಿಚಾರಗಳಿಂದ ಘಾಸಿಯಾಗಲು ಅವಳ ಕಣ್ಣುಗಳೊಳಗಿಂದ ದುಃಖಾಶ್ರುಗಳು ಧಾರೆಗಟ್ಟಿ ಸುರಿದದ್ದರಲ್ಲಿ ಸೋಜಿಗವೇನು?

ಆಗ ಶಕ್ತಿಯ ಸ್ವಾಭಾವಿಕವಾದ ಉಗ್ರ-ಕಠೋರ ವೃತ್ತಿಯು ಮಾಯವಾಗಿ ಹೋಯಿತು. ಪ್ರೇಮ ವಿರಹದ ಅನುತಾಪದಿಂದ ಅವಳ ವೃತ್ತಿಯು ಅತ್ಯಂತ ಲೀನವಾಯಿತು. ಕೂಡಲೆ ಶಕ್ತಿಯು ಆ ಕನ್ನಡಿ ಮಹಾಲಿನ ತಲೆಬಾಗಿಲ ಬಳಿಯಿಂದ ಹಿಂದೆ ಹಿಂದಕ್ಕೆ ಸರಿದು ಅಲ್ಲಿಂದ ಹೊರಬಿದ್ದು ಸಮೀಪದ ಬೇರೊಂದು ಗೃಹಕ್ಕೆ ನಡೆದಳು. ಅವಳು ಅಲ್ಲಿಯ ಒಬ್ಬ ದಾಸಿಯನ್ನು ಕರೆದು ತನ್ನ ಹೊಸಲಿನ(ಹಳೆ) ಬಟ್ಟೆಗಳನ್ನು ತರಹೇಳಿದಳು. ಆಗ ದಾಸಿಯು—ಬೇಗನೆ ಸಾಹೇಬ, ನವಾಬಸಾಹೇಬರು ಕರೆಯುತ್ತಿರುವರು, ಬೇಗನೆ ಸಾಗುವವಾಗಬೇಕು, ಎಂದು ಪ್ರಾರ್ಥಿಸಿದಳು. “ಈಗಲೆ ಬರುವೆನೆ” ಎಂದು ಹೇಳು; ಹಾಗು ನೀನು ಆ ವಸ್ತ್ರಗಳನ್ನು ಬೇಗನೆ ತಕ್ಕೊಂಡು ಬಾ, ಎಂದು ಹೇಳುತ್ತ ಶಕ್ತಿಯು ತನ್ನ ಮೈಮೇಲೆ ಒಂದು ಗಳಿಗೆಯ ಪೂರ್ವದಲ್ಲಿ ಇಟ್ಟಿದ್ದ ಎಲ್ಲ ವಸ್ತ್ರ ಒಡವೆಗಳನ್ನು ತೆಗೆತೆಗೆದು ನೆಲದ ಮೇಲೆ ಇಡಹತ್ತಿದಳು. ದಾಸಿಯು ಹಳೇ ಬಟ್ಟೆಯನ್ನು ತಂದಳು. ಕೂಡಲೆ ಶಕ್ತಿಯು ಅದನ್ನು ಉಟ್ಟುಕೊಂಡು ಆ ಹೊಸ ವಸ್ತ್ರವನ್ನು ಕೂಡ ಬಿಚ್ಚಿಟ್ಟಳು. ಹೀಗೆ ಶಕ್ತಿಯು ತನ್ನ ಸಾಮಾನ್ಯ ವೇಷವನ್ನು ಧರಿಸಿಕೊಂಡು ನವಾಬ ಗಾಯುಸುದ್ದೀನನಿದ್ದ ಕನ್ನಡಿಯ ಮಹಾಲಿಗೆ ಪುನಃ ಬಂದಳು. ತನ್ನ ಪ್ರತಿಬಿಂಬವನ್ನು ನೋಡಿ ಅವಳಿಗೆ ಈಗ ಬಹು ಸಮಾಧಾನವೆನಿಸಿತು. ಆದರೆ ಗಾಯುಸುದ್ದೀನನು ಶಕ್ತಿಯ ಆ ವೇಷ ಭೂಷಣಗಳನ್ನು ನೋಡಿ ಬೆರಗಾಗಿ—ಶಕ್ತಿಮಯೀ, ಈ ದರಿದ್ರ ವೇಷವು ವಂಗೇಶ್ವರಿಗೆ ತಕ್ಕದ್ದೇ? ಎಂದು ಕೇಳಿದನು.

ಶಕ್ತಿ—ಇನ್ನೂ ನಾನು ವಂಗೇಶ್ವರಿಯಾಗಿರುವದಿಲ್ಲ. ಪ್ರಸ್ತುತದ ಯುದ್ಧವು ಪೂರೈಸುವವರೆಗೆ ನಾನು ಈ ವೇಷದಿಂದಲೇ ಇರತಕ್ಕವಳು.

ಎಂದು ನಿಶ್ಚಯದ್ಯೋತಕ ಸ್ವರದಿಂದ ನುಡಿದಳು.

ಗಾಯಸುದ್ದೀನ— ಪ್ರಿಯತಮೇ, ನಿನ್ನ ಸಲುವಾಗಿ ನಾನು ನನ್ನ ತನು-ಮನ-ಧನಗಳನ್ನೆಲ್ಲ ನಿವಾಳಿಸಿ ಚಲ್ಲಿರುವೆನು. ನೀನು ನಿನ್ನ ಸುಹಾಸ್ಯವದನದಿಂದ ನನ್ನ ಮನಃಕಾಮನೆಗೆ ಸಮ್ಮತಿಸಿ, ಈ ಸಂಕಟ ಸಮಯದಲ್ಲಿ ನನ್ನ ಸಾಮರ್ಥ್ಯವನ್ನು ವೃದ್ಧಿಗೊಳಿಸು; ನೀನು ಒಪ್ಪದಿದ್ದರೆ ಮಾತ್ರ ನಾನು ನನ್ನ ಸರ್ವಸ್ವಕ್ಕೂ ಖಂಡಿತವಾಗಿ ಎರವಾಗಬೇಕಾಗುವದು. ಎಂದು ನುಡಿಯುತ್ತ ನವಾಬನು ಶಕ್ತಿಯನ್ನು ತನ್ನ ಬಾಹುದ್ವಯಗಳಿಂದ ಬಿಗಿಯುವದಕ್ಕಾಗಿ ಮುಂದರಿಯ ಹತ್ತಿದನು. ಆಗ ಶಕ್ತಿಯು ತುಸ ಹಿಂದಕ್ಕೆ ಸರಿದು ನಿಂತು ದೃಢಸ್ವರದಿಂದ ನುಡಿದಳೇನಂದರೆ—"ಜಹಂಪನಾ, ನನ್ನನ್ನು ಸ್ಪರ್ಶ ಮಾಡಬೇಡಿರಿ. ಈ ಯುದ್ಧವುಮುಗಿಯುವವರೆಗೆ ನಿಮ್ಮ ಸ್ಪರ್ಶಮಾಡಲಿಕ್ಕಿಲ್ಲೆಂದು ನಾನು ಶಪಥ ಮಾಡಿರುತ್ತೇನೆ..".

ಗಾಯಸುದ್ದೀನನು ಚಿತ್ರಗೊಂಬೆಯಂತೆ ಸ್ತಬ್ಧನಾಗಿ ನಿಂತುಬಿಟ್ಟನು. ತುಸ ನಿಮಿಷಗಳಾದ ಬಳಿಕ ಅವನ ಕಣ್ಣುಗಳಿಂದಕ್ರೋಧಾಗ್ನಿಯ ಜ್ವಾಲೆಗಳು ಹೊರಸೂಸಹತ್ತಿದವು. ಆಗ ಅವನು—ನೀನು ನನ್ನ ಹೆಂಡತಿಯು, ನನ್ನ ಸಂಪತ್ತನ್ನೆಲ್ಲ ನಿನ್ನ ಸಲುವಾಗಿ ನಾನು ವೆಚ್ಚ ಮಾಡಲಿಕ್ಕೆ ಸಿದ್ಧನಾಗಿರುತ್ತೇನೆ. ಹೀಗಿದ್ದು ನೀನು ನನ್ನ ಅಜ್ಞೆಯಂತೆ ವರ್ತಿಸಲಿಕ್ಕೆ ಒಪ್ಪುವದಿಲ್ಲವೆ? ಎಂದನು.

ಅದನ್ನು ಕೇಳಿ ಶಕ್ತಿಯೂ ಸಿಟ್ಟುಬೆಂಕಿಯಾದಳು. ಆಗ ಅವಳು—ಹಾಗಾದರೆ ನಾನು ನಿಮ್ಮ ಹೆಂಡತಿಯಾಗುವದಿಲ್ಲ. ನನ್ನನ್ನು ಬಿಟ್ಟುಗೊಡಲಿಕ್ಕೆ ಆಜ್ಞಾಪಿಸಿರಿ: ಅಂದರೆ ನಾನು ಈಗಲೇ ನನ್ನ ಮನಸ್ಸಿಗೆ ಬಂದಲ್ಲಿ ಹೊರಟುಹೋಗುವೆನು, ಎಂದು ಸ್ಪಷ್ಟವಾಗಿ ಹೇಳಿಬಿಟ್ಟಳು.

ಇದೇ ಕಾಲಕ್ಕೆ—"ಜಹಾಂಪನಾ, ಹೊರಗೆ ಕುತುಬನು ಬಂ

ದಿದ್ದಾನೆ. ತಮ್ಮನ್ನು ಬೇಗನೇ ಕರೆಯಬೇಕೆನ್ನುವನು. ತಡವಾದರೆ ಘಾತ ವಾಗುವದಂತೆ'' ಎಂದು ಒಬ್ಬ ದಾಸಿಯು ಕೇವಲ ಅಂಜಿದವಳಾಗಿ ನುಡಿದು ಹೊರಟುಹೋದಳು.

ಆದರೆ ಕುತುಬನು ಹೇಳಿಕಳಿಸಿದ ಅತಿಜರೂರಿಯ ಆ ಮಾತಿನ ಕಡೆಗೆ ಲಕ್ಷ್ಯಗೊಡಲಿಕ್ಕೆ ನವಾಬನ ಮನಸ್ಸು ಸ್ಥಿರವಿದ್ದಿಲ್ಲ. ಶಕ್ತಿಯು ತನ್ನ ಬೆದರಿಕೆಗೆ ಸೊಪ್ಪುಹಾಕುವವಳಲ್ಲೆಂಬದನ್ನು ಅರಿತು ಅವನು ಆಕೆಯನ್ನು ಕುರಿತು ನಡಗುವ ದನಿಯಿಂದ—ಪ್ರಿಯತಮೆಯೇ, ಕ್ಷಮಿಸು. ನಾನು ನಿನ್ನ ಆಜ್ಞಾಧಾರಕಗುಲಾಮನು. ಯುದ್ಧದಲ್ಲಿ ಬದುಕಿ ಉಳಿದೇನೆಂಬ ನಿಶ್ಚಯವು ನನಗಿಲ್ಲ. ಒಂದುವೇಳೆ ಸತ್ತರೂ ನಿನ್ನ ಪ್ರೇಮಾಲಿಂಗನಹೊಂದಿ ಸತ್ತರೆ ನನಗೆ ದುಃಖವೆನಿಸಲಿಕ್ಕಿಲ್ಲ. ಆದ್ದರಿಂದ ಪ್ರಿಯೇ ಶಕ್ತಿಮಯಿ, ಬಾ ಇತ್ತ ಬಾ, ನಿನ್ನನ್ನು ಬಿಗಿಯಾಗಿ ಅಪ್ಪಿಕೊಳ್ಳ.........ಎಂದು ಕೇಳಿಕೊಂಡನು. ಆದರೆ ಶಕ್ತಿಯು ನವಾಬನ ಆ ನಿಕೃಷ್ಟ ಪಕ್ಷದ ವಿನಂತಿಗೆ ಕೂಡ ಸಮ್ಮತಿಸದೆ—ಜಹಾಂಪನಾ, ನಾನು ಸುಳ್ಳು ಹೇಳುವದಿಲ್ಲ. ಎಲ್ಲಿಯ ವರೆಗೆ ಈ ಯುದ್ಧವು ಪೂರೈಸುವದಿಲ್ಲವೋ ಅಲ್ಲಿಯ ವರೆಗೆ ನಮ್ಮಿಬ್ಬರಲ್ಲಿ ಪತಿಪತ್ನಿಯರ ಸಂಬಂಧ ವಿರಲಾರದು. ಯುದ್ಧವು ಪೂರೈಸಿ ನಾವಿಬ್ಬರೂ ಜೀವದಿಂದ ಉಳಿದರೆ, ನಾನು ನನ್ನ ಮಾತನ್ನು ಪಾಲಿಸಲಿಕ್ಕೆ ತಪ್ಪಲಿಕ್ಕಿಲ್ಲ. ನೀವು ನನ್ನನ್ನು ಅಲ್ಲಿಯ ವರೆಗೆ ಪ್ರತಿಬಂಧಿಸಿಡುವ ಯೋಚನೆಯನ್ನು ಒಂದು ವೇಳೆ ಮಾಡಬಹುದು. ಆದರೆ ತಮ್ಮ ಆ ನೂರಾರು ಕಾವಲುಗಾರರ ಕಣ್ಣಿಗಳಲ್ಲಿ ಮಣ್ಣು ತೂರಿ ಪಾರಾಗಿ ಹೋಗುವ ಸಾಮರ್ಥ್ಯವು ಈ ದೀನ ವೇಷದ ಬಾಲಿಕೆಯಲ್ಲಿರುವದೆಂಬದನ್ನು ಸ್ಪಷ್ಟವಾಗಿ ಈಗ ತಮಗೆ ತಿಳಿಸಿಡುತ್ತೇನೆ,ಎಂದು ನುಡಿಯುತ್ತಿರಲು,ಮಹಾಲಿನ ಹೊರಬದಿಯಲ್ಲಿಕೋಲಾಹಲ ಧ್ವನಿಯಾಗುತ್ತಿರುವದು ಸ್ಪಷ್ಟವಾಗಿ ಕೇಳಬರಹತ್ತಿತು. ಅಷ್ಟರಲ್ಲಿ ಕುತುಬನು ನವಾಬನು ಹೊರಗೆ ಬರುವ ಹಾದಿಯ ನೋಡ

ದೆ ತಟ್ಟನೆ ಆ ಮಹಾಲಿನೊಳಗೇ ಬಂದು ನವಾಬನಿಗೆ—ಅಂತಃಪುರದ ವರೊಡನೆ ಸಂವಾದಮಾಡುತ್ತ ಕೂಡುವಸಮಯವಿಲ್ಲ; ವಿಲಂಬಮಾಡಿದರೆ ನವಾಬ, ನಮ್ಮ ಪಕ್ಷದವರೆಲ್ಲರೂ ಶತ್ರುಗಳ ಅಧೀನರಾಗಬೇಕಾದೀತು. ದಾಸಿಯರೆಲ್ಲರೂ ದಾರಿಸಿಕ್ಕತ್ತ ಪಲಾಯನಹೇಳಿದರು. ಬೇಗಮ್‌ಸಾಹೇಬರನ್ನು ಈ ಅರಣ್ಯದ ಯಾವದೊಂದು ಗುಪ್ತಸ್ಥಳದಲ್ಲಿರಿಸಿ ನಾವು ಮುಂದಿನ ಕೆಲಸಕ್ಕೆ ಹತ್ತೋಣ. ಹೂ, ನಡೆಯಿರಿ ಬೇಗ, ಎಂದು ನುಡಿದನು.

ಸುಖವೆಲ್ಲಿಯದೆ, ಸಮಾಧಾನವೆಲ್ಲಿಯದೆ, ಆನಂದವೆಲ್ಲಿಯದೆ? ಯಾವ ಗಾಯಸುದ್ದೀನನು ಶಕ್ತಿಯ ಸಲುವಾಗಿ ತನ್ನ ಸರ್ವಸ್ವವನ್ನು ತ್ಯಜಿಸಿ ಸುಖಪಡಬೇಕೆಂದು ಬಯಸಿದ್ದನೋ ಅವನಿಗೆ ಆಯತ ಸಮಯದಲ್ಲಿ ಭಯಂಕರವಿಪತ್ತು ಪ್ರಾಪ್ತವಾಗಲು, ಅವನು ತನ್ನ ಎಲ್ಲ ವಿಚಾರಗಳನ್ನು ಅಲ್ಲಿಂದಲ್ಲಿಯೇ ಬದಿಗೊತ್ತಿ ಕಡುದುಃಖಕ್ಕೀಡಾಗಬೇಕಾಯಿತು. ಆದರಂತೆ ಶಕ್ತಿಮಯಿಗೆ ತನ್ನ ಮನಸ್ಸಿನ ವಿರುದ್ಧವಾದ ಕೆಲಸವನ್ನು ಒತ್ತಾಯದಿಂದಾದರೂ ಮಾಡುವ ಪ್ರಸಂಗವೊದಗಿರಲು, ಅನಾಯಾಸವಾಗಿ ಪ್ರಾಪ್ತವಾದ ಈ ಸಂಧಿಯಿಂದ ಆ ಹೊತ್ತಿನ ಮಟ್ಟಿಗಾದರೂ ಅವಳಿಗೆ ಬಹು ಸಂತೋಷವೆನಿಸಿತು.

ವಾಚಕರೇ, ಹೀಗೆ ಸಂಸಾರಸಾಗರದಲ್ಲಿ ಸುಖದುಃಖಗಳ ತೆರೆಗಳು ಆಗಾಗ್ಗೆ ಉಂಟಾಗುತ್ತಿರುವದು ಸ್ವಾಭಾವಿಕವಾಗಿದ್ದರೂ, ಮನುಷ್ಯನು ಪ್ರಸಂಗದಲ್ಲಿ ನಿಜಸ್ಥಿತಿಯನ್ನು ತಿಳಕೊಳ್ಳಲಾರದೆ, ಈ ಸಂಸಾರವು ಸುಖವೋ, ದುಃಖವೋ? ಎಂಬ ಭ್ರಾಂತಿಗೀಡಾಗುವನು!

ಹನ್ನೊಂದನೆಯ ಪ್ರಕರಣ.

ಪುಷ್ಕರಿಣಿಯ ದಂಡೆಯಲ್ಲಿ

ಏಂಹಾರ ಪಟ್ಟಣದ ಒಂದು ಬದಿಯಲ್ಲಿ ಅರಣ್ಯದ ಎತ್ತರವಾದ ತಪ್ಪಲು ಪ್ರದೇಶದಲ್ಲಿ ಗಣೇಶದೇವನು ತನ್ನ ದಂಡಿನ ಬೀಡು ಬಿಟ್ಟಿದ್ದನು. ಅವನ ಬಿಡಾರದ ಕೆಳಗಡೆಗೆ ತುಸ ಅಂತರದಲ್ಲಿ ಮಧ್ಯಮಾಕಾರದ ಒಂದು ತಿಳಿನೀರಿನ ಪುಷ್ಕರಿಣಿಯಿತ್ತು. ಅಂಥ ಆ ಘೋರಾರಣ್ಯದಲ್ಲಿ ಈ ಸುಂದರವಾದ ಪುಷ್ಕರಿಣಿಯು ದೇವತಾನುಗ್ರಹದಿಂದ ಉಂಟಾಗಿರುವದೆಂದು ಲೋಕ ಜನವಾರ್ತೆಯಿತ್ತು. ಒಮ್ಮೆ ಗಣೇಶದೇವನು ತನ್ನ ಅಲ್ಪಸಂಖ್ಯಾಕ ಸೈನಿಕರೊಡನೆ ಶತ್ರುಗಳ ಕೈಯಲ್ಲಿ ಸಿಕ್ಕನು. ಆಗ ಹೋರಾಡಿ ನಿಷ್ಕಾರಣವಾಗಿ ಸಾಯುವದಕ್ಕಿಂತ ಸದ್ಯಕ್ಕೆ ಓಡಿಹೋಗಿ ಪಾರಾಗಬೇಕೆಂದು ನಿಶ್ಚಯಿಸಿ ಅವನು ತನ್ನ ದಂಡಿನೊಡನೆ ಪಲಾಯನ ಹೇಳಿದನು. ಆಗ ಗ್ರೀಷ್ಮಕಾಲವಿತ್ತು. ದಂಡಾಳುಗಳು ಬೆಳಗಿನಿಂದ ಸಾಯಂಕಾಲದವರೆಗೆ ಒಂದೇಸವನೆ ಓಡಿ ಓಡಿ ಒಮ್ಮೆ ಶತ್ರುಗಳ ಕಣ್ಣು ಮರೆಯಾದರು. ಆದರೆ ಬಿಸಲಿನಲ್ಲಿ ಅಖಂಡವಾಗಿ ಓಡಿಬಂದದ್ದರಿಂದ ಆ ಸೈನಿಕರ ಹಾಗು ಅವರ ಕುದುರೆಗಳ ಗಂಟಲುಗಳು ಬಾಯಾರಿಕೆಯಿಂದ ಒಣಗಿಹೋಗಿದ್ದವು. ಪ್ರತಿಯೊಬ್ಬರಿಗೆ ಒಂದೊಂದು ಬೊಗಸೆ ನೀರಾದರೂ ಸಿಗದಿದ್ದರೆ ಆಗ ಅವರ ಇಹಲೋಕದ ಯಾತ್ರೆಯು ಸಮೀಪಿಸಿದಂತಾಗಿತ್ತು. ಆದುದರಿಂದ ಗಣೇಶದೇವನು ತನ್ನ ಸೈನಿಕರೊಡನೆ ಆ ಇಡಿ ಅರಣ್ಯದಲ್ಲಿ ನೀರಿಗಾಗಿ ಅಡ್ಡಾಡಹತ್ತಿದನು. ಎಲ್ಲಿಯೂ ಅವರಿಗೆ ನೀರಿನ ಸುಳುವು ಹತ್ತಲೊಲ್ಲದು. ಆಗ ಅವರು ತೀರ ಹತಾಶರಾದರು. ತಮ್ಮೆಲ್ಲರ ಪ್ರಾಣಗಳು ನೀರಿಲ್ಲದೆ ಹೋಗುವದು ನಿಶ್ಚಯವೆಂದು ಅವರು ಭಾವಿಸಿದರು. ಹೀಗೆ ಹತಾಶರಾದ ಆ ದಂಡಿನವರಿಗೆ ಅಂಥ ಘೋರಾರಣ್ಯದಲ್ಲಿ ಒಬ್ಬ ಸನ್ಯಾಸಿನಿಯು-ಯಾವ ಸನ್ಯಾಸಿನಿಯನ್ನು ಗಣೇಶದೇ

ವನು ಕೆಲವು ದಿವಸಗಳ ಶತ್ರುಗಳಿಂದ ಪೂರ್ವದಲ್ಲಿ ಮುಕ್ತಮಾಡಿಸಿದ್ದನೋ ಆ ಯೋಗಿನಿಯು—ತನ್ನ ತಲೆಯ ಮೇಲೆ ಕೆಲವು ಆಹಾರ್ಯ ಪದಾರ್ಥಗಳನ್ನು ಹೊತ್ತುಕೊಂಡು ತನ್ನ ಕಡೆಗೆ ಬರುತ್ತಿರುವಹಾಗೆ ಕಂಡಳು. ಕೂಡಲೆ ಗಣೇಶದೇವನಿಗೆ ಮತ್ತಿಷ್ಟು ಯೋಚನೆಯುಂಟಾಯಿತು. ಯಾಕಂದರೆ ಯಾವಳನ್ನು ಬಿಡುಗಡೆಮಾಡಿದ ಸಲುವಾಗಿ ಈ ಘೋರ ಸಂಗ್ರಾಮವು ನಡೆದಿರುವದೋ ಅದೇ ಇವಳು ಪುನಃ ಆ ಶತ್ರುಗಳ ಮಧ್ಯದಲ್ಲಿ ಬರುತ್ತಿರುವದನ್ನು ನೋಡಿ ಅವನಿಗೆ ಚಿಂತೆಯುಂಟಾದ್ದರಲ್ಲಿ ಅರಿದೇನು? ಆದರೆ ಯೋಗಿನಿಯು ಸ್ವತಃ ಆ ಯಾವ ಭಯಕ್ಕೂ ಅಂಜದೆ ನೆಟ್ಟಗೆ ಗಣೇಶದೇವನ ಬಳಿಗೆ ಬಂದಳು. ಹೆಚ್ಚಾದ ನೀರಡಿಕೆಯಿಂದ ಗಣೇಶದೇವನಿಗೆ ಯೋಗಿನಿಯಕೂಡ ಮಾತಾಡಲಿಕ್ಕೆ ಸಹ ಬರಲಿಲ್ಲ. ಆಗ ಅವನು ತನ್ನ ಬೊಗಸೆಯನ್ನು ಬಾಯಿಗೆ ಹಚ್ಚಿ ನೀರು ಸಿಕ್ಕರೆಮಾತ್ರ ತಾವು ಉಳಿಯುವೆವೆಂಬದನ್ನು ಬಹು ದೈನ್ಯದಿಂದ ಯೋಗಿನಿಗೆ ಸೂಚಿಸಿದನು.

"ಸಂತಃ ಸ್ವಯಂ ಪರಹಿತೇಷು ಕೃತಾಭಿಯೋಗಃ" ಎಂಬಂತೆ ಸಂತ-ಸಜ್ಜನರೂ ಸಾಧುಸನ್ಯಾಸಿಗಳೂ ಪರಹಿತಕ್ಕಾಗಿ ಸದಾ ಟೊಂಕಕಟ್ಟಿರುವದು ಸ್ವಾಭಾವಿಕವು. ಯೋಗಿನಿಯು ಗಣೇಶದೇವನ ಹಾಗು ಅವನ ಸೈನಿಕರ ಅತ್ಯಂತ ದೀನ ಮುಖಮುದ್ರೆಗಳನ್ನು ನೋಡಿ ಬಹು ಅಸಮಾಧಾನಪಟ್ಟಳು. ಅದರಿಂದ ಅವಳ ಕಂಠವು ಬಿಗಿದುಬಂದಿತು. ಆಗ ಅವಳು ಎದುರಿಗಿನ ಒಂದು ಅಶ್ವತ್ಥವೃಕ್ಷದ ಕಡೆಗೆ ಬೊಟ್ಟುತೋರಿಸಿ—ಆ ಗಿಡದ ಕೆಳಗೆ ನೋಡಿದಿರೇನು? ಅಲ್ಲಿಯೊಂದು ಪುಷ್ಕರಿಣಿಯಿರಬಹುದಾಗಿದೆ ಎಂದು ಹೇಳಿದಳು. ಆದರೆ ಗಣೇಶದೇವನು ಆಕೆಯು ತೋರಿಸಿದ ಆ ಗಿಡದಕಡೆಗೆ ನೋಡಿ—ಈ ಇಡಿ ಅರಣ್ಯವನ್ನು ಶೋಧಿಸಿದರೂ ಎಲ್ಲಿಯೂ ನೀರು ಕಾಣಲೊಲ್ಲದು ಎಂದು ಹೇಳಲು, ಸನ್ಯಾಸಿನಿಯು ಪುನಃ ಆ ಗಿಡದಕಡೆಗೆ ಬೊಟ್ಟುತೋರಿಸಿ—ನನ್ನ ಮಾತಿನಲ್ಲಿ ಅವಿ

ಶ್ವಾಸವ ತಾಳಬೇಡಿರಿ. ಇನ್ನೊಮ್ಮೆ ಅಲ್ಲಿಯವರೆಗೆ ಹೋಗಿ ನೋಡಿಕೊಂಡು ಬರ್ರಿ, ಎಂದು ನುಡಿದು ತಾನೇ ಆ ಅಶ್ವತ್ಥವೃಕ್ಷದ ಕಡೆಗೆ ನಡೆದಳು. ಅವಳ ಹಿಂದಿನಿಂದ ಗಣೇಶದೇವನೂ ಅವನ ಸೈನಿಕರೂ ನಡೆದರು. ಗಿಡವು ಸಮೀಪಿಸಿದ ಹಾಗೆ ಅದರ ಕೆಳಗಿನ ಪುಷ್ಕರಿಣಿಯ ಸ್ವಚ್ಛ ನೀರು ಮೃಗಜಲದಂತೆ ಅವರಿಗೆ ಕಾಣಹತ್ತಿತು. ಆಗ ಬೇಸಿಗೆಯೊಳಗೆ ಹರಿಣ ಶಿಶುಗಳು ಮೃಗಜಲವನ್ನು ಕಂಡು ನೀರೆಂದು ಓಡುತ್ತ ಹೋಗುವಂತೆ ಗಣೇಶದೇವನ ಸೈನಿಕರೆಲ್ಲರೂ ಆ ಪುಷ್ಕರಿಣಿಯನ್ನು ಮುಟ್ಟಿದರು. ಆ ಚಿಕ್ಕ ಕೆರೆಯ ಸ್ವಚ್ಛವಾದ ನೀರನ್ನು ಕಂಡೊಡನೆಯೇ ಅವರ ನೀರಡಿಕೆಯು ಅರ್ಧಕ್ಕರ್ಧ ಕಡಿಮೆಯಾಗಿ ಹೋಯಿತು. ಆಗ ಅವರೆಲ್ಲರೂ ಸನ್ಯಾಸಿನಿಯ ಕಡೆಗೆ ಕೃತಜ್ಞತಾಪೂರ್ವಕವಾಗಿ ನೋಡುತ್ತ ಕೆರೆಯಲ್ಲಿಳಿದು ಮನದಣಿಯಾಗಿ ಜಲಪ್ರಾಶನ ಮಾಡಿದರು. ಅವರ ತೃಷಾಶಾಂತವಾಗಿ ಅಂದಿನ ಆ ಪ್ರಾಣಸಂಕಟದಿಂದ ಪಾರಾಗಲು ಅವರಿಗೆ ಅತ್ಯಂತ ಹರ್ಷವಾಗಿ ಅವರು ಸನ್ಯಾಸಿನಿಯ ಹಾಗು ಕುಮಾರ ಗಣೇಶದೇವನ ಜಯಜಯಕಾರ ಮಾಡಿದರು. ಬಳಿಕ ಅವರೆಲ್ಲರೂ ಗುಂಪುಗುಂಪಾಗಿ ಬಂದು ಸನ್ಯಾಸಿನಿಗೆಸಾಷ್ಟಾಂಗವೆರಗಿದರು. ಸನ್ಯಾಸಿನಿಯು ಅವರೆಲ್ಲರಿಗೆ ತಾನು ತಂದಿದ್ದ ಆಹಾರವನ್ನು ಸ್ವಲ್ಪ-ಸ್ವಲ್ಪಾಗಿ ಕೊಟ್ಟಳು. ಆದರಿಂದ ಅವರು ಪರಮ ಸಂತುಷ್ಟರಾಗಿ ವಿಶ್ರಾಂತಿಯನ್ನು ಅನುಭವಿಸುತ್ತಿರಲು, ಶತ್ರುಗಳ ಸೈನ್ಯವು ತೀರ ಸಮೀಪಕ್ಕೆ ಬಂದಿತು. ಶತ್ರುಗಳ ದಂಡಾಳುಗಳಾದರೂ ಬಿಸಿಲಿನ ತಾಪದಿಂದಲೂ ಬಾಯಾರಿಕೆಯಿಂದಲೂ ಕಂಗೆಟ್ಟಿದ್ದರು. ಆದರೆ ಗಣೇಶದೇವನು ಆ ಸಂಧಿಯನ್ನು ಸಾಧಿಸಿ ಶತ್ರುಗಳಿಗೆದುರಾಗಿ ತನ್ನ ತೀರ ತುಸ ದಂಡಿನಿಂದ ಬಾದಶಹನ ಬಹು ದೊಡ್ಡ ದಂಡನ್ನು ಸೋಲಿಸಿ ಬಿಟ್ಟನು. ಆ ದಿನ ಗಣೇಶದೇವನ ಪಕ್ಷದವರ ವಿಜಯಕ್ಕೆ ಆ ಪುಷ್ಕರಿಣಿಯೇ ಮೂಲಭೂತವಾದ್ದರಿಂದ, ಅಂದಿನಿಂದ ಆ ಚಿಕ್ಕ ಕೆರೆಗೆ ದೇವತಾನುಗ್ರಹದಿಂದುಂಟಾದ ಪುಷ್ಕರಿಣಿಯೆಂದು ಲೋಕವಾರ್ತೆಯುಂಟಾಯಿತು.

ಇಂಥ ಆ ಶುಭಕರವಾದ ಪುಷ್ಕರಿಣಿಯ ತೀರದಲ್ಲಿ ಗಣೇಶದೇವನು ಮೇಲೆ ಹೇಳಿದಂತೆ ತನ್ನ ದಂಡಿನ ತಳವೂರಿದ್ದನು. ಮಧ್ಯಾಹ್ನದಲ್ಲಿ ಚನ್ನಾಗಿ ಮಳೆಯಾಗಿ ಈಗ ಅದು ನಿಂತಿತ್ತು; ಆದರೂ ಆಕಾಶವು ಇನ್ನೂ ಮೋಡಗಳಿಂದ ಪರಿಪೂರ್ಣವಾಗಿತ್ತು. ಅದು ಶರದೃತುವಿನ ಕಾಲವಾದ್ದರಿಂದ, ಆ ದಿವಸ ಸಾಯಂಕಾಲದಲ್ಲಿ ನಸುಗೆಂಪಿನ ಅಥವಾ ಚಿನ್ನದ ಬಣ್ಣದಿಂದ ಸೂರ್ಯನು ಪರಿಶೋಭಿಸುತ್ತಲಿದ್ದನು. ಮಳೆಯಿಂದ ತೊಯ್ದ ಮರಗಳ ಎಲೆಗಳಿಂದ ಒಂದೊಂದೇ ನೀರಹನಿಗಳು ಟಪ ಟಪ ಎಂದು ಕೆಳಗಿನ ಹುಲ್ಲು ಪ್ರದೇಶದ ಮೇಲೆ ಬಿದ್ದು, ಮುತ್ತಿನಂತೆ ಹೊಳೆಯುತ್ತಿದ್ದವು. ಮನಸೋಕ್ತವಾಗಿ ಬೀಸುತ್ತಿರುವ ತಂಗಾಳಿಯಿಂದ ಆ ಪುಷ್ಕರಿಣಿಯ ಪೃಷ್ಠಭಾಗವು ಚಳಿ ಹತ್ತಿದ ಮನುಷ್ಯನಂತೆ ನಡುಗುತ್ತದೋ ಎಂಬಂತೆ ಸಣ್ಣಪುಟ್ಟ ತೆರೆಗಳನ್ನುಂಟುಮಾಡುತ್ತಲಿತ್ತು. ಭೃಂಗಗಳು ತೀರಪ್ರದೇಶದಲ್ಲಿಯ ಪುಷ್ಪಗಳ ಸುಗಂಧವನ್ನು ಹೀರಿಕೊಳ್ಳುತ್ತ ಇತ್ತಿಂದತ್ತ ಅತ್ತಿಂದಿತ್ತ ಹೀಗೆ ಎಡೆ ಬಿಡದೆ ಅತ್ಯಾನಂದದಿಂದ ಸಂಚರಿಸುತ್ತಿದ್ದವು. ಕೆರೆಯೊಳಗಿನ ಸಣ್ಣ ದೊಡ್ಡ ಕಪ್ಪೆಗಳ ಗೊಪ್-ಗೊಪ್ ಎಂಬ ಗತ್ತಿನ ಸಪ್ಪಳದಿಂದಲೂ, ಅಡವಿಯ ಕಾಡುಗಿಡಗಳೊಳಗಿನ ಒಂದು ಜಾತಿಯ ಹುಳಗಳ ಝಿರ್-ಝಿರ್ ಎಂಬ ತಾಳಬದ್ಧ ದನಿಯಿಂದಲೂ ಆ ವನಪ್ರದೇಶದ ನಾಲ್ಕೂ ಕಡೆಗೆ ಆನಂದದ ಗಾಂಭೀರ್ಯವು ಒಡೆದು ಕಾಣುತ್ತಿತ್ತು. ಅಂಥ ಆ ಅಪೂರ್ವವಾದ ಆನಂದದ ಪಾಲುಗಾರರಾಗಲಿಕ್ಕೆ ನಮ್ಮ ಗಣೇಶದೇವನ ದಂಡಿನೊಳಗಿನ ಸೃಷ್ಟಿ ಸೌಂದರ್ಯಾಪೇಕ್ಷಿಗಳಾದ ಕೆಲವು ಜನರು ಆ ಪುಷ್ಕರಿಣಿಯ ತೀರಕ್ಕೆ ಬಂದಿದ್ದರು.

ಹೀಗೆ ವನಶ್ರೀಯ ಸೊಬಗನ್ನು ನೋಡಲು ಬಂದಿದ್ದವರಲ್ಲಿ ಕೆಲವರು ಪುಷ್ಕರಿಣಿಯ ನೀರ ಬಳಿಯಲ್ಲಿ ಕುಳಿತು ಮನೋರಂಜನವನ್ನುಂಟು ಮಾಡಿಕೊಳ್ಳುತ್ತಿದ್ದರು. ಕೆಲವರು ತೀರದ ವನಪ್ರದೇಶ

ದಲ್ಲಿ ವಿಹರಿಸುತ್ತಿದ್ದರು. ಬೇರೆ ಮೂರು-ನಾಲ್ಕು ಜನರು ಪುಷ್ಕರಿಣಿಯ ದಂಡೆಯ ಭದ್ರವಾದ ಕಲ್ಲೊಡ್ಡಿನ ಅಗಲಾದ ಮೇಲ್ಭಾಗದಲ್ಲಿ ಕುಳಿತು ಕೆಲವುಹೊತ್ತು ಸರೋವರದ ನೀರಿನಕಡೆಗೂ, ಕೆಲವು ಹೊತ್ತು ಅಸ್ತಂಗತನಾಗುತ್ತಿದ್ದ ಸೂರ್ಯನ ಕಡೆಗೂ ನೋಡುತ್ತ, ಏನೇನೋ ಮಾತಾಡುತ್ತ ಮನಸ್ಸಿನ ಇಷ್ಟಾರ್ಥವನ್ನು ಪೂರೈಸಿಕೊಳ್ಳುತ್ತಿದ್ದರು,

ಒಡ್ಡಿನ ಮೇಲೆ ಕುಳಿತ ಜನರು ನಿಜವಾಗಿ ದಂಡಾಳುಗಳಾಗಿದ್ದಿಲ್ಲ. ಅವರ ವಸ್ತ್ರ-ಪ್ರಾವರಣಗಳಿಂದ ಅವರು ಸೈನ್ಯದೊಳಗಿನ ಶಿಪಾಯಿಗಳ (ಸೈನಿಕರಿಗಿಂತ ಕಡಿಮೆ ತರಗತಿಯವರು) ಹಾಗೆ ತೋರುತ್ತಿದ್ದರು. ಯುದ್ಧ ನಡೆದಾಗ ತಮ್ಮ ಶಿಬಿರ ಬಿಟ್ಟು ಹೊರಗೆ ಯಾವ ಕೆಲಸಕ್ಕೆ ಹೋಗಬೇಕಾದರೂ ಪ್ರತಿಯೊಬ್ಬನು ಸೈನಿಕರಂತೆಯೇ ಪೋಷಾಕು ಹಾಕಿಕೊಂಡು ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ ಹೊರಡಬೇಕೆಂಬ ಕಠಿಣ ನಿಯಮವಿರುವದರಿಂದ ಆ ಶಿಪಾಯಿಗಳೂ ಆಗ ಸೈನಿಕರ ವೇಷದಿಂದಲೇ ವನವಿಹಾರಕ್ಕೆ ಹೊರಟಿದ್ದರು. ಆ ಪರಿಚಾರಕ ಶಿಪಾಯಿಗಳಿಗೆ ಆ ಪೋಷಾಕು ಚನ್ನಾಗಿ ಒಪ್ಪುತ್ತಿದ್ದರೂ, ಅವರಲ್ಲಿಯ ಒಬ್ಬನಿಗೆ ಮಾತ್ರ ಅದು ಶೋಭಿಸುತ್ತಿದ್ದಿಲ್ಲ. ಅವನೇ ನಮ್ಮ ವಾಚಕರ ಪರಿಚಿತಳಾದ ರಂಗಿಣೀ ಸುಂದರಿಯ ಪತಿಯು. ಅವನು ರಾಜಸಭೆಯಲ್ಲಿ ಶ್ರೇಷ್ಠನಾದ ಕವಿಯೂ, ಪ್ರಸ್ತುತ ಯುದ್ಧದ ಸೈನಿಕರಲ್ಲಿ ಪ್ರಖ್ಯಾತನಾದ ಒಬ್ಬ ಮುಂದಾಳುವೂ, ನೂತನ ಅಧಿಕಾರಿಯೂ ಆಗಿದ್ದನು. ಗಣೇಶದೇವನು ಆ ನೂತನ ಅಧಿಕಾರಿಯ ಗಾನಕ್ಕೆ ವಿಶೇಷವಾಗಿ ಲುಬ್ಧನಾಗಿದ್ದದರಿಂದ ಆತನ ಮಾನ-ಮರ್ಯಾದೆಗಳಿಗೆ ಕೊರತೆಯಿದ್ದಿಲ್ಲ. ಅವನನ್ನು ಸಂತುಷ್ಟಗೊಳಿಸುವ ಕುರಿತು ಆ ದಿನಾಜಪುರದ ಆಬಾಲವೃದ್ಧರಾದ ಎಲ್ಲ ಪ್ರಜೆಗಳೂ ತತ್ಪರರಾಗಿರುತ್ತಿದ್ದರು. ಅವನ ವಯಸ್ಸು ನಾಲ್ವತ್ತೈದು . ಅವನಿಗೆ ಇಷ್ಟರಲ್ಲಿ ನಾಲ್ಕು ವಿವಾಹಗಳಾಗಿದ್ದವು. ತಂದೆ-ತಾಯಿಗಳಿರಲಿಕ್ಕೇ ಅವ

ನ ಮೂರು ಲಗ್ನಗಳಾಗಿದ್ದು, ಅವನು ತನ್ನ ಸೋದರ ಮಾವನ ಮಗ ನ ಲಗ್ನಕ್ಕೆಂದು ಹೋದಾಗ ತಾನೂ ಒಂದು ಲಗ್ನವನ್ನು ಮಾಡಿ ಕೊಂಡಿದ್ದನು. ಆ ನಾಲ್ಕನೇ ಲಗ್ನದ ಹೆಂಡತಿಯೇ ನಮ್ಮ ರಂಗೂ ಬಾಯಿಯು. ಈ ಬಗೆಯಾದ ಹೆಚ್ಚಾದ ಸುದೈವದಿಂದ ನಾಲ್ಕು ಜನ ಹೆಂಡಂದಿರ ಪತಿಯಾದ ಆ ಬ್ರಾಹ್ಮಣನು ಸುಖದ ಅನುಭವ ವನ್ನು ಕ್ರಮೇಣ ಹೊಂದುತ್ತ ಕಾಲವನ್ನು ಕಳೆಯುತ್ತಿದ್ದನು. ಆ ವರೆ ಅವನ ಆ ಮಿಗಿಲಾದ ಆನಂದದಲ್ಲಿ ಒಮ್ಮೆಂದೊಮ್ಮೆಲೆ ಕಡು ಖೇದ ವುಂಟಾಯಿತು; ಶಾಂತಿಯ ರಾಜ್ಯದಲ್ಲಿ ಕೂಡಲೆ ಅಶಾಂತಿಯು ತಲೆ ದೋರಿತು? ಆಗ ಆತನು ತನ್ನ ಇಷ್ಟು, ಜನ ಹೆಂಡಂದಿರನ್ನು ಕಟ್ಟಿ ಕೊಂಡು ಓಡಿಹೋಗುವದಾದರೂ ಎಲ್ಲಿಗೆ? ಇಂಥೀ ಅನಾನುಕೂಲ ಪ್ರಸಂಗದಲ್ಲಿ ಅವನು ದಿನಾಜಪುರದ ಗಣೇಶದೇವನ ಸೈನ್ಯದ ಸಂಗಡ ಲೇ ನಡೆದನು. ರಂಗಿಣಿಯು ಗಣೇಶದೇವನ ರಾಣಿಯಾದ ನಿರೂ ಪಮೆಯ ಪ್ರಿಯ ಗೆಳತಿಯಾದ್ದರಿಂದ ಆಕೆಯನ್ನು ಅವಳು ಬೇರೆ ಕಡೆಗೆ ಹೋಗಗೊಡುವಂತಿದ್ದಿಲ್ಲ; ಅದರಿಂದ ಆ ಬ್ರಾಹ್ಮಣನೂ ಹೆಂ ಡತಿಯ ಬೆನ್ನಿತ್ತಬೇಕಾಯಿತು! ಆಗ ಆ ಪ್ರಸಿದ್ಧ ಗಾಯಕನ ಹೃದ ಯದಿಂದ ಗಾನದ ಲಹರಿಗಳು ಏಳದೆ, ಚಿಂತಾಯುಕ್ತ ನಿಟ್ಟುಸಿರು ಗಳು ಮಾತ್ರ ಆಗಾಗ್ಗೆ ಹೊರಬೀಳುತ್ತಿದವು. ರಾಜನಿಗಾದರೂ ಈಗ ಸ್ವಸ್ಥಚಿತ್ತದಿಂದ ಗಾಯನ ಕೇಳುತ್ತ ಕೂಡ್ರುವ ಸಮಯವಿ ದ್ದಿಲ್ಲ. ಅದರಿಂದ ಆ ಬ್ರಾಹ್ಮಣನು ಈಗ ಸೇನಾಸಮೂಹದ ಅಡಗಿ ಯವರ ಸಹಾಯಕನಾಗಿ ಯೋಜಿಸಲ್ಪಟ್ಟಿದ್ದನು. ಸೈನಿಕರ ವೇಷ ಭೂಷಣಗಳನ್ನು ಧರಿಸುವದು ಆ ಬ್ರಾಹ್ಮಣ ಕುಲೋತ್ಪನ್ನನಾದ ಗಾ ಯಕನಿಗೆ ಮೈಗೆಹುಳ್ಳು ಬಿದ್ದಂತಾಗುತ್ತಿತ್ತು. ಅದರಿಂದಲೇ ಅ ವನು ದಂಡಿನ ಶಿಬಿರಬಿಟ್ಟು ಸಹಸಾ ಹೊರಬೀಳುತ್ತಿರಲಿಲ್ಲ; ಇರಲಿ.

ಈ ದಿವಸ ಆ ಗಾಯಕನ ಸ್ನೇಹಿತರು ಹ್ಯಾಗೆ ಹ್ಯಾಗೋ ಹು

ರಿದುಂಬಿಸಿ ಒಮ್ಮೆ ಅವನನ್ನು ಅವನ ಪ್ರೀತಿಯ ಸಾರಂಗವಾದ್ಯದೊಡನೆ ಆ ಪುಷ್ಕರಿಣಿಯ ದಂಡೆಗೆ ಕರೆತಂದಿದ್ದರು. ಸ್ವಾಭಾವಿಕ ಉತ್ಸಾಹಯುಕ್ತ ಆ ಗವಾಯಿಯು ಪುಷ್ಕರಿಣೀ-ವನಪ್ರದೇಶಗಳ ಸೌಂದರ್ಯವನ್ನು ಕಂಡು ತನ್ನ ಮನಸ್ಸಿನ ಚಿಂತೆಯನ್ನು ಕ್ಷಣ ಹೊತ್ತು ಮರೆತು ಬಿಟ್ಟು ಸಾರಂಗಿಯನ್ನು ಬಾರಿಸುತ್ತ ಬಾಯಲ್ಲಿಯೇ

ಸಖೀ ನವ ಶ್ರಾವಣ ಮಾಸ!
ಜಲದ ಘನಘಟಾ, ದಿವಸೆ ಸಾಂಝುಛಟಾ,
ಝುಪ್ ಝುಪ್ ಝುರಿಛೆ ಆಕಾಶ|

ಹೀಗೆ ಹಾಡತೊಡಗಿದನು. ಆಗ ಸಂಗಡಿಗರು ಆತನನ್ನು ಕುರಿತು—ಗಾಯಕ ಮಹಾರಾಜ, ಯಾವದೊಂದು ಸುಂದರ ಗಾನವನ್ನು ಬಾಯಿಬಿಚ್ಚಿ ಹಾಡಿ ಮನೋರಂಜನವನ್ನುಂಟು ಮಾಡಬಾರದಿರಾ? ಎಂದು ಆಗಾಗ್ಗೆ ಕೇಳುತ್ತಿದ್ದರು. ಆದರೂ ಅವರ ಮಾತಿನ ಕಡೆಗೆ ಗಾಯಕನ ಲಕ್ಷ್ಯವಿಲ್ಲದ್ದರಿಂದ ಅವನು ಅದೇ ಹಾಡನ್ನು ಪುನಃ ಪುನಃ ಅನ್ನುತ್ತ, ಸಾರಂಗಿಯನ್ನು ಗತ್ತಿನಿಂದ ಬಾರಿಸುತ್ತ, ತಲೆಯಲ್ಲಾಡಿಸಿ ವಾಹವ್ವಾ-ಭಲೆ, ಎಂದಂದುಕೊಳ್ಳುತ್ತ ತಲ್ಲೀನನಾಗಿದ್ದನು. ಬಳಿಕ ಸಂಗಡಿಗರೆಲ್ಲರೂ ಅಲ್ಲಿಂದೆದ್ದು ಆ ಪುಷ್ಕರಿಣಿಯ ಬೇರೆ ಕಡೆಗೆ ಮತ್ತೇನನ್ನೋ ನೋಡುತ್ತ ತಿರುಗುತ್ತಿದರು. ಆಗ ಒಬ್ಬ ಅಪರಿಚಿತ ಸ್ತ್ರೀಯು ಆ ಗಾಯಕನ ಹಿಮ್ಮಗ್ಗಲಿನಲ್ಲಿ ಒತ್ತಟ್ಟಿಗೆ ಮರೆಗೆ ನಿಂತು ಅವನ ಆ ಗಾಯನವನ್ನು ಆಸ್ಥೆಯಿಂದ ಕೇಳುತ್ತಿದ್ದಳು. ಇಷ್ಟರಲ್ಲಿ ಸಂಧ್ಯಾಕಾಲವಡಗಿತು; ರಾತ್ರಿಯ ಚಿಹ್ನವು ಸ್ಪಷ್ಟವಾಗಿ ತೋರಹತ್ತಿತು. ಮೋಡಗಳೆಲ್ಲವೂ ಇಲ್ಲದಂತಾದ್ದರಿಂದ ನಿರ್ಮಲ ಶುಭ್ರವಾದ ಆಕಾಶದಲ್ಲಿ ಚಂದ್ರನು ಪ್ರಕಾಶಮಾನನಾದನು. ವನಮಧ್ಯದಲ್ಲಿ ಛಾಯಾಯುಕ್ತವಾದ ಚಂದ್ರಕಿರಣಗಳು ಮಂದ ಮಂದವಾಗಿ ಬೀಳಹತ್ತಿದವು; ಮತ್ತು ಇಂಥ ಈ ಪ್ರಶಾಂತ ಸಮಯದಲ್ಲಿ

ನಮ್ಮ ಗಾಯಕನ ಸಂಗೀತದ ಲಹರಿಗಳಾದರೂ ಚಂದ್ರಲೋಕವನ್ನು ಮುಟ್ಟಿ ಮೆಲ್ಲ ಮೆಲ್ಲನೆ ಪರಾವರ್ತನ ಹೊಂದುತ್ತವೆಯೋ ಏನೋ ಎಂಬಂತೆ ಆ ಪುಷ್ಕರಿಣಿಯ ದಂಡೆಯಲ್ಲಿ ಮದಮಂದವಾಗಿ ಪ್ರತಿಧ್ವನಿಗೊಡುತ್ತಿದ್ದವು. ಅಷ್ಟರಲ್ಲಿ ಬ್ರಾಹ್ಮಣನ ಲಕ್ಷ್ಯವು ಪಾರ್ಶ್ವಸ್ಥಳಾದ ಆ ಹೆಣ್ಣುಮಗಳ ಕಡೆಗೆ ಹೋಯಿತು. ಕೂಡಲೆ ಅವನು ತನ್ನ ಗಾಯನವನ್ನು ಅಲ್ಲಿಗೇ ನಿಲ್ಲಿಸಿ, ಆಕೆಯನ್ನು ಕುರಿತು—ದೇವೀ, ನೀನು ಯಾರು? ಎಂದು ಪ್ರಶ್ನಮಾಡಿದನು.

ಆಗ ಆ ಅಪರಿಚಯಸ್ಥಳಾದ ಯುವತಿಯು ಮುಗುಳು ನಗೆ ನಗುತ್ತ—ನನ್ನ ವೇಷದಿಂದ ನಾನಾರೆಂಬುದನ್ನು ಕಂಡು ಹಿಡಿಯಲಾರಿರಾ? ಸರದಾರ, ನಾನು ಭಿಕ್ಷುಕಿಯು, ಎಂದು ಉತ್ತರಕೊಟ್ಟಳು.

ಗವಾಯಿಯು ತನ್ನ ಕೈಯೊಳಗಿನ ಸಾರಂಗಿಯನ್ನು ನೆಲದ ಮೇಲಿಟ್ಟು ಆಕೆಗೆ—"ನನ್ನನ್ನು ಉಪಹಾಸ ಮಾಡುತ್ತಿರುವೆಯೇನು? ನೀನು ಈ ವನದೇವತೆಯೆಂಬಂತೆ ನನಗೆ ತೋರುತ್ತದೆ" ಎಂದು ನುಡಿದು, ಆಕೆಗೆ ಸಾಷ್ಟಾಂಗನಮಸ್ಕಾರವನ್ನು ಮಾಡಲುದ್ಯುಕ್ತನಾದನು. ಅದನ್ನು ಕಂಡು ಅವಳು ಅವನಿಗೆ ಹಾಗೆ ಮಾಡಬೇಡೆಂದು ತಿಳಿಸಿ—ಸರದಾರ, ನಿಮ್ಮಂಥ ಪವಿತ್ರ ಬ್ರಾಹ್ಮಣರು ನನ್ನಂಥ ಬಡಭಿಕ್ಷುಕಿಗೆ ನಮಸ್ಕರಿಸಬಹುದೆ? ನಾನು ಬೇರೆ ಯಾರೂ ಇರದೆ, ಉಚ್ಚಕುಲದ ಒಬ್ಬ ಬ್ರಾಹ್ಮಣೇತರಳು; ಇಂಥ ನನಗೆ ತಾವು ನಮಸ್ಕರಿಸಿ ನನ್ನನ್ನು ಘೋರನರಕಕ್ಕೆ ಗುರಿಮಾಡುವಿರಾ? ಎಂದು ನಿಷೇಧಿಸಿದಳು.

ಬ್ರಾಹ್ಮಣನು ವಿಸ್ಮಯ ಚಕಿತನಾಗಿ—ನೀನು ಭಿಕ್ಷುಕಿಯೇ? ಈ ಪ್ರಕಾರದ ಭಿಕ್ಷುಕಿಯನ್ನು ನಾನೆಲ್ಲಿಯೂ ನೋಡಿಲ್ಲವಲ್ಲ?

ಬಳಿಕ ಶಕ್ತಿಯು—ಸರದಾರ, ಈಗ ತಾವಂದ ಹಾಡು ಯಾರದು? ಈ ಹಾಡನ್ನು ನಾನೊಬ್ಬ ಭಿಕ್ಷುಕನ ಬಾಯಿಂದ ಕೇಳಿದ್ದೆನು. ಅದಕ್ಕೋಸ್ಕರ ತಮ್ಮನ್ನು ಕೇಳುತ್ತೇನೆ.

ಬ್ರಾಹ್ಮಣ—ತಂಗೀ, ಈ ಪಾಡನ್ನು ನಾನೇ ರಚಿಸಿರುವೆನು. ಪಾಡುಗಳನ್ನು ಇಷ್ಟು ಲಕ್ಷ್ಯಗೊಟ್ಟು ಕೇಳುವ ನಿನಗೆ ಚೆನ್ನಾಗಿ ಹಾಡಲಿಕ್ಕೆ ಬರುವಂತೆ ತೋರುತ್ತದೆ. ನಿಜವ್ರೋ?

ಭಿಕ್ಷುಕಿ—ಬರುತ್ತದೆ; ಆದರೆ ಅಷ್ಟೊಂದು ಚನ್ನಾಗಿ ಬರುವದಿಲ್ಲ. ಭಿಕ್ಷೆ ಬೇಡುವ ಸಾಧನಕ್ಕಾಗಿ ನಾನು ಒಂದೆರಡು ಹರಕು ಮುರುಕು ಪಾಡುಗಳನ್ನು ಕಲಿತಿದ್ದೇನೆ.

ಬ್ರಾಹ್ಮಣ—ಹಾಗಾದರೆ ಅವುಗಳಲ್ಲೊಂದನ್ನು ಹಾಡು ನೋಡೋಣ. ನಾಚಬೇಡ, ನಾನು ನಿನ್ನ ತಂದೆಗೆ ಸಮಾನನೆಂದು ತಿಳಿ. ಹೂ, ಬೇಗ ಅನ್ನು.

ನಂತರ ಯುವತಿಯು ಮಂದಸ್ಮಿತಳಾಗಿ-ಆ ಮಾತು ಸತ್ಯವೆ. ಆದರೆ ತಮ್ಮಂಥ ಪ್ರಸಿದ್ಧ ಗವಾಯಿಗಳ ಮುಂದೆ ನಾನು ಹಾಡುವದೆಂದರೆ ಎಂಥ ಅಗೌರವವು? ಆದರೂ ತಮ್ಮಂಥ ಹಿರಿಯರು ಹೇಳುತ್ತಿರಲಿಕ್ಕೆ ನಾನಾದರೂ ಇಲ್ಲದ ಕಲ್ಪನೆಗಳನ್ನು ಮಾಡುತ್ತ ಏಕೆ ಕಾಲಕಳೆಯಬೇಕು. ಇಗೋ ಹಾಡುವೆನು, ಎಂದೆಂದು ಹೀಗೆ ಹಾಡಿದಳು:—

(ಧಾಟಿ 'ವೈಶಾಖ ಮಾಸ ವಸಂತಕಾಲ' ಎಂಬಂತೆ)

ವೈಶಾಖ ಮಾಸ ಶ್ರೇಷ್ಠವಾಗಿ,
ಋತುಗಳೀಶತಾ|
ಭಾಸುರಾಂಗ ಪೂರ್ಣ ಚಂದ್ರ,
ನಿಶೆಯು ಶೋಭಿತಾ ||ಪಲ್ಲ||
ಇಂಥ ರಾತ್ರಿ ಪಶುವು ಕೂಡ,
ಮೋದ ಪೊಂದುವದು|
ಚಿಂತೆಗಳೆದು ಅಂತರಂಗದಿ,
ಸೌಖ್ಯವೀವುದು ||೧||

ರೂಪವೇನು ಲಾವಣ್ಯವೇನು,
ತಾನು ರಮ್ಯವೋ? |
ಓಪನಂಗ ವೀಕ್ಷಿಸಲ್ಕೆ,
ಹರ್ಷ ರೋಮವೋ ||೨||
ಇಂಥ ಪರತರುಹ್ಲಾಸಕೀಗ,
ಗೋಪ್‌ಗಳಿಚ್ಛೆಯು|
ಭ್ರಾಂತಿ ನೀಗಿ ಚಿಂತೆ ಮರೆತು,
ನಿಂತುಕೊಳ್ವುದು ||೩||
ಸುಳ್ಳು ಬ್ರಹ್ಮ ನಿನ್ನಾಟಸುಳ್ಳು,
ದಿವ್ಯರೂಪವೂ|
ಒಳ್ಳೆ ಪ್ರೀತಿಯೊಕ್ಷಣಕಿರದ,
ನೋಟ ಸುಳ್ಳವೂ ||೪||
ಅತಿಭಯಂಕರಾದ ವಿರಹ,
ವಿಷದಿ ಬೆಯ್ಯುವೆ|
ಗತಿಯು ತಾನೆ ಪ್ರೇಮ ವೃಷ್ಟಿ,
ಸುಧೆಯ ಬೇಡುವೆ ||೫||

ಭಿಕ್ಷುಕಿಯ ಈ ಸುಂದರ ಹಾಡನ್ನು ಕೇಳಿ ಗವಾಯಿಗೆ ಅಂತರಂಗದಲ್ಲಿ ಒಹಳ ಸಂತೋಷವೆನಿಸಿತು. ಯಾಕಂದರೆ, ಅವನು ಆ ಯುದ್ಧಕಾಲದಲ್ಲಿ ನಿಜವಾಗಿಯೇ ವಿರಹತಾಪದಿಂದ ಬಳಲುತ್ತಿದ್ದನು. ತನ್ನಂತೆ ವಿರಹತಾಪದಿಂದ ಬಳಲುವ ಇವಳಾರೆಂಬುವದು ಅವನಿಗೆ ಹೊಳೆಯದಾಯಿತು. ಆಗ ಅವನು ಅವಳನ್ನು ಕುರಿತು— "ತಂಗೀ, ಭಿಕ್ಷುಕಿಯೇ, ನಾನು ಸ್ವತಃ ಗಾಯಕನಾಗಿದ್ದರೂ ನಿನ್ನಂತಹ ಸಮಯಸೂಚಕ ಗೀತವನ್ನು ಅನ್ನಲಿಕ್ಕೆ ನನಗೆ ಬಾರದು. ಆದಿರಲಿ ಬಿಡು. ತಂಗೀ ನನ್ನಿಂದ ಈಗ ನಿನಗಾವ ಭಿಕ್ಷೆಯಾಗಬೇ

ಕಾಗಿದೆ''

ಗಾಯಕನ ಈ ಅಸ್ಪಷ್ಟ ಭಾವವನ್ನು ತಿಳಿದ ಆ ಯುವತಿಯು— ಸರದಾರ, ತಾವು ನನಗಾವ ಭಿಕ್ಷೆಯನ್ನು ನೀಡುವವರಾಗಿದ್ದೀರಿ? ಗವಾಯಿಗಳೇ, ತಾವು ನನಗೆ ಬೇರೆ ಯಾವ ಬಕ್ಕೆಯನ್ನೂ ಹಾಕುವಗೊಡವಿಗೆ ಹೋಗದಿರ್ರಿ. ಗಣೇಶದೇವನ ಬಿಡಾರವನ್ನಷ್ಟು ನನಗೆ ತೋರಿಸಿಬಿಡಿರಿ, ಅಂದರಾಯಿತು. ಪ್ರಸ್ತುತ ಯುದ್ಧದ ಸಂಬಂಧದಲ್ಲಿ ನನಗೆ ತಿಳಿದಿರುವ ಕೆಲವು ಗುಪ್ತ ಸಂಗತಿಗಳನ್ನು ನಾನು ಅವನಿಗೆ ಈಗಲೆ ಅವಶ್ಯವಾಗಿ ತಿಳಿಸಬೇಕಾಗಿದೆ.

ಆಗ ಗಾಯಕನು ಮನಸ್ಸಿನಲ್ಲಿ ತುಸ ಆಲೋಚಿಸಿ—ನೀನು ಯಾವ ಕೆಲಸದ ಸಲುವಾಗಿ ರಾಜರನ್ನು ಕಾಣಬೇಕಾಗಿವೆಯೆಂಬದನ್ನು ನನಗೆ ತಿಳಿಸಬೇಕು. ಅಂದರೆ ನಾನು ಆ ಸಂಗತಿಯನ್ನು ಮಹಾರಾಣಿಗೆ ತಿಳಿಸಿ ಅವಳಿಂದ ಅಪ್ಪಣೆ ಪಡೆದು ನಿನಗೆ ರಾಜದರ್ಶನವಾಗುವ ಹಾಗೆ ಮಾಡುವೆನು, ಎಂದನು.

ಭಿಕ್ಷುಕಿ—ಇಲ್ಲ, ಆ ಸಂಗತಿಯನ್ನು ನಾನು ಬೇರೆ ಯಾರ ಮುಂದೂ ಹೇಳುವದಿಲ್ಲ.

ಗಾಯಕ— ಹಾಗೇ ಆಗಲಿ; ನಡೆ, ಶಿಬಿರಕ್ಕೆ ನಡೆ. ಅಲ್ಲಿ ನನ್ನ ಹೆಂಡತಿಯ ಮುಖಾಂತರ ರಾಜ್ಞಿಯ ಅಪ್ಪಣೆಪಡೆದು ನಿನಗೆ ರಾಜದರ್ಶನ ಮಾಡಿಸುವೆನು.

ವಾಚಕರೇ, ಹೀಗೆ ಪುಷ್ಕರಿಣಿಯ ತೀರದಲ್ಲಿ ಗಾಯಕನೊಡನೆ ಸಂಭಾಷಣ ಮಾಡುತ್ತಿದ್ದ ಭಿಕ್ಷುಕಿ ವೇಷಧಾರಿಣಿಯಾದ ಆ ಅಪರಿಚಯಸ್ಥ ಯುವತಿಯು ಮತ್ತಾರೂ ಇದ್ದಿಲ್ಲ; ಅತ್ಯಂತ ಸಾಹಸಿಯಾಗಿದ್ದ ನಮ್ಮ ಶಕ್ತಿಮಯಿಯೇ ಹೌದು.

‡ ‡ ‡ ‡ ‡

ನಿರೂಪಮಾ ರಾಣಿಯ ದರ್ಶನಮಾಡಬೇಕೆಂದರೆ ಶಕ್ತಿಗೆ ಬಹಳ ಸಂಕೋಚವೆನಿಸುತ್ತಿತ್ತು. ಇದಕ್ಕೆ ಕಾರಣವೆಂದರೆ, ಅವಳು ನಿರೂಪಮೆಯ ವಿಷಯವಾಗಿ ತನ್ನ ಮನದಲ್ಲಿ ತಾಳಿದ್ದ ಸವತಿ ಮತ್ಸರವೇ. ಆದರೆ ತನ್ನ ಸಂಕೋಚಭಾವವನ್ನು ಅವಳು ಆ ಬ್ರಾಹ್ಮಣನಿಗೆ ತಿಳಿಸಲಿಲ್ಲ. "ನನಗೆ ರಾಣಿಯ ದರ್ಶನವು ಬೇಕಿಲ್ಲ, ರಾಜನ ದರ್ಶನವನ್ನಷ್ಟೇ ಮಾಡಿಸು," ಎಂದು ಅಂದರೆ ಆ ಬ್ರಾಹ್ಮಣನು ಎಲ್ಲಿ ಮನಸ್ಸಿನಲ್ಲಿ ಇಲ್ಲದ ವಿಕಲ್ಪಗಳನ್ನೆಣಿಸಿ, ನನ್ನ ಕಾರ್ಯವು ಕೈಗೂಡಲಿಕ್ಕಿಲ್ಲವೋ ಎಂದು ತಿಳಿದೇ ಅವಳು ಸುಮ್ಮನೆ ಆ ಗಾಯಕನ ಬೆನ್ನತ್ತಿ ಗಣೇಶದೇವನ ಶಿಬಿರಕ್ಕೆ ಬಂದಿದ್ದಳು.

ದಂಪಾಳುಗಳಿಂದ ಸುರಕ್ಷಿತವಾದ ಗಣೇಶದೇವನ ಶಿಬಿರದ ಮುಖ್ಯಭಾಗದ ಒಂದು ಡೇರೆಯಲ್ಲಿ ಸರ್ವಸಾಧಾರಣವಾದ ಒಂದು ಮಂಚದ ಮೇಲೆ ಒಂದು ವರ್ಷವಯಸ್ಸಿನ ಶಿಶುವೊಂದು ಮಲಗಿತ್ತು. ಗಣೇಶದೇವನು ಮಂಚದ ಮೇಲಿನ ಎತ್ತರವಾದ ಹಾಸಿಗೆ ಸುರಳಿಗೆ ಒರಗಿಕೊಂಡು ಕುಳಿತು ಆ ಶಿಶುವನ್ನು ಮಿಕಿ ಮಿಕಿ ನೋಡುತ್ತಿದ್ದನು; ಹಾಗು ನಡನಡುವೆ ಆ ನಿದ್ರಿತ ಕೂಸಿನ ಅಧರಗಳನ್ನು ಚುಂಬಿಸುತ್ತಿದ್ದನು. ನಿರೂಪಮಾ ರಾಣಿಯು ರಾಜನ ತಲೆಯ ಕಡೆಗೆ ಕುಳಿತು ತನ್ನ ಅಂಗುಲಿಗಳಿಂದ ರಾಜನ ಘನವಾದ ತಲೆಗೂದಲುಗಳ ತೊಡಕುಗಳನ್ನು ಆಸ್ಥೆಯಿಂದ ಬಿಡಿಸುತ್ತ ಸಸ್ನೇಹದಿಂದ ಆತನೊಡನೆ ಸಂಭಾಷಣ ಮಾಡುತ್ತಲಿದ್ದಳು. ಈ ಸಮಯದಲ್ಲಿ ರಂಗಿಣಿಯು ತನ್ನ ಗಂಡನಾದ ಗಾಯಕನ ಆಜ್ಞೆಯ ಮೇರೆಗೆ ಭಿಕ್ಷುಕಿಯನ್ನು ಕರೆದುಕೊಂಡು ಅಲ್ಲಿಗೆ ಬಂದಳು. ಅವಳು ಭಿಕ್ಷುಕಿಗೆ ಡೇರೆಯ ಹೊರಬದಿಯಲ್ಲಿ ತುಸು ನಿಲ್ಲಲಿಕ್ಕೆ ಹೇಳಿ ತಾನು ಡೇರೆಯ ಒಳಗೆ ಹೊಕ್ಕಳು. ರಂಗಿಣಿಯು ಅತ್ತ ಡೇರೆಯ ಒಳಗೆ ಪ್ರವೇಶಿಸಲು; ಇತ್ತ ಭಿಕ್ಷುಕ ವೇಷಧಾರಿಣಿಯಾದ ಶಕ್ತಿಮಯಿಯು ತುಸ

ಮುಂದಕ್ಕೆ ಸರಿದು ಜೇರೆಯ, ಒಳಗೆ ಯಾರಿರುವರೆಂಬದನ್ನು ಟಕಮಕನೆ ನೋಡಹತ್ತಿದಳು; ಆಗ ಆಕೆಗೆ ತನ್ನ ಬಾಲ್ಯ ಸ್ನೇಹಿತ ಗಣೇಶದೇವರಾಜನೂ, ನಿರೂಪಮಾರಾಣಿಯೂ ಒತ್ತಟ್ಟಿಗೆ ಕುಳಿತು ಸಸ್ನೇಹದಿಂದ ಮಾತು-ಕಥೆಯಾಡುವದು ಕಂಡಿತಲ್ಲದೆ, ಆ ದಂಪತಿಗಳಿಗೆ ಒಂದು ಸಂತಾನವಾಗಿರುವದೂ ಗೊತ್ತಾಯಿತು. ಗಣೇಶದೇವನನ್ನು ಹೆಂಡತಿಯೊಡನೆ ಶಕ್ತಿಮಯಿಯು ಇದೇ ಮೊದಲು ನೋಡಿದ್ದು. ನಿರೂಪಮೆಯ ಅಖಂಡ ಸುಖಶಾಂತಿಗಳು, ಸೌಭಾಗ್ಯ, ಪತಿಸ್ನೇಹ, ಪುತ್ರಸ್ನೇಹ, ಸಮಾಜದಯಲ್ಲಿ ವಿಶುದ್ಧ ಪ್ರಸಿದ್ಧಿ ಇವುಗಳು ಒಂದರ ಹಿಂದೊಂದರಂತೆ ಶಕ್ತಿಯಮನಸ್ಸಿನಲ್ಲಿ ಮನೆಮಾಡಹತ್ತಿದವು. ಅಷ್ಟರಲ್ಲಿ ತನ್ನ ಸ್ವಂತದ ಪ್ರೇಮಹೀನ, ಸೌಖ್ಯಹೀನ, ಶಾಂತಿಹೀನ, ದುಃಖಪೂರ್ಣ ಹಾಗು ಭೀಕರವಾದ ಹತಾಶ ಜೀವಿತ್ವದ ರೂಪಕವು ಅವಳ ಮನಸ್ಸನ್ನು ಆವರಿಸಲು, ಆಗ ಅವಳು ಮನಸ್ಸಿನಲ್ಲಿಯೇ—ಭಗವಾನ್ ನನ್ನ ಯಾವ ಭಯಂಕರ ಅಪರಾಧದ ಸಲುವಾಗಿ ನನ್ನನ್ನು ಈ ಪರಿ ವಿರುದ್ಧಾವಸ್ಥೆಯಲ್ಲಿರಿಸಿರುವೆ? ಎಂದು ಯೋಚಿಸಿದಳು. ಈ ವಿಚಾರದಿಂದ ಅವಳ ಹೃದಯವು ತೀಕ್ಷ್ಣವಾದ ಈರ್ಷೆಯಿಂದ ಪ್ರೇರಿತವಾಗಲು, ಅದು ಕಾಡುಗಿಚ್ಚಿನಂತೆಯೂ, ತೀಕ್ಷ್ಣವಿಷಪಾನ ಮಾಡಿದಂತೆಯೂ ಉರಿಯಹತ್ತಿತು. ಇಷ್ಟರಲ್ಲಿ ರಂಗೂಬಾಯಿಯು ತನ್ನ ಕಡೆಗೆ ಬರುವದು ಆಕೆಗೆ ತೋರಲು, ಅವಳು ಹಿಂದೆ ಸರಿದು ಮತ್ತೆ ತನ್ನ ಪೂರ್ವದ ಸ್ಥಳದಲ್ಲಿ ನಿಂತಳು. ರಂಗಿಣಿಯು ಶಕ್ತಿಗೆ ಒಳಗೆ ಬರಲಿಕ್ಕೆ ಸೂಚಿಸಿದಳು. ಆದರೆ ಅವಳು ಹಾಗೆ ಮಾಡದೆ—ನಾನು ಹೇಳತಕ್ಕ ಗುಪ್ತಸಂಗತಿಯನ್ನು ರಾಜನ ಹೊರತು ಬೇರೆ ಯಾರ ಮುಂದೂ ಹೇಳುವ ಹಾಗಿಲ್ಲ. ಆದ್ದರಿಂದ ಅವನನ್ನೇ ಹೊರಗೆ ಕರೆ, ಎಂದು ಸ್ಪಷ್ಟವಾಗಿ ತಿಳಿಸಿದಳು. ಬಳಿಕ ರಂಗಿಣಿಯು ಪುನಃ ಒಳಗೆ ಹೋಗಿ ರಾಜನನ್ನು ಹೊರಗೆ ಕಳಿಸಿದಳು. ಅವನು ಬಂದವನೇ ಆ ಭಿಕ್ಷುಕಿಯ

ನ್ನು ಕುರಿತು—"ಹೇಳು, ನೀನಾವ ಗುಪ್ತಸುದ್ದಿಯನ್ನು ಹೇಳಬಂದಿರುವೆಯೋ, ಅದನ್ನು ಶೀಘ್ರವಾಗಿ ಹೇಳು. ಇಲ್ಲಿ ಮತ್ತಾರೂ ಇರದ್ದರಿಂದ ನೀನು ಅದನ್ನು ಹೇಳಲಿಕ್ಕೆ ಅನುಮಾನಿಸಬೇಡ" ಎಂದನು.

ಶಕ್ತಿಯು ಹೃದಯದೊಳಗಿನ ಅಸೂಯೆಯನ್ನು ಬದಿಗಿರಿಸುತ್ತ ಸಾವಕಾಶವಾಗಿ ನುಡಿದಳೇನಂದರೆ—"ಇಲ್ಲಿ ಹೇಳಲಾರೆನು, ಪುಷ್ಕರಿಣಿಯ ತೀರದಲ್ಲಿ ಹೇಳುವೆನು." ಎಂದವಳೇ, ರಾಜನು ತನ್ನನ್ನು ಹಿಂಬಾಲಿಸಿ ಬರುವನೋ ಇಲ್ಲವೋ ಎಂಬುವನ್ನು ಕೂಡ ಲಕ್ಷ್ಯಕ್ಕೆ ತರದೆ, ಅಲ್ಲಿಂದ ನಡೆದಳು. ರಾಜನು ಏನೂ ಮಾತಾಡದೆ ಸುಮ್ಮನೆ ಆಕೆಯ ಬೆನ್ನು ಹತ್ತಿದನು. ಶಕ್ತಿಯು ಪುಷ್ಕರಿಣಿಯ ದಂಡೆಗೆ ಬಂದು ತಲೆಯ ಮೇಲಿನ ಸೆರಗನ್ನು ತೆಗೆದು ಚಂದ್ರಮನ ಕಡೆಗೆ ಮೋರೆ ತಿರುಗಿಸಿ ನಿಂತಳು. ಚಂದ್ರನು ಆಕಾಶದಿಂದ ಪತನನಾಗಿ ಭೂಮಿಯ ಮೇಲೆ ಖಂಡವಿಖಂಡವಾಗಿಬಿದ್ದಿದ್ದರೂ ವಿಸ್ಮಿತನಾಗದಷ್ಟು ಗಣೇಶದೇವನು ಆ ಭಿಕ್ಷುಕಿಯ (ಶಕ್ತಿಮಯಿಯ) ಮೊಗವನ್ನು ಕಂಡು ಚಕಿತನಾದನು. ಆಗ ಅವನು ಚಿತ್ರದೊಳಗಿನ ಗೊಂಬೆಯಂತೆ ಮುಗ್ಧನಾಗಿ, ಉತ್ತರ ಕ್ಷಣದಲ್ಲಿ ಚೇತನಗೊಂಡನು. ಕೂಡಲೆ ಅವನು ತುಸ ಸರಿದು ನಿಂತು ತಿರಸ್ಕಾರ ಸ್ವರದಿಂದ—ಯವನೀ, ನೀನು ಯಾರು? ಎಂದು ಕೇಳಿದನು.

ಈಗ ಶಕ್ತಿಮಯಿಯು ನಿಜವಾಗಿಯೇ ಯವನಿಯಾಗಿದ್ದಳು. ಆದರೂ ಗಣೇಶದೇವನ ಆ ಪ್ರಶ್ನೆಯನ್ನು ಕೇಳಿ ಆಕೆಯ ತಲೆಯು ತಿರುಗಹತ್ತಿತು; ಅಸಹ್ಯ ತಿರಸ್ಕಾರದ ಆವೇಗದಿಂದ ಅವಳ ಮೈನಡುಗಹತ್ತಿತು. ಆಗ ಅವಳು ಅದನ್ನು ಸಾವರಿಸಿಕೊಂಡು ಸೆಟೆದು ನಿಂತು—ರಾಜಕುಮಾರ, ಹೆಸರಿನಿಂದ ಮಾತ್ರ ನಾನು ಯವನಿಯಾಗಿರುವದು ಸತ್ಯವು. ಆದರೆ ನಾನು ಇನ್ನೂ ಅವನ ಶಯ್ಯಾಭಾಗಿನಿಯಾಗಿರುವದಿಲ್ಲ. ನನ್ನ ಹೃದಯ, ಮನಸ್ಸು ಹಾಗು ದೇಹ ಇವುಗಳು

ಅಕಲಂಕಿತಗಳಾಗಿದ್ದು, ಈ ವರೆಗೂ ನಿನ್ನವೇ ಆಗಿರುತ್ತವೆ. ಈಗ ಲೂ ನೀನು ನನ್ನನ್ನು ಸಂರಕ್ಷಿಸುವ ಪ್ರಯಾಸವನ್ನು ಬಿಟ್ಟುಗೊಟ್ಟರೆ, ಇನ್ನು ಮುಂದೆ ನನ್ನ ಈ ವಿಶುದ್ಧತೆಯು ನಷ್ಟವಾಗದಿರಲಾರದು. ನೀನು ನನ್ನನ್ನು ಉದ್ಧಾರಗೊಳಿಸದಿದ್ದರೆ, ಪಾಪಾನಲದಲ್ಲಿ ಹಾರಿಕೊಳ್ಳದ ಹೊರತು ನನಗೆ ಗತ್ಯಂತರವಿಲ್ಲದಾಗಿದೆ.

ಅಸ್ತ್ರೋತ್ಸವದ ದಿವಸ ಯುವಕ ಗಣೇಶದೇವನು ಶಕ್ತಿಯನ್ನು ನದೀತೀರದಲ್ಲಿ ಕಂಡು ಆವಳ ಪ್ರೇಮಸಂಯೋಗಕ್ಕಾಗಿ ಚಿಕ್ಕಬಾಲಕ ನಂತೆ ಆತ್ಮವನ್ನು ಕೂಡ ಸಮರ್ಪಿಸಲು ಸಿದ್ಧನಾಗಿದ್ದನೋ, ಆದೇ ಆವನಲ್ಲಿ ಈ ದಿವಸ ಆವಳನ್ನು ಕಂಡಾಗ ಆ ಶುದ್ಧ ಭಾವನೆಯು ಉಂಟಾಗಲಿಲ್ಲ. ಈಗ ಆವನು ಪ್ರಶಾಂತ, ಗಂಭೀರ ಹಾಗು ಪಕ್ಷಪಾತವಿಲ್ಲದ ಕಠೋರ ವಿಚಾರಕನಾಗಿ ಕೆಲಹೊತ್ತು ಸುಮ್ಮನೆ ನಿಂತಿದ್ದನು. ನಂತರ ಆವನು —“ಶಕ್ತೀ, ಗತಿಸಿದ ಆ ದಿವಸವು ಪುನಃ ಬರಲಾರದು. ನೀನು ಯುವನರ ಮನೆಯಲ್ಲಿ ವಾಸಮಾಡಿರುವೆಯಾದುದರಿಂದ ನನ್ನ ಸಹಧರ್ಮಿಣಿಯಾಗುವ ಸಂಭವವಾದರೂ ಉಳಿದಿರುವದೇ? ಭವಿತವ್ಯವನ್ನು ತಿರುಗಿಸುವದೂ, ಕರ್ಮಭೋಗವನ್ನು ತಪ್ಪಿಸುವದೂ ಸಾಧ್ಯಾತೀತ ಸಂಗತಿಯು. ಆ ದಿವಸ ನಿನ್ನನ್ನು ನನ್ನವಳನ್ನಾಗ ಮಾಡಿಕೊಳ್ಳುವದು ಶಕ್ಯವಿತ್ತು; ಆದರೆ ಅಂದು ನೀನು ಹೊರಟು ಹೋದೆ. ಮರುದಿವಸ ನಿನ್ನನ್ನು ಹುಡುಕಿ ನಿನ್ನೊಡನೆ ಸಂಧಾನ ಬೆಳಿಸಬೇಕೆಂದು ವಿಚಾರಿಸುವಷ್ಟರಲ್ಲಿ,ನೀನು ಗಾಯಸುದ್ದೀನನ ಬೇಗಮ್ಮಳಾಗಿರುವೆಯೆಂಬದು ತಿಳಿದು ಬಂದದರಿಂದ ಉಪಾಯವಿಲ್ಲದಾಯಿತು!

ಶಕ್ತಿಮಯಿ—“ಮಹಾರಾಣಿಯು ಅಸಮ್ಮತಿಪಡುತ್ತಿದ್ದರೂ, ಅಂದು ಸತ್ಯವಾಗಿ ನೀನು ನನ್ನನ್ನು ಲಗ್ನಮಾಡಿಕೊಳ್ಳುತ್ತಿದ್ದಿಯಾ?

ಗಣೇಶದೇವ—ಹೌದು.

ಗಣೇಶದೇವನ ಈ ಮಾತನ್ನು ಕೇಳಿ ತಾನೇ ತನ್ನ ಕಾಲಮೇಲೆ

ಕೊಡಲಿಯನ್ನು ಹಾಕಿಕೊಂಡಂತೆ ಶಕ್ತಿಗನಿಸಿತು. ಸೇಡುತೀರಿಸಿಕೊಳ್ಳು ವ ಹವ್ಯಾಸಕ್ಕಾಗಿ, ಸುಖದಾಶ್ರಯವನ್ನು ಬಿಟ್ಟು ದುಃಖತರಂಗಗಳಲ್ಲಿ ಹಾರಿಕೊಂಡಿದ್ದಳು. ಈಗ ಆಕೆಯನ್ನು ಆ ದುಃಖದಿಂದ ಹೊರಹೊರಡಿಸುವದು ಯಾರಿಗೆ ತಾನೆ ಶಕ್ಯವದೆ? ಗಣೇಶದೇವನು ಅವಳನ್ನು ಆ ದುಃಖಗರ್ತದಿಂದ ಹೊರಗೆ ತೆಗೆಯಹೋದರೆ, ಅವನು ಸ್ವತಃ ಅದರಲ್ಲಿ ಮುಣುಗಬೇಕಾಗಿತ್ತು! ಆಕೆಯನ್ನು ರಕ್ಷಿಸುವದೂ, ಆಕೆಯ ಕರ್ಮಾಭಿಶಾಪವನ್ನು ಖಂಡಿಸುವದೂ ಈಗ ದೇವಾಧಿದೇವತೆಗಳಿಗೂ ಅಸಾಧ್ಯವಾಗಿತ್ತು. ಶಕ್ತಿಗೆ ತನ್ನ ದುರವಸ್ಥೆಯು ಚೆನ್ನಾಗಿ ಲಕ್ಷ್ಯದಲ್ಲಿ ಬರಲು, ಅವಳು ವ್ಯಾಕುಲಚಿತ್ತಳಾಗಿ—"ಹಾಗಾದರೆ ಈಗ ನನಗಾವ ಉಪಾಯವೂ ಉಳಿದಿಲ್ಲವೇನು?" ಎಂದು ಕೇಳಿದಳು.

ಗಣೇಶದೇವ—ನೀನು ಸ್ವತಃ ಯಾವ ಮಾರ್ಗವನ್ನು ಹಿಡಿದಿರುವಿಯೋ ಅದೊಂದೇ ಮಾತ್ರ ಬಾಕಿಯದೆ. ನೀನು ಯಾವನನ್ನು ವರಿಸಿರುವೆಯೋ, ಅವನ ಬಳಿಗೆ ಹೋಗು; ಪತಿಯೊಬ್ಬನೇ ಸ್ತ್ರೀಜನರ ಆಶ್ರಿತಸ್ಥಾನವು.

ಯಾವಾತನ ಸಲುವಾಗಿ ಶಕ್ತಿಯು ಸುಖ-ಶಾಂತಿಗಳನ್ನು ತೊರೆದು ಧರ್ಮಹೀನತ್ವವನ್ನು ಕೂಡ ಹೊಂದಿದ್ದಳೋ, ಆ ಗಣೇಶದೇವನ ಮುಖದಿಂದಲೇ ಈ ಪ್ರಕಾರದ ಕಠೋರ ಹಾಗು ಮಮತ್ವವಿಲ್ಲದ ಉಪದೇಶವನ್ನು ಕೇಳಿ ಆಕೆಗೆ ಮರಣಪ್ರಾಯವಾದ ದುಃಖವೆನಿಸಿತು. ಹಿಂದಕ್ಕೆ ಎಷ್ಟು ಗರ್ವದಿಂದ ಅವಳು ಗಣೇಶದೇವನನ್ನು ತ್ಯಜಿಸಿ ಹೋಗಿದ್ದಳೊ, ಗಂಭೀರವಾದ ನಿರಾಶೆಯುಕ್ತ ಕಡೆಗಾಣದ ದುಃಖದ ಇಂದಿನ ಅವಧಿಯಲ್ಲಿ ಆ ಗರ್ವದ ಲೇಶವು ಕೂಡ ಅವಳಲ್ಲಿ ಉಳಿದಿರಲಿಲ್ಲ. ಆಕೆಯ ಸಂಪೂರ್ಣ ಗರ್ವವು ನಷ್ಟವಾಗಿ ಹೋಗಿದ್ದರೂ ಆ ಸಾಹಸಿಯು ಮಣಿಯಲಿಲ್ಲ. ಆದರೆ ರಾತ್ರಿಯವೇಳೆಯಲ್ಲಿ ವಿಸ್ತಾರವಾದ ಕಡಲೊಳಗೆ ಸಾಗಿದ್ದ ಚಿಕ್ಕನಾವು (ಹರಗೋಲು)

ಆಕಸ್ಮಿಕ ಬಿರುಗಾಳಿಯಿಂದುಂಟಾದ ಭಯಂಕರ ತೆರೆಗಳಲ್ಲಿ ಸಿಕ್ಕು ದಿಗ್ಭ್ರಾಂತವಾಗಿ ಸಾಗುವಂತೆ ಇಂದು ಶಕ್ತಿಮಯಿಯ ಸ್ಥಿತಿಯಾಗಿತ್ತು. ಹೀಗೆ ನಷ್ಟಗರ್ವೆಯೂ, ಹತಬಲಳೂ ಆದ ಆಕೆಯು—ಯಾವನನ್ನು ಪ್ರೀತಿಸುವದಿಲ್ಲವೋ; ಯಾವನಿಗೆ ನಾನು ನನ್ನ ಹೃದಯವನ್ನು (ಗುಟ್ಟನ್ನು) ಕೊಡಲಿಚ್ಛಿಸುವದಿಲ್ಲವೋ ಅವನ ಸಹವಾಸವನ್ನು ನಾನು ಮಾಡುವದಾದರೂ ಏತಕ್ಕೆ? ರಾಜಕುಮಾರ, ನನ್ನನ್ನು ಅಂಥ ಆ ಹೀನಕರ್ಮಕ್ಕೆ ಗುರಿಯಾಗಮಾಡಬೇಡ. ನೀನು ನನ್ನನ್ನು ಮದುವೆಮಾಡಿಕೊಳ್ಳದಿದ್ದರೂ, ನನಗೆ ಯಾವ ಬಗೆಯಿಂದಾದರೂ ಆಶ್ರಯವನ್ನು ಕೊಡಲಿಕ್ಕೆ ತಪ್ಪಬೇಡ. ಯಾವನನ್ನು ನಾನು ಮನಃಪೂರ್ವಕವಾಗಿ ಪ್ರೀತಿಸುತ್ತಿರುವೆನೋ, ಅವನ ಉಪಪತ್ನಿ (ಅಂಗವಸ್ತ್ರ)ಯಾಗಿ ಜೀವಿಸಲಿಕ್ಕೂ ನನ್ನ ಒಪ್ಪಿಗೆಯಿದೆ; ಆದರೆ ಯಾವನಲ್ಲಿ ನನಗೆ ಪ್ರೀತಿಯೇ ಹುಟ್ಟುವದಿಲ್ಲವೋ ಅವನನ್ನು ಗಂಡನೆಂದು ಹ್ಯಾಗೆ ತಿಳಿದು ನಡೆಯಲಿ. ರಾಜಕುಮಾರ, ಸಮಾಜದವರು ಏನೇ ಅನ್ನಲಿ; ದೇವರ ಕಣ್ಣಿಗೆ ನೀನು ಖಂಡಿತವಾಗಿ ಅಪರಾಧಿಯೆಂದು ತೋರಲಾರೆ. ಆದ್ದರಿಂದ ನನಗೆ ಆಶ್ರಯವನ್ನು ಕೊಡು, ನನ್ನನ್ನು ಹೀಗೆ ನಡನೀರಲ್ಲಿ ಬಿಡಬೇಡ, ಎಂದು ಬಿಕ್ಕಿಬಿಕ್ಕಿ ಅಳುತ್ತ ಹೇಳಿಕೊಂಡಳು.

ಶಕ್ತಿಯ ಆ ಮನೋಽದ್ಘಾಟಿತ ಭಾಷಣವನ್ನು ಕೇಳಿ ಗಣೇಶದೇವನು ಕಿಂಕರ್ತವ್ಯ ಮೂಢನಾದನು. ತುಸು ಹೊತ್ತಿನ ಮೇಲೆ ಅವನು—ಶಕ್ತೀ, ನೀನು ನೂರಾರು ರಗಳೆಗಳನ್ನು ತೋಡಿಕೊಂಡರೂ ನಾನು ನಿನಗೆ ಆಶ್ರಯವನ್ನು ಕೊಡಲಿಚ್ಛಿಸುವದಿಲ್ಲ. ನೀನು ನನ್ನ ದೇಹದೊಳಗಿನ ಪ್ರಾಣವನ್ನು ಹೀರಿಕೊಂಡರೂ ನಿನ್ನನ್ನು ನನ್ನವಳನ್ನಾಗಿ ಮಾಡಿಕೊಳ್ಳಲಿಕ್ಕಿಲ್ಲ. ಯಾಕಂದರೆ ನೀನು ಭಯಂಕರ ಅಕರ್ತವ್ಯ, ಅನ್ಯಾಯ ಹಾಗು ಪಾಪಾಚರಣೆಯನ್ನು ಮಾಡಿರುತ್ತೀ; ಈಗ ನೀನು ಬೇರೊಬ್ಬನ ಮದುವೆಯ ಹೆಂಡತಿಯಾಗಿರುವೆ. ಆದದರಿಂ

ದ ನಿನ್ನ ಮಾತಿನಂತೆ ನಾನು ಈಗ ನಿನಗೆ ನಿನ್ನ ಸ್ವಾಮಿಯ ಆಶ್ರಯವನ್ನು ತಪ್ಪಿಸಿ ನನ್ನ ಆಶ್ರಯದಲ್ಲಿರಿಸಿದರೆ, ನಿನ್ನ ಸತಿತ್ವಧರ್ಮವು ನಷ್ಟವಾಗುವದು; ಹಾಗು ನಾನೂ ಅಧರ್ಮಿಯಾಗಬೇಕಾಗುವದು. ಯಾವ ಪ್ರೇಮವು ಧರ್ಮಬಂಧನಕ್ಕೆ ವಿರುದ್ಧವಾಗಿರುವದೋ, ಆ ಪ್ರೇಮ ಸಂಯೋಗವು ಅಶುದ್ಧ ಹಾಗು ತ್ಯಾಜ್ಯವಾಗಿರುತ್ತದೆ. ನೀನು ಗಾಯಸುದ್ದೀನನ್ನು ನಿನ್ನ ಇಚ್ಛಾಬಲದಿಂದಲೇ ವರಿಸಿರುತ್ತೀ. ಅವನು ಬಲಪೂರ್ವಕವಾಗಿ ನಿನ್ನನ್ನು ಅಪಹರಿಸಿ ಮದುವೆಮಾಡಿಕೊಂಡಿರುವದಿಲ್ಲ. ಆದದರಿಂದ ಹ್ಯಾಗೆ ನಾನು ಆ ನಿನ್ನ ಲಗ್ನದ ಗಂಡನ ಅಧಿಕಾರವನ್ನು ತಪ್ಪಿಸಿ ನಿನ್ನನ್ನು ಸ್ವೀಕರಿಸುವದು? ಪತಿಯೇ ಸತಿಯರ ಪರಮ ಗುರುವು, ದೇವತೆಯು, ಧರ್ಮವು. ಯಾವಾತನನ್ನು ಗಂಡನೆಂದು ವರಿಸಿರುವಿಯೋ, ಆತನಿಗೇ ಅನನ್ಯ ಗತಿಕತ್ವದಿಂದ ಆತ್ಮವನ್ನು ಸಮರ್ಪಿಸಿ ಸುಖವನ್ನು ಪಡೆ. ಭಗವಂತನಾದರೂ ಆ ನಿನ್ನ ಏಕ ನಿಷ್ಠೆಗೆ ಸಂತುಷ್ಟನಾಗಿ ನಿನ್ನ ಎಲ್ಲ ಶುಭ ಇಚ್ಛೆಗಳನ್ನು ಪೂರೈಸಿ ಕೊಡುವನು. ಧರ್ಮವೂ ನಿನಗೆ ಸಹಾಯಕವಾಗುವದು.'' ಎಂದು ಸ್ಪಷ್ಟವಾಗಿ ತಿಳಿಸಿಬಿಟ್ಟನು.

ಗಣೇಶದೇವನ ಈ ಬೋಧವನ್ನು ಸ್ಥಿರವಾಗಿ ನಿಂತು ಕೇಳುವಷ್ಟು ಸಹನಶೀಲತ್ವವು ಹುಟ್ಟು ಚಂಚಲ ಸ್ವಭಾವವುಳ್ಳ ಆ ಶಕ್ತಿಗೆಲ್ಲಿಂದ ಬರಬೇಕು? ರಾಜನ ಸದುಪದೇಶವೂ, ಅವನ ಹಿತಗೋಷ್ಠಿಗಳೂ ಅವಳಿಗೆ ಕೊಂಚವೂ ರುಚಿಸಲಿಲ್ಲ. ಕುಮಾರನ ಪ್ರತಿಯೊಂದು ಶಬ್ದವು ಶಕ್ತಿಗೆ ಪ್ರೇಮಹೀನ ಹಾಗು ಕಠೋರವಾಗಿ ತೋರಿ ಅದು ಅವಳ ಹೃದಯಕ್ಕೆ ವಜ್ರದಂಡದಿಂದ ಆಘಾತ ಮಾಡುವಂತೆ ಒಂದೇಸವನೆ ಕಟೆಯಹತ್ತಿತುಮಾತ್ರ. ಹೀಗೆ ಅಸಹ್ಯ ಪೆಟ್ಟುಗಳಿಂದ ಅವಳ ಹೃದಯವು ಛಿನ್ನಭಿನ್ನವಾಗಲು ಅವಳ ಅಪಮಾನ ವ್ಯಥೆಯು ಪುನಃ ಜಾಗ್ರತವಾಯಿತು. ನಿಷ್ಫಲವಾದ ಪ್ರೇಮಕ್ಕಾಗಿ

ಆತ್ಮವನ್ನು ಕೂಡ ವಿಸರ್ಜನ ಮಾಡಿಕೊಳ್ಳಲು ಸಿದ್ಧಳಾಗಿದ್ದ ಅವಳ ಸ್ಥಿತಿಯನ್ನು ಲಕ್ಷ್ಯಕ್ಕೆ ತರದೆ ಕುಮಾರನು ಅವಳನ್ನು ತುಚ್ಛವೆಂದು ತಿರಸ್ಕರಿಸಿದನು. ಅದರಿಂದ ಅವಳ ಮರ್ಮಭೇದವಾಯಿತು. ಸ್ತ್ರೀಯರು ಎಂಥ ದುಃಖವನ್ನಾದರೂ ಸಹಿಸಬಲ್ಲರು; ಆದರೆ ಮರ್ಮಭೇದವಾಗುವ ಪ್ರಸಂಗ ಬಂದಾಗ ಮಾತ್ರ ಅವರು ಅದನ್ನೆಂದೂ ಸಹಿಸರು. ಆದರಂತೆ ಶಕ್ತಿಯ ಮರ್ಮಭೇದವಾಗಲು ಅವಳಲ್ಲಿ ಮತ್ತೆ ಸೇಡು ತೀರಿಸಿಕೊಳ್ಳುವ ಹವ್ಯಾಸವು ಉತ್ಪನ್ನವಾಯಿತು. ಆದರಿಂದ ಅವಳಲ್ಲಿ ಪುನಃ ಗರ್ವವುಂಟಾಗಲು, ಅವಳ ಕಣ್ಣುಗಳಿಂದ ಒಂದೇಸವನೆ ಉದುರುತ್ತಿದ್ದ ದುಃಖಾಶ್ರುಗಳು ಒಮ್ಮೆಲೆ ಕಟ್ಟಾದವು; ಮುಖವು ಮಿಗಿಲಾದ ಗಾಂಭೀರ್ಯದಿಂದ ಶೋಭಿಸಹತ್ತಿತು. ಆಗ ಅವಳು ಗಣೇಶದೇವನನ್ನು ಕುರಿತು—

"ಗಣೇಶದೇವ, ನಾನು ವ್ಯಭಿಚಾರಿಣಿಯಾದ ಹೆಂಗಸಲ್ಲ; ಆತ್ಮಸನ್ಮಾನ ಹಾಗು ಸತೀತ್ವ ಇವುಗಳ ರಕ್ಷಣಕ್ಕಾಗಿಯೇ ನಿನ್ನ ಆಶ್ರಯವನ್ನು ಪಡೆಯಲು ಇಲ್ಲಿಗೆ ಬಂದಿದ್ದೆನು; ನಿನ್ನ ಬಳಿಗೆ ದೇಹವನ್ನು ವಿಕ್ರಯಮಾಡುವದಕ್ಕಾಗಿ ನಾನು ಬಂದಿರುವದಿಲ್ಲ. ಆದರೆ ಸಂಸಾರವನ್ನು ಸನ್ಮಾನ ಪೂರ್ವಕವಾಗಿ ಮಾಡುವದಕ್ಕಿಂತ ಸಮಾಜಬಂಧನವೇ ನಿನಗೆ ಹೆಚ್ಚು ಆದರ್ಶವಸ್ತುವಾಗಿ ತೋರುವದರಿಂದ ನೀನು ಹಾಗೆಯೇ ಮಾಡು. ನಾನೂ ನನ್ನ ಹೃದಯ ಧರ್ಮವನ್ನು ತ್ಯಜಿಸಿ, ಸಮಾಜಧರ್ಮವನ್ನು ಪಾಲಿಸುವದಕ್ಕಾಗಿ ಹೊರಟು ಹೋಗುತ್ತೇನೆ. ಈಗ ನೀನು ಯಾವ ಪಾಪಕ್ಕಾಗಿ ನನ್ನನ್ನು ಬಾಧ್ಯಳನ್ನಾಗ ಮಾಡುತ್ತಿರುವೆಯೋ, ಆ ಪಾಪವು ನಿನ್ನ ಪಾಲಿಗೇ ಬರುವದು!"

ಈ ಪ್ರಕಾರ ಮಾತಾಡಿ, ಅವಳು ಅಲ್ಲಿಂದ ಒಮ್ಮೆಲೆ ನಡಿದು ಬಿಟ್ಟಳು. ರಾಜನು ಎಷ್ಟೋ ಹೊತ್ತಿನ ವರೆಗೆ ಆ ಪುಷ್ಕರಿಣಿಯ ದಂಡೆಯಲ್ಲಿ ಸ್ತಬ್ಧನಾಗಿ ನಿಂತುಬಿಟ್ಟನು.

ಹನ್ನೆರಡನೆಯ ಪ್ರಕರಣ.

ಬಾದಶಹನ ಅಂತವು.

ರಾಜಾ ಗಣೇಶದೇವನೊಡನೆ ಒಡಂಬಡಿಕೆಯ ಮಾತು-ಕಥೆಗಳನ್ನಾಡುವ ಸಲುವಾಗಿ ಬಾದಶಹನು ಆಜೀಮಖಾನನನ್ನು ಕಳಿಸಿದನು. "ಸನ್ಯಾಸಿನಿಯನ್ನು ಮುಕ್ತಮಾಡುವದಲ್ಲದೆ, ದಿನಾಜಪುರ ರಾಜ್ಯದಿಂದ ಇಷ್ಟು ದಿವಸಗಳ ವರೆಗೆ ಬಾದಶಹನಿಗೆ ಸಲ್ಲುತ್ತಿದ್ದ ಕಪ್ಪವನ್ನು ಇನ್ನು ಮುಂದೆ ಬಾದಶಹನು ತಕೊಳ್ಳದೆ ಮಾಫಮಾಡಿ ಬಿಡಬೇಕು. ಅಂದರೆ ಬಾದಶಹನ ಪಕ್ಷವನ್ನು ಸ್ವೀಕರಿಸಿ ತಾನು ಗಾಯಸುದ್ದೀನನೊಡನೆ ಕಾಳಗಕ್ಕೆ ಬರುವೆನೆ"ಂದು ಗಣೇಶದೇವನು ಆಜೀಮಖಾನನಿಗೆ ತಿಳಿಸಿದನು. ಹ್ಯಾಗೇ ಆಗಲಿ, ಈ ಸಂಬಂಧದ ಸಂಧಿ ಪತ್ರವನ್ನು ಬಾದಶಹನೇ ಬರೆದು ಕೊಡುವನು. ಆದ್ದರಿಂದ ನೀನು ಅಲ್ಲಿಗೆ ಈಗಲೇ ಹೊರಟು ಬರಬೇಕೆಂದು ಆಜೀಮಖಾನನು ಗಣೇಶದೇವನಿಗೆ ಒತ್ತರಪಡಿಸಹತ್ತಿದನು. ರಾಜ ಸಭೆಯಲ್ಲಿ ತನಗೆ ಬಾದಶಹನಿಂದ ಯಾವ ತರದ ಮೋಸವೂ ಆಗಬಾರದು. ಇದಕ್ಕಾಗಿ ಬಾದಶಹನ ಮೊಮ್ಮಗನಾದ ಸಾಹೇಬ ಉದ್ದೀನನನ್ನು ಆ ವರೆಗೆ ನನ್ನ ರಾಜ್ಯದಲ್ಲಿ ಅಡವು ಇರಿಸಬೇಕೆಂಬ ಗಣೇಶದೇವನ ಕೇಳಿಕೆಯ ಪ್ರಕಾರ ಖಾನನು ಸಾಹೇಬ ಉದ್ದೀನನನ್ನು ದಿನಾಜಪುರದಲ್ಲಿಯೇ ಬಿಟ್ಟು ಗಣೇಶದೇವನೊಡನೆ ಪಾಂಡುಯಾ ರಾಜಧಾನಿಗೆ ಬಂದನು.

ಆದರೆ ಆ ಮುದಿಹುಚ್ಚ ಬಾದಶಹನು ಆಜೀಮಖಾನನ ವಚನವನ್ನು ಪಾಲಿಸಲಿಲ್ಲ. ಗಣೇಶದೇವನು ಬಾದಶಹನ ಸಭೆಗೆ ಬರಲು, ಬಾದಶಹನು ಅವನನ್ನು ಮಿತ್ರಭಾವದಿಂದ ನೋಡಲಿಲ್ಲ, ಇಷ್ಟೇ ಅಲ್ಲ, ಒಬ್ಬ ಅಪರಿಚಿತ ಸಾಧಾರಣ ಗೃಹಸ್ಥನನ್ನು ಮನ್ನಿಸುವಷ್ಟು ಸಹ ಅವನು ಗಣೇಶದೇವನನ್ನು ಮನ್ನಿಸಲಿಲ್ಲ; ಬಾದಶಹನು ದಬಾ

ರದಲ್ಲಿ ಅವನಿಗೆ ಕೂಡ್ರಲಿಕ್ಕೆ ಕೂಡ ಹೇಳಲಿಲ್ಲ. ಹೀಗಾಗಲಿಕ್ಕೆ ಕಾರಣವೇನಂದರೆ, ಗಣೇಶದೇವನು ಬಾದಶಹನ ಸಭೆಗೆ ಬಂದ ಕೂಡಲೆ ಸುಲ್ತಾನನಿಗೆ ನೆಲಮುಟ್ಟಿ ಸಲಾಮು ಮಾಡಲಿಲ್ಲ. ಅವನು ಉನ್ನತ ಮಸ್ತಕದಿಂದಲೇ (ಮಿತ್ರಭಾವದಿಂದಲೇ) ಬಾದಶಹನನ್ನು ಅಭಿನಂದಿಸಿದನು. ಅದು ದುರಭಿಮಾನಿಯಾದ ಆ ವೃದ್ಧ ಯವನ ಬಾದಶಹನಿಗೆ ಸಹನವಾಗಲಿಲ್ಲ. ತಾನು ಬಾದಶಹನಿದ್ದು ತನ್ನೊಡನೆ ಯಾವ ಸಾಮಾನ್ಯ ಮನುಷ್ಯನು ಎಂದೂ ಈ ಪರಿ ಉದ್ಧಟನಾಗಿ ನಡೆಯದಿದ್ದವನು, ಈ ದಿವಸ ತನ್ನ ಇಂಥ ಕಡುವಿಪತ್ತಿನ ಪ್ರಸಂಗದಲ್ಲಿ ಹೀಗೆ ಅಮರ್ಯಾದೆಯಿಂದ ನಡೆದದ್ದು ಆ ಸುಲ್ತಾನನಿಗೆ ಹ್ಯಾಗೆ ಸಹನವಾಗಬೇಕು? ಅದರಿಂದ ಅವನು ಮನಸ್ಸಿನಲ್ಲಿ ಬಹಳವಾಗಿ ನೊಂದುಕೊಂಡನು; ಹಾಗು ಅದರ ಸೇಡು ತೀರಿಸಿಕೊಳ್ಳುವದಕ್ಕಾಗಿ ಅವನು ಗಣೇಶದೇವನಿಗೆ ದರ್ಬಾರದಲ್ಲಿ ಕೂಡ್ರಲಿಕ್ಕೆ ಸಹ ಹೇಳದೆ, ಹಾಗೆಯೇ ನಿಲ್ಲಿಸಿಬಿಟ್ಟನು. ಬಾದಶಹನ ಈ ಅಯೋಗ್ಯಾಚರಣೆಗಾಗಿ ಸಭಾಸದರೆಲ್ಲರೂ ಮನಸ್ಸಿನಲ್ಲಿ ಅತಿಶಯವಾಗಿ ವಿಷಾದಪಡಹತ್ತಿದರು. ಆದರೆ ಯಾರೂ ಪಿಟ್ಟೆಂದು ಮಾತಾಡರು. ಬಿರುಗಾಳಿಯು ಬಿಡುವ ಮೊದಲು ಹ್ಯಾಗೆ ಎಲ್ಲ ಕಡೆಯು ಹವೆಯಲ್ಲಿ ನಿಸ್ತಬ್ಧವಿರುತ್ತದೆಯೋ ಹಾಗೆ ಆ ಸಭಾಮಂದಿರವೆಲ್ಲ ಸ್ತಬ್ಧವಾಗಿ ಹೋಗಿತ್ತು. ಕೆಲಹೊತ್ತಿನ ಮೇಲೆ ಬಾದಶಹನು ಕ್ರೋಧಪೂರ್ಣ ಗಂಭೀರದನಿಯಿಂದ—"ಗಣೇಶದೇವ, ನೀನು ಏನನ್ನು ಬಯಸುವೆ?" ಎಂದು ಕೇಳಿದನು.

ಗಣೇಶದೇವನು ಸಭೆಗೆ ಬಂದೊಡನೆಯೇ ಇಂದಿನ ಲಕ್ಷಣವು ಚೆನ್ನಾಗಿಲ್ಲವೆಂದು ಅನುಮಾನಿಸಿದ್ದನು. ಅದರಂತೆ ಬಾದಶಹನ ಆ ವ್ಯವಹಾರದಿಂದ ಸಂಧಿಭಂಗದ ಸೂಚನೆಗಳೂ ವ್ಯಕ್ತವಾಗಿದ್ದವು. ಆಗ ಅವನು—ನಾನು ಏನು ಇಚ್ಛಿಸುತ್ತಿರುವೆನೆಂಬದನ್ನು ಈ ಮೊದ

ಲೇ ತಿಳಿಸಲ್ಪಟ್ಟಿದೆ; ಮತ್ತು ಅದಕ್ಕೆ ಜಹಾಂಪನರವರು ಒಪ್ಪಿಯೂ ಇರುತ್ತಾರೆ. ಕೇವಲ ಸಂಧಿಪತ್ರಗಳಿಗೆ ಪರಸ್ಪರರ ಸ್ವಾಕ್ಷರಗಳಿಂದ ರುಜು ಮಾಡುವದಕ್ಕಾಗಿ ಈಗ ಇಲ್ಲಿಗೆ ಬಂದದ್ದಾಗಿದೆ. ಆದರೆ ತಾವು ಪುನಃ ಅದನ್ನೇ ಕೇಳುತ್ತಿರುವದರಿಂದ, ನಾನು ತಮ್ಮ ಆಜ್ಞೆಯ ಪ್ರಕಾರ ತಮಗೆ ಮತ್ತೆ ತಿಳಿಸುವದೇನಂದರೆ, "ಮೊಟ್ಟಮೊದಲು ನಾನು ಸನ್ಯಾಸಿನಿಯ ಮುಕ್ತಿಯನ್ನು ಅಪೇಕ್ಷಿಸುತ್ತೇನೆ. ಇದೇ ನನ್ನ ಮೊದಲನೇ ಕೋರಿಕೆಯು; ಹಾಗು ಈಗೊಂದು ವರ್ಷದಿಂದ ನಿಷ್ಕಾರಣವಾಗಿ ನನಗುಂಟಾದ ಹಾನಿಯನ್ನು ತುಂಬಿಕೊಡುವದಕ್ಕಾಗಿ, ಬಾದಶಹನು ಇನ್ನು ಮುಂದೆ ನನ್ನ ದಿನಾಜಪುರ ರಾಜ್ಯದಿಂದ ಕಪ್ಪವನ್ನು ತಕ್ಕೊಳ್ಳಬಾರದೆಂಬದೇ ನನ್ನ ಎರಡನೇ ಇಚ್ಛೆಯು."

ಇದನ್ನು ಕೇಳಿ, ಬಾದಶಹನು ಹುಬ್ಬುಗಂಟಿಕ್ಕಿ—"ಆದರೆ ನಿನ್ನ ವಿದ್ರೋಹತೆಯಿಂದ ನಮಗುಂಟಾದ ಹಾನಿಯು ತುಂಬಿ ಬರುವ ಬಗೆ ಯಾವದು?"

ಗಣೇಶ—"ಇನ್ನು ಮುಂದೆ ನಾನು ತಮ್ಮವನಾಗಿ ನಬಾಬನೊಡನೆ ಯುದ್ಧಮಾಡುವದರಿಂದ"

ಬಾದಶಹ—ಯಾವನೊಬ್ಬ ಸಾಮಾನ್ಯ ಪ್ರಜೆಯ ಇಚ್ಛೆ-ಅನಿಚ್ಛೆಗಳನ್ನು ನಾವೆಂದಾದರೂ ಅನುಸರಿಸುವೆವೇನು? ನೀನು ಈಗ ನಮಗೆ ಸಹಾಯಮಾಡದಿದ್ದರೆ, ನಿನ್ನ ಮಗ್ಗಲು ಮುರಿಯುವ ಹಾಗೆ ನಿನ್ನನ್ನು ದಂಡಿಸುವೆವು. ಇಷ್ಟು ದಿವಸಗಳ ವರೆಗೆ ರಾಜದ್ರೋಹಿಯಾಗಿ ಎಂಥ ಅನ್ಯಾಯವನ್ನು ಮಾಡಿರುವೆಯೋ ಅದಕ್ಕಾಗಿ ನಿನಗಾವ ಶಿಕ್ಷೆಯನ್ನು ಕೊಡಬೇಕು? ಬೊಗಳು.

ಗಣೇಶ—ನಾನು ತಮ್ಮ ಸಭಾಗೃಹವನ್ನು ಸೇರುವ ಪೂರ್ವದಲ್ಲಿಯೇ ತಾವು ಮಾಡತಕ್ಕ ಶಿಕ್ಷೆಯನ್ನು ಮಾಡಬಹುದಾಗಿತ್ತು. ವಿಶ್ವಾಸಕೊಟ್ಟು ನನ್ನನ್ನು ಇಲ್ಲಿಗೆ ಕರೆಯಿಸಿ, ಈಗ ನನ್ನೊಡನೆ ಆ ಶಿಕ್ಷೆ

ಯ ಬಗ್ಗೆ ಮಾತಾಡುವದೆಂದರೆ ವಿಶ್ವಾಸಘಾತವಲ್ಲದೆ ಮತ್ತೇನು?

ಬಾದಶಹ—ಮೂರ್ಖರ ಕೂಡ ಮೂರ್ಖತನದಿಂದ ನಡೆಯುವದರಿಂದ ವಿಶ್ವಾಸಘಾತವ ಮಾಡಿದ ಹಾಗಾಗುವದಿಲ್ಲ. ಇದರಂತೆ ಮಾಡುವದೇ ನಿನ್ನಂಥ ಶಠನಿಗೆ ದಂಡೋಪಾಯವು. ಅಜೀಮಖಾ, ಈ ಉನ್ಮತ್ತನನ್ನು ಈಗಲೆ ಸೆರೆ ಹಿಡಿ, ಎಂದು ಅಜ್ಞಾಪಿಸಿದನು.

ಬಾದಶಹನು ಇಷ್ಟು ದಾರಿ ಬಿಟ್ಟು ನಡೆದಾನೆಂಬದು ಯಾವ ಸಭಿಕನೂ ಊಹಿಸಿರಲಿಲ್ಲ. ಅದರಿಂದ ಅವನ ಆ ದುಭಾಷಣವನ್ನು ಕೇಳಿ ಅವರು ವಿಸ್ಮಯಚಕಿತರಾದರು. ಅಜಿಮಖಾನನು ಬಾದಶಹನ ಆಜ್ಞೆಯನ್ನು ಪಾಲಿಸಹೋಗಲಿಲ್ಲ. ಅವನು ತನ್ನ ಸ್ಥಳದಲ್ಲಿಯೇ ನಿಂತು ವಿಸ್ಮಿತ ನೇತ್ರಗಳಿಂದ ಬಾದಶಹನ ಕಡೆಗೆ ನೋಡತೊಡಗಿದನು. ತನ್ನ ಆಶ್ವಾಸನದ ಪ್ರಕಾರ ಗಣೇಶದೇವನು ಸುಲ್ತಾನನ ದರ್ಬಾರಕ್ಕೆ ಬಂದಿರಲು, ತಾನು ಅವನನ್ನು ಬಂಧಿಸುವದು ಅನ್ಯಾಯವಲ್ಲವೆ! ಎಂಬ ಆಲೋಚನೆಯಿಂದ ಅವನ ಮನಸ್ಸು ಅತಿ ಅಸ್ಥಿರವಾಯಿತು; ಹಾಗು ಅದು ಬಾದಶಹನ ಆ ಅನ್ಯಾಯವನ್ನು ಸಹಿಸಲಾರದಾಯಿತು. ಈ ಸ್ಥಿತಿಯಲ್ಲಿ ಅಜೀಮಖಾನನು ಬಹಳ ಹೊತ್ತಿನವರೆಗೆ ನಿಲ್ಲದೆ—"ಜಹಂಪನಾ, ತಮ್ಮ ಅಪ್ಪಣೆಯ ಪ್ರಕಾರ ಈ ಗಣೇಶದೇವನಿಗೆ ನಾನು ನಿರ್ಭಯದ ಬಗ್ಗೆ ವಚನ ಕೊಟ್ಟು ಈತನನ್ನು ಇಲ್ಲಿಗೆ ಕರತಂದಿರುವೆನು. ತಾವು ಈಗ ವಿಶ್ವಾಸಭಂಗವನ್ನು ಮಾಡಿದರೆ ತಮ್ಮ ಸುಖ್ಯಾತಿಗೆ ಕಲಂಕವುಂಟಾದೀತು. ಅಲ್ಲದೆ ಇನ್ನು ಮುಂದೆ ಯಾರೂ ತಮ್ಮ ಮಾತಿನಲ್ಲಿ ವಿಶ್ವಾಸವಿಡಲಿಕ್ಕಿಲ್ಲ" ಎಂದನು.

ಬಾದಶಹ—ಸುಮ್ಮನಿರು, ನಾಚಿಕೆಗೇಡಿ! ಕರೀಮ ಉದ್ದೀನ ಇಂದಿನಿಂದ ನೀನೇ ಸೇನಾಪತಿಯು. ನಾಚಿಕೆಗೇಡಿಯಾದ ಈ ಅಜೀಮಖಾನನನ್ನೂ, ವಿದ್ರೋಹಿಯಾದ ಗಣೇಶದೇವನನ್ನೂ ಕೂಡಲೆ ಕೈದುಮಾಡು. ಎಷ್ಟೋ ದಿನಗಳ ಹಿಂದೆಯೇ ಇವರಿಗೆ ಈ ಶಿಕ್ಷೆ ಕೊಡ

ಬೇಕಾಗಿತ್ತು.

ಕರೀಮ—ಜಹಂಪನಾ, ಬಾಗಿಲ ಬಳಿಯಲ್ಲಿ ಈ ವಿದ್ರೋಹಿಗಳ ಸೈನ್ಯ-ಸಾಮಂತರಿರುವರಲ್ಲ, ಅವರನ್ನೇನು ಮಾಡಬೇಕು?

ಬಾದಶಹ—ಅವರೆಲ್ಲರನ್ನೂ ಪ್ರತಿಬಂಧಗೊಳಿಸು.

ತತ್ಕ್ಷಣವೇ ರಾಜಾಜ್ಞೆಯು ಪರಿಪಾಲಿಸಲ್ಪಟ್ಟಿತು. ಅಜೀಮಖಾನಹಾಗು ಗಣೇಶದೇವ ಇವರನ್ನು ಕರೀಮನು ಸೆರೆಹಿಡಿದೊಯ್ದನು. ಆಗ ಸುಲ್ತಾನನ ಮಂತ್ರಿಯು ತನ್ನ ತಲೆಗಟ್ಟಿಸಿಕೊಂಡು ಬಾದಶಹನಿಗೆ—"ಸುಲ್ತಾನ ಇದೇನು ಮಾಡಿದೆ? ಹೀಗೆ ಮಾಡಿ ನವಾಬನನ್ನು ಗೆಲ್ಲಲಿಕ್ಕೆ ಇನ್ನಾವ ಮಾರ್ಗವನ್ನೂ ಉಳಿಯಗೊಡಲಿಲ್ಲವಲ್ಲ! ನಿರ್ದೋಷಿಯಾದ ಅಜೀಮಖಾನನನ್ನು ಸುಮ್ಮಸುಮ್ಮನೆ ಏಕೆ ಸೆರೆ ಹಿಡಿಸಿದೆ? ಹಾಗು ಅದರಂತೆಯೇ ಗಣೇಶದೇವನನ್ನೂ.........

ಮಂತ್ರಿಯು ಮಾತನ್ನು ಪೂರ್ಣಮಾಡಗೊಡದೆ ನಡುವೇ ಬಾಯಿ ಹಾಕಿ ಬಾದಶಹನು—ಅಜೀಮಖಾನನು ನಿರ್ದೋಷಿಯೇ? ನಿನ್ನ ಮಗನೆಂದು ತಿಳಿದು ನಾನು ಅವನನ್ನು ಈ ವರೆಗೆ ಸೇನಾಪತಿಯೆಂದು ಇಟ್ಟುಕೊಂಡಿದ್ದೆನು, ಅವನಿಂದಲೇ ಆಗತಕ್ಕ ಕಾರ್ಯಗಳೆಲ್ಲ ಇಷ್ಟು ಮಂದವಾಗಿ ಸಾಗಿರುತ್ತವೆ.

ಮಂತ್ರಿ—ಈಗ ಗಣೇಶದೇವನನ್ನು ಸೆರೆ ಹಿಡಿದದ್ದರಿಂದ ಮತ್ತೆ ಎರಡೂ ಕಡೆಗೆ ಯುದ್ಧಮಾಡಬೇಕಾಯಿತಲ್ಲ?

ಬಾದಶಹ—ಮಂತ್ರಿಯೇ, ವೃದ್ಧಾಪ್ಯದಮೂಲಕ ನಿನ್ನ ಬುದ್ಧಿಯು ಭ್ರಂಶವಾಗಿರುವಂತೆ ತೋರುತ್ತದೆ. ಗಣೇಶದೇವನೇ ಸೆರೆ ಹಿಡಿಯಲ್ಪಟ್ಟ ಬಳಿಕ, ಅವನ ಕಡೆಯಿಂದ ಕಾದುವವರಾದರೂ ಯಾರು?

ಮಂತ್ರಿ—ಅವನ ಸೈನಿಕರು. ಗಣೇಶದೇವನ ತಾಯಿಯು ಕಡಿಮೆಯವಳೆಂದು ತಿಳಿಯಬೇಡ. ಎಲ್ಲಿಯ ವರೆಗೆ ಒಬ್ಬ ಸೈನಿಕನಾ

ದರೂ ಜೀವದಿಂದಿರುವನೋ ಅಲ್ಲಿಯ ವರೆಗೆ ಅವರು ತಮ್ಮ ರಾಜನ ಬಂಧವಿಮೋಚನದ ಸಲುವಾಗಿ ಕಾದದೆ ಇರಲಾರರು. ಇಷ್ಟೇ ಅಲ್ಲ ಸುಲ್ತಾನ, ಸಾಹೇಬುದ್ದೀನನು ಶತ್ರುಗಳ ಅಧೀನದಲ್ಲಿರುವನಷ್ಟೇ? ಅವನ ಬಿಡುಗಡೆಯ ವಿಷಯವಾಗಿ ನೀನಾವ ಉಪಾಯವನ್ನು ಮಾಡಿದ್ದೀಯೆ? ಗಣೇಶದೇವನನ್ನು ಸೆರೆಹಿಡಿದ ಸುದ್ದಿಯು ದಿನಾಜಪುರಕ್ಕೆ ಮುಟ್ಟಿದರೆ ಅಲ್ಲಿಯವರು ಸಾಹೇಬುದ್ದೀನನನ್ನು ಕೊಂದುಬಿಡುವರಲ್ಲ!

ಬಾದಶಹ—ಗಣೇಶದೇವನ ಸಂಗಡ ಬಂದಿದ್ದ ಎಲ್ಲ ಸೈನಿಕರೂ ನಮ್ಮಿಂದ ಪ್ರತಿಬಂಧದಲ್ಲಿರಿಸಲ್ಪಟ್ಟಿದ್ದಾರೆ. ಅದರಿಂದ ಈಗಲೇ ಈ ಸುದ್ದಿಯು ಗಣೇಶದೇವನ ಶಿಬಿರಕ್ಕೆ ಮುಟ್ಟಲಾರದು. ಅದ್ದರಿಂದ ಅಷ್ಟರಲ್ಲಿ ನೀನು ಸಾಹೇಬುದ್ದೀನನನ್ನು ಬಿಡಿಸಿಕೊಂಡು ಬರುವ ಹಂಚಿಕೆಯನ್ನು ಮಾಡು.

ಮಂತ್ರಿ—ಜಹಾಂಪನಾ, ತಮ್ಮ ಹುಕುಮನ್ನು ಇನ್ನು ಮನ್ನಿಸುವರಾರು? ನನ್ನ ಮಾತನ್ನು ಕೇಳಿಕೊಂಡು ನಿನ್ನ ಸ್ವಂತದ ಹಿತವನ್ನು ಸಾಧಿಸಿಕೋ. ಅಜೀಮುಖಾನನನ್ನು ಈಗಲೆ ಬಂಧಮುಕ್ತ ಮಾಡು; ಗಣೇಶದೇವನೊಡನೆ ಬಂಧುಪ್ರೇಮದಿಂದ ನಡೆ. ಹೀಗೆ ಮಾಡದಿದ್ದರೆ ನಿನ್ನ ಸರ್ವಸ್ವವು ನಾಶವಾಗುವದು ಖಂಡಿತ. ಸುಲ್ತಾನ, ನಿನಗೆ ದೆವ್ವ-ಗಿವ್ವ ಬಡಿದದೆಯೆಂಬಂತೆ ಕಾಣುತ್ತದೆ!

ಇದನ್ನು ಕೇಳಿ ಬಾದಶಹನು ಅತ್ಯಂತ ಸಿಟ್ಟಿನಿಂದ-ನೀನೇ ನನಗೆ ಬಡಕೊಂಡಿರುವ ದೆವ್ವವು. ನಿನ್ನ ಮಗನಾದ ಕುತುಬನು ಗಾಯಸುದ್ದೀನನ ಯುಕ್ತಿಗಾರನಲ್ಲವೆ? ಕುತುಬನ ಸಂಗತಿಯಿಂದ ಗಾಯಸುದ್ದೀನನು ವಿಪತ್ತಿಗೆ ಗುರಿಯಾಗಿರಲು, ಆ ಕುತುಬನ ತಂದೆಯಾದ ನಿನ್ನ ಸಹವಾಸದಿಂದ ನನಗಿಂಥ ವಿಪತ್ತು ಬಂದದ್ದರಲ್ಲಿಸೋಜಿಗವೇನು?

ಮಂತ್ರಿ—ಕುತುಬನು ಅಂಥ ಕಿಡಿಗೇಡಿಯಂತೇ ಆತನನ್ನು ನಾನು ತ್ಯಜಿಸಿರುವೆನಷ್ಟೇ?

ಬಾದಶಹ—ನೀನು ಅವನನ್ನು ಹೊರದೂಡಿದ್ದರೂ, ಅವನಿಂದ ನನಗಾದ ಹಾನಿಯ ಪ್ರಮಾಣವು ಕೊಂಚವೂ ಕಡಿಮೆಯಾಗಿಲ್ಲ. ನನಗೆ ಹೀಗೆ ತಿಳಿದದೆಯಲ್ಲ, ಅಜೀಮಖಾನನು ಗುಪ್ತಭಾವದಿಂದ ಕುತುಬ ನನ್ನು ಕೂಡಿಕೊಂಡಿರುವದರಿಂದಲೇ ನನ್ನ ಸರ್ವನಾಶವಾಗುತ್ತಲಿದೆ. ಇಲ್ಲದಿದ್ದರೆ ನನ್ನೆದುರಿಗೆ ಇಷ್ಟು ದಿವಸಗಳವರೆಗೆ ನಿಂತು ಕಾದಲು ಅದಾವ ಶತ್ರುವು ಸಮರ್ಥನಾಗುವನು?

ಮಂತ್ರಿ—ತೋಬಾ! ತೋಬಾ!! ಇದೆಂಥ ಅಪನಂಬಿಗೆಯು! "ನೀನೂ ಗಾಯಸುದ್ದೀನನ ಪಕ್ಷದವನೇ" ಎಂದು ನೀನು ಎಂದಾದರೂ ನನಗೂ ಅನ್ನಲಿಕ್ಕೆ ಹೇಸುವಂತೆ ತೋರುವದಿಲ್ಲ.

ಬಾದಶಹ—ಸದ್ಯಕ್ಕೆ ನನಗೆ ಅದೇ ಅನುಮಾನವಿದೆ. ಹಾಗಿಲ್ಲದೆ ನೀನು ನಿರ್ದೋಷಿಯೇ ಆಗಿದ್ದರೆ, ನಾನು ಏನಂದಿದ್ದರೂ ನಿನಗೆ ಹೀಗೆ ಸಿಟ್ಟು ಯಾಕೆ ಬರುತ್ತಿತ್ತು?

ದರವೇಶ [ಮುಸಲ್ಮಾನ]ಧರ್ಮದವನೂ, ಹಣ್ಣಾದ ಮುದುಕನೂ, ಕೇವಲ ಸಾಧು ಸ್ವಭಾವದವನೂ ಆದ ಆ ವೃದ್ಧ ಮಂತ್ರಿಯು ಬಾದಶಹನ ಬಾಯಿಂದ ಹೊರಟ ಆ ನಿಂದ್ಯ ಶಬ್ದಗಳನ್ನು ಕೇಳಿ ಸಕ್ರೋಧದಿಂದ—"ಸುಲ್ತಾನ, ಸಾಕು, ನಿನ್ನ ಅಭದ್ರ ಮಾತುಗಳನ್ನು ಸಾಕುಮಾಡು. ನಾನು ಈಗಲೇ ಹೊರಟು ಹೋಗುತ್ತೇನೆ. ದೇವರೇ ನಿನಗೆ ಈ ದುರ್ಬುದ್ಧಿಯನ್ನು ಕೊಟ್ಟಿರುತ್ತಾನೆ. ಅಂದ ಮೇಲೆ ನೀನಾದರೂ ಮಾಡುವದೇನು? ಇಂದಿನಿಂದ ನಾನು ನಿನ್ನ ಈ ಮಂತ್ರಿಪದದ ಚಾಕರಿಯನ್ನು ಬಿಟ್ಟು ಬಿಟ್ಟಿರುತ್ತೇನೆ. ಆದರೆ ಕಟ್ಟಕಡೆಗೆ ನಿನಗೆ ನಾನು ತಿಳಿಸಿಡುವದೇನಂದರೆ—ನೀನು ಈ ಯುದ್ಧವನ್ನು ಜಯಿಸಲಾರೆ!

ದರ್ಬಾರದವರೆಲ್ಲರೂ ರಾಜನ ಅತ್ಯಾಚಾರದ ಬಗ್ಗೆ ಅತ್ಯಂತ ಕ್ಷುಬ್ಧರಾದ್ದರಿಂದ ಅವರಲ್ಲಾವನೂ ಮಂತ್ರಿಯನ್ನು ತಡೆದು ನಿಲ್ಲಿಸಲಿ

ಲ್ಲ; ಕೈಸನ್ನೆ ಮಾಡಿ ಅವನಿಗೆ ನಿಲ್ಲಲಿಕ್ಕೆ ಕೂಡಹೇಳಲಿಲ್ಲ. ಮಂತ್ರಿಯು ಹೊರಟುಹೋದ ಬಳಿಕ ಒಂದು ಪ್ರಕಾರದ ನಿಶ್ಶಬ್ದ ಕ್ರೋಧದ ತೆರೆಗಳು ಮಾತ್ರ ಆ ಸಭಾಗೃಹದಲ್ಲಿ ಉಂಟಾಗಿ, ಬಾದಶಹನ ಅಂತಃಕರಣಕ್ಕೆ ಅವುಗಳ ಆಘಾತವು ಎಡಬಿಡದೆ ಆಗಹತ್ತಿತ್ತು.

ಆಗ ಅಪರಾಹ್ನ ಸಮಯವು; ಆ ದಿವಸ ಬೆಳಗಿನಿಂದಲೂ ಒಂದೇ ಸವನೆ ಮಳೆ ಹಿಡಿದಿತ್ತು. ಮೇಘಾಚ್ಛಾದಿತವಾದ ಆ ದಿವಸದ ಮ್ಲಾನ ಭಾವವು ಅಂದಿನ ಆ ಸಭಿಕರ ಮ್ಲಾನತೆಯಲ್ಲಿ ಬೆರೆತುಕೊಂಡು ಸಭಾಮಂದಿರವನ್ನು ಮತ್ತಿಷ್ಟು ವಿಷಾದಪೂರ್ಣಮಾಡಿ ಬಿಟ್ಟಿತು. ಹೀಗೆ ಕೆಲಹೊತ್ತು ಕೇವಲ ಸ್ತಬ್ಧವಾಗಿದ್ದ ಆ ದರ್ಬಾರ ಗೃಹವು ಆಕಸ್ಮಿಕ ಬಿರುಗಾಳಿಯ ಯೋಗದಿಂದ ಸಮುದ್ರವು ತರಂಗಿತವಾಗುವಂತೆ ಒಮ್ಮೆಲೆ ಸ್ಫೂರ್ತಿಗೊಂಡಿತು. ಆಗ ಇಬ್ಬರು ಸೈನಿಕರು ಓಡುತ್ತೋಡುತ್ತ ಬಂದು ಆ ಸಭೆಯನ್ನು ಹೊಕ್ಕು—ಜಹಂಪನಾ, ನಬಾಬ ಗಾಯಸುದ್ದೀನನು ತೀರ ಹತ್ತಿರಕ್ಕೆ ಬರುತ್ತಿರುವನು. ನಿಮ್ಮ ದ್ವಿತೀಯ ಪುತ್ರನಾದ ನಬಾಬಜಲಾಲುದ್ದೀನನಿಂದ ಅವನನ್ನು ಹಿಮ್ಮೆಟ್ಟಿಸುವದು ಆಗಲಾಗಿದೆ. ಸೈನ್ಯದೊಡನೆ ಸೇನಾಪತಿಗೆ ಈಗಲೆ ಮುಂದರಿದು ಹೋಗಲಿಕ್ಕೆ ಅಪ್ಪಣೆಯಾಗಬೇಕು, ಎಂದು ಕೇಳಿಕೊಂಡರು.

ಈ ಸುದ್ದಿಯನ್ನು ಕೇಳಿ ಬಾದಶಹನ ಸೊಂಡೆಯೆಣಗಿ ಕಪ್ಪಿಟ್ಟಿತು. ಆಗ ಅವನು ಭ್ರಾಂತ ಚಿತ್ತದಿಂದ—ಅಜೀಮಖಾ, ಅಜೀಮಖಾನ. ಎಲೆ, ಅಜೀಮಖಾನನ್ನು ಕರೆ, ಎಂದು ಕೂಗಿದನು.

ಆಗ ಹತ್ತಿರದಲ್ಲೇ ಇದ್ದ ನೂತನ ಸೇನಾಪತಿಯಾದ ಕರೀಮಉದ್ದೀನನು ಬಾದಶಹನನ್ನು ಕುರಿತು—ತಮ್ಮ ಆಜ್ಞೆಯ ಪ್ರಕಾರ ಅವನು ಈ ಮೊದಲೇ ಪ್ರತಿಬಂಧಿಸಲ್ಪಟ್ಟಿರುವನು, ಎಂದು ಉತ್ತರವನ್ನೀಯಲು,

ಬಾದಶಹನು ಸಿಟ್ಟಿನಿಂದ ಕಣ್ಣುಗಳನ್ನು ಕೆಂಡದಂತೆ ಮಾಡಿ—ಹೋಗು, ಈಗಲೆ ಬಂಧಮುಕ್ತ ಮಾಡಿ ಅವನನ್ನು ಇಲ್ಲಿಗೆ ಕರಕೊಂಡು ಬಾ, ಎಂದು ಆಜ್ಞಾಪಿಸಿದನು.

ಕೂಡಲೆ ಕರೀಮನು ಹೊರಟು ಹೋದನು. ಆದರೆ ಕೆಲ ಹೊತ್ತಿನಲ್ಲಿ ಅವನು ತಿರುಗಿ ಬಂದು ಮ್ಲಾನ ಮುಖದಿಂದ ನುಡಿದನೇನಂದರೆ—ಜಹಾಂಪನಾ, ಅಜೀಮಖಾನನು ತುರಂಗದೊಳಗಿಂದ ಓಡಿ ಹೋಗಿರುವನು.

ಬಾದಶಹ—ಓಡಿಹೋಗಿರುವನೇ?

ಕರೀಮ—ಹೌದು, ನಿಶ್ಚಯವಾಗಿ ಹೋಗಿರುವನು.

ಬಾದಶಹ—ಎಲ್ಲಿಗೆ ಹೋದನು?

ಕರೀಮ—ನವಾಬ ಗಾಯಸುದ್ದೀನನ ಶಿಬಿರಕ್ಕೆ ಹೋದನೆಂದು ತಿಳಿಯುತ್ತದೆ.

ಆಗ ದರ್ಬಾರದ ಜನರೆಲ್ಲರೂ ಬಹಳ ಹಳಹಳಿಸಹತ್ತಿದರು. ಬಾದಶಹನೂ ಈ ವಾರ್ತೆಯನ್ನು ಕೇಳಿ ಅಸಮಾಧಾನ ತಾಳಿದನು. ಬಳಿಕ ಅವನು ಕರೀಮನಿಗೆ—ಹಾಗಾದರೆ, ಗಣೇಶದೇವನನ್ನು ಕರೆದು ಕೊಂಡು ಬಾ, ಎಂದು ಹೇಳಿದನು.

"ಅವನೂ ಪಲಾಯನ ಮಾಡಿರುವನು" ಎಂಬ ಉತ್ತರವನ್ನು ಕರೀಮನು ಕೊಟ್ಟದ್ದನ್ನು ಕೇಳಿ, ಬಾದಶಹನು ಭ್ರಾಂತಿಗೊಂಡು—"ಮಂತ್ರೀ, ಮಂತ್ರಿ; ಈಗಾವ ಹಂಚಿಕೆಯನ್ನು ಹೇಳುತ್ತೀ ಹೇಳು ನೋಡುವಾ" ಎನ್ನಲು,

ಸಭಿಕರು—ಇನ್ನೆಲ್ಲಿಯ ಮಂತ್ರಿಯು? ಅವನೂ ಗಾಯಸುದ್ದೀನನ ಪರಾಮರ್ಶದಾತೃಳವೇ ಆಗಿರುತ್ತಾನೆಂದು ಕೇಳುತ್ತೇವೆ, ಎಂದು ಉತ್ತರಕೊಟ್ಟರು!

ಈ ವರೆಗೆ ಹಾಗೂ ಹೀಗೂ ಶೀತಲವಾಗಿದ್ದ ಸುಲ್ತಾನನ ದೇಹ

ದೊಳಗಿನ ರಕ್ತವು ಈಗ ಒಮ್ಮೆಲೆ ಕಾದು ಸುಡಹತ್ತಿತು. ಬಳಿಕ ಅವನು ಉತ್ತೇಜಿತಸ್ವರದಿಂದ—"ಯಾರೂ ಇಲ್ಲವೆ? ಎಲ್ಲರೂ ಹೊರಟು ಹೋಗಿದ್ದಾರೆಯೋ? ಒಳ್ಳೇದು, ಹಾಗೆಯೇ ಆಗಲಿ; ನಡೆಯಿರಿ, ನಾನೇ ಬರುವೆನು. ಇನ್ನು ನಾನೇ ನಿಮ್ಮ ಸೇನಾಪತಿಯು," ಎಂದು ನುಡಿದವನೇ ಟೊಂಕದೊಳಗಿನ ಖಡ್ಗವನ್ನು ಹಿರಿದು ಕೈಯಲ್ಲಿ ಹಿಡಿದು ಆ ಸೈನಿಕರನ್ನು ಹಿಂಬಾಲಿಸಿ ನಡೆದನು.

ಬಾದಶಹನ ಮೂರ್ಖತನದ ಬಗ್ಗೆ ಸಭಿಕರು ಎಷ್ಟು ದುರ್ಭಾವನೆಯುಳ್ಳವರಾಗಿದ್ದರೂ, ಆತನ ಈ ಕಡು ವಿಪನ್ನಾವಸ್ಥೆಯನ್ನೂ, ಅವನ ಸ್ವಂತದ ಶೌರ್ಯ ಸಾಹಸಗಳನ್ನೂ ಕಂಡು ಅವರೆಲ್ಲರೂ ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ—"ಸುಲ್ತಾನಕೀ ಜಯ! ಬಾದಶಹಕೀ ಜಯ!!" ಎಂದು ಉತ್ತೇಜಿತ ದನಿಯಿಂದ ಗರ್ಜಿಸುತ್ತ ಅವನನ್ನು ಹಿಂಬಾಲಿಸಿದರು. ಕೂಡಲೆ ಉಭಯ ಪಕ್ಷಗಳಲ್ಲಿ ಘನಘೋರವಾದ ಯುದ್ಧಕ್ಕೆ ಆರಂಭವಾಯಿತು. ಹೊತ್ತು ಮುಣುಗುವಷ್ಟರಲ್ಲಿ ಬಾದಶಹನ ಕಡೆಯವರು ಒಳ್ಳೇ ಆವೇಶದಿಂದ ಕಾದಿ, ಗಾಯಸುದ್ದೀನನನ್ನು ಬಹಳ ಮಟ್ಟಿಗೆ ಹಿಮ್ಮೆಟ್ಟಿಸಿದರು. ಮರುದಿನ ಬೆಳಿಗ್ಗೆ ಆ ಪಿತಾ-ಪುತ್ರರು ಎದುರಾ ಎದುರು ನಿಂತು ಕಾದಹತ್ತಿದರು. ಅವರ ಈ ಘೋರಯುದ್ಧಕ್ಕೆ ರೂಪವತಿಯಾದ ಒಬ್ಬ ಯುವತಿಯೇ-ಶಕ್ತಿಮಯಿಯೇ-ಕಾರಣಳಾಗಿದ್ದಳೆಂಬದು ನಮ್ಮ ವಾಚಕರಿಗರಿಯದ ಸಂಗತಿಯಲ್ಲ. ಹೊನ್ನು-ಹೆಣ್ಣು-ಮಣ್ಣು ಇವುಗಳ ಲೋಭದಿಂದ ಜಗತ್ತಿನಲ್ಲಿ ಎಂಥೆಂಥ ಅಘಟಿತ ಘಟನೆಗಳಾಗುತ್ತಿರುತ್ತವೆಂಬದಕ್ಕೆ ಪ್ರಸ್ತುತದ ನಮ್ಮ ಕಥಾನಕವೂ ಒಂದು ಉದಾಹರಣವಾಗಿರುತ್ತದೆ. ಇರಲಿ.

ಆ ತಂದೆ ಮಕ್ಕಳ ಯದ್ಧದ ಪರಿಣಾಮವೇನಾಯಿತೆಂಬದು ಇತಿಹಾಸಜ್ಞರಾದವರಿಗೆ ತಿಳಿದ ಸಂಗತಿಯಾಗಿರುತ್ತದೆ. ಹೀಗೆ ಅವರು ಮೂರು ದಿವಸಗಳ ವರೆಗೆ ಒಂದೇ ಸವನೆ ಕಾದುತ್ತಿರಲು, ಮೂರನೇ

ದಿನ ಬಾದಶಹನ ಮರ್ಮಕ್ಕೆ ಏಟು ತಾಕಿ, ಅವನು ನೆಲಕ್ಕೆಬಿದ್ದನು. ಅವನ ಮೃತ ದೇಹವು ಪೂರ್ವದಿಂದಲೇ ಸಿದ್ಧಪಡಿಸಿದ್ದ ಆದಿನಾ ಮಸೀದೆಯ ಏಕಾಂತಸ್ಥಳದಲ್ಲಿರಿಸಿ ಮೇಲೆ ಗೋರಿ ಕಟ್ಟಲ್ಪಟ್ಟಿತು. ಅವನ ತರುವಾಯ ಅವನ ಹಿರಿಯ ಮಗನಾದ ಗಾಯಸುದ್ದೀನನೇ ಅವನ ರಾಜ್ಯಾಧಿಕಾರಿಯಾದನು.

ಈ ಮೊದಲು ಪುಷ್ಕರಿಣೀ ದಂಡೆಯಲ್ಲಿ ಗಣೇಶದೇವನಿಂದ ಅಪಮಾನ ಹೊಂದಿ ಪುನಃ ಸೇಡುತೀರಿಸಿಕೊಳ್ಳುವ ಹವ್ಯಾಸವನ್ನು ತಾಳಿದ್ದ ಶಕ್ತಿಮಯಿಯು ಈಗ ಯುದ್ಧವು ಸಮಾಪ್ತವಾಗಲು ತನ್ನ ವಚನದಂತೆ ಗಾಯಸುದ್ದೀನನ ಮುಖ್ಯ ರಾಣಿಯಾದಳು; ಹಾಗು ಅಂದಿನಿಂದಲೇ ಅವಳು ಆತನ ಶಯ್ಯಾಭಾಗಿನಿಯಾದಳು.

ಹದಿಮೂರನೆಯ ಪ್ರಕರಣ:—ಪುನರ್ಯುದ್ಧ.

ದಿನಾಜಪುರವು ಈಗ ಕೇವಲ ಶಾಂತಿಯ ಸಾಮ್ರಾಜ್ಯವಾಗಿತ್ತು. ಸುಲ್ತಾನ ಸೆಕೆಂದರ ಶಹನ ಜೀವಿತದ ಸಂಗಡಲೇ ಗಣೇಶದೇವನ ವಿದ್ರೋಹಿತೆಯು ನಾಮಶೇಷವಾಗಿತ್ತು. ಬಂಗಾಲದ ನೂತನ ರಾಜನಾದ ಗಾಯಸುದ್ದೀನನ ಕೂಡ ಈಗ ಗಣೇಶದೇವನ ವೈರತ್ವವಿದ್ದಿಲ್ಲ. ಅವರಲ್ಲಿ ಪರಸ್ಪರ ಒಳ್ಳೇ ಮಿತ್ರಭಾವವಿತ್ತು. ಆದ್ದರಿಂದ ಗಣೇಶದೇವನು ನಿಶ್ಚಿಂತನಾಗಿ ತನ್ನ ರಾಜ್ಯದ ಉತ್ಕರ್ಷವನ್ನು ಮಾಡುವದರಲ್ಲಿ ನಿಮಗ್ನನಾಗಿದ್ದನು. ಯುದ್ಧಕಾಲದಲ್ಲಿ ಶತ್ರುಗಳಿಂದ ತನ್ನ ರಾಜ್ಯದಲ್ಲಿಯ ಯಾವ ಯಾವ ಊರು ಕೇರಿಗಳು, ಮನೆ-ಮಾರುಗಳು ಭಗ್ನಗಳಾಗಿದ್ದವೋ ಅವುಗಳನ್ನೆಲ್ಲ ಸರಿಪಡಿಸುತ್ತ, ಅಲ್ಲಲ್ಲಿ ವಿಶಾಲವಾದ ನೂತನ ಮಾರ್ಗಗಳನ್ನೂ, ಭವ್ಯವಾದ ಮಂದಿರಗಳನ್ನೂ ಹೊಸ ಹೊಸ ಉದ್ಯಾನಗಳನ್ನೂ ನಿರ್ಮಾಣ ಮಾಡಿಸುತ್ತ ನಡೆದಿ

ದ್ದನು. ಆಗ ಆ ರಾಜ್ಯದ ಪ್ರಜೆಗಳ ಸುಖ ಸಮೃದ್ಧಿಯು ಮಿತಿ ಮೀರಿತು. ಯುದ್ಧದಲ್ಲಿ ನಷ್ಟ ಹೊಂದಿದ ಪ್ರಜಾಗಣಗಳಿಗೆ ರಾಜನಿಂದ ಯಥಾಸಾಧ್ಯ ಪುರಸ್ಕಾರವು ಸಲ್ಲಿಸಲ್ಪಡುತ್ತಿತ್ತು. ಆದರೆ ಮರಣ ಹೊಂದಿದವರ ಪ್ರಾಣಗಳನ್ನು ಮಾತ್ರ ತಿರುಗಿ ತಂದು ಕೊಡುವದು ಅವನಿಂದ ಸಾಧ್ಯವಿದ್ದಿಲ್ಲ! ಈ ಪ್ರಕಾರದ ಸುಖ ಸಾಮ್ರಾಜ್ಯದಲ್ಲಿಯ ಪ್ರಜೆಗಳು ಒಂದೆರಡು ವರ್ಷಗಳಲ್ಲಿಯೇ ತಮ್ಮ ಹಿಂದಿನ ದುಃಖಗಳನ್ನು ಮರೆತು ಬಿಟ್ಟರು. ಅದು ಅವರಿಗೆ ಪೂರ್ವರಾತ್ರಿಯ ದುಃಸ್ವಪ್ನದಂತೆ ಯಾವಾಗಾದರೊಮ್ಮೆ ಭಾಸವಾಗುತ್ತಿತ್ತು. ಆ ಭಾಸಕ್ಕಾದರೂ ಯುದ್ಧದಿಂದ ಅವರಿಗಾದ ಅರ್ಥನಷ್ಟವು ಕಾರಣವಾಗಿದ್ದಿಲ್ಲ; ಕೇವಲ ಅವರ ಆಪ್ತಕೋಟಿಯೊಳಗಿನ ಪ್ರಾಣನಷ್ಟವೇ ಕಾರಣವಾಗಿತ್ತು.

ರಾಜವಾಡೆಯ ಬಳಿಯ ನದೀತೀರದಲ್ಲಿ ಹೊಸದೊಂದು ಮನೋಹರ ಉದ್ಯಾನವು ನಿರ್ಮಿಸಲ್ಪಟ್ಟಿತ್ತು. ಆ ಉದ್ಯಾನದ ಬಳಿಯಲ್ಲೇ ನದಿಗೆ ಒಂದು ವಿಸ್ತೀರ್ಣವಾದ ಘಾಟು ಕಟ್ಟಲ್ಪಟ್ಟಿತ್ತು. ಈಗೀಗ ಈ ನೂತನ ಘಾಟಿಗೇ ಆ ರಾಜಧಾನಿಯ ನರ-ನಾರಿಯರು ಸ್ನಾನಕ್ಕೆ ಬರಹತ್ತಿದ್ದರು. ಘಾಟಿನ ಮೇಲೆ ನಿಂತವರಿಗೆ ಪ್ರಾಸಾದದೊಳಗೆ ಆಗಾಗ್ಗೆ ಬಾರಿಸಲ್ಪಡುತ್ತಿದ್ದ ಭೈರವೀ-ರಾಗಿಣೀ ವಾದ್ಯಗಳ ಗತ್ತಿನ ಸಪ್ಪಳದೊಡನೆ ಆ ಉದ್ಯಾನದೊಳಗೆ ಕೆಲಸ ಮಾಡುತ್ತಿದ್ದ ತೋಟಿಗರೇ ಮೊದಲಾದವರು ಗುಣು-ಗುಣು ಎಂದು ಹಾಡುವದು ಕೇಳಬರುತ್ತಿತ್ತು. ಅದನ್ನು ಕೇಳಿ ಮಧುಮಾಸದೊಳಗಿನ ಭೃಂಗಗಳೇ ಈ ಉಪವನದಲ್ಲಿ ಗುಂಜಾರವವನ್ನು ಮಾಡುತ್ತಿರುವವೋ ಏನೋ ಎಂಬಂತೆ ಅವರಿಗೆ ಭಾಸವಾಗದೆ ಇರುತ್ತಿದ್ದಿಲ್ಲ.

ಒಂದು ದಿನ ಪ್ರಾತಃಕಾಲದ ಸುಶಾಂತ ಸಮಯದಲ್ಲಿ ಆ ಘಾಟಿನ ಪ್ರದೇಶವು ಮೇಲೆ ವರ್ಣಿಸಿದಂತೆ ನಿಸಾದಮಯವಾಗಿರಲು,

ಎತ್ತಣಿಂದಲೋ ರಕ್ತವಸ್ತ್ರಧಾರಿಯಾದ ತೀರ ಚಿಕ್ಕ ವಯಸ್ಸಿನ ಒಬ್ಬ ಫಕೀರನು ಅಲ್ಲಿಗೆ ಬಂದನು. ಅವನು ನೋಡುವವರಿಗೆ ಎಡ ಹುಡುಗನಂತೆ ತೋರುತ್ತಿದ್ದರೂ, ಅವನ ಮುಖಲಕ್ಷಣಗಳಿಂದ ಅವನು ಯಾವನೊಬ್ಬ ಮಹಾ ಯೋಗಿಯಾಗಲಿ, ರಾಜವಂಶಿಕನಾಗಲಿ ಇರಬಹುದೆಂಬದು ಥಟ್ಟನೆ ಒಡೆದು ಕಾಣದೆ ಇರುತ್ತಿರಲಿಲ್ಲ. ಅವನು ಧರಿಸಿದ್ದ ವೇಷ-ಭೂಷಣಗಳು ಅವನಿಗೆ ಚನ್ನಾಗಿ ಒಪ್ಪುತ್ತಿದ್ದರೂ ಅವುಗಳನ್ನು ಕೇವಲ ವಿಪತ್ಕಾಲ ನಿವಾರಣಾರ್ಥವಾಗಿ ಧರಿಸಿದಂತೆ ತೋರುತ್ತಿತ್ತು. ಅವನ ಮಂದಹಾಸ್ಯವು ಎಂಥ ಕಠಿಣ ಅಂತಃಕರಣಿಯ ಹೃದಯವನ್ನೂ ಕೂಡಲೆ ಕರಗಿಸಿ ಮೃದುವಾಗಿ ಮಾಡಿಬಿಡುತ್ತಿತ್ತು. ನದೀ ತೀರದಲ್ಲಿ ಸ್ನಾನ ಮಾಡುತ್ತಿದ್ದವರು ಈ ಅಪರಿಚಿತ ವ್ಯಕ್ತಿಯನ್ನು ಕಂಡು ವಿಸ್ಮಯಚಕಿತರಾದರು. ಅವರಿಗೆ ಇವನಾರಿರಬಹುದೆಂಬದರ ಅನುಮಾನವೇ ಆಗಲೊಲ್ಲದು. ಆಗ ಅವರಲ್ಲಿ ಆ ನೂತನ ವ್ಯಕ್ತಿಯ ಬಗ್ಗೆ ಹಲವು ಮಾತು-ಕಥೆಗಳು ನಡೆದವು. ಆದರೆ ಆ ಗೊಡ್ಡ ಹರಟೆಗಳಿಂದ ಅವರಿಗೆ ಅವನ ನಿಜವಾದ ಸಂಗತಿಯು ತಿಳಿಯಲಿಲ್ಲ. ಕಟ್ಟಕಡೆಗೆ ಅರಮನೆಯೊಳಗಿನ ಒಬ್ಬ ಅಧಿಕಾರಿಯು ಆ ಘಾಟಿಗೆ ಸ್ನಾನಕ್ಕೆ ಬರಲು, ಈ ಮೊದಲು ಅಲ್ಲಿ ಸ್ನಾನ ಮಾಡುತ್ತಿದ್ದ ಎಲ್ಲ ನಗರ ವಾಸಿಗಳೂ ಆ ಅಧಿಕಾರಿಯ ಬಳಿಗೆ ಬಂದು ಅವನಿಗೆ ಆ ಬಾಲ ಫಕೀರನ ವಿಷಯವನ್ನು ಕೇಳಹತ್ತಿದರು. ಆಗ ಆ ರಾಜಾಧಿಕಾರಿಯು—ಬಂಧುಗಳೇ, ಈ ಚಿಕ್ಕ ವಯಸ್ಸಿನ ಫಕೀರವೇಷಧಾರಿಯಾದ ಹುಡುಗನು ಬೇರೆ ಯಾರೂ ಆಗಿರದೆ, ಬಂಗಾಲದ ಗತ ಸುಲ್ತಾನ ಸೆಕೆಂದರಶಹನ ಮೊಮ್ಮಗನೂ, ಪ್ರಸ್ತುತ ಸುಲ್ತಾನ ಗಾಯಸುದ್ದೀನನ ತಮ್ಮನ ಮಗನೂ, ನಮ್ಮೆಲ್ಲರ ಪೂರ್ವ ಪರಿಚಿತನೂ ಆದ ಸಾಹೇಬುದ್ದೀನನು; 'ಸೆಕೆಂದರ ಶಹನ ಮರಣಾದನಂತರ ಗಾಯಸುದ್ದೀನನು ಪಟ್ಟವೇರಲು, ಆತನು ತನ್ನ ರಾಣಿಯ ಸನ್ಮಾ

ನಕ್ಕಾಗಿಯೂ ತನ್ನ ತರುವಾಯದಲ್ಲಿ ಆ ನೂತನ ರಾಣಿಯ ಹೊಟ್ಟೆಯೊಳಗೆ ಹುಟ್ಟಿದವನ ಹೊರತು ಬೇರೆ ತನ್ನ ಯಾವ ಅಣ್ಣತಮ್ಮಂದರಿಗೆ ತನ್ನ ರಾಜ್ಯವು ದೊರೆಯಬಾರದೆಂದೂ ಅವನು ತನ್ನ ಎಲ್ಲ ಅಣ್ಣತಮ್ಮಂದಿರನ್ನೂ, ಅವರ ಮಕ್ಕಳು ಮರಿಗಳನ್ನೂ ಕೊಲ್ಲಿಸಿ ಬಿಟ್ಟಿರುವನು. ಈಗ ಈ ಸಾಹೇಬುದ್ದೀನನೊಬ್ಬನೇ ಅವನ ಈ ಯಜ್ಞದ ಕೊನೆಯ ಭಾಗವಾಗಿರುವನು. ಇಷ್ಟು ದಿವಸಗಳ ವರೆಗೆ ಸಾಹೇಬುದ್ದೀನನು ಜೀವಂತನಿದ್ದಾನೆಂಬ ಸುದ್ದಿಯೇ ಅವನಿಗಿದ್ದಿಲ್ಲ. ಯಾಕೆಂದರೆ, ಯುದ್ಧಕಾಲದಲ್ಲಿ ನಮ್ಮಲ್ಲಿ ಅಡುವಿಗಾಗಿರಿಸಿದ್ದ ಈ ಯವನ ಬಾಲಕನು ಯುದ್ಧಸಮಾಪ್ತಿಯಾದರೂ ಇಲ್ಲಿಯೇ ಇರುತ್ತಿರುವನು. ನಮ್ಮ ಗಣೇಶದೇವರಾಜರು ಇವನನ್ನು ಹೆಚ್ಚಾಗಿ ಪ್ರೀತಿಸುತ್ತಿರುವರು. ಸಿಕಂದರಶಹನ ಮರಣದ ತರುವಾಯ ಸಾಹೇಬುದ್ದೀನನನ್ನು ಅವನ ದೊಡ್ಡಪ್ಪನ ಬಳಿಗೆ ಕಳಿಸಿಬಹುದಾಗಿತ್ತು. ಆದರೆ ಯುದ್ಧದಲ್ಲಿ ಆ ಬಾಲಕನ ತಂದೆ-ತಾಯಿಗಳು ಗತಿಸಿಹೋದ್ದರಿಂದ ಅವನಲ್ಲಿಯ ಕಡು ಪ್ರೇಮದಿಂದಲೇ ನಮ್ಮ ರಾಜರು ಅವನನ್ನು ಇಲ್ಲಿಯೇ ಇರಿಸಿಕೊಂಡು ಬಿಟ್ಟರು. ಮೊನ್ನೆ ಮೊನ್ನೆ ಆ ಕುತುಬನ ಮುಖಾಂತರ ಗಾಯಸುದ್ದೀನನಿಗೆ ಸಾಹೇಬುದ್ದೀನನು ಇಲ್ಲಿ ಇರುವನೆಂಬದು ತಿಳಿದು ಬರಲು, ಅವನು ಈ ಬಾಲಕನನ್ನು ಮೋಸದಿಂದ ಹಿಡಿದೊಯ್ದು ವಧಸ್ಥಾನಕ್ಕೆ ಕಳಿಸಬೇಕೆಂದು ಹವಣಿಸಿರುತ್ತಾನೆ. ಆದರೆ ಸಾಹೇಬುದ್ದೀನನನ್ನು ಹೀಗೆ ಮೋಷಪಾತ್ರವಾಗ ಮಾಡಲಿಕ್ಕೆ ನಮ್ಮ ರಾಜರು ಸರ್ವಥಾ ಒಪ್ಪುವದಿಲ್ಲ. ಆದ್ದರಿಂದಲೇ ಅವರು ಈ ಸಾಹೇಬುದ್ದೀನನಿಗೆ ಈ ಪ್ರಕಾರ ನೂತನ ಫಕೀರವೇಷವನ್ನು ತೊಡಿಸಿ, ಶತ್ರುಗಳಿಗೆ ಒಮ್ಮೆಲೆ ಆತನ ಗುರ್ತು ಹತ್ತಬಾರದ ಹಾಗೆ ಯುಕ್ತಿಯನ್ನು ಮಾಡಿದ್ದಾರೆ. ಈ ಬಾಲಕನ ಜೀವ ರಕ್ಷಣದ ಸಲುವಾಗಿ ನಮ್ಮ ರಾಜರು ಆ ನೂತನ ಸುಲ್ತಾನ

ನೊಡನೆ ಪುನಃ ಯುದ್ಧವನ್ನಾದರೂ ಮಾಡಿಯಾರು; ಆದರೆ ಈತ ನನ್ನು ಅವನಿಗೆ ಒಪ್ಪಿಸಲಿಕ್ಕಿಲ್ಲೆಂಬಂತೆ ತೋರುತ್ತದೆ, ಎಂದು ಆ ಫಕೀರನ ವಿಷಯದ ಸಾಗ್ರಸಂಗತಿಯನ್ನು ತಿಳಿಸಲು, ಆ ನೆರೆದ ಜನರು ಅಭಿಮಾನ ಪುರಸ್ಸರವಾಗಿ—"ನಮ್ಮ ಧನಿಯು ಶರಣಾಗತ ರಕ್ಷಕನು. ಮತ್ತೆ ಯುದ್ಧವಾದರೂ ಚಿಂತೆಯಿಲ್ಲ; ಆದರೆ ಪಾಪ! ಈ ಅನಾಥನನ್ನು ರಕ್ಷಿಸಿ, ಸುಖ್ಯಾತಿಯನ್ನುಹೊಂದಲಿ!" ಎಂದು ತಮ್ಮ ತಮ್ಮೊಳಗೆ ಮಾತಾಡಹತ್ತಿದರು.

ಪ್ರಜೆಗಳು ಅನುಮಾನಿಸಿದಂತೆಯೇ ಪುನಃ ಪ್ರಸಂಗವೊದಗಿತು. ಗಾಯಸುದ್ದೀನನಿಂದ ಸಾಹೇಬುದ್ದೀನನನ್ನು ಗೌಪ್ಯವಾಗಿ ಹಿಡಿತರಿಸು ವದಾಗಲಿಲ್ಲ. ಆಗ ಅವನು ಸಾಹೇಬುದ್ದೀನನನ್ನು ತಮಗೊಪ್ಪಿಸಬೇಕೆಂ ದು ಕುತುಬನ ಸಂಗಡ ಗಣೇಶದೇವನಿಗೆ ಹೇಳಿಕಳಿಸಿದನು. ಗಣೇಶದೇವ ನಿಗೆ ಇದರಿಂದ ಮಹಾಸಂಕಟವು ಪ್ರಾಪ್ತವಾಯಿತು. ಸಾಹೇಬುದ್ದೀ ನನು ಶರಣಾಗತನಾದ್ದರಿಂದ ಅವನನ್ನು ವಧಸ್ಥಾನಕ್ಕೆ ಕಳಿಸಲು ಆ ಪುರಾಣ ಪ್ರಿಯ ಹಿಂದು ರಾಜನಿಗೆ ಸಮ್ಮತವಾಗಲಿಲ್ಲ. ಇನ್ನು ಅವ ನನ್ನು ಗಾಯಸುದ್ದೀನನಿಗೆ ಒಪ್ಪಿಸದಿದ್ದರೆ ಪುನಃ ವಂಗೇಶ್ವರನ ಕೂಡ ಯುದ್ಧಪ್ರಸಂಗ. ಆದರೆ ಯುದ್ಧಕ್ಕೆ ಅವನು ಅಂಜುತ್ತಿದ್ದನೆಂತಲ್ಲ. ಕೇವಲ ಧರ್ಮರಾಜನಾದ ಅವನು ಪ್ರಜೆಗಳನ್ನು ಹೊಟ್ಟೆಲಿ ಹುಟ್ಟಿದ ಮಕ್ಕಳನ್ನು ಸಂರಕ್ಷಿಸುವಂತೆ ಸಂರಕ್ಷಿಸುತ್ತಿದ್ದದರಿಂದ ಅವರನ್ನು ಪುನಃ ಯುದ್ಧಕ್ಕೆ ಅಣಿಮಾಡುವದೆಂದರೆ, ಅವನಿಗೆ ಬಹಳ ಕೆಡಕೆನಿಸಿತು. ಒಬ್ಬ ಸನ್ಯಾಸಿನಿಯ ಬಂಧವಿಮೋಚನದ ಸಲುವಾಗಿ ಈ ಮೊದಲೊಮ್ಮೆ ಯುದ್ಧವಾಗಿ ಸಾವಿರಾರು ಪ್ರಜೆಗಳ ಪ್ರಾಣಗ ಳೂ, ಅದರಂತೆ ಅರ್ಥವೂ ನಷ್ಟವಾಗಿತ್ತು. ಆಶ್ರಿತ ರಕ್ಷಣ, ದುಷ್ಟ ದಮನ ಇವು ರಾಜಧರ್ಮವಾಗಿರುವದರಿಂದ, ಈ ಧರ್ಮವನ್ನು ಕಾಯುವದಕ್ಕಾಗಿ ತನ್ನ ಸರ್ವಸ್ವವು ನಾಶವಾದರೂ ಚಿಂತೆಯಿಲ್ಲೆಂ

ದು ಗಣೇಶದೇವನು ಮನಸ್ಸಿನಲ್ಲಿ ಭಾವಿಸಿದನು.

ಆದರೆ ಗಣೇಶದೇವನ ತಾಯಿಯ ಮತವು ಇದಕ್ಕೆ ವಿರುದ್ಧ ವಾಗಿತ್ತು. ಸಾಹೇಬುದ್ದೀನನಿಗೆ ಆಶ್ರಯ ಕೊಡುವದು ನಮ್ಮ ಕರ್ತವ್ಯವಲ್ಲ. ಅವನಿಗೆ ಆಶ್ರಯ ಕೊಟ್ಟರೆ ನಾವು ಧರ್ಮಭ್ರಷ್ಟರಾಗುವೆವು. ಒಬ್ಬನನ್ನು ಬದುಕಿಸ ಹೋಗಿ ಸಾವಿರಾರು ಜನರ ಪ್ರಾಣಗಳನ್ನು ಕಳೆಯುವದು ಎಲ್ಲಿಯ ನ್ಯಾಯವು? ಹ್ಯಾಗೂ ನಾವು ಕಳೆದ ಯುದ್ಧ ಸಮಾಪ್ತಿಯ ದಿವಸವೇ ಆತನನ್ನು ಆತನ ದೊಡ್ಡಪ್ಪನಿಗೆ-ಗಾಯಸುದ್ದೀನನಿಗೆ-ಒಪ್ಪಿಸಿ ಬಿಡಬೇಕಾಗಿತ್ತು. ಆಗ ಯಾಕೋ ಒಪ್ಪಿಸಲಿಲ್ಲ! ಈಗ ಒಪ್ಪಿಸಿದರಾಯಿತು. ಹೀಗೆ ಮಾಡುವದರಿಂದ ನಮ್ಮ ಕರ್ತವ್ಯಪಾಲನ ಮಾಡಿದ ಹಾಗಾಗುವದಲ್ಲದೆ, ನಿರರ್ಥಕವಾಗಿ ನಮ್ಮ ಪ್ರಜೆಗಳಿಗಾಗಬಹುದಾದ ಅರ್ಥಹಾನಿ, ಪ್ರಾಣಹಾನಿಗಳನ್ನೂ ತಪ್ಪಿಸಿದ ಹಾಗಾಗುತ್ತದೆ, ಎಂದು ಆಕೆಯ ಅಭಿಪ್ರಾಯವಿತ್ತು.

ಆದರೆ ಈ ಕಾರಣವು ಗಣೇಶದೇವನಿಗೆ ಸಮಂಜಸವಾಗಿ ತೋರಲಿಲ್ಲ. ಮುಂದೆ ಹೀಗೆಯೇ ಆದೀತೆಂಬ ಕಲ್ಪನೆಯನ್ನು ಮಾಡುತ್ತ ಪ್ರಸ್ತುತದ ಆವಶ್ಯ ಕರ್ತವ್ಯವನ್ನು ಬಿಟ್ಟು ಬಿಡುವದು ಸರಿಯಲ್ಲ. ಹೀಗೆ ಕಲ್ಪನಾ ಸಾಮ್ರಾಜ್ಯದಲ್ಲಿ ಮಗ್ನರಾಗಿ ನಾವು ನ್ಯಾಯ, ಮಹತ್ವ, ಧರ್ಮ ಇವುಗಳ ಅಭಾಧಿತ ಸಿದ್ಧಾಂತಗಳ ಕಡೆಗೆ ಲಕ್ಷ್ಯಗೊಡದಿದ್ದರೆ ಜಗತ್ತಿನಲ್ಲಿ ಧರ್ಮವುಳಿಯುವ ಸಂಭವವಾದರೂ ಉಂಟೇ? ಹತ್ತು ಜನ ಮೂರ್ಖರು ಕೂಡಿ ಯಾವನೊಬ್ಬ ನಿರಪರಾಧಿ ವ್ಯಕ್ತಿಯನ್ನು ಹಿಂಸಿಸುತ್ತಿರುವದನ್ನು ನಾಲ್ಕೈದು ಜನ ಸಮಂಜಸರು ಸುಮ್ಮನೆ ನಿಂತು ಕಣ್ಣಿಲೆ ನೋಡಬಹುದೇ? ಆ ನಾಲ್ಕೈದು ಜನರ ಶಕ್ತಿಯು ಪ್ರಾಯಶಃ ಆ ಮೂರ್ಖರಾದ ಹತ್ತು ಜನರ ಸಾಮರ್ಥ್ಯಕ್ಕಿಂತ ಕಡಿಮೆಯೆಂಬದು ನಿಶ್ಚಿತವಿದ್ದರೂ, ಆ ನಿರಪರಾಧ ಮನುಷ್ಯನ ಸಹಾಯಕ್ಕಾಗಿ ಅವರು ಹೋಗಲೇ ಬೇಕಾಗುತ್ತದೆ.

ಬರೇ ತಮ್ಮ ಸಾಮರ್ಥ್ಯದ ಕಡೆಗೆ ಲಕ್ಷ್ಯಗೊಟ್ಟು ಅವರು ಸುಮ್ಮನೆ ಕುಳಿತರೆ ಆ ನಿರಪರಾಧ ವ್ಯಕ್ತಿಯ ಹಿಂಸೆಯನ್ನು ನೋಡಿದ ಪಾತಕವು ಅವರಿಗೆ ತಪ್ಪದಲ್ಲದೆ, ಅವರ ಮನುಷ್ಯತ್ವಕ್ಕೂ ಬಾಧೆಬರುತ್ತದೆ. ಮನುಷ್ಯನ ಅಂತವು ಒಂದಿಲ್ಲೊಂದು ದಿವಸ ಆಗೇ ಆಗುವದು; ಅಂದಮೇಲೆ ಪರೋಪಕಾರಾದಿ ಸತ್ಕರ್ಮಗಳ ಸಲುವಾಗಿ ಈ ನಶ್ವರ ದೇಹವು ಬಿದ್ದು ಹೋದರೆ ತಪ್ಪೇನು? ಇನ್ನು ಅಪರಾಧಿಯಾದ ಒಬ್ಬ ಸಾಮರ್ಥ್ಯವಾನ್ ವ್ಯಕ್ತಿಯನ್ನು ದಂಡಿಸ ಹೋದರೆ, ಎಷ್ಟೋಜನ ನಿರಪರಾಧಿ ಪ್ರಾಣಿಗಳು ದಂಡಣೆಗೆ ಗುರಿಯಾಗುತ್ತಾರೆ. ಆದರೆ ಅವರ ಕಡೆಗೆ ನೋಡಿ ಆ ನೀಚನನ್ನು ದಂಡಿಸವೆ ಇರುವದೂ ಧರ್ಮವಲ್ಲ. ಮಾನವನು ಸರ್ವಜ್ಞನಲ್ಲ. ವಿಚಾರಪೂರ್ವಕವಾಗಿ ಅವನು ಹಿತದ ಕೆಲಸಗಳಿಗೇ ತೊಡಗುತ್ತಾನೆ. ಆದರೆ ಭವಿಷ್ಯತ್ಕಾಲದಲ್ಲಿ ಅದರಿಂದ ನಿಜವಾಗಿ ಹಿತವೇ ಆದೀತೆಂಬದನ್ನು ಯಾರು ಹೇಳಬೇಕು? ಬರೇ ಜಿಜ್ಞಾಸೆ ಮಾಡುತ್ತ ಅವನು ಕರ್ತವ್ಯವನ್ನು ಮರೆಯಬಹುದೆ? ವಿಚಾರಪೂರ್ವಕ ಕೆಲಸವನ್ನು ಕೈಕೊಳ್ಳುವದು ವಿಹಿತವಾಗವು. ಆದರೆ ಎಷ್ಟೋ ಪ್ರಸಂಗಗಳಲ್ಲಿ ಪುನಃ ಪುನಃ ವಿಚಾರಮಾಡುತ್ತ ಕೂಡ್ರುವದರಿಂದ ಕಾರ್ಯಕ್ಕೆ ಹಾನಿಯುಂಟಾಗುತ್ತದೆ. ಬಹುವಿಚಾರಪೂರ್ವಕ ಶುಭ ಕಾರ್ಯವನ್ನು ಮಾಡಹೋದರೂ ಪರಿಣಾಮದಲ್ಲಿ ಅದು ಅಶುಭದಾಯಕವೇ ಆಗುವದು. ಆದ್ದರಿಂದ ಸಮಯಾಸಮಯಗಳನ್ನೂ ಪಾತ್ರಾಪಾತ್ರತೆಗಳನ್ನೂ ತಿಳಿದು ವಿಹಿತ ಕರ್ಮವೆಸಗುವದು ಮನುಷ್ಯನ ಇತಿ ಕರ್ತವ್ಯವಾಗಿರುತ್ತದೆ. ಮನುಷ್ಯತ್ವದ ರಕ್ಷಣೆಗಾಗಿಯೇ ಮಾನವನ ಜನ್ಮವು. ಮನುಷ್ಯತ್ವವನ್ನೇ ಬಿಟ್ಟುನಡೆಯಹತ್ತಿದ ಬಳಿಕ ಪಶ್ವಾದಿಗಳಿಗಿಂತ ಅವನಲ್ಲಿ ಯಾವ ಶ್ರೇಷ್ಠ ಗುಣವಿದ್ದಂತಾಯಿತು? ಒಂದುಕ್ಷುದ್ರ ಮುಳ್ಳನ್ನು ತೆಗೆದು ಹಾಕುವದಕ್ಕಾಗಿ ಹುಡ್ಡಿನಗಲ ಅಂಗಾಲನ್ನು ಶೋಧಬೇಕಾಗುತ್ತದೆ; ಒಂದು ಹಣ್ಣು ಆ

ಗಬೇಕಾದರೆ ನೂರಾರು ಎಲೆ-ಚಿಗರು-ಹೂಗಳು ನಾಮಶೇಷವಾಗ ಬೇಕಾಗುತ್ತವೆ. ಹೀಗೆ ಲೋಕದ ನ್ಯಾಯವಾಗಿರಲು, ಶರಣಾಗತ ರಕ್ಷಣಕ್ಕಾಗಿ ತೊಡಗಿದ ನಮಗೆ ಕೆಲವು ಕ್ಷತಿಯಾದರೆ ತಪ್ಪೇನು? ಆದ್ದರಿಂದ ಪ್ರಯತ್ನಪೂರ್ವಕವಾಗಿ ಸಾಹೇಬುದ್ದೀನನನ್ನು ಸಂರಕ್ಷಿಸಿಯೇ ತೀರಬೇಕೆಂದು ಗಣೇಶದೇವನು ಮನಸ್ಸಿನಲ್ಲಿ ಸಂಕಲ್ಪಿಸಿದನು.

ಗಣೇಶದೇವರಾಜನು ಒಂದು ದಿನ ಸಭೆಯಲ್ಲಿ ಕೂತಿದ್ದನು. ಸರದಾರ-ಸುಭೇದಾರರೂ, ಮಾನಕರಿ-ಮನಸಬದಾರರೂ ತಮ್ಮ ತಮ್ಮ ಸ್ಥಾನಗಳನ್ನಲಂಕರಿಸಿದ್ದರು. ಸಾಹೇಬುದ್ದೀನನ ರಕ್ಷಣದ ವಿಷಯವಾಗಿ ತನ್ನ ಪ್ರಜೆಗಳ ಅಭಿಪ್ರಾಯವನ್ನು ತಿಳಕೊಳ್ಳುವದಕ್ಕಾಗಿಯೇ ಗಣೇಶದೇವನು ಈ ಸಭೆಯನ್ನು ಕೂಡಿಸಿದ್ದನು. ಬರತಕ್ಕ ಜನರೆಲ್ಲ ಬಂದು ಸೇರಿ, ಶಿಷ್ಟಾಚಾರದಂತೆ ರಾಜನಿಗೆ ಮುಜುರೆ ಮಾಡಿದ ಬಳಿಕ ರಾಜನು ಅವರನ್ನುದ್ದೇಶಿಸಿ—"ಪ್ರಜೆಗಳೇ, ವತ್ಸಗಣಗಳಿರಾ, ಒಂದು ವಿಶೇಷಕಾರಣದ ಸಲುವಾಗಿ ನಾವು ಪುನಃ ವಿಪತ್ತಿಗೆ ಗುರಿಯಾಗಬೇಕಾಗಿರುತ್ತದೆ. ನೂತನ ವಂಗೇಶ್ವರನಾದ ನಬಾಬ ಗಾಯಸುದ್ದೀನನು ತನ್ನ ಶಕ್ತಿಮೂಲ ರಾಣಿಯ ಪ್ರೀತ್ಯರ್ಥವಾಗಿ ತನ್ನ ಬೆನ್ನಿಲೆ ಬಿದ್ದ ಏಳು ಜನ ತಮ್ಮಂದಿರನ್ನು ಕ್ರೂರತನದಿಂದ ಈಗಾಗಲೆ ಸಂಹರಿಸಿರುವನು; ಆದರೂ ಅವನ ಇಷ್ಟಾರ್ಥವು ಸಾಧಿಸಿದಂತೆ ಕಾಣಲಿಲ್ಲ. ಯಾಕಂದರೆ, ಆ ನೀಚನು ನಮ್ಮಾಶ್ರಯದಲ್ಲಿರುವ ಅವನ ತಮ್ಮನ ಮಗನಾದ ಸಾಹೇಬುದ್ದೀನನೆಂಬ ಯುವಕನನ್ನು ಕೂಡ ಕೊಲ್ಲಿಸುವ ಸಂಕಲ್ಪ ಮಾಡಿದ್ದಾನಂತೆ! ನಮಗೆ ಬರಬಹುದಾದ ಸಂಕಟವನ್ನು ನೀಗುವದಕ್ಕಾಗಿ ನಾವು ಈ ಶರಣಾಗತ ಸಾಹೇಬುದ್ದೀನನನ್ನು ಅವನಿಗೊಪ್ಪಿಸಿದರೆ, ನಮ್ಮ ಆತಿಥ್ಯ ಧರ್ಮ, ಬಂಧುತ್ವಧರ್ಮ ಇವುಗಳನ್ನು ನಾವುಕಳಕೊಳ್ಳಬೇಕಾಗುತ್ತದೆ; ಇಲ್ಲವೆ ನಮ್ಮೀ ಪೂಜ್ಯ ಧರ್ಮಗಳನ್ನು ಕಾಪಾಡುವದಕ್ಕಾಗಿ ನಾವು ಸಾಹೇ

ಬುದ್ಧೀನನಿಗೆ ಆಶ್ರಯಕೊಟ್ಟರೆ, ಕೂವತಿ ಗಾಯಸುದ್ದೀನನೊಡನೆ ಕಾದಲಿಕ್ಕೆ ನಾವು ಸಿದ್ಧರಾಗಬೇಕಾಗುತ್ತದೆ. ಈ ಪ್ರಕಾರದ ಇಕ್ಕಟ್ಟಿನ ಸಂಕಟದಲ್ಲಿ ನಾವು ಯಾವ ಮಾರ್ಗದಿಂದ ನಡೆಯಬೇಕು? ಈ ಬಗ್ಗೆ ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕು;'' ಎಂದು ಕೇಳಿದನು.

"ಮಹಾರಾಜರು ಅಪ್ಪಣೆಕೊಡಿಸಿದಂತೆ ನಡೆಯಲಿಕ್ಕೆ ನಾವು ಬದ್ಧಕಂಕಣರಾಗಿ ನಿಂತಿದ್ದೇವೆ. ಮಹಾರಾಜರೇ ನಮ್ಮ ತಂದೆ-ತಾಯಿಗಳು; ನಾವು ತಮ್ಮ ಮಕ್ಕಳೂ ದಾಸರೂ ಆಗಿರುತ್ತೇವೆ. ಅಂದಮೇಲೆ ತಾವು ಅಪ್ಪಣೆ ಕೊಟ್ಟ ಹಾಗೆ ನಡೆಯುವದು ಮಾತ್ರ ನಮ್ಮ ಕರ್ತವ್ಯವು'' ಎಂದು ಸಭಿಕರೆಲ್ಲರೂ ಒಕ್ಕಟ್ಟಿನಿಂದ ಗಣೇಶದೇವರಾಜನಿಗೆ ತಿಳಿಸಿದರು.

ಸಭಿಕರಲ್ಲಿಯ ಬಹು ಜನರು ಈ ಪ್ರಕಾರ ಸುಸ್ಪಷ್ಟವಾಗಿ ತಿಳಿಸಿದ ಬಳಿಕ ಕಡೆಗೆ ಒಬ್ಬ ಧೀರನು ಗಣೇಶದೇವನನ್ನು ಕುರಿತು— "ಮಹಾರಾಜ, ತಾವು ಅಭಯವನ್ನು ಕೊಟ್ಟದ್ದರಿಂದ ನಾನು ಈ ಸಂಬಂಧದಲ್ಲಿ ನನಗೆ ತೋರಿ ಬರುವ ವಿಚಾರಗಳನ್ನು ತಮ್ಮೆದುರಿಗೆ ಇಡುತ್ತೇನೆ. ಸಾಹೇಬುದ್ದೀನನು ವಿಪನ್ನಗ್ರಸ್ತನೂ, ಅಸಹಾಯನೂ ಆಗಿರುವದರಿಂದ ಅವನನ್ನು ರಕ್ಷಿಸುವದು ತಮ್ಮ ಕರ್ತವ್ಯವೇ ಸರಿ; ಆದರೆ ತಮ್ಮ ಪ್ರಜಾಗಣಗಳ-ಮಕ್ಕಳ ಕಲ್ಯಾಣದ ಕಡೆಗೆ ಲಕ್ಷ್ಯಗೊಡುವದು ಅದಕ್ಕಿಂತಲೂ ಹೆಚ್ಚು ಮಹತ್ವದ ಕರ್ತವ್ಯವು ತಮ್ಮ ಪಾಲಿಗಿರುವದೆಂಬದನ್ನು ತಾವು ಮರೆಯಲಾಗದು. ಈ ಪ್ರಸಂಗದಲ್ಲಿ ತಾವು ಆತನನ್ನು ಸಂರಕ್ಷಿಸಬೇಕಾದರೆ, ತಮ್ಮ ಪ್ರಜೆಗಳನ್ನು ಕೊಲ್ಲಿಸಬೇಕಾಗುತ್ತದೆ. ಕೆಲವು ದಿವಸಗಳ ಮುಂಚೆ ಆದ ಯುದ್ಧದ ಹಾನಿಯೇ ಇನ್ನೂ ನಮ್ಮ ರಾಷ್ಟ್ರದಲ್ಲಿ ತುಂಬಿಬಂದಿರುವದಿಲ್ಲ. ಅದ್ದರಿಂದ ಇಂಥ ಈ ಕಾಲದಲ್ಲಿ ಪುನಃ ಯುದ್ಧಕ್ಕೆ ಅಣಿಯಾಗುವದೆಂದರೆ

ಇಡಿ ದೇಶವನ್ನೇ ಸುಟ್ಟು ಸೂರೆ ಮಾಡಿದ ಹಾಗಾಗಬಹುದು. ಒಬ್ಬಾನೊಬ್ಬ ಮನುಷ್ಯನ ಸಲುವಾಗಿ ಸಾವಿರಾರು ಜನ ನಿರಪರಾಧಿಪ್ರಜೆಗಳನ್ನು ಮರಣಕ್ಕೆ ಗುರಿಮಾಡುವ ತಮ್ಮ ಯುಕ್ತಿಯು ಯಾವ ಬಗೆಯ ನ್ಯಾಯ ಮಾರ್ಗ ಸಮ್ಮತವಾಗಿದ್ದೀತು?'' ಎಂದು ನುಡಿದನು.

ದೇಶ ಕಲ್ಯಾಣಕ್ಕಾಗಿ ರಾಜನ ಅಲ್ಲದ ವಿಚಾರಗಳನ್ನು ಹೀಗೆ ನಿರ್ಭೀಡೆಯಿಂದ ತಿರಸ್ಕರಿಸಿದ ಆ ಮುಂದಾಳುವಿನ ಮಾತುಕೇಳಿ ಸಭಿಕರ ಮನಸ್ಸಿನಲ್ಲಿಯೂ ಅದೇ ಪ್ರಕಾರದ ಸ್ಫೂರ್ತಿಯಾಗಲು ಅವರು— ''ಸತ್ಯವು! ಸತ್ಯವು!! ಮಹಾರಾಜ, ತಮ್ಮ ಸಲುವಾಗಿ ನಾವು ಸಾವಿರಾರು ಜನರು ಸಾಯಲಿಕ್ಕೆ ಸಿದ್ಧರಿರುತ್ತೇವೆ; ಆದರೆ ಒಬ್ಬ ಯವನನ ದೆಸೆಯಿಂದೇಕೆ ತಾವು ನಮ್ಮೆಲ್ಲರ ಪ್ರಾಣಗಳನ್ನು ಹೀರುವದು?'' ಎಂದು ರಾಜನಿಗೆ ಕೇಳಹತ್ತಿದರು.

ನಂತರ ಗಣೇಶದೇವರಾಜನು ಸಮಾಧಾನದಿಂದ ಹೀಗೆ ನುಡಿದನು:—

''ಪ್ರಜೆಗಳೇ ಕೇಳಿಕೊಳ್ಳಿರಿ, ನಾನಾಡುವ ಮಾತನ್ನು ಸಾವಧಾನದಿಂದ ಆಲಿಸಿರಿ. ಮಕ್ಕಳ ಕಲ್ಯಾಣ ಬಯಸುವದು ತಂದೆಯ ಮಹತ್ತರ ಕರ್ತವ್ಯವೆಂಬದು ಸತ್ಯವೇ. ಆದರೆ ಮಕ್ಕಳ ಶರೀರಗಳನ್ನಷ್ಟು ಯಾವ ಕೇಡಿಗೂ ಗುರಿಯಾಗದಂತೆ ಕಾಪಾಡಿಕೊಂಡರೆ, ತಂದೆಯ ಕರ್ತವ್ಯವು ತೀರಲಿಲ್ಲ. ಸಂತಾನಗಳಿಗೆ ಧರ್ಮ ಮಾರ್ಗ ತೋರಿಸುವದೂ ಮಾತಾ-ಪಿತೃಗಳ ಒಂದು ಶ್ರೇಷ್ಠ ಕರ್ತವ್ಯವು. ಧರ್ಮದಿಂದ ನಡೆದರೆ ಮನುಷ್ಯನಿಗೆ ನಿಜವಾದ ಮಂಗಲವುಂಟಾಗುವದು. ವಿಪತ್ತಿಗಂಜಿ ನಾನು ಶರಣಾಗತನನ್ನು ಪರಿತ್ಯಜಿಸಿದರೆ, ಅದರಿಂದ ನಾನೂ-ನೀವೂ ಕೂಡಿಯೇ ಧರ್ಮಭ್ರಷ್ಟರಾಗುವೆವು. ಇದರಿಂದ ಕೇವಲ ಆತಿಥ್ಯ ಧರ್ಮವು ಭ್ರಷ್ಟವಾಗುವದೆಂತಲ್ಲ; ಈ ಪೂರ್ವವಲ್ಲಿ ನಮ್ಮ

ಪೂರ್ವಜರೂ, ನಾವೂ ಅನೇಕ ಸಂಕಟಗಳಿಗೀಡಾಗಿ ಸಂಪಾದಿಸಿದ ಅಖಂಡ ಕೀರ್ತಿಗೂ ನಿಮ್ಮ ಹೇಡಿ-ಧರ್ಮಭ್ರಷ್ಟ-ಕೃತಿಯಿಂದ ಕಲಂಕವುಂಟಾಗಿದಿರಲಿಕ್ಕಿಲ್ಲ. ನಾವು ಪ್ರಸ್ತುತ ಯಾವ ಮಹಾತ್ಮನಾದ ಸಾಹೇಬುದ್ದೀನನನ್ನು ರಕ್ಷಿಸಬೇಕಾಗಿದೆಯೋ, ಅವನಾದರೂ ಒಂದಾನೊಂದು ದಿವಸ ನಿಮ್ಮ ರಾಜ ಗಣೇಶದೇವನ ಪ್ರಾಣಗಳನ್ನು ಬಹು ಕೌಶಲ್ಯದಿಂದ ರಕ್ಷಿಸಿದ್ದಾನೆ. ಅದು ಹ್ಯಾಗಂದರೆ, ಹಿಂದಕ್ಕೆ ಸಿಕಂದರಶಹನು ಒಡಂಬಡಿಕೆ ಮಾಡಿಕೊಳ್ಳಲಿಕ್ಕೆಂದು ನನ್ನನ್ನು ತನ್ನ ಸಭೆಗೆ ಕರೆಯಿಸಿಕೊಂಡಾಗ ಮೂರ್ಖತನದಿಂದ ಅವನು ನನ್ನನ್ನೂ, ಆಜೀಮಖಾನನನ್ನೂ ಸೆರೆ ಹಿಡಿಸಿದ್ದನಷ್ಟೇ? ಆಗ ಆ ಸುದ್ದಿಯನ್ನು ಕೇಳಿ ಈ ಸಾಹೇಬುದ್ದೀನ ಯುವಕನು ತನ್ನ ಬಲವಾದ ಅಶ್ವವನ್ನೇರಿ ಎಂಟು ತಾಸಿನಲ್ಲಿ ಕ್ರಮಿಸಲಿಕ್ಕಾಗದಷ್ಟು ಮಾರ್ಗವನ್ನು ಎರಡೇ ತಾಸಿನಲ್ಲಿ ಕ್ರಮಿಸಿ ಬಂದು ಸಿಕಂದರಶಹನಿಗೆ ತಿಳಿಯದ ಹಾಗೆ ಬಂದೀಖಾನೆಯ ಕೀಲಿಯನ್ನು ತೆಗೆದು ನನ್ನನ್ನು ಮುಕ್ತಮಾಡಿದ್ದನು. ಅವನು ಅಂದು ನನ್ನನ್ನು ಬಿಡಿಸದಿದ್ದರೆ ನಾನು ನಿಮಗೆ ಪುನಃ ಕಾಣುತ್ತಿದ್ದೆನೋ, ಇಲ್ಲವೋ ಯಾರು ಹೇಳಬೇಕು? ಹೀಗೆ ನಿಮ್ಮ ರಾಜನು—ನಿಮ್ಮ ತಂದೆಯು ಯಾವನಿಂದ ಉಪಕೃತನಾಗಿರುವನೊ, ಅಂಥವನಿಗೆ ದೈವವಶಾತ್ ಸಂಕಟವೊದಗಿರಲು ಹಿಂದಿನದೆಲ್ಲವನ್ನೂ ಮರೆತು ಅವನನ್ನು ಶತ್ರುಗಳಿಗೊಪ್ಪಿಸುವದು ನ್ಯಾಯವೋ, ಧರ್ಮವೋ? ಮಕ್ಕಳ ಕ್ಷೇಮಕ್ಕಾಗಿ ತಂದೆಯು ಆತ್ಮ ಯಜ್ಞವನ್ನು ಮಾಡಿಕೊಳ್ಳುವದೂ ತಪ್ಪಲ್ಲ. ನನ್ನೊಬ್ಬನ ರಕ್ತಪಾತದಿಂದ ಸಾಹೇಬುದ್ದೀನನೂ, ನೀವೂ ರಕ್ಷಿತವಾಗುವಂತಿದ್ದರೆ, ನಾನು ಅದಕ್ಕಾಗಿ ನಿಂತ ಕಾಲಿಲೆ ಸಿದ್ಧನಿದ್ದೇನೆ. ಆದರೆ ನನ್ನೊಬ್ಬನಿಂದ ಆ ಕೆಲಸವಾಗುವಂತಿರುವದಿಲ್ಲ. ಈ ಧರ್ಮಯುದ್ಧಕ್ಕಾಗಿ ನೀವೂ ನಿಮ್ಮ ರಕ್ತವನ್ನು ಸುರಿಸಬೇಕಾಗಿರುತ್ತದೆಂಬದು ಮನಸಿನಲ್ಲಿ ಬರಲು ನನ್ನ ಅಂತಃಕರಣವು ನಡಗುತ್ತದೆ;

ಆದರೆ ಆ ನಡಗುವ ಹೃದಯದಿಂದಲೇ ನಾನು ನನ್ನೀ ಪ್ರಜೆಗಳಿಗೆ ಧರ್ಮಮಾರ್ಗದಿಂದ ನಡೆಯಲಿಕ್ಕೂ ಅದಕ್ಕಾಗಿ ಪ್ರಾಣಗಳನ್ನು ಕೂಡ ಸಮರ್ಪಿಸಲಿಕ್ಕೂ ಉಪದೇಶ ಮಾಡುತ್ತಲಿದ್ದೇನೆ. ಹೀಗೆ ಪ್ರಾಣ ಸಮರ್ಪಣ ಮಾಡುವದು ಈ ಒಬ್ಬ ಕ್ಷುದ್ರ ಯವನನ ಸಲುವಾಗಿಯೆಂದು ಯಾರೂ ಭಾವಿಸಲಾಗದು. ಅಸಹಾಯಕನ ಸಲುವಾಗಿಯೂ, ದುರ್ಬಲನ ಸಲುವಾಗಿಯೂ, ಪೂರ್ವಕೃತ ಉಪಕಾರದ ಸಲುವಾಗಿಯೂ, ನ್ಯಾಯದ ಸಲುವಾಗಿಯೂ, ಬಂಧುತ್ವದ ಸಲುವಾಗಿಯೂ ನಾವೀ ಧರ್ಮಯುದ್ಧವನ್ನು ಮಾಡಬೇಕಾಗುತ್ತದೆ. ಈ ಯುದ್ಧದಲ್ಲಿ ಮರಣವುಂಟಾದರೆ ನಮಗೆ ಇಹಲೋಕದಲ್ಲಿ ಕೀರ್ತಿಯೂ ಪರಲೋಕದಲ್ಲಿ ಸ್ವರ್ಗಲಾಭವೂ ಪ್ರಾಪ್ತವಾಗುವದು. ಹುಟ್ಟಿದ ಬಳಿಕ ಹ್ಯಾಗೂ ಒಂದಾನೊಂದು ದಿವಸ ಸತ್ತೇ ಸಾಯಬೇಕಾಗುವದು. ಅಂದಮೇಲೆ ಈ ಧರ್ಮಕಾರ್ಯಕ್ಕಾಗಿ-ಪುಣ್ಯಸಂಪಾದನಕ್ಕಾಗಿ ಸತ್ತರೆ ಹ್ಯಾತಿಯೇನು?''

ಕೂಡಲೆ ಸಭಿಕರಲ್ಲಿಯ ಒಬ್ಬ ಹಿನಮೋದ ಅನುಭವಿಕನು ಎದ್ದು ನಿಂತು—'ಬಂಧುಗಳೇ, ನಮ್ಮರಸನು ಸಾಮಾನ್ಯನಲ್ಲ. ಅವನು ಧರ್ಮದಲ್ಲಿ ಯುಧಿಷ್ಠಿರನಿಗೆ ಸಮಾನನು. ಆದ್ದರಿಂದ ನಾವು ನಮ್ಮ ಧರ್ಮರಾಜನ ಸಲುವಾಗಿ ಯುದ್ಧಕ್ಕೆ ಸನ್ನದ್ಧರಾಗಲೇ ಬೇಕು; ಈ ಧರ್ಮಯುದ್ಧದಲ್ಲಿಪ್ರಾಣಗಳನ್ನು ಸೂರೆಮಾಡಲಿಕ್ಕೂ ನಾವುತತ್ಪರರಾಗಬೇಕು. ಹೂ, ಅನ್ನಿರಿ, ಬಂಧುಗಳೇ ಗಣೇಶದೇವ ಮಹಾರಾಜಕೀ ಜಯ, ದಿನಾಜಪುರದ ಧರ್ಮಾವತಾರ ಮಹಾರಾಜಕೀ ಜಯ! ಎಂದನ್ನಿರಿ' ಎಂದು ಹಿಡಿಸಲಾರದ ಸಂತೋಷದಿಂದ ಸಭಾಗೃಹವನ್ನು ಸ್ಫೂರ್ತಿಗೊಳಿಸಲು, ಕೆಲವು ನಿಮಿಷಗಳ ವರೆಗೆ ಜಯಜಯಕಾರ ಧ್ವನಿಯಿಂದ ಆ ಸಭಾಮಂದಿರವು ನಿನಾದ ಮಯವಾಯಿತು.

ಹೀಗೆ ಗಣೇಶದೇವನು ತನ್ನ ಪ್ರಜೆಗಳನ್ನು ಧರ್ಮರಕ್ಷಣಕ್ಕಾಗಿ ಪುನಃ ಯುದ್ಧಕ್ಕೆ ಅಣಿಮಾಡಿದನು. ಬಳಿಕ ಅವನು ರಾಜನೀತಿ

ಯಂತೆ ಗಾಯಸುದ್ದೀನನೆಡೆಗೆ ತನ್ನ ವಕೀಲನನ್ನು ಕಳಿಸಿ "ಸಾಹೇಬುದ್ದೀನನನ್ನು ಕೊಲ್ಲಿಸುವದಕ್ಕಿಂತ ಅವನನ್ನು ನಿನ್ನ ವಿಸ್ತಾರವಾದ ರಾಜ್ಯದಲ್ಲಿ ಯಾವದೊಂದು ಕೊನೆಯ ಭಾಗದ ಸುಭೇದಾರನನ್ನಾಗನೇಮಿಸಿ ಬಿಡು. ಅಂದರೆ ನಿನಗೂ ಅವನಿಗೂ ಕೂಡಿಯೇ ಸುಖವಾಗುವದು" ಎಂದು ಸೂಚಿಸಿದನು. ಆದರೆ ಮದಾಂಧ ಗಾಯಸುದ್ದೀನನು ಗಣೇಶದೇವನ ಆ ರಾಜಮಾರ್ಗಕ್ಕೆ ಒಪ್ಪಲಿಲ್ಲ. ಅವನು "ಸಾಹೇಬುದ್ದೀನನ ರುಂಡವನ್ನು ಕಳಿಸಿಕೊಡಿರಿ, ಇಲ್ಲವೆ ಯುದ್ಧಕ್ಕೆ ಸನ್ನದ್ಧರಾಗಿರಿ" ಎಂದು ಕುತುಬನ ಕೂಡ ಖಂಡತುಂಪಾಗಿ ಹೇಳಿಕಳಿಸಲು, ವಂಗೇಶ್ವರನೊಡನೆ ಪುನಃ ಯುದ್ಧಮಾಡಲಿಕ್ಕೆ ದಿನಾಜಪೂರ ರಾಜ್ಯದ ಪ್ರಜೆಗಳು ಸಿದ್ಧರಾದರು.

ಹದಿನಾಲ್ಕನೆಯ ಪ್ರಕರಣ.

ಸೆರೆಯಾಳಾದ ಗಣೇಶದೇವನು.

ಗಣೇಶದೇವನು ಗಟ್ಟಿಮನಸಿನಿಂದ ಸಾಹೇಬುದ್ದೀನನಿಗೆ ಆಶ್ರಯವನ್ನಿತ್ತು ಧರ್ಮವನ್ನು ಪರಿಪಾಲಿಸಿದನು. ಅದಕ್ಕಾಗಿ ಯುದ್ಧಮಾಡಬೇಕಾದುದರಿಂದ ಅವನಿಗೆ ದುಃಖವೆನಿಸಲಿಲ್ಲ; ಅನುತಾಪವಾಗಲಿಲ್ಲ. ಈ ನ್ಯಾಯ ಯುದ್ಧದಲ್ಲಿ ತನಗೆ ಹ್ಯಾಗೆ ಜಯವಾದೀತು? ದೇಶದಲ್ಲಿ ಅತ್ಯಾಚಾರವಾಗದಂತೆ ಹ್ಯಾಗೆ ಶಾಂತತೆಯುಳಿದೀತು? ಮುಂತಾದ ವಿಚಾರಗಳು ಮಾತ್ರ ಯಾವಾಗಲೂ ಅವನ ಮನಸ್ಸಿನಲ್ಲಿ ಮನೆ ಮಾಡಿಕೊಂಡವು.

ಯಾವ ದಿವಸ ಸಬಾಬಗಾಯುಸುದ್ದೀನನ ಸಂಗಡ ಯುದ್ಧವೆಸಗುವದು ಜಾಹೀರ ಮಾಡಲ್ಪಟ್ಟಿತೋ, ಆ ದಿವಸ ರಾತ್ರಿ ಗಣೇಶದೇ

ವನು ತನ್ನ ಅಂತಃಪುರವನ್ನು ಪ್ರವೇಶಿಸಿದರೂ ಆತನ ತಲೆಯೊಳಗಿನ ಆ ವಿಚಾರಗಳು ಅಳಿಯಲಿಲ್ಲ. ಆದರಿಂದ ಆವನು ದಿನದಂತೆ ತನ್ನ ರಾಣಿಯೊಡನೆ ಸುಖಸಲ್ಲಾಪಗಳನ್ನಾಡುವದರಲ್ಲಿ ಮಗ್ನನಾಗದೆ ಹುಚ್ಚನಂತೆ ಗತನ ವಿಚಾರ ಮಾಡುತ್ತ ಒತ್ತಟ್ಟಿಗೆ ಕುಳಿತುಬಿಟ್ಟನು. ಆಗ ನಿರೂಪಮಾ ರಾಣಿಯು ಗಂಡನನ್ನು ಕುರಿತು—ಅತ್ತೆಯವರು ಬಹಳ ಸಿಟ್ಟಾಗಿದ್ದಾರೆ; ಸಾಹೇಬುದ್ದೀನನಿಗೆ ತಾವು ಆಶ್ರಯ ಕೊಡುವದು ಅವರ ಮನಸ್ಸಿಗೆ ಬರುವದಿಲ್ಲ.

ಗಣೇಶ—ನಿನ್ನ ಮನಸ್ಸಿನಲ್ಲೇನಿದೆ? ಅವನಿಗೆ ಆಶ್ರಯ ಕೊಡುವದು ನಿನಗೂ ಸಮ್ಮತವಿಲ್ಲೇನು? ಅದು ಅನ್ಯಾಯ ಪಥವೇನು?

ನಿರೂಪಮಾ—ಮಂದಿಗೆ ಅನ್ಯಾಯವಾಗಿ ತೋರಿದರೂ ತಾವು ತಮ್ಮ ಕರ್ತವ್ಯವನ್ನು ಮಾಡಿ ಬಡವರ ಹಾಗು ಅಸಹಾಯರ ಸಹಾಯಿಗಳಾಗಿರಿ. ಎಂಥ ವಿಪತ್ತು ಒದಗಿದರೂ ತಾವು ಇಂಥ ಪುಣ್ಯಪ್ರದ ಕೆಲಸಗಳನ್ನು ಬಿಡುವದು ವಿಹಿತವಲ್ಲೆಂದು ನನಗೆ ತೋರುತ್ತದೆ.

ಆಗ ಅವನು ನಿರೂಪಮಾ ರಾಣಿಯನ್ನು ಸಂತೋಷಾತಿಶಯದಿಂದ ಚುಂಬಿಸಿ—"ಇದ್ದರೆ ಇಂಥ ಹೆಂಡತಿಯೇ ಇರಬೇಕು" ಎಂದು ನುಡಿದನು. ಇದೇ ಹೊತ್ತಿನಲ್ಲಿ ಅವರೀರ್ವರೂ ಕುಳಿತು ಮಾತಾಡುತ್ತಿದ್ದ ಕೋಣೆಯ ಬಾಗಿಲದ ಮೇಲೆ ಕರಾಘಾತವಾಯಿತು. ಆಗ ರಾಜನು ವಿಸ್ಮಯದಿಂದ ಹೊರಗಿನವರನ್ನು ಕುರಿತು—ಯಾರವರು? ಎಂದು ಕೇಳಲು,

ಹೊರಗಿನಿಂದ—ಭಗವತೀ ಸನ್ಯಾಸಿನಿಯು ತಮ್ಮನ್ನು ಕಾಣುವದಕ್ಕಾಗಿ ಹೊರಗೆ ಕಾದಿದ್ದಾಳೆ, ಎಂದು ರಂಗಿಣಿದೇವಿಯು ನುಡಿದಳು.

ಕೂಡಲೆ ರಾಜನು ಪರಮಾಶ್ಚರ್ಯದಿಂದೆದ್ದು ಬಾಗಿಲ ತೆರೆದನು. ಆಗ ಸನ್ಯಾಸಿನಿಯು ಅವನಿಗೆ ಹೀಗೆಂದು ಹೇಳಿದಳು:—

"ನಿನ್ನ ತಾಯಿಯು ಕುತುಬನನ್ನು ಸಾಹೇಬುದ್ದೀನನಿದ್ದ ಮಂದಿರದಲ್ಲಿ ಪ್ರವೇಶಗೊಳಿಸಿರುವಳು; ಇಷ್ಟರಲ್ಲಿ ಅವನಿಂದ ಸಾಹೇಬುದ್ದೀನನು ಪ್ರತಿಬಂಧಿತನಾಗಬಹುದು. ಕುತುಬನು ಒಮ್ಮೆ ಅವನನ್ನು ಸೆರೆ ಹಿಡಿದನೆಂದರೆ ತೀರಿತು, ಆ ಮೇಲೆ ನಿನ್ನ ಯಾವ ಉಪಾಯಗಳಿಂದಲೂ ಸಾಹೇಬುದ್ದೀನನ ಮರಣವು ತಪ್ಪಲಾರದು. ಅದಕ್ಕಾಗಿ ನಿನ್ನನ್ನು ಎಚ್ಚರಗೊಳಿಸಿದ್ದೇನೆ. ಮಾಡತಕ್ಕ ಹಂಚಿಕೆ ಏನಾದರೂ ಇದ್ದರೆ ಈಗಲೇ ಮಾಡಲಿಕ್ಕೆ ಉದ್ಯುಕ್ತನಾಗು."

ಕೂಡಲೆ ವ್ಯಗ್ರಚಿತ್ತನಾದ ಗಣೇಶದೇವನು ಶಹರಕೊತವಾಲನಿಗೆ ಸೈನ್ಯದೊಡನೆ ತನ್ನ ಸಹಾಯಕ್ಕೆ ಬರಲು ಹೇಳಿ ಕಳಿಸಿ, ತಾನು ಅರಮನೆಯ ಎಲ್ಲ ಕಾವಲುಗಾರರನ್ನು ಕರೆಕೊಂಡು ಸಾಹೇಬುದ್ದೀನನ ಬಿಡಾರದ ಕಡೆಗೆ ಶೀಘ್ರಗತಿಯಿಂದ ತೆರಳಿದನು. ಗಣೇಶದೇವನು ಹೀಗೆ ಲಗುಬಗೆಯಿಂದ ಅಲ್ಲಿಗೆ ಹೋಗಿ ಮುಟ್ಟುವಷ್ಟರಲ್ಲಿ ಕುತುಬನು ತನ್ನ ಕೆಲಸ ಸಾಧಿಸುವ ಹವಣಿಕೆಯಲ್ಲಿದ್ದನು. ಆಗ ಗಣೇಶದೇವನ ಜನರು ಕುತುಬನ ಜನರನ್ನು ತಡೆದರು; ಅಷ್ಟರಲ್ಲಿ ಕೊತವಾಲನೂ ದಂಡಾಳುಗಳೊಡನೆ ಬಂದು ಗಣೇಶದೇವನನ್ನು ಕೂಡಿಕೊಂಡನು. ಶರಣಾಗತ ರಕ್ಷಣಕ್ಕಾಗಿ ರಾಜನು ಆ ಅಂಧಃಕಾರಮಯವಾದ ರಜನಿಯಲ್ಲಿ ನಿಸ್ಸೀಮವಾದ ಸಾಹಸವನ್ನು ಮಾಡಿದನು. ಆದರೆ ಕುತುಬನ ವಿಲಕ್ಷಣ ಸೈನ್ಯ ಜಾಲದಲ್ಲಿ ಸಿಕ್ಕು ಚಕ್ರಭೀಮನ ಕೋಟೆಯಲ್ಲಿ ಸಿಕ್ಕ ಅಭಿಮನ್ಯುವಿನಂತೆ ಸ್ವತಃ ಗಣೇಶದೇವನೇ ಶತ್ರುಗಳ ಅಧೀನನಾಗಬೇಕಾಯಿತು. ಕೂಡಲೆ ಕುತುಬನು ಸಾಹೇಬುದ್ದೀನನನ್ನು ಕೈದುಮಾಡಿ ಪಾಂಡುಯಾ ರಾಜಧಾನಿಗೆ ಸಾಗಿಸಿದನಲ್ಲದೆ, ಗಣೇಶದೇವನನ್ನೂ ಸೆರೆ ಹಿಡಕೊಂಡು ನಡೆದನು.

ಕುತುಬನ ಮನಸಿನಲ್ಲಿ ಸಾಹೇಬುದ್ದೀನನ ಪ್ರಾಣಹರಣಮಾಡಬೇಕೆಂದಿತ್ತು; ಯಾಕಂದರೆ ವೈರಿಯೂ ನಾಗರಹಾವೂ ಚಿಕ್ಕವೆಂ

ದೂ ಕ್ಷುಲ್ಲಕವೆಂದೂ ಜಜ್ಜಿ ಬಿಡಲಿಕ್ಕೆ ಪ್ರಸಂಗದಲ್ಲಿ ಮನಸರಿ ಮಾಡಿ ಬಿಟ್ಟರೆ, ಒಂದಿಲ್ಲೊಂದು ದಿವಸ ಅವುಗಳು ತನ್ನ ಜೀವಕ್ಕೆ ಎರವಾಗದೆ ಇರವೆಂಬ ಮಾತು ಅವನಿಗೆ ಅವಗತವಾಗಿತ್ತು; ಆದ್ದರಿಂದ ಬಾದಶಹನ ಹಿತ ಬಯಸುವ ಮಿಷಕ್ಕಾಗಿ ಅವನು ಗಾಯಸುದ್ದೀನನಿಗೆ ಆ ಸಲಹೆಯನ್ನು ಕೊಡುತ್ತಿದ್ದನು; ಆದರೆ ಬಾದಶಹನ ಬೇರೆ ಹಿತ ಚಿಂತಕರು ಕುತುಬನ ಈ ಇಂಗಿತವನ್ನರಿಯರು. ಅವರು ಕುಮಾರ ಸಾಹೇಬುದ್ದೀನನ ಪ್ರಾಣದಂಡವಾಗಬಾರದೆಂದು ಕುತುಬನ ಮುಖಾಂತರವಾಗಿ ಗಾಯಸುದ್ದೀನನ ಬಳಿಯಲ್ಲಿ ಪ್ರಾರ್ಥಿಸಬೇಕೆಂದಿದ್ದರು; ಆದರೆ ಕಡೆಗೆ ಕುತುಬನ ಮಟ್ಟು ಅವರಿಗೆ ವಿದಿತವಾಗಲು, ಅವರು ಬಲು ಯೋಜನೆಗೊಳಗಾದರು. ಯಾಕಂದರೆ, ತಾವುಎಷ್ಟು ವಿಧವಾಗಿ ಹೇಳಿದರೂ ಬಾದಶಹನು ತಮ್ಮ ಹಿತಗುಜವನ್ನು ಕೇಳುವದಿಲ್ಲ; ಕುತುಬನ ಸಲಹೆಗೇ ಅವನು ತಲೆದೂಗುವನು. ಅಂದಮೇಲೆ ಇದಕ್ಕೇನು ಹಂಚಿಕೆ ಮಾಡಬೇಕೆಂದು ಅವರು ಬಹು ದೀರ್ಘವಾಗಿ ವಿಚಾರಿಸಿದ ಬಳಿಕ ಅವರಿಗೊಂದು ಹೊಸಯುಕ್ತಿಯು ಸೂಚಿತವಾಯಿತು. ಅದೇನಂದರೆ, ಬಾದಶಹನು ಕುತುಬನ ಪರಾಮರ್ಶದಂತೆ ಯಾವಾಗಲೂ ನಡೆಯುತ್ತಿದ್ದರೂ, ನೂತನ ರಾಣಿಯ ಪ್ರಸನ್ನತೆಗಾಗಿ ಅವನು ಪ್ರಸಂಗವಿಶೇಷದಲ್ಲಿ ಕುತುಬನ ಮಾತು ಕೇಳದೆ, ತನ್ನ ಪ್ರಿಯತಮೆಯ ಸಲಹೆಯನ್ನು ನಡಿಸಬಹುದು; ಆದ್ದರಿಂದ ಸಾಹೇಬುದ್ದೀನನ ಪ್ರಾಣವನ್ನು ರಕ್ಷಿಸಲು ಪ್ರೇರಿತರಾದ ನಾವು ಆ ಮಾರ್ಗದಿಂದ ಪ್ರಯತ್ನಿಸಿ ನೋಡಬೇಕೆಂದು ಆ ಸಭಾಸದರು ನಿರ್ಧರಿಸಿಕೊಂಡರು. ಬಳಿಕ ಆ ಶುಭಿಕರಲ್ಲಿಯ ಕೆಲಮುಖಂಡರು ಮೊದಲು ಕುತುಬನ ಭೆಟ್ಟಿಗಾಗಿ ಹೋದರು. ಈ ಮುಖಂಡರಲ್ಲಿ ಅಜೀಮಖಾನನೂ ಒಬ್ಬನಾಗಿದ್ದನು. ಕುತುಬನು ಅವರೆಲ್ಲರನ್ನು ಕಂಡು ಅವರೇನನ್ನುವರೆಂಬದನ್ನು ತಿಳಕೊಂಡನು. ಆಗ ಅವನು ನಿರಾಶೆ

ಯುಕ್ತ ದನಿಯಿಂದ "ಸಾಹೇಬುದ್ದೀನನನ್ನು ಗಾಯಸುದ್ದೀನನು ಜೀವ ದಿಂದಿಡುವದಿಲ್ಲ; ಈ ಮಾತಿನಲ್ಲಿ ಕೈಹಾಕಿ ನೀವು ಮಾತ್ರ ವ್ಯರ್ಥವಾಗಿ ನಿಮ್ಮ ಪ್ರಾಣಗಳನ್ನು ನೀಗುವಿರಿ. ಇದು ಈಗ ಬಾದಶಹನ ರಾಜ್ಯ ವಾಗಿರುವದಿಲ್ಲ; ಅವನ ಆ ನೂತನರಾಣಿ ಸೈತಾನೀ ಶಕ್ತಿಮಯಿಯ ರಾಜ್ಯವಾಗಿರುತ್ತದೆ" ಎಂದು ನುಡಿದದ್ದನ್ನು ಕೇಳಿ, ಅಜೀಮಖಾನನು ರೋಷದಿಂದ—

"ಸುಲ್ತಾನ ಸೆಕಂದರ ಶಹನಿಗೆ ವಿದ್ರೋಹಿಯಾಗಿ ನಾವು ಗಾಯಸುದ್ದಿನನಿಗೆ ಈ ಸಿಂಹಾಸನವನ್ನು ಕೊಡಿಸಿದ್ದು ಕೇವಲ ಇಂಥ ಅನ್ಯಾಯದಾಚರಣೆಗಳನ್ನು ಸಹಿಸುವದಕ್ಕೇನು? ಬಾದಶಹನು ಸಾಹೇ ಬುದ್ದೀನನನ್ನು ಬಿಟ್ಟುಕೊಡದಿದ್ದರೆ ನಾವು ಪುನಃ ಯುದ್ಧ ಪ್ರವೃತ್ತರಾ ಗಬೇಕಾದೀತು. ಇನ್ನೆಂದೂ ಶಸ್ತ್ರವನ್ನು ಧರಿಸಲಿಕ್ಕಿಲ್ಲೆಂದು ಪಣ ತೊಟ್ಟ ನಾವು, ಈ ಕುಮಾರನ ಪ್ರಾಣ ರಕ್ಷಣಕ್ಕಾಗಿ ಪುನಃ ಕೈ ಯಲ್ಲಿ ಖಡ್ಗವನ್ನು ಹಿಡಿದೇ ತೀರೇವು"

ಹೀಗೆ ಅವರು ಕುತುಬನ ಬಳಿಗೆ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದರು; ಹಾಗೂ ಈ ವಿಷಯದಲ್ಲಿ ಶಕ್ತಿಮಯಿ ರಾ ಣಿಯಾದರೂ ಏನೆನ್ನುವಳೆಂಬದನ್ನು ಪ್ರತ್ಯಕ್ಷ ತಿಳಕೊಳ್ಳುವದ ಕ್ಕಾಗಿ ಅವರು ಆಕೆಯೆಡೆಗೆ ನಡೆದರು; ಶಕ್ತಿಯ ವಿವಾಹವಾದಂದಿ ನಿಂದ ಸೈತಾನಿ, ರಾಕ್ಷಸಿ, ವಾಘಿನಿ ಮೊದಲಾದ ಅನೇಕ ವಿಶೇಷಣ ಗಳು ಆಕೆಗೆ ಪ್ರಾಪ್ತವಾಗಿದ್ದವು; ಮತ್ತು ಅವೆಲ್ಲವುಗಳನ್ನು ಅವಳು ಕುತುಬನೊಬ್ಬನಿಂದಲೇ ಪಡೆಯಬೇಕಾಗಿತ್ತು. ಯಾಕಂದರೆ ಅಪ ಸ್ವಾರ್ಥಿಯೂ, ಮಹಾಧೂರ್ತನೂ ಆದ ಆ ಕುತುಬನು ತನ್ನ ನೀಚ ಕೃತ್ಯಗಳು ಜನರಿಗೆ ತಿಳಿದು, ಜನರೋಷಕ್ಕೆ ತಾನು ಗುರಿಯಾಗಬಾರ ದೆಂದು ಬೇಕೆಂತಲೇ ಜನರಲ್ಲಿ ಆ ನೂತನ ರಾಣಿಯ ವಿಷಯವಾಗಿ ಅಲ್ಲದ ಸಲ್ಲದ ಸಂಗತಿಗಳನ್ನು ಹರಡಿಸಿ, ಆಕೆಯಲ್ಲಿ ಜನಾನುರಾಗವು

ತಪ್ಪುವ ಹಂಚಿಕೆಯನ್ನು ನಡಿಸಿದ್ದನು. ಕುತುಬನ ಹೃದಯವ್ಯಾಪಾರವನ್ನು ಬಲ್ಲ ಅವನ ಅಗ್ರಜನಾದ ಅಜೀಮಖಾನ ಮೊದಲಾದ ಮುಖಂಡರು ನಿಜಸಂಗತಿಯನ್ನು ತಿಳಿದದ್ದರಿಂದಲೇ ಅವರು ಇಂದು ಶಕ್ತಿಮಯಿಯ ಬಳಿಗೆ ಬಂದಿದ್ದರು. ಪ್ರಜೆಗಳ ಇಚ್ಛೆಯನ್ನು ತಿಳಿದು, ಶಕ್ತಿಮಯಿಯು ಶುದ್ಧ ಮನಸಿನಿಂದ-ನಿಮ್ಮ ಬಯಕೆಯನ್ನು ಪೂರೈಸಿಕೊಡಲು ಪ್ರಯತ್ನಿಸುತ್ತೇನೆ, ಎಂದು ಅವರಿಗೆ ಅಭಯವನ್ನಿತ್ತು ಕಳಿಸಿದಳು.

ಶಕ್ತಿಮಯಿ ಹಾಗು ರಾಜಸಭಾಸದರ ಮುಖಂಡರು ಇವರಲ್ಲಿ ಆದ ಸಂಭಾಷಣವನ್ನು ಕೇಳಿ ಕುತುಬನು ಮನದಲ್ಲಿ ಬಹಳವಾಗಿ ಬೆದರಿದನು; ಯಾಕಂದರೆ, ಯಾವ ಸ್ವಾರ್ಥ ಸಾಧನೆಗಾಗಿ ಅವನು ಸೆಕಂದರಶಹನನ್ನು ಬುಡಮೇಲು ಮಾಡಿಸಿದ್ದನೋ, ಗಾಯಸುದ್ದೀನನ ಸಹಾಯದಿಂದ ಅವನ ಏಳು ಜನ ತಮ್ಮಂದಿರನ್ನು ಕೊಲ್ಲಿಸಿದ್ದನೋ ಹಾಗು ಈಗ ಈ ಸಾಹೇಬುದ್ದೀನನನ್ನು ಕೊಲ್ಲಿಸಿಬಿಟ್ಟು, ಸಮಯವರಿತು ಸ್ವತಃ ಗಾಯಸುದ್ದೀನನನ್ನೂ -ಪ್ರಕೃತದ ಬಂಗಾಲದ ನವಾಬನನ್ನೂ-ಕೊಲ್ಲಿಸಿ ಆ ಘಾತುಕತನದ ಅಪರಾಧಕ್ಕೆ ಅವನ ಈ ನೂತನರಾಣಿ ಶಕ್ತಿಮಯಿಯನ್ನು ಗುರಿಮಾಡಿ, ತಾನು ಬಂಗಾಲದ ಪಟ್ಟವನ್ನು ಸೆಳಕೊಳ್ಳಬೇಕೆಂದಿದ್ದನೋ, ಆ ಮಹಾಕಾರಸ್ಥಾನಿಯು ಅವರ ಆ ಸಂಭಾಷಣದಿಂದ ಮನಸ್ಸಿನಲ್ಲಿ ಹೆದರಿದ್ದರಲ್ಲಿ ಸೋಜಿಗವೇನು? ಆದರೆ ಕುತುಬನು ಮಹಾ ಚಾಣಾಕ್ಷನಾದ್ದರಿಂದ ಅವನು ಅದಕ್ಕೂ ಒಂದು ಹಂಚಿಕೆ ಹಾಕಿದನು. ಹ್ಯಾಗಾದರೂ ಮಾಡಿ ಶಕ್ತಿಮಯಿಯ ವಿಷಯವಾಗಿ ಗಾಯಸುದ್ದೀನನ ಮನಸ್ಸು ಕೆಡಿಸಿ ಬಿಟ್ಟರೆ ತನ್ನ ಉಳಿದ ಕೆಲಸಗಳನ್ನು ಶೀಘ್ರವಾಗಿ ಮಾಡಿಕೊಳ್ಳಲಿಕ್ಕೆ ಬರಬಹುದೆಂದು ತಿಳಿದು ಅವನು ಆ ಗಂಡಹೆಂಡಿಂದಿರ ನಡುವೆ ವೈಮನಸ್ಸಾಗುವ ಹಾಗೆ ಯುಕ್ತಿ ಹಾಕಹತ್ತಿದನು.

ದಿನಾಜಪುರದ ರಾಜನಾದ ಗಣೇಶದೇವನು ಈಗ ಹ್ಯಾಗೂ

ವಂಗೇಶ್ವರನ ಸೆರೆಯಲ್ಲಿದ್ದನು. ಗಣೇಶದೇವನಿಗೂ ಶಕ್ತಿಮಯಿಗೂ ಬಾಲ್ಯದಿಂದಲೇ ಸ್ನೇಹವೆಂಬುದು ಕುತುಬನು ಬಲ್ಲ ಸಂಗತಿಯಾಗಿತ್ತು. ಇಷ್ಟೇ ಅಲ್ಲ, ಒಂದು ಅಸ್ತ್ರೋತ್ಸವದ ದಿವಸ ಶಕ್ತಿಮಯಿಯು ಗಣೇಶ ದೇವನಿಂದಲೂ ಅವನ ತಾಯಿಯಿಂದಲೂ ವಿಶೇಷವಾಗಿ ಅಪಮಾನ ಹೊಂದಿದ್ದರಿಂದ ಅವಳು ತನ್ನ ಆ ಅವಮಾನದ ಸೇಡು ತೀರಿಸಿಕೊಳ್ಳುವ ಸಲುವಾಗಿಯೇ ತನ್ನ ಜಾತಿ-ಗೋತಿಗಳನ್ನು ಬಿಟ್ಟು ವಂಗೇಶ್ವರನ ಕೈಹಿಡಿದಿದ್ದಳೆಂಬದರ ಸಂಪೂರ್ಣ ಮರ್ಮವೂ ಅವನಿಗೆ ಅರಿಯದ ಸಂಗತಿಯಾಗಿದ್ದಿಲ್ಲ; ಆದ್ದರಿಂದ ಕುತುಬನು ತನ್ನ ಸ್ವಾರ್ಥದ ಮಾರ್ಗದೊಳಗೆ ಕೇವಲ ಕಂಟಕ ಪ್ರಾಯಳಾಗಿದ್ದ ಶಕ್ತಿಯನ್ನು ಬೇರೊಂದು ಕಂಟಕದಿಂದ ತೆಗೆದು ಬಿಡಬೇಕೆಂದು ಯೋಚಿಸಿದನು; ಮತ್ತು ಆ ಕೆಲಸಕ್ಕಾಗಿ ಅವನು ಶಕ್ತಿಮಯಿಯೊಡನೆ ವಿಶೇಷ ಲೀನತೆಯಿಂದ ನಡಕೊಳ್ಳಹತ್ತಿದನು. ಅವನು ರಾಜ್ಯದೊಳಗಿನ ಎಲ್ಲ ಸಣ್ಣ-ದೊಡ್ಡ ಸಂಗತಿಗಳನ್ನು ರಾಜನಿಗೆ ತಿಳಿಸುವಂತೆ ಈಚೆಗೆ ಶಕ್ತಿಮಯಿಗೂ ತಿಳಿಸಹತ್ತಿದನು; ಹಾಗು ರಾಜವ್ಯವಹಾರದೊಳಗಿನ ಪ್ರತಿಯೊಂದು ಖಾತೆಯ ವ್ಯವಹಾರವನ್ನೂ ಆಕೆಯ ಎದುರಿಗೆ ಸಾದ್ಯಂತವಾಗಿ ಹೇಳುತ್ತ, ಆಕೆಯ ಗೌರವವನ್ನು ಆಗಾಗ್ಗೆ ಹೊಗಳುತ್ತ ನಡೆದದ್ದರಿಂದ ಶಕ್ತಿಮಯಿಯು ಕುತುಬನನ್ನು ಒಳ್ಳೇ ವಿಶ್ವಾಸದ ಮನುಷ್ಯನೆಂದು ಭಾವಿಸಿದಳು. ಹೆಂಗಸರಿಗೇನು, ಎಂಥವೇ ಯಾಕಾಗಲೊಲ್ಲವು, ಅವರ ಮಾತು ಕೇಳುತ್ತ, ಅವರನ್ನು ಅಹಲ್ಯಾ-ದ್ರೌಪದಿ-ಸೀತಾ ಎಂದು ಹೊಗಳಿ ಅಟ್ಟಕ್ಕೇರಿಸುತ್ತ ಹೋದರೆ ತೀರಿತು; ಅವರ ಮನಸ್ಸು ಪ್ರಸನ್ನವಾಗುವದಕ್ಕೆ ವಿಲಂಬವಾಗುವದಿಲ್ಲ. ಅಂತೆಯೇ ಎಷ್ಟೋ ಧುರೀಣ ಪುರುಷರು ಬೇಕಾದಂಥ ಕಟ್ಟಾ ಹೆಂಗಸರನ್ನು ಕೂಡ ಅಲ್ಪಾವಧಿಯಲ್ಲಿ ಒಲಿಸಿಕೊಂಡು ಅವರನ್ನು ದುಷ್ಟ ಇಲ್ಲವೆ ಸುಷ್ಟುಕಾರ್ಯಕ್ಕೆ ಪ್ರವರ್ತ್ತರಾಗಮಾಡಿದ ಉದಾಹರಣೆಗಳು ಸಮಾಜದ

ಮುಂದೆ ಅಖಂಡವಾಗಿರುವವು. ನಮ್ಮ ಶಕ್ತಿಮಯಿಯಾದರೂ ಸಮಾಜದ ಈ ಒಪ್ಪವನ್ನು ಹೇಗೆ ಬಿಟ್ಟು ನಡೆದಾಳು?

ಬರಬರುತ್ತ ಕುತುಬನು ರಾಜಕೋಶದ ಹಾಗು ಕಾರಾಗೃಹದ ಸಂಗತಿಗಳನ್ನು ಶಕ್ತಿಮಯಿಗೆ ತಿಳಿಸಹತ್ತಿದನು. ಕಾರಾಗೃಹದೊಳಗೆ ಹೊಸದಾಗಿ ತಂದಿಟ್ಟಿರುವ ಗಣೇಶದೇವನ ಕಷ್ಟವನ್ನು ಒಳ್ಳೇ ಕನಿಕರದಿಂದ ಆಕೆಗೆ ಆಗಾಗ್ಗೆ ಹೇಳತೊಡಗಿದನು. ಶಕ್ತಿಮಯಿಯು ಎಂಥ ನಿಷ್ಠುರಳೂ, ಗಟ್ಟಿಮನಸ್ಸಿನವಳೂ ಆಗಿದ್ದರೂ, ಬಾಲ್ಯಸ್ನೇಹದಿಂದ ಬಿಗಿಯಲ್ಪಟ್ಟ ಗಣೇಶದೇವನ ಕಷ್ಟ-ನಷ್ಟಗಳನ್ನು ದಿನಾಲು ಕೇಳಹತ್ತಿದ ಬಳಿಕ ಅವಳ ಮನಸ್ಸು ಆದ್ರ್ರವವಾಯಿತು. ಆಕೆಯು ಒಮ್ಮೆ ಕಾರಾಗಾರಕ್ಕೆ ಹೋಗಿ ಮರೆಗೆ ನಿಂತು ಅವನನ್ನು ಕಣ್ಣುಮುಟ್ಟೆ ನೋಡಿ ಬಂದಳು. ಆಗಿನ ಗಣೇಶದೇವನ ವೇಷ, ಮುಖಲಕ್ಷಣ ಇವುಗಳನ್ನು ನೋಡಿ ಶಕ್ತಿಮಯಿಯ ಅಂತರಂಗದೊಳಗಿನ ಆತನ ವಿಷಯದ ಸೇಡಿನ ಹವ್ಯಾಸವೆಲ್ಲ ಅಳಿದು ಹೋಯಿತು. ಆಗ ಅವಳು ಯೋಚಿಸಿದ್ದೇನಂದರೆ, ಯಾವನ ಸೇಡು ತೀರಿಸಿಕೊಳ್ಳುವ ಸಲುವಾಗಿ ನಾನು ಕುಲಗೆಟ್ಟು ಸಾಮಾಜಿಕ ಬಂಧನಗಳನ್ನು ಮುರಿದ ಅಪರಾಧಕ್ಕೆ ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಗುರಿಯಾಗಿರುವೆನೋ, ಆ ಗಣೇಶದೇವನ ಈ ಸಂಕಟವನ್ನು ನಿವಾರಿಸಲು ಪ್ರಯತ್ನಿಸುವಾಗ ನನ್ನ ಈ ದೇಹವು ಬಿದ್ದರೂ ಚಿಂತೆಯಿಲ್ಲ; ಆದರೆ ಈ ಕೆಲಸವನ್ನು ಮಾಡಲೇ ಬೇಕು. ಅಂದರೆ ಈ ಕೃತಿಯಿಂದ ನನ್ನ ಅಪರಾಧವು ಕೆಲಮಟ್ಟಿಗಾದರೂ ಕ್ಷಮ್ಯವಾಗಬಹುದು.

ಬಳಿಕ ಒಂದು ದಿವಸ ಅವಳು ಬಾದಶಹನಿಗೆ ಏಕಾಂತದಲ್ಲಿ ಪ್ರಾರ್ಥಿಸಿದ್ದೇನಂದರೆ—ಪ್ರಿಯತಮಾ, ಕಾರ್ಯಗೌರವಕ್ಕಾಗಿ ತಾವು ರಾಜ್ಯದೊಳಗಿನ ಎಷ್ಟೋ ಕೆಲಸಗಳನ್ನು ತಮ್ಮ ಧೋರಣಕ್ಕನುಸರಿಸಿ ಮಾಡಬೇಕಾಗುತ್ತದೆ. ಆದರೆ ಆ ವಿಷಯದಲ್ಲಿ ಈ ದಾಸಿಯು ಮನಸ್ಸು

ಹಾಕಿ ತಮಗೆ ಪರಾಮರ್ಶಿಸುವದು ಸರಿಯಲ್ಲವೆಂಬದನ್ನು ನಾನು ಬಲ್ಲೆನು; ಆದರೂ ಅಭಯವಿತ್ತರೆ ಒಂದು ಸಂಗತಿಯ ಬಗ್ಗೆ ತಮ್ಮನ್ನು ಕೇಳಿಕೊಳ್ಳುವೆನು.

ಆಗ ಗಾಯಸುದ್ದೀನನು ತನ್ನ ನೂತನ ರಾಣಿಯ ಮನಸ್ಸನ್ನು ತೃಪ್ತಿಗೊಳಿಸಲು ಪ್ರಾಪ್ತವಾದ ಈ ಸುಸಂಧಿಯನ್ನು ಕಳಕೊಳ್ಳಲಿಲ್ಲ. ಅವನು ಆಕೆಗೆ ಅಭಯವನ್ನೀಯಲು ಅವಳು—ಖಾವಂದ, ಕುಮಾರ ಸಾಹೇಬುದ್ದೀನನನ್ನು ಕೊಲ್ಲಿಸದೆ ಬಿಟ್ಟು ಬಿಡಬೇಕು. ಅಂದರೆ ಅದರಿಂದ ನನಗೂ ನಿಮ್ಮ ರಾಜ್ಯದೊಳಗಿನ ಎಲ್ಲ ಪ್ರಜೆಗಳಿಗೂ ಆನಂದವಾಗುವದು. ಅದರಂತೆ ದಿನಾಜಪುರದ ರಾಜನಾದ ಗಣೇಶದೇವನನ್ನೂ......ಎಂದು ನುಡಿಯುತ್ತಿರಲು, ಗಾಯಸುದ್ದೀನನು ನಡುವೇ ಬಾಯ ಹಾಕಿ—

ನಿನ್ನ ಮೊದಲಿನ ಆದೇಶದಂತೆ ಸಾಹೇಬುದ್ದೀನನನ್ನು ಬಿಟ್ಟುಗೊಡುವೆನು. ಆದರೆ ಗಣೇಶದೇವನ ಮಾತನ್ನು ನೀನು ತೆಗೆಯಬಾರದು; ನಾನು ಅದನ್ನು ನಡಿಸಬಾರದು. ಇದರಲ್ಲಿಯೇ ನನ್ನ-ನಿನ್ನ ಗೌರವವಾಗಿರುತ್ತದೆ, ಎಂದು ನಿಷ್ಕರ್ಷವಾಗಿ ಹೇಳಿಬಿಟ್ಟನು.

ಯಾವದೊಂದು ಸಂಗತಿಯು ಸ್ವಾಭಾವಿಕವಾಗಿ ಸಾಗುವವರೆಗೆ ಆ ವಿಷಯವಾಗಿ ಯಾರೂ ದೀರ್ಘ ಸಾಹಸಕ್ಕೆ ಹೋಗುವದಿಲ್ಲ. ಆದರೆ ಅದೇ ಮಾತಿನ ವಿಷಯವಾಗಿ ಎರಡು ಬಣಗಳಾದವೆಂದರೆ ಆ ಮೇಲೆ ಈರ್ಷೆಗಾಗಿ ಪ್ರತಿಯೊಂದು ಕಡೆಯವರು ಮಿತಿಮೀರಿ ಸಾಹಸಪಟ್ಟು ತಮ್ಮ ಹಿಡಿತವನ್ನು ಸಾಧಿಸುವ ಹವ್ಯಾಸ ತಾಳುವದು ಲೋಕರೂಢಿಯಾಗಿದೆ. ಅದರಂತೆ ಶಕ್ತಿಮಯಿಯು ಕೇಳಿಕೊಂಡಂತೆ ಗಾಯಸುದ್ದೀನನು ಗಣೇಶದೇವನನ್ನು ಬಂಧಮುಕ್ತ ಮಾಡಿ ಬಿಟ್ಟಿದ್ದರೆ, ಆಕೆಯು ಆ ವಿಷಯವಾಗಿ ಹೆಚ್ಚಾಗಿ ಸಾಹಸ ಪಡುವ ಕಾರಣವಿದ್ದಿಲ್ಲ. ಆದರೆ ಅವನು ಆಗುವದಿಲ್ಲವೆಂದು ಹೇಳಿ

ದ್ದರಿಂದ ಆಕೆಯು ಗಣೇಶದೇವನ ಬಂಧ ಮುಕ್ತತೆಗಾಗಿ ಮಿತಿಮೀರಿ ಸಾಹಸಪಡಬೇಕಾಯಿತು.

ಶಕ್ತಿಮಯಿಯು ಈಗ ತನ್ನ ರಾಣಿಯಾಗಿದ್ದರೂ ಇವಳು ಗಣೇಶದೇವನೊಡನೆ ಬಾಲ್ಯ ಸ್ನೇಹದಿಂದ ಬಿಗಿಯಲ್ಪಟ್ಟಿರುವದರಿಂದ ಈ ಸಾಹಸಿಯಾದ ಹೆಂಗಸು ಪ್ರಸಂಗವರಿತು ಅವನನ್ನು ಹ್ಯಾಗೆ ಬಂಧ ಮುಕ್ತ ಮಾಡಿಸಬಹುದೋ? ಮತ್ತು ಇವಳ ಆ ಕೆಲಸಕ್ಕೆ ತಾನು ಪ್ರತಿಬಂಧಿಸ ಹೋದರೆ ಇವಳು ತನ್ನ ಮನಸಿನಲ್ಲಿ ಮತ್ತೆ ಯಾವ ಕುಕಲ್ಪನೆಗಳನ್ನು ಹಾಕಿ ಇಲ್ಲದ ಗೊಂದಲವನ್ನೆಬ್ಬಿಸುವಳೋ ಎಂದು ಗಾಯಸುದ್ದೀನನು ಮನಸಿನಲ್ಲಿ ಯೋಚಿಸಿದನು. ಕಡೆಗೆ ಅವನು "ಗಣೇಶದೇವನನ್ನು ಕೊಲ್ಲಿಸಿಬಿಟ್ಟರೆ" ಮುಂದಿನ ಯಾವ ಅನರ್ಥಗಳಿಗೂ ಇಂಬು ಉಳಿಯಲಿಕ್ಕಿಲ್ಲೆಂದು ನಿಷ್ಕರ್ಷಿಸಿಕೊಂಡನು.

ಹೀಗೆ ಸೆರೆಯಾಳಾದ ಒಬ್ಬ ಗಣೇಶದೇವನ ಸಲುವಾಗಿ (ಶಕ್ತಿಮಯಿ ಮತ್ತು ಗಾಯಸುದ್ದೀನ) ಈ ದಂಪತಿಗಳಲ್ಲಿ ವೈಮನಸ್ಸುಂಟಾಗುವಂತೆ ಆಟ ಹೂಡಿದ ಕುತುಬನು, ಮುಂದೆ ಮತ್ತೆ ಏನು ಮಾಡುವನೆಂಬದು ಮುಂದಿನ ಪ್ರಕರಣದಲ್ಲಿ ವಾಚಕರಿಗೆ ತಿಳಿಯಬಹುದು.

ಹದಿನೈದನೆಯ ಪ್ರಕರಣ.

ಸಂಶಯ ಪಿಶಾಚ.

ಶಕ್ತಿಮಯಿ ಮಹಾರಾಣಿಯು ಈಚೆಗೆ ಪಾಂಡುಯಾ ರಾಜಧಾನಿಯೊಳಗಿನ ಅರಮನೆಯಲ್ಲಿರುತ್ತಿದ್ದಿಲ್ಲ; ಪಟ್ಟಣದ ಹೊರಗೆ ನದೀತೀರದ ಒಂದು ಸುಂದರವಾದ ಉಪವನದೊಳಗಿನ ಮಂದಿರದಲ್ಲಿ ಸ್ವತಂತ್ರಳಾಗಿರುತ್ತಿದ್ದಳು. ವಂಗೇಶ್ವರನ ಬೇರೆ ಬೇಗಮೆಯರ ಕೂಡ ಆಕೆಯು ಯಾವ ಬಗೆಯ ಸಂಬಂಧವನ್ನೂ ಇಟ್ಟುಕೊಂಡಿದ್ದಿಲ್ಲ. ಬಾದಶಹನು ಆಕೆಯ ಇಚ್ಛೆಯಂತೆ ಆಕೆಗಾಗಿ ಆ ಉಪವನವನ್ನು ನಿರ್ಮಿಸಿ ಅಲ್ಲಿ ಆ ಮಂದಿರವನ್ನು ಹೊಸದಾಗಿಯೇ ಕಟ್ಟಿಸಿಕೊಟ್ಟಿದ್ದನು. ಮಂದಿರದ ಸುತ್ತುಮುತ್ತಲಿನ ಉದ್ಯಾನದಲ್ಲಿ ಸುಶೋಭಿತ ಕಾರಂಜಿಗಳು ಒಂದೇಸವನೆ ಸುಗಂಧೋದಕವನ್ನು ಚಿಮ್ಮುತ್ತಿದ್ದವು; ಮಲ್ಲಿಗೆ, ಗುಲಾಬಿ, ಕೇತಕಿ ಮುಂತಾದ ಹೂಬಳ್ಳಿಗಳ ಲತಾಮಂಟಪಗಳೊಳಗಿಂದ ಹಾಯ್ದು ಬರುತ್ತಿದ್ದ ಮಂದಮಾರುತನು ಸುಗಂಧವನ್ನು ಬೀರುತ್ತಿದ್ದನು; ತರತರದ ಬಣ್ಣಗಳ ಪದ್ಮಪತ್ರಗಳಿಂದ ಯುಕ್ತವಾದ ಆ ಪುಷ್ಪವಾಟಿಕೆಯು ಮಂದಿರದ ಬಹಿರಂಗದ ಸೊಬಗನ್ನು ಬೆಳಿಸಲಿಕ್ಕೆ ಕಾರಣವಾಗಿದ್ದಂತೆ, ಅಂತರಂಗದ ಶೋಭೆಗೂ ಹೆಚ್ಚುಕಡಿಮೆಯಾಗಿ ಸಹಾಯಕವಾಗಿತ್ತು. ಶಕ್ತಿಮಯಿರಾಣಿಯ ಆ ಮಹಾಲು ಯವನ ಬಾದಶಹನ ಪ್ರೀತಿಯ ರಾಣಿಯದಾಗಿದ್ದರೂ, ಆ ಮಹಾಲಿನೊಳಗಿನ ಹಾಗು ಅದರ ಹೊರಬದಿಯ ಪುಷ್ಪವಾಟಿಕೆಯೊಳಗಿನ ಪದಾರ್ಥಗಳನ್ನು ನೋಡಿದರೆ, ಅದು ಹಿಂದೂರಾಜರ ಒಂದು ಪವಿತ್ರವಾದ ನಿವಾಸದಂತೆ ನೋಡುವವರಿಗೆ

ಥಟ್ಟನೆ ಕಂಡುಬರುತ್ತಿತ್ತು. ಯಾಕಂದರೆ, ಆ ಮಹಾಲಿನಲ್ಲಿ ಅಲ್ಲಲ್ಲಿ ಅಯೋಧ್ಯಾ ನಿವಾಸಿಯಾದ ಶ್ರೀರಾಮಚಂದ್ರನ, ದ್ವಾರಕಾಧೀಶನಾದ ಶ್ರೀಕೃಷ್ಣನ ಮನೋಹರವಾದ ಚಿತ್ರಗಳು ಸಾದರದಿಂದ ಶೃಂಗರಿಸಲ್ಪಟ್ಟಿದ್ದವು; ಮತ್ತು ಉಪವನದಲ್ಲಿ ಹಿಂದೂ ದೇವ-ದೇವತೆಗಳ ಶಿಲಾಮಯ-ಸ್ಫಟಿಕಮಯ ವಿಗ್ರಹಗಳು ಅಲ್ಲಲ್ಲಿ ಸಾದರಗೊಳಿಸಿದ್ದವು. ಶ್ರೀಕೃಷ್ಣನ ಅಂಗಸಂಗದ ವಿರಹದಿಂದ ಅತ್ಯಂತವಾಗಿ ಬಳಲುತ್ತಿದ್ದ ರಾಧೆಯ ಶುಭ್ರಪ್ರಸ್ತರ ಮೂರ್ತಿಯು ಒಂದು ಸ್ಥಳದಲ್ಲಿ ನಿಲ್ಲಿಸಲ್ಪಟ್ಟಿದ್ದು, ಅದರ ಎದುರಿಗೆ ಕುಸ ಅಂತರದಲ್ಲಿ ಮಧುರವಾದ ಗಾನದಿಂದ ತನ್ನ ಸಖಿಯರಾದ ಗೋಪಿಯರನ್ನು ಮರುಳು ಮಾಡುವದಕ್ಕಾಗಿ ಕೈಯಲ್ಲಿ ಕೊಳಲನ್ನು ಹಿಡಿದ ಅಚ್ಚ ಕರೀಕಲ್ಲಿನ ಕೃಷ್ಣ ಮೂರುತಿಯು ಸ್ಥಾಪಿಸಲ್ಪಟ್ಟಿತ್ತು. ಅದರಂತೆ ಸರ್ವವಿದ್ಯಾ ವಿಶಾರದಳಾದ ಸರಸ್ವತಿಯ ವೀಣಾಪಾಣಿಯಾದ ಶ್ವೇತವಿಗ್ರಹವೂ, ಕೆಂಪು ಕಮಲದ ಮೇಲೆ ನಿಂತಿದ್ದ ಸಕಲ ಸೌಭಾಗ್ಯದಾಯಿನಿಯಾದ ಮಹಾಲಕ್ಷ್ಮಿಯ ಪೀತ ವಿಗ್ರಹವೂ ಪಕ್ಕೊತ್ತಟ್ಟಿಗೆ ನಿಲ್ಲಿಸಲ್ಪಟ್ಟಿದ್ದವು. ಇವಲ್ಲದೆ ಬೇರೆ ಹಲವು ದೇವ-ದೇವತೆಗಳ ಸಣ್ಣ ಪುಟ್ಟ-ಚಿಕ್ಕದೊಡ್ಡ ತರತರದ ಬಣ್ಣಗಳ ವಿಗ್ರಹಗಳು ಅಲ್ಲಲ್ಲಿ ಸ್ಥಾಪಿಸಲ್ಪಟ್ಟಿದ್ದರಿಂದ ಆ ಶಕ್ತಿಮಯಿಯ ನಿವಾಸವು ಯವನ ಬಾದಶಹನರಾಣಿಯ ಜನಾನದಂತೆ ಕೊಂಚವೂ ಕಾಣುತ್ತಿದ್ದಿಲ್ಲ. ಅದು ಹಿಂದೂ ರಾಜರ ಪ್ರಮೋದನಿಕೇತನದಂತೆ ಅದನ್ನು ನೋಡುವ ನವ ತರುಣರಿಗೆ ಒಮ್ಮೆಲೆ ಭಾಸವಾಗುತ್ತಿದ್ದಂತೆ, ದೇವ-ದೇವತೆಗಳ ಅಖಂಡ ವಾಸಸ್ಥಳವೋ ಏನೋ ಎಂಬಂತೆ ದಿನ ಹೋದ ಭಾವಿಕ ಹಿಂದುಗಳು, ಆ ಉಪವನವನ್ನು ನೋಡಿ ಭಾವಿಸುತ್ತಿದ್ದರು.

ಮಧುಮಾಸದ ಪೂರ್ಣಿಮೆಯ ದಿನದ ಸಂಧ್ಯಾಸಮಯವು; ಅಖಂಡ ಚಂದ್ರಮನು ಹೊಸ ಹುರುಪಿನಿಂದ ಮನಸ್ಸಿನಲ್ಲಿ ನಗುತ್ತ ತನ್ನ

ಸ್ವಚ್ಛವಾದ ಕಿರಣಗಳನ್ನು ನಮ್ಮ ಶಕ್ತಿಮಯಿಯು ಆ ಉಪವನದ ಮೇಲೆ ಕೆಡವುತ್ತ ಸಾವಕಾಶವಾಗಿ ದಾರಿಯನ್ನು ಕ್ರಮಿಸುತ್ತಿದ್ದನು. ಉದ್ಯಾನದೊಳಗಿನ ಕಾರಂಜಿಗಳಿಂದ ಚಿಮ್ಮುವ ನೀರಿನ ಝುರ್ ಝುರ್ ಎಂಬ ಇಂಪಾದ ಸಪ್ಪಳವೂ, ಮಂದವಾಯುವಿನಿಂದ ಅಲ್ಲಾಡುವ ಗಿಡ-ಬಳ್ಳಿಗಳ, ಎಲೆ-ಟೊಂಗೆಗಳ ಸಣ್ಣ ಪುಟ್ಟ ಸಪ್ಪಳವೂ, ನದೀಪ್ರವಾಹದ ಮೃದುಮಧುರವಾದ ಸಪ್ಪಳದೊಡನೆ ಬೆರೆತು ಆ ಪುಷ್ಪವಾಟಿಕೆಯಲ್ಲೆಲ್ಲ ಸುಮನೋಹರವಾದ ಸಂಗೀತದ ಇಂಪಾದ ನಾದವನ್ನು ಆ ಸಂಧ್ಯಾಕಾಲದಲ್ಲಿ ಉಂಟು ಮಾಡಿದ್ದವು. ಅಂಥ ಆ ಅತ್ಯಂತ ಮನೋಹರವಾದ ವೇಳೆಯಲ್ಲಿ ಆ ಉಪವನದೊಳಗಿನ ಒಂದು ಸುಶೋಭಿತವಾದ ಆಸನದ ಮೇಲೆ ಕುಳಿತು ಮನಸ್ಸನ್ನು ರಮಿಸುತ್ತಿದ್ದ ಶಕ್ತಿಮಯಿಯು ಅತ್ಯಂತ ವ್ಯಾಕುಲಭಾವದಿಂದ—"ಗಣೇಶದೇವನನ್ನು ಬಾದಶಹನು ಗಲ್ಲಿಗೇರಿಸಬೇಕೆಂದಿರುವನೇ? ಛೀ, ಮೂರ್ಖ-ಯವನಾ, ಈ ಶಕ್ತಿಮಯಿಯು ದೇಹದಲ್ಲಿ ಪ್ರಾಣವಿರುವವರೆಗೆ ಆ ಕೃತಿಯು ನಿನ್ನಿಂದೆಂದಿಗೂ ಆಗದು. ಹೇಳಿಕೇಳಿ ನಾನು ಹೆಂಗಸು; "ಹೆಂಗಸರ ಬುದ್ಧಿ ಮೊಣಕಾಲಕೆಳಗೆ" ಎಂಬ ಮಾನ್ಯೋಕ್ತಿಯು ಈಗ ನನಗೆ ದಿಟವಾಗಿ ತೋರಿ ಬಂತು. ನಾನು ಆ ಸನ್ಯಾಸಿನಿಯ ಮಾತು ಕೇಳಿ, ಅಂದೇ ಈ ಸೇಡಿನ ಪ್ರಯಾಸದಿಂದ ಹುಸು ಪರಾಙ್ಮುಖಳಾಗಿದ್ದರೆ, ಬಾಲ್ಯ ಸ್ನೇಹಿತನ-ಗಣೇಶದೇವನ-ಮೇಲೆ ಈ ಘೋರ ಪ್ರಸಂಗವು ಎಂದಿಗೂ ಬರುತ್ತಿದ್ದಿಲ್ಲವಲ್ಲ? ಆದರೆ ಮಿಂಚಿ ಹೋದ ಮಾತಿಗೆ ಈಗ ಚಿಂತಿಸಿ ಫಲವೇನು? ಆದರೆ ನಿರುಪಾಯವೆಂದು ತಿಳಿದು ಸುಮ್ಮನೆ ಕೂಡ್ರುವದು ಈ ಶಕ್ತಿಮಯಿಯಿಂದಾದೀತೇ? ಎಂದಿಗೂ ಆಗಲಿಕ್ಕಿಲ್ಲ. ಮಿತಿಮೀರಿ ಹೆಣಗಿ, ಮಾಡಬಾರದ ಹಲವು ಸಾಹಸಗಳನ್ನು ಮಾಡಿ, ಗಣೇಶದೇವನನ್ನು ಬಂಧಮುಕ್ತ ಮಾಡಿಸಿದೆನೆಂದರೆ, ನನ್ನ ಜೀವಿತದ ಇತಿ ಕರ್ತವ್ಯವಾಯಿತೆಂದು ನಾನು ಬಗೆಯುತ್ತೇನೆ.

ದೇವಾ, ಯಾವ ಕ್ಷುಲ್ಲಕ ಬಡಕನ್ನಿಕೆಗೆ ವಂಗೇಶ್ವರಿಯಂಥ ಅತ್ಯುಚ್ಚ ಪದವಿಯನ್ನು ನೀನು ಅನುಗ್ರಹಿಸಿರುವಿಯೋ, ಇಂಥ ನನ್ನನ್ನು ಆಕೆಯ ಬಾಲ್ಯ ಸ್ನೇಹಿತನಾದ ಗಣೇಶದೇವನು ಕಿಂಚಿತ್ತಾದರೂ ಆದರಿಸಿದ್ದರೆ, ನಾನು ಈ ಶ್ರೇಷ್ಠ ಪದವಿಗಿಂತ ಹೆಚ್ಚು ಸಮಾಧಾನಹೊಂದುತ್ತಿದ್ದೆನಲ್ಲ!'' ಎಂದುಹಲವು ಬಗೆಯಾಗಿ ಮನಸ್ಸಿನಲ್ಲಿ ಯೋಚಿಸುತ್ತ ಕುಳಿತಿದ್ದಳು. ಅಷ್ಟರಲ್ಲಿ ಗಾಯಸುದ್ದೀನನು ಶಕ್ತಿಮಯಿಯ ಕನ್ಯೆಯನ್ನು ಎತ್ತಿ ಮುದ್ದಿಡುತ್ತ ಆ ಬಾಲಿಕೆಯ ತೊದಲು ನುಡಿಗಳನ್ನು ಕೇಳುತ್ತ ಸಾವಕಾಶವಾಗಿ ಶಕ್ತಿಮಯಿಯ ಬಳಿಗೆ ಬಂದನು. ಆಗ ಶಕ್ತಿಮಯಿಯ ಲಕ್ಷ್ಯವು ಅವನ ಕಡೆಗೆ ಇದ್ದಿಲ್ಲ. ಅವಳ ಮನಸ್ಸು ಯೋಚನೆಗಳಿಂದ ಆವರಿಸಿತ್ತು. ಎಂದೂ ಈ ಪರಿ ಚಿಂತಾಯುಕ್ತಳಾಗದ ಶಕ್ತಿಯನ್ನು ಈ ದಿವಸ ಚಿಂತಾಸಮುದ್ರದಲ್ಲಿ ಮುಳುಗಿರುವದನ್ನು ಕಂಡು ಗಾಯಸುದ್ದೀನನು ಪರಮಾಶ್ಚರ್ಯಚಕಿತನಾದನು. ಆದರೆ ಅವನು ನೆಟ್ಟಗೆ ಅವಳ ಹತ್ತರಕ್ಕೆ ಒಮ್ಮೆಲೆ ಬರಲಿಲ್ಲ. ತುಸು ಹಿಂದಕ್ಕೆ ಸರಿದು ಒತ್ತಟ್ಟಿಗೆ ನಿಂತು, ಆಕೆಯ ಬಾಯಿಂದ ಯಾವಾದರೂ ಶಬ್ದಗಳು ಹೊರಡುತ್ತವೋ ಏನೋ ಎಂಬದನ್ನು ಕೇಳುವದಕ್ಕಾಗಿ ನಿರೀಕ್ಷಿಸಹತ್ತಿದನು. ಆದರೆ ಹತ್ತರ ಹುಡುಗರಿದ್ದವೆಂದರೆ, ಅವು ಎಂಥ ದೃಢ ಮನಸ್ಸಿನವನ ತಲ್ಲೀನತೆಯನ್ನೂ, ಮೌನವನ್ನೂ, ಏಕಾಗ್ರವನ್ನೂ ಕೂಡಲೆ ಚ್ಯುತಿ ಹೊಂದಿಸಿ ಬಿಡುತ್ತವೆಂಬದು ಅನುಭವಸಿದ್ಧ ಸಂಗತಿಯು. ಇದರಂತೆ ಗಾಯಸುದ್ದೀನನ ಬಳಿಯಲ್ಲಿದ್ದ ಆ ಚಿಕ್ಕ ಮಗುವು ತಂದೆಯ ಏಕಾಗ್ರತೆಯನ್ನು ಭಂಗಗೊಳಿಸಿತು. ಮಗಳ ಆ ಶಬ್ದದಿಂದ ಗಾಯಸುದ್ದೀನನಂತೆ ಶಕ್ತಿಮಯಿಯ ಚಿತ್ತವೂ ಏಕಾಗ್ರತೆಯನ್ನು ಬಿಟ್ಟುಗೊಡಲು, ಅವಳು ಮಗಳ ಕಡೆಗೆ ಹೊರಳಿ ನೋಡಿದಳು. ಆಗ ಆಕೆಗೆ ಅವಳ ಮಗಳೂ, ಗಾಯಸುದ್ದೀನನೂ ಒಮ್ಮೆಲೆ ಕಣ್ಣಿಗೆ ಬಿದ್ದರು. ಮಗುವು ಓಡುತ್ತ ಬಂದು ತಾಯಿಯ ತೊಡೆಯ ಮೇಲೆ ಕುಳಿತಿತು!

ಕೂಡಲೆ ಗಾಯಸುದ್ದೀನನು ಮುಂದುವರಿದು ಬಂದು, ಶಕ್ತಿಯ ಬಳಿಯ ಸಂಗಮರವರೀ ಕಲ್ಲಿನ ಆಸನದ ಮೇಲೆ ಕುಳಿತು,—"ಎಷ್ಟು ಯೋಚಿಸುವದು? ಪ್ರಿಯೇ, ಈ ವಂಗೇಶ್ವರನು ತನ್ನ ಹೃದಯ, ಪ್ರಾಣ, ಮನಸ್ಸು ಹಾಗು ಇಡಿ ರಾಜ್ಯ ಇವೆಲ್ಲವುಗಳನ್ನೂ ನಿನಗೆ ಒಪ್ಪಿಸಿ, ದಾಸಾನುದಾಸನಾಗಿ ನಡಕೊಳ್ಳುತ್ತಿದ್ದರೂ, ನೀನು ಅದಾವ ವಿಷಯಕ್ಕೆ ಇಷ್ಟು ಚಿಂತಿಸುತ್ತೀ? ಎಲ್ಲ ಶತ್ರುಗಳನ್ನು ದಂಡಿಸಿ, ಅಣ್ಣ-ತಮ್ಮಂದಿರನ್ನು ಕೊಲ್ಲಿಸಿ, ರಾಜ್ಯವನ್ನು ನಿನಗೋಸ್ಕರ -ನಿನ್ನ ಸಂತತಿಗೋಸ್ಕರ- ನಿಬಾ೯ಧವಾಗಿ ಮಾಡಿಟ್ಟಿರಲು, ಇಂಥ ಸುಸಂಧಿಯಲ್ಲಿ ನೀನು ವ್ಯಗ್ರಚಿತ್ತಳಾಗಿರುವದು ಸರಿಯೇ?" ಎಂದು ಪ್ರಶ್ನೆ ಮಾಡಿದನು.

ಗಾಯಸುದ್ದೀನನ ಈ ಮಾತುಗಳಿಂದ ಶಕ್ತಿಮಯಿಯ ಮನಸ್ಸು ಪ್ರಮೋದ ಹೊಂದಲಿಲ್ಲ. ಅವಳು ಅವನ ಮುಖದ ಕಡೆಗೆ ಕೇವಲ ತುಚ್ಛ ಭಾವದಿಂದ ನೋಡುತ್ತ—ಅಹಹ! ಎಂಥ ನಿಷ್ಠುರರು ನೀವು? ನಿಮ್ಮ ಮನಸ್ಸು ಇಷ್ಟು ಕಠಿಣವಿದ್ದೀತೆಂದು ನಾನು ತಿಳಿದಿದ್ದಿಲ್ಲ; ನಿಮ್ಮ ಯವನ ಜಾತಿಯಲ್ಲಿ ಇದಕ್ಕೇ ಪೌರುಷವೆನ್ನುತ್ತಿರುವರೋ ಏನು ನಾನರಿಯೆನು. ಯಾಕಂದರೆ, ನೀವು ಸ್ವತಃ ನಿಮ್ಮ ಏಳು ಜನ ಅಣ್ಣ-ತಮ್ಮಂದಿರನ್ನು ಕೊಲ್ಲಿಸಿದಿರಿ; ಕುಮಾರಸಾಹೇಬುದ್ದೀನನನ್ನು ಕೊಲ್ಲಿಸಬೇಕೆಂದಿದ್ದೀರಿ; ಅಲ್ಲದೆ, ಪಾಪ! ಆ ಗಣೇಶದೇವನನ್ನು, ಯಾವನು ನಿಮಗೆ ನಿಮ್ಮ ಅತ್ಯಂತ ಕಠಿಣ ಪ್ರಸಂಗದಲ್ಲಿ ತನ್ನ ರಾಜ್ಯ, ಸಂಪತ್ತು, ಜೀವ ಇವುಗಳ ಕಡೆಗೆ ಸಹ ನೋಡದೆ ಸಹಾಯ ಮಾಡಿರುವನೋ ಅವನನ್ನೂ, ಈಗ ಪಾಶಕ್ಕೇರಿಸಬೇಕೆಂದಿರುವಿರಷ್ಟೇ? ಮತ್ತು ನೀವು ಬಾಯಿಲೆ ಹೇಳುವದೇನಂದರೆ, "ಇದೆಲ್ಲ ಅನಾಹುತವನ್ನು ನಿನಗೋಸ್ಕರ ಮಾಡಬೇಕಾಯಿತೆಂದು." ಬೇಡ, ಎಂದಿಗೂ ಬೇಡ; ನಿಮ್ಮ ಸ್ವಜನ ರಕ್ತಪಾತದಿಂದ ಅಪವಿತ್ರವಾದ

ರಾಜ್ಯವು ನನಗೂ ನನ್ನ ಮಕ್ಕಳಿಗೂ ಎಂದೆಂದಿಗೂ ಬೇಡ. ಹುಟ್ಟಿಸಿದ ದೇವರು ಹುಲ್ಲು ಮೇಯಿಸಲಾರನು; ನನ್ನ ಮಕ್ಕಳ ಸಲುವಾಗಿಯೆಂದು ಯಾವನು ಈ ಹೃದಯವಿದಾರಕ ಕೃತ್ಯಗಳನ್ನು ಮಾಡಿರುವನೋ ಅವನು ಎಂದಿಗೂ ಸತ್ಪುರುಷನಾಗಲಾರನು; ಈ ಕೃತಿಗಳೇ ಅವನಲ್ಲಿಯ ಕಾಪುರುಷತ್ವವನ್ನು ಎತ್ತಿ ಎಣಿಸುತ್ತಲಿವೆ, ಎಂದಳು.

ಗಾಯ—ನಿಮ್ಮ ಹಿಂದೂ ವೀರರ ಶ್ರೇಷ್ಠತ್ವವನ್ನೂ, ಸೌಜನ್ಯವನ್ನೂ ಎಷ್ಟೋ ಸಾರೆ ನೋಡಿದ್ದಾಗಿದೆ ಬಿಡು. ಅಂಥ ಸುಜನರು ನಿಮ್ಮ ಜಾತಿಯಲ್ಲಿದ್ದರೆ, ನಿನ್ನಂಥ ಸುರತ್ನದ ಬೆಲೆಯು ಅವರಿಗೆ ತಿಳಿಯುತ್ತಿದ್ದಿಲ್ಲವೇನು? ಈಗ ನೀನು ನನ್ನ ಯಾವ ಕೃತಿಗಳಿಗೆ ಕಾಪುರುಷಲಕ್ಷಣಗಳೆಂದೆನ್ನುವಿಯೋ ಇಂಥ ಸಾಹಸವನ್ನಾದರೂ ಮಾಡಿ ನಿಮ್ಮ ಯಾವನೊಬ್ಬ ಹಿಂದುವು ನಿನ್ನನ್ನು ಅಂಗೀಕರಿಸಿದ್ದರೆ, ನಾನು ಅವನನ್ನು ಎಂದೂ ಕಾಪುರುಷನೆಂದು ತಿಳಿಯದೆ ಸತ್ಪುರುಷನೆಂದು ಭಾವಿಸಿ, ಮನ್ನಿಸುತ್ತಿದ್ದೆನು. ಆ ಹೇಡಿ ಗಣೇಶದೇವನು ತನ್ನ ತಾಯಿಯ ಯಃಕಶ್ಚಿತ್ ಆಜ್ಞೋಲ್ಲಂಘನದ ಹೆದರಿಕೆಗಾಗಿ ನಿನ್ನಂಥ ಅತ್ಯಂತ ಪ್ರೇಮಪುತ್ಥಳಿಯನ್ನು ಅವಹೇಲನಗೊಳಿಸಿ ತ್ಯಜಿಸಿದ್ದನ್ನು ನೀನು ಇಷ್ಟರಲ್ಲಿಯೇ ಮರೆತು ಬಿಟ್ಟೆಯೇನು?

ಸುಲ್ತಾನನ ಈ ಮಾತಿನ ಪೆಟ್ಟು ಅತ್ಯಂತ ಗರ್ವಿತ ಸ್ವಭಾವದ ಶಕ್ತಿಮಯಿಯ ಹೃದಯಕ್ಕೆ ತೀಕ್ಷ್ಣಶಲ್ಯದಂತೆ ಆಘಾತವಾಯಿತು. ಆಗ ಕ್ರೋಧದಿಂದ ಶಕ್ತಿಯ ಸಾಭಾವಿಕವಾದ ಗೌರಕಾಯವು ಕೆಂಡದಂತೆ ನಿಗಿನಿಗಿ ಕೆಂಪಾಗಹತ್ತಿತು. ಗಣೇಶದೇವನಿಂದ ಹೊಂದಿದ್ದ ಪುರಾತನ ಅಪಮಾನದಲ್ಲಿ ಗಾಯಸುದ್ದೀನನಿಂದನುಭವಿಸಬೇಕಾಗಿದ್ದ ಈ ನೂತನ ಅವಮಾನವು ಬೆರೆಯಲು, ಸಿಟ್ಟಿನಿಂದ ಆಕೆಯ ಸರ್ವಾಂಗವು ಬೆಯ್ಯಲಾರಂಭಿಸಿತು. ಆಗ ಅವಳು ಗಾಯಸುದ್ದೀನನಿಗೆ ಉತ್ತರ ಕೊಡಲಸಮರ್ಥಳಾದಳು. ಅವಳ ಈ ಪ್ರಕೃತ ಸ್ಥಿತಿಗೆ ಗಣೇಶದೇ

ವನೇ ಕಾರಣನಾದ್ದರಿಂದ ಅವನನ್ನು ಅವಳು ಅಂತರಂಗದಲ್ಲಿ ಬಹಳ ಶಪಿಸತೊಡಗಿದಳು.

ಮುಂಭಾಗದಲ್ಲಿ ಕಾರಂಜಿಯು ಒಂದೇಸವನೆ ಸುಗಂಧೋದಕವನ್ನು ಚಿಮ್ಮುತ್ತಲಿತ್ತು; ಆ ಕಾರಂಜಿಯಿಂದ ಎತ್ತರದ ಮೇಲೆ ಪುಟಿಯುವ ತುಷಾರಗಳೊಳಗಿಂದ ಎದುರಿಗಿನ ಆಕಾಶದೊಳಗಿನ ತಾರೆಗಳು ಸುಮನೋಹರವಾಗಿ ಮಿನುಗುತ್ತಲಿದ್ದವು; ಚಂದ್ರನಂತೂ ಪೂರ್ಣ ಸೊಬಗಿನಿಂದ ತನ್ನ ಗರ್ವಭಾವವನ್ನು ನೋಡುವವರಿಗೆ ವ್ಯಕ್ತಪಡಿಸುತ್ತ ಧೀರವೇಗದಿಂದ ಸಾಗಿದ್ದನು; ಆದರೆ ನೆತ್ತರಗಣ್ಣಿನ ಶಕ್ತಿಮಯಿಯು ಆ ಉಪವನದೊಳಗಿನ ಈ ಎಲ್ಲ ಚಮತ್ಕಾರಗಳನ್ನು ನೋಡಿಯೂ ನೋಡಲಿಲ್ಲವೆಂಬಂತೆ ತನ್ನ ಓಷ್ಠಾಧರಗಳನ್ನು ಒಂದಕ್ಕೊಂದು ಸಲ್ಲಗ್ನದಿಂದ ಗಟ್ಟಿಯಾಗಿ ಹಿಡಿದು, ಅವನತ ಮೊಗದಿಂದ ಹತ್ತರದಲ್ಲಿದ್ದ ಒಂದು ಹೂಬಳ್ಳಿಯ ಹೂಗಳನ್ನು ಹರಿದು ಭಿನ್ನ ಭಿನ್ನವಾಗಿ ಮಾಡಿ ಚೆಲ್ಲುತ್ತ ಕುಳಿತಿದ್ದಳು.

ಸುಲ್ತಾನನು ಚಂದ್ರನ ಕಿರಣಗಳಲ್ಲಿ ಕ್ರೋಧೋಜ್ವಲವಾಗಿ ಕಾಣುವ ಶಕ್ತಿಯ ಮುಖದ ಕಡೆಗೆ ಕೆಲಹೊತ್ತು ಟಕಮಕನೋಡಿ—"ಪ್ರಿಯೆ, ಹೀಗೇಕೆ ಸಿಟ್ಟಾಗಿರುವೆ? ಬಹು ಚಿಂತಿಸಬೇಡ ಬಿಡು; ನಾನಿರುವವರೆಗೆ ನೀನು ಯತ್ಕಿಂಚಿತ್ತಾದರೂ ಚಿಂತೆ ಪಡುವ ಕಾರಣವಿಲ್ಲ; ಇಷ್ಟೇ ಅಲ್ಲ, ನನ್ನ ಪಶ್ಚಾತ್ತಾದರೂ ನಿನಗೆ ಯಾವ ಪ್ರಕಾರದ ಕ್ಲೇಶವೂ ಉಂಟಾಗದಂತೆ ನಾನು ನನ್ನ ರಾಜ್ಯದ ವ್ಯವಸ್ಥೆ ಮಾಡಿಟ್ಟಿರುವೆನು. ಅಂದಮೇಲೆ ಮತ್ತೆ ಯೋಚನೆಯೇ?" ಎಂದು ನುಡಿಯುತ್ತ ಸಸ್ನೇಹದಿಂದ ಅವಳನ್ನು ಬಿಗಿದಪ್ಪಿ, ಚುಂಬಿಸಿದನು.

ಗಾಯುಸುದ್ದೀನನೊಡನೆ ಶಕ್ತಿಯ ವಿವಾಹವಾಗಿ ಇಂದಿಗೆ ಐದು ವರ್ಷಗಳಾಗಿದ್ದವು. ಈ ಐದು ವರ್ಷಗಳಲ್ಲಿ ಅವರೀರ್ವರಲ್ಲಿ

ಎಷ್ಟೋ ಸಾರೆ ಪ್ರೇಮಕಲಹಗಳಾಗಿದ್ದವು. ಆದರೆ ಇಂದಿನ ಅವರ ಆ ಪ್ರೇಮಕಲಹವು ವಿಕೋಪಕ್ಕೆ ಹೋಯಿತು. ಶಕ್ತಿಮಯಿಯ ಮನಸ್ಸು ಗಾಯಸುದ್ದೀನನ ವಿಷಯದಲ್ಲಿ ಇಂದಿನಷ್ಟು ಅವಿಶ್ವಾಸವನ್ನೆಂದೂ ವಹಿಸಿದ್ದಿಲ್ಲ. ಆಗ ಅವಳು ಬಾಲ್ಯಸಖನಾದ ಗಣೇಶದೇವನ ಪ್ರಾಣಹರಣವಾಗುವದನ್ನು ಕಣ್ಣಾರೆ ನೋಡುತ್ತ ಈ ದುಷ್ಟ ಯವನನ ಸಹವಾಸದಲ್ಲಿರುವದಕ್ಕಿಂತ ಆತನ ಪ್ರಾಣರಕ್ಷಣಕ್ಕಾಗಿ ನಾನು ನನ್ನ ಜೀವವನ್ನು ಕಳಕೊಳ್ಳುವದೇ ಲೇಸೆಂದು ಮನಸ್ಸಿನಲ್ಲಿ ನಿರ್ಧರಿಸಿಕ್ಕೊಂಡಳು.

ಇಷ್ಟರಲ್ಲಿ ಶಕ್ತಿಮಯಿಯ ಆ ಚಿಕ್ಕ ಮಗುವು ಆಕೆಯ ತೊಡೆಯಿಂದ ಇಳಿದು ತಂದೆಯ ತೊಡೆಯ ಮೇಲೆ ಕುಳಿತು ತಾಯಿಯ ಕಡೆಗೆ ನೋಡುತ್ತ—ಅವ್ವಾ, ನೀನು ಬಹಳ ದುಷ್ಟಳು. ಆದ್ದರಿಂದ ನಾನು ನಿನ್ನ ಬಳಿಗೆ ಬರುವದಿಲ್ಲ, ಎಂದು ನುಡಿಯಿತು.

ಆ ಹಸುಗೂಸು ಅಕಲ್ಪಿತವಾಗಿ ನುಡಿದ ನುಡಿಯ ಪರಿಣಾಮವು ಗಾಯಸುದ್ದೀನನಲ್ಲಿ ವಿಶೇಷವಾಗಿ ಆಗಲಿಲ್ಲ; ಆದರೆ ಶಕ್ತಿಯು ಅದನ್ನು ಕೇಳಿ ಮನದಲ್ಲಿ ಬಹಳ ನೊಂದುಕೊಂಡಳು. ಆಕೆಯು ಮನಸಿನಲ್ಲಿ—ದೇವಾ, ಈ ಕೂಸಿಗೆ ಕೂಡ ನನ್ನ ಸ್ವಭಾವವು ದುಷ್ಟವಾಗಿ ತೋರಿತಲ್ಲವೆ! ಥೂ, ಇಂಥ ನನ್ನ ಜೀವಿತವನ್ನು ಇಟ್ಟುಕೊಂಡು ಬಾಳುವದಕ್ಕಿಂತ ನಿನ್ನ ನಾಮ ಸ್ಮರಣವನ್ನು ಮಾಡುತ್ತ ದೇಹಾವಸಾನ ಮಾಡಿಕೊಳ್ಳುವದೇ ವಿಹಿತವಾಗಿ ನನಗೆ ತೋರುತ್ತದೆ, ಎಂದು ಬಗೆದು ದೇವರನ್ನು ಅನನ್ಯಭಾವದಿಂದ ಪ್ರಾರ್ಥಿಸಿದಳು.

ಗಾಯಸುದ್ದೀನನು ಎಡಬಲದ ಗಿಡಬಳ್ಳಿಗಳೊಳಗಿನ ಹೂಗಳನ್ನು ಆ ಕೂಸಿಗೆ ಹರಿದು ಕೊಡುತ್ತ ಅದರೊಡನೆ ಆನಂದದಿಂದ ಮಾತಾಡುತ್ತ, ಕೆಲೆಯುತ್ತ ಕುಳಿತಿದ್ದನು. ಕೆಲಹೊತ್ತಿನ ಮೇಲೆ ಅವರೆಲ್ಲರೂ ಅಲ್ಲಿಂದೆದ್ದು ಮಂದಿರದ ಕಡೆಗೆ ನಡೆದರು. ಆಗ ಸಮೀಪದ

ಒಂದು ಹೂಬಳ್ಳಿಯ ಮಂಟಪದಲ್ಲಿ ಒಂದು ವ್ಯಕ್ತಿಯು ಅಡಗಿಕೊಂಡು ಕುಳಿತು ಶಕ್ತಿಮಯಿ—ಗಾಯಸುದ್ದೀನ ಇವರಾಡುವ ಮಾತುಗಳನ್ನು ಲಕ್ಷ್ಯಗೊಟ್ಟು ಆಲಿಸುತ್ತಿತ್ತು. ಶಕ್ತಿಮಯಿಯು ಈ ದಿವಸ ವಿಶೇಷವಾಗಿ ಚಿಂತಾಕ್ರಾಂತಳಾದ್ದರಿಂದ ಆಕೆಯ ದೃಷ್ಟಿಯು ಆ ವ್ಯಕ್ತಿಯ ಕಡೆಗೆ ಹೋಗಲಿಲ್ಲ. ಇಲ್ಲದಿದ್ದರೆ ಅವಳು ಆ ವ್ಯಕ್ತಿಯ ಇರವನ್ನು ಕೂಡಲೆ ಕಂಡುಹಿಡಿದು, ಆ ಏಕಾಂತ ಸ್ಥಳದಲ್ಲಿ ಹೀಗೆ ಗುಪ್ತವಾಗಿ ಬಂದದ್ದಕ್ಕಾಗಿ ಆ ವ್ಯಕ್ತಿಗೆ ತಕ್ಕಶಿಕ್ಷೆಯನ್ನು ವಿಧಿಸಿಬಿಡುತ್ತಿದ್ದಳು. ಗಾಯಸುದ್ದೀನನು ಹೇಳಿಕೇಳಿ ತರುಣ ಯುವನ ಬಾದಶಹನು, ಮೇಲಾಗಿ ಪ್ರಿಯಸಖಿಯನ್ನು ರಮಿಸುವದರಲ್ಲಿ ತೊಡಗಿದ್ದವನು; ಅಂದಬಳಿಕ ಅವನ ನಜರಿಗೆ ಆ ಕ್ಷುಲ್ಲಕ ಸಂಗತಿಯು ಹ್ಯಾಗೆ ಗೋಚರವಾಗಬೇಕು?

ವಾಚಕರೇ, ಆ ಉದ್ಯಾನದಲ್ಲಿ ಆ ಗಿಡದ ಕವಿನೆಳಲಲ್ಲಿ ಹೀಗೆ ಅಡಗಿಕೊಂಡು ಕುಳಿತ ಆ ವಿಲಕ್ಷಣ ವ್ಯಕ್ತಿಯು ಯಾರಾಗಿರಬಹುದು? ಹಾಗು ಬಾದಶಹನ ಆ ಏಕಾಂತ ಸ್ಥಾನದಲ್ಲಿ ಅಡಗಿ ಕೂಡ್ರುವ ಅವನ ಉದ್ದೇಶವಾದರೂ ಏನಿರಬಹುದು? ಅವನು ಯಾರು, ಅವನು ಅಲ್ಲಿ ಏಕೆ ಅಡಗಿದ್ದನು ಎಂಬ ಸಂಗತಿಯನ್ನು ತಿಳಿಯಬೇಕಾಗಿದ್ದರೆ, ಅಗೋ ಅತ್ತನೋಡಿರಿ, ಆ ಕವಿನೆಳಲಿನಿಂದ ಹೊರಬೀಳುವ ಆ ವ್ಯಕ್ತಿಯ ಕಡೆಗೆ ನೋಡಿರಿ. ಅಕೋ, ಅವನೇನೇನೋ ತನ್ನಲ್ಲಿ ಮಾತಾಡ ಹತ್ತಿದ್ದಾನೆ. ಅದನ್ನು ಲಕ್ಷ್ಯಗೊಟ್ಟು ಕೇಳಿರಿ:—

"ಭಲೆ, ಶಕ್ತಿಮಯೀ, ಇದ್ದರೆ ನಿನ್ನಂಥ ಹೆಣ್ಣೇ ಇರಬೇಕುನೋಡು. ಪ್ರತ್ಯಕ್ಷ ವಂಗೇಶ್ವರನು ಎದುರಿಗೆ ಕುಳಿತಿದ್ದರೂ ನೀನು ಅವನ ದುರ್ಗುಣಗಳನ್ನು ಸ್ವಲ್ಪವೂ ಸಂಕೋಚವಿಲ್ಲದೆ ಅವನಿಗೆ ಹೇಳಿಬಿಟ್ಟಿಯಲ್ಲ? ವಾಹವ್ವಾ, ಸಾಹಸೀ, ಶಕ್ತಿಮಯೀ; ನಿನ್ನ ಅಧಿಕಾರಯುಕ್ತ ವಾಣಿಗೆ ಅದಾವ ಮೀಸೆಹೊತ್ತ ಗಂಡಸಿನಿಂದ ಮಾನ್ಯತೆಯು ದೊರೆ

ಯಲಿಕ್ಕಿಲ್ಲ? ಆದರೆ ಶಕ್ತೀ, ಎಷ್ಟೇ ಆದರೂ ನೀನು ಹೆಂಗಸು; ಈ ಕುತುಬನು ನಿನಗೆ ಮೀರಿದ ಸಾಹಸಿಯೆಂಬದು ತುಸು ದಿವಸಗಳಲ್ಲಿಯೇ ನಿನ್ನ ನಿದರ್ಶನಕ್ಕೆ ಬರದೆ ಇರಲಿಕ್ಕಿಲ್ಲ.

"ಶಕ್ತಿಮಯೀ, ಎಷ್ಟೇ ಸಾಹಸಮಾಡು, ಆದರೆ ಗಣೇಶದೇವನನ್ನು ಈ ಕುತುಬನ ಜಾಲದಿಂದ ಪ್ರಾಣಸಹಿತವಾಗಿ ನೀನು ಎಂದೂ ಬಿಡಿಸಲಾರೆ. ಇದು ಪಣತೊಡಬಹುದಾದ ಸಂಗತಿಯೆಂದು ತಿಳಿ. ಇನ್ನು ಹ್ಯಾಗೂ ನೀನು ಅವನ ಬಿಡುಗಡೆಯ ವಿಷಯವಾಗಿ ಮಾಡಬಾರದ ಪ್ರಯತ್ನಗಳನ್ನು ಕೂಡಾ ಮಾಡಹತ್ತುತ್ತೀ. ಆದರೆ ಆ ನಿನ್ನ ಸಾಹಸದ ಉಪಯೋಗವನ್ನು ಬೇರೆರೀತಿಯಾಗಿ ಉಪಯೋಗಿಸಿಕೊಂಡು, ಗಾಯಸುದ್ದೀನನ ಮನಸ್ಸಿನಲ್ಲಿ ನಿನ್ನ ವಿಷಯವಾಗಿ ಸಂಶಯ ಪಿಶಾಚವನ್ನು ಹೋಗಿಸಿ, ಆ ನಿನ್ನ ಹಂಚಿಕೆಯಿಂದಲೇ ಮೊದಲು ನಿನಗೆ, ಬಳಿಕ ಗಣೇಶದೇವನಿಗೆ ಮರಣವೊದಗುವಂತೆ ಆಟಹೂಡುವೆನು. ನಿಮ್ಮಿಬ್ಬರ ಅಂತವಾದ ಮರುದಿನವೇ ಈ ಕುತುಬನು ಗಾಯಸುದ್ದೀನನ ವಿಷಯದ ಶೇಷಕಾರ್ಯವನ್ನು ಮುಗಿಸಿಕೊಂಡು, ವಂಗೇಶ್ವರನ ಪೀಠವನ್ನು ಆರೋಹಿಸಿದನೆಂದು ಖಂಡಿತವಾಗಿ ತಿಳಿದುಕೋ. ಈ ದೇಹವಿರುವವರೆಗೆ ಒಂದಿಲ್ಲೊಂದು ದಿನವಾದರೂ ನಾನು ಈ ವಂಗರಾಜ್ಯಕ್ಕೆ ಅಧಿಪತಿಯಾಗಿ ಮೆರೆಯಬೇಕೆಂದಿರುತ್ತೇನೆ; ಹಾಗು ಈ ಹವ್ಯಾಸಕ್ಕಾಗಿಯೇ ನಾನು ಸೇಕಂದರಶಹನನ್ನು ಯುದ್ಧದಲ್ಲಿ ಕೊಲ್ಲಿಸಿ, ಅವನ ಉಳಿದಮಕ್ಕಳನ್ನು ಗುಪ್ತವಾಗಿ ಸಂಹರಿಸಿರುತ್ತೇನೆ."

ಹೀಗೆಕುತುಬನು ಮನಸ್ಸಿನಲ್ಲಿಯೇ ಮಾತಾಡುತ್ತ ಆ ಪುಷ್ಪವಾಟಿಕೆಯ ಗುಪ್ತಧ್ವಾರದಿಂದ ಹೊರಬಿದ್ದು ಪಟ್ಟಣದ ಒಂದು ಅಪ್ರಸಿದ್ಧ ಸಂದಿಯ ಓಣಿಯನ್ನು ಹಿಡಿದು ತನ್ನ ಮನೆಯಕಡೆಗೆ ನಡೆದನು. ದಾರಿ ನಡೆಯುತ್ತಿರುವಾಗ ಅವನ ಮನಸ್ಸು ಮೇಲಿನ ತರಹಗ ವಿಚಾ

ರಗಳಲ್ಲಿ ಸಂಪೂರ್ಣವಾಗಿ ಮಗ್ನವಾಗಿತ್ತು. ಅವನು ತನ್ನ ಮಾರ್ಗದ ಕಡೆಗೆ ಕೊಂಚವೂ ಲಕ್ಷ್ಯಗೊಟ್ಟಿದ್ದಿಲ್ಲ. ಆದರಿಂದ ಅವನು ತನ್ನ ಮನೆಗೆ ಸರಳಮಾರ್ಗದಿಂದ ಬರಲಿಲ್ಲ; ಅತ್ತಿತ್ತ ಸುತ್ತುವರೆದು ಬಹಳ ಹೊತ್ತಿಗೆ ಮನೆಗೆ ಬಂದು ಸೇರಿದನು,

ಕುತುಬನು ಹೀಗೆ ತಡವಾಗಿ ಮನೆಗೆ ಬರುವಷ್ಟರಲ್ಲಿ ಶಕ್ತಿಮಯಿ ರಾಣಿಯ ದಾಸಿಯೊಬ್ಬಳು ಕುತುಬನ ದಾರಿ ಕಾಯುತ್ತ ಅವನ ಮನೆಯಲ್ಲಿ ನಿಂತಿದ್ದಳು. ಆಗ ಅವಳು ಕುತುಬನಿಗೆ —"ಮಹಾರಾಣಿಯವರು ತಮ್ಮನ್ನು ಈಗಲೆ ಕಾಣಬೇಕೆಂದಿದ್ದಾರೆ. ಆದಷ್ಟು ಜಾಗ್ರತೆಯಾಗಿ ಹೊರಟುಬನ್ನಿರಿ" ಎಂದು ಅರಿಕೆಮಾಡಲು, "ನನ್ನ ಮನಸ್ಸಿನ ವಿಚಾರಗಳು ತೀವ್ರವೇ ಫಲದ್ರೂಪವಾಗುನಂತೆ ತೊರುತ್ತವೆ; ತಾನಾಗಿಬಂದ ಪ್ರಸಂಗವನ್ನು ಕಳಕೊಳ್ಳುವದು ಸರಿಯಲ್ಲ" ಎಂದು ಮನದಲ್ಲಿ ವಿಚಾರಿಸಿ ಕುತುಬನು ಆ ದಾದಿಯು ಬೆನ್ನತ್ತಿ ನಡೆದನು.

ಕುತುಬನು ಶಕ್ತಿಮಯಿಯು ಮಹಾಲಿಗೆ ಬಂದಾಗ ರಾತ್ರಿಯು ಪೂರ್ವಾರ್ಧವನ್ನು ದಾಟಿತ್ತು. ವಂಗೇಶ್ವರಸಂಥ ಯವನಬಾದಶಹನ ಅಂತಃಪುರದಲ್ಲಿ ಆ ನಡುರಾತ್ರಿಯಲ್ಲಿ ಕುತುಬನಂಥ ತರುಣನ ಪ್ರವೇಶವಾಗುವದೆಂದರೆ ಮುಸಲ್ಮಾನೀ ಧರ್ಮದ-ಅದೇಕೆ, ಪ್ರತಿಯೊಂದು ಧರ್ಮದ ನೀತಿನಿಯಮಗಳನ್ನು ಉಲ್ಲಂಘಿಸಿದಹಾಗಾಗುವದು ಸ್ವಾಭಾವಿಕವು. ಆದರೆ ಕುತುಬನು ಬಾದಶಹನ ಮುಖ್ಯ ಪರಾಮರ್ಶದಾತೃವಾದ್ದರಿಂದ ಅವನಿಗೆ ಬೇಕಾದಾಗ ಬೇಕಾದಲ್ಲಿಗೆ ಹೋಗಲಿಕ್ಕೆಪ್ರತಿಬಂಧವಿರಲಿಲ್ಲ. ಆದರಿಂದ ಕುತುಬನು ನೆಟ್ಟಗೆ ಹೋಗಿ ಶಕ್ತಿಮಯಿಯ ಎದುರಿಗೆ ನಿಂತನು. ಚಿಂತೆಯಿಂದ ಕಪ್ಪಿಟ್ಟ ಕುತುಬನ ಮುಖವನ್ನು ನೋಡಿ ಶಕ್ತಿಮಯಿಯು ಕ್ಷಣಹೊತ್ತು ಮನಸ್ಸಿನಲ್ಲಿ ಬೆದರಿದಳು; ಆದರೆ ಈ ಮಧ್ಯರಾತ್ರಿಯಲ್ಲಿ ನಿದ್ರೆಯಿಂದ ಎಬ್ಬಿಸಿಕೊಂಡು ಬಂದಿದ್ದರಿಂದ ಅವನ ಮೋರೆಯು ಹೀಗೆ ಕಪ್ಪಾಗಿರಬಹುದೆಂದು

ಆಕೆಯು ಭಾವಿಸಿದಳು. ಅವಳು ಕುತುಬನನ್ನು ತನ್ನ ಹಿತಕರ್ತನೆಂದು ಭಾವಿಸಿದ್ದರಿಂದ ಆಕೆಯಲ್ಲಿ ಅವನ ವಿಷಯವಾಗಿ ಬೇರೆ ಆಲೋಚನೆಯೇ ಹುಟ್ಟಲಿಲ್ಲ. ಬಳಿಕ ಅವಳು ಕುತುಬನನ್ನು ಆದರದಿಂದ ಒತ್ತಟ್ಟಿಗೆ ಕೂಡ್ರಹೇಳಿ—"ಕುತುಬ, ನಿನಗೊಂದು ಮಹತ್ವದ ಸಂಗತಿಯನ್ನು ತಿಳಿಸಿ ಆ ಬಾಬಿನಲ್ಲಿ ನಿನ್ನ ಸಹಾಯಬೇಡುವದಕ್ಕಾಗಿ ನಿನ್ನನ್ನು ಕರೆಸಿದ್ದೇನೆ. ಯಾವ ಕಾರಣದಿಂದಲೋ ಬಾದಶಹನು ಗಣೇಶದೇವನನ್ನು ಸಂಹರಿಸಿ ಬಿಡುವದನ್ನೇ ನಿಷ್ಕರ್ಷಿಸಿರುವನಷ್ಟೇ; ಆದರೆ ಗಣೇಶದೇವನು ಬಾದಶಹನಿಗೆ ಅವನ ಅತ್ಯಂತ ಸಂಕಟಕಾಲದಲ್ಲಿ ಮಿತಿಮೀರಿ ಸಹಾಯ ಮಾಡಿರುವದರಿಂದ ಅವನ ಆ ಪರೋಪಕಾರ ಕೃತಿಯ ಪ್ರತಿಫಲವೆಂದು ನಾನು ಅವನನ್ನು ಈಗ ಬಂಧಮುಕ್ತ ಮಾಡಬೇಕೆಂದಿರುತ್ತೇನೆ. ಅವನು ಬಿಡುಗಡೆಹೊಂದಿ ಹೋದ ಬಳಿಕ ಬಾದಶಹನಿಗೆ ಆ ಸಂಗತಿಯು ತಿಳಿದು ಅವನು ನನ್ನ ಮೇಲೆ ಸಿಟ್ಟಾದರೂ ಚಿಂತೆಯಿಲ್ಲ. ನಾನು ಬಾದಶಹನ ಸಮಾಧಾನವಾಗುವ ಹಾಗೆ ಹಂಚಿಕೆ ಮಾಡುವೆನು. ಆದ್ದರಿಂದ ಈಗ ನೀನು ನನಗೆ ಸಹಾಯ ಮಾಡಬೇಕಾದದ್ದೇನಂದರೆ, ಈಗಿಂದೀಗಲೇ ನೀನು ನನ್ನನ್ನು ಗಣೇಶದೇವನಿದ್ದ ಜೇಲಖಾನೆಗೆ ಕರಕೊಂಡು ಹೋಗಬೇಕು. ಅಂದರೆ ಈ ನಿನ್ನ ಉಪಕಾರವನ್ನು ಆ ಜನ್ಮ ಪರಿಯಂತವಾಗಿಯೂ ನಾನು ಮರೆಯಲಿಕ್ಕಿಲ್ಲ, ಎಂದು ನುಡಿದಳು.

ಕುತುಬನು ಊಹಿಸಿದ್ದಂತೆಯೇ ಪ್ರಸಂಗವೊದಗಿತು. ಅಂದ ಮೇಲೆ ಆ ಧೂರ್ತನು ಈ ಸುಸಂಧಿಯನ್ನು ಕಳಕೊಳ್ಳುವನೇ? ಕೂಡಲೆ ಕುತುಬನು ಯೋಗ್ಯ ಬಂದೋಬಸ್ತಿನೊಡನೆ ಶಕ್ತಿಮಯಿಯನ್ನು ಕರಕೊಂಡು ಜೇಲ ಕಡೆಗೆ ನಡೆದನು. ಅವನು ತುಸು ಮುಂದಕ್ಕೆ ಹೋಗಿ ಜೇಲ ಕಾವಲುಗಾರರಿಗೆ ತಿಳಿಸಿ ಗಣೇಶದೇವನಿದ್ದ ಖೋಣೆಯ ಕೀಲಿಯನ್ನು ತೆಗೆದನು. ಕೂಡಲೆ ಶಕ್ತಿಮಯಿಯು ಆ

ಕೋಣೆಯಲ್ಲಿ ಪ್ರವೇಶಿಸಿ ಕಾವಲುಗಾರರಿಗೆ ಹೋಗಲಿಕ್ಕೆ ಹೇಳಿದಳು.

ಕುತುಬನು ಶಕ್ತಿಮಯಿಯನ್ನು ಆ ಜೇಲಖಾನೆಗೆ ಕಳಿಸಿ, ಕಾವಲುಗಾರರಿಗೆ ಆಕೆಯು ಹೊರಗೆ ಬಂದ ಬಳಿಕ ಎತ್ತ ಹೋಗುವಳು, ಏನು ಮಾಡುವಳು ಮುಂತಾದ್ದನ್ನು ಲಕ್ಷ್ಯಗೊಟ್ಟು ನೋಡಲಿಕ್ಕೆ ಹೇಳಿ, ಹಾಗು ಅವಳ ಆ ಸಂಗತಿಯನ್ನು ಆಗಾಗ್ಗೆ ತನ್ನ ಬಿಡಾರಕ್ಕೆ ತಿಳಿಸಲಿಕ್ಕೆ ಕಟ್ಟಪ್ಪಣೆಮಾಡಿ ನಡೆದನು. ಬಳಿಕ ಅವನು ತನ್ನ ಜಾಲವನ್ನು ಗಾಯಸುದ್ದೀನನ ಮೇಲೆ ಚೆಲ್ಲಿ, ಅವನಲ್ಲಿ ಶಕ್ತಿಯ ವಿಷಯವಾಗಿ ಸಂಶಯಪಿಶಾಚವು ಹುಟ್ಟುವಂತೆ ಪ್ರಯತ್ನಿಸಲುದ್ಯುಕ್ತನಾದನು.

ಹದಿನಾರನೆಯ ಪ್ರಕರಣ.

ಸನ್ಯಾಸಿನೀ ತಥಾಸ್ತು!

ಕಾರಾಗೃಹವನ್ನು ಹೊಕ್ಕ ಕೂಡಲೆ ಅಲ್ಲಿಯ ಆ ಘನವಾದ ಅಂಧಃಕಾರದಲ್ಲಿ ಶಕ್ತಿಮಯಿಗೇನೂ ಕಾಣಿಸಲೊಲ್ಲದು. ಆಗ ಅವಳು ಕಾವಲುಗಾರನಿಗೆ ದೀಪ ತರಹೇಳಿ, ಅವನು ಅದನ್ನು ತರುವವರೆಗೆ ಬಾಗಿಲಲ್ಲಿಯೇ ಕಣ್ಣು ಮುಚ್ಚಿ ನಿಂತು ಕೊಂಡಳು. ಅರಕ್ಷಣದಲ್ಲಿ ಸೇವಕನು ದೂರದಿಂದ ದೀಪ ತರಹತ್ತಿದನು. ಆ ದೀಪದ ಬೆಳಕು ಆ ಕೊಣೆಯ ಕಿಟಕಿಯ ಕಿಂಡಿಗಳೊಳಗಿಂದ ಒಳಗೆ ಬೀಳಲು, ಶಕ್ತಿಮಯಿಯು ತನ್ನ ದೃಷ್ಟಿಯ ಕಿರಣಗಳನ್ನು ಆ ದೀಪದ ಕಿರಣಗಳೊಡನೆ ಆ ಕೋಣೆ ತುಂಬ ಪಸರಿಸಿ ತನ್ನ ಪ್ರಿಯ ಬಾಲ್ಯಸಖನಾದ ಗಣೇಶದೇವನನ್ನು ಶೋಧಿಸಲಿಕ್ಕೆ ಆತುರ ಪಡಹತ್ತಿದಳು. ಆಗ ಮಧ್ಯ ರಾತ್ರಿಯು ಮೀರಿತ್ತು; ಮೂರನೆಯ ಜಾವದ ಆ ರಾತ್ರಿಯಲ್ಲಿ ನಸುಗಾಳಿಯಿಂದ ಎಲ್ಲ ಕಡೆಗೂ

ತಂಪು ಹೆಚ್ಚಾಗಹತ್ತಿತ್ತು. ಆಗ ಆ ಕಾರಾಗಾರದ ಒಂದು ಮೂಲೆಯಲ್ಲಿ ಕುಳಿತು ತನ್ನ ಭಾವೀ ಜೀವಿತದ ಬಗ್ಗೆ ಒಂದೇಸವನೆ ಚಿಂತಿಸುತ್ತಿದ್ದರಿಂದ ಗಣೇಶದೇವನಿಗೆ ಅರ್ಧ ನಿದ್ರೆ-ಅರ್ಧ ಎಚ್ಚರಿಕೆ ಈ ಪ್ರಕಾರದತಂದ್ರಾವಸ್ಥೆಯು ಪ್ರಾಪ್ತವಾದಂತಾಗಿತ್ತು. ಆದರಿಂದ ಶಕ್ತಿಯು ತನ್ನ ಬಳಿಗೆ ಬಂದರೂ ಅವನು ಎಚ್ಚರ ಹೊಂದಲಿಲ್ಲ. ಆದರೆ ಶಕ್ತಿಮಯಿಯು ಬಂದುನಿಂತು ಸೇವಕನಿಗೆ ದೀಪ ತರಹೇಳಿದ್ದೊಂದೇ ತಡ, ಗಣೇಶದೇವನು ಸಂಪೂರ್ಣ ಭಾನವುಳ್ಳವನಾಗಿ ಎದ್ದು ಕುಳಿತು ವಿಸ್ಮಯ ಚಕಿತ ಸ್ವರದಿಂದ—"ಶಕ್ತೀ" ಎಂದು ಕೂಗಿದನು. ಆ ಅರ್ಧ ಎಚ್ಚರಿಕೆಯ ಅವಸ್ಥೆಯಲ್ಲಿಯೂ ಅವನಿಗೆ ಶಕ್ತಿಮಯಿಯ ಧ್ವನಿಯ ಗುರುತು ಹತ್ತಿತು. ಶಕ್ತಿಯು ಕಠೋರ ಸ್ವರದಿಂದ ಕೂಡಲೆ ನುಡಿದಳೇನಂದರೆ—"ಶಕ್ತಿಯಲ್ಲ; ಸುಲ್ತಾನೆಯು!"

ಬಳಿಕ ಕೆಲಹೊತ್ತಿನವರೆಗೆ ಶಕ್ತಿಯು ಏನನ್ನೂ ಮಾತಾಡಲಿಲ್ಲ. ಸುಮ್ಮನೆ ನಿಂತು ಆ ಕಗ್ಗತ್ತಲೆಯಲ್ಲಿ ಗಣೇಶದೇವನ ಕಣ್ಣು ಗೊಂಬೆಗಳ ಹೊಯ್ದಾಟವನ್ನು ನೋಡುತ್ತ, ತನ್ನ ಮಾತಿನ ಪರಿಣಾಮವು ಅವನ ಮೇಲೆ ಎಷ್ಟರಮಟ್ಟಿಗೆ ಆಗಿದೆಯೆಂಬದನ್ನು ಪರೀಕ್ಷಿಸ ತೊಡಗಿದಳು. ಅಷ್ಟರಲ್ಲಿ ದ್ವಾರಪಾಲಕನು ದೀಪವನ್ನು ಒಳಗೆ ಇರಿಸಿ ಬಾಗಿಲವನ್ನಿಕ್ಕಿಕೊಂಡು ಹೋದನು. ಕೂಡಲೆ ಗಣೇಶದೇವನು ಶಕ್ತಿಮಯಿಗೆ ಸುಸ್ಪಷ್ಟವಾಗಿ ಕಾಣಿಸಹತ್ತಿದನು. ಆದರೆ ಆಗಿನ ಆ ಗಣೇಶದೇವನ ಮೂರ್ತಿಯನ್ನು ಕಂಡು ಇಷ್ಟು ದಿನಗಳವರೆಗೆ ತಾನು ತನ್ನ ಮನಸ್ಸಿನಲ್ಲಿರಿಸಿಕೊಂಡಿದ್ದ ಗಣೇಶದೇವನ ರೂಪವಿದಲ್ಲವೆಂದು ಅವಳು ತಿಳಿದಳು; ಈ ಗಣೇಶದೇವನು ತನ್ನ ಮನೋಮೂರ್ತಿಯಂತೆ ರಾಜಭೂಷಣಗಳಿಂದ ಅಲಂಕೃತನಾಗಿ ಅನುಪಮೇಯಕಾಂತಿಯಿಂದ ಮೋಹಕನಾಗಿರುವದಿಲ್ಲ. ಹರಕ ಹಾಗೂ ಮಾಸಿದ ವಸ್ತ್ರಗಳನ್ನು ಧರಸಿದವನೂ, ಕೊರಚರಂಥ ಮಾಸಿದ ಉದ್ದನ್ನ ಜಟೆಗಳುಳ್ಳವನೂ, ಸೊರಗಿ ಬಾಡಿದ ಕಾಂತಿಹೀನ

ಮುಖವುಳ್ಳವನೂ ಆದ ಹೀನ ದೀನನೊಬ್ಬ ಕೈದಿಯು ತನ್ನ ಮುಂದೆ ಬಂದು ನಿಂತಿದ್ದನೆಂಬದು ಆಕೆಯ ನಿದರ್ಶನಕ್ಕೆ ಬಂದಿತು.

ಶಕ್ತಿಮಯಿಯು ಇಂದು ಸನ್ಯಾಸಿನಿಯ ಇಲ್ಲವೆ ಬಡವೆಯ ವೇಷದಿಂದ ಅಲ್ಲಿಗೆ ಬಂದಿದ್ದಿಲ್ಲ. ಆಕೆಯು ರಾಜರಾಜೇಶ್ವರಿಯಂತೆ ಉತ್ತಮೋತ್ತಮ ವಸ್ತ್ರಾಲಂಕಾರಗಳನ್ನು ಧರಿಸಿಕೊಂಡು ಬಂದಿದ್ದಳು. ಗಾಯಸುದ್ದೀನನೊಡನೆ ಶಕ್ತಿಮಯಿಯ ವಿವಾಹವಾದ ದಿವಸ ಒಂದು ಕ್ಷಣಮಾತ್ರ ಆಕೆಯು ಈ ತರದ ವೇಷಭೂಷಣಗಳನ್ನು ಧರಿಸಿಕೊಂಡಿದ್ದಳೆಂಬದನ್ನು ವಾಚಕರು ಬಲ್ಲರು; ಆದರೆ ಅನಂತರ ಇಂದಿನವರೆಗೆ ಆ ತರದ ಸುಲತಾನೆಗೆ ಪರಿಶೋಭಿಸುವ ವೇಷಭೂಷಣಗಳನ್ನು ಎಂದೂ ಧರಿಸಿದ್ದಿಲ್ಲ. ಯಾಕಂದರೆ ಅವಳು ತಿಳಿದೇ ಆಗಲಿ, ತಿಳಿಯದೇ ಆಗಲಿ, ಸೇಡಿನ ಹವ್ಯಾಸದ ಬಲಿಗೆ ಬಿದ್ದು ಗಾಯಸುದ್ದೀನನೊಡನೆ ಲಗ್ನವಾದ ಉತ್ತರ ಕ್ಷಣದಲ್ಲಿಯೇ ಅವಳಿಗೆ ತನ್ನ ಕುಲಗೇಡಿತನದ ಹಾಗು ಉಚ್ಛೃಂಖಲವೃತ್ತಿಯ ಬಗ್ಗೆ ಮನಸ್ಸಿನಲ್ಲಿ ಬಹಳ ಪಶ್ಚಾತಾಪವುಂಟಾಗಿತ್ತು. ಅದರಿಂದಲೇ ಅವಳು ಈ ವರೆಗೆ ತನ್ನ ಪದವಿಗೆ ತಕ್ಕಂತೆ ವಸ್ತ್ರಾಲಂಕಾರಗಳನ್ನು ಧರಿಸುತ್ತಿರಲಿಲ್ಲ. ಆದರೆ ಈ ದಿವಸ ಅವಳು ಅವುಗಳನ್ನು ಒಳ್ಳೇ ಆನಂದದಿಂದ ಧರಿಸಿ ಮೆರೆಯಬಂದಿದ್ದಿಲ್ಲ. ಯಾವನು ತನ್ನನ್ನು ಕೀಳಜಾತಿಯವಳೆಂದು ತಿರಸ್ಕರಿಸಿ ಬಿಟ್ಟಿದ್ದನೋ, ಆ ಯಃಕಶ್ಚಿತ್ ಸಾಮಂತ ರಾಜನನ್ನು ತನ್ನ ಐಶ್ವರ್ಯದ ಬೆಳಕಿನಿಂದ ದಂಗುಬಡಿಸಿ ಬಿಡಬೇಕೆಂದು ಹೀಗೆ ಸುಸಜ್ಜಿತಳಾಗಿ ಬಂದಿದ್ದಳು. ಆದರೆ ಮೇಲೆ ವರ್ಣಿಸಿದಂತೆ ಗಣೇಶದೇವನ ದೀನಮೂರ್ತಿಯು ಎದುರಿಗೆ ಬಂದು ನಿಂತದ್ದನ್ನು ಕಂಡು ಅವಳು ಪ್ರಸ್ತರ ಮೂರ್ತಿಯಂತೆ ಸ್ತಬ್ಧಳಾಗಿಬಿಟ್ಟಳು. ಆಗ ಅವಳ ಮನಸ್ಸಿನಲ್ಲಿ ಯಾವ ವಿಚಾರಗಳು ಉತ್ಪನ್ನವಾಗುತ್ತಿದ್ದವು ಮತ್ತು ರಾಜನ ಆ ದುರ್ದೆಸೆಯನ್ನು ಕಂಡು ಅವಳಿಗೆ ಸುಖವಾಗುತ್ತಿತ್ತೋ, ದುಃಖ

ವೆನಿಸುತ್ತಿತ್ತೋ ಮುಂತಾದ್ದನ್ನು ಮನೋಯೋಗದಲ್ಲಿ ನಿಷ್ಣಾತ ನಾದವನಿಂದಲೂ ಊಹಿಸಲು ಶಕ್ಯವಾಗಿದ್ದಿಲ್ಲ. ಹೀಗೆ ಕೆಲವು ಕ್ಷಣ ಗಳನ್ನು ಅವಳು ಮೌನದಿಂದ ಕಳೆಯುವಷ್ಟರಲ್ಲಿ ಅವಳಕಣ್ಣುಗಳಿಂದ ಎರಡು ಕಂಬನಿಗಳುದುರಿ, ಓಷ್ಠಾಧರಗಳು ಹೆಚ್ಚಾಗಿ ಕಂಪಿಸಹತ್ತಿ ದವು; ಬಾಯಿಂದ ಶಬ್ದಗಳೂ ಹೊರಟವು. ಕೂಡಲೆ ಈವರೆಗೆ ಪಾಷಾ ಣಮೂರ್ತಿಯಾಗಿದ್ದ ಶಕ್ತಿಯು ಈಗ ಜೀವಂತ ಮನುಷ್ಯರೂಪವನ್ನು ಹೊಂದಿದಳು. ಶಕ್ತಿಯ ಈಗಿನ ಈ ಪಶ್ಚಾತ್ತಾಪಾತಿರೇಕದ ಮೂರ್ತಿ ಯನ್ನು ನೋಡಿದರೆ, ಸೇಡಿನ ಹವ್ಯಾಸದ ಈರ್ಷ್ಯಾಯುಕ್ತ ಲಕ್ಷಣಗ ಳೊಂದೂ ಇವಳಲ್ಲಿ ಕಾಣಬರಲಿಲ್ಲ. ನಿಸ್ವಾರ್ಥದ ಕರುಣಾಮಯ ಸ್ತ್ರೀ ಮೂರ್ತಿಯೇ ಪ್ರತ್ಯಕ್ಷವಾಗಿರುವಂತೆ ಇವಳನ್ನು ನೋಡಿದವರಿಗೆ ಭಾಸ ವಾಗುತ್ತಿತ್ತು. ಶಕ್ತಿಮಯಿಯು ಕೇವಲ ಬಡವನ ಕನ್ಯೆಯಾದ್ದರಿಂದ ಗಣೇಶದೇವನಂಥ ತನ್ನ ಪ್ರಿಯಸಖನಿಗೆಕೂಡಾ ತನ್ನಲ್ಲಿಯ ನಿಸ್ಸೀಮ ವಾದ ಪ್ರೇಮದ ಹೊರ್ತು ಬೇರೆ ಯಾವ ಬೆಲೆಯುಳ್ಳ ಪದಾರ್ಥ ಗಳನ್ನು ಕೊಡಲು ಸಮರ್ಥಳಾಗಿರಲಿಲ್ಲ; ಆದರೆ ಇಂದು ಅವಳು ಇಡಿ ಬಂಗಾಲದೇಶದ ಏಕಛತ್ರಾಧಿಪತಿಯ ಅರ್ಧಾಂಗಿನಿಯಾದ್ದರಿಂದ ಈಗ ಬೇಕಾದವರಿಗೆ ಬೇಕಾದದ್ದನ್ನು ದಯಪಾಲಿಸುವಷ್ಟು ಶಕ್ತಿ ಯು ಅವಳಲ್ಲಿತ್ತು. ಆದ್ದರಿಂದಲೇ ಅವಳು ತನ್ನ ಆ ಅನುಕೂಲತೆ ಯ ಸದುಪಯೋಗವನ್ನು ಮಾಡುವದಕ್ಕಾಗಿ ವಂಗೇಶ್ವರನ ತೀರ ಅವಕೃಪೆಗೆ ಪಾತ್ರನಾದ ತನ್ನ ಪ್ರಿಯ ಬಾಲ್ಯಸಖ ಗಣೇಶದೇವನನ್ನು ಮುಕ್ತ ಮಾಡಬಂದಿದ್ದಳು.

ಶಕ್ತಿಯ ಈ ಪೂರ್ವದ ಆದೇಶದಂತೆ ಗಾಯಸುದ್ದೀನನು ಕುಮಾರಸಾಹೇಬುದ್ದೀನನನ್ನು ಕುತುಬನು ಬೇಡ ಬೇಡೆಂದರೂ ಬಂಧನ ದಿಂದ ಮುಕ್ತಮಾಡಿಬಿಟ್ಟಿದ್ದನು. ಗಣೇಶದೇವನನ್ನಾದರೂ ಬಿಟ್ಟುಬಿಡು ವದು ಅವನ ಮನಸ್ಸಿನಲ್ಲಿತ್ತು. ಆದರೆ ಅವನನ್ನು ಒಂದು ನಿರ್ಬಂಧದಿಂದ

ಮುಕ್ತಮಾಡಬೇಕೆಂದಿದ್ದನು. ಆ ಕರಾರು ಯಾವದೆಂದರೆ,—"ಯಾವ ಕಾಲದಲ್ಲಿಯೂ ಎಂಥ ಪ್ರಸಂಗವಲ್ಲಿಯೂ ಗಣೇಶದೇವನು ಬಾದಶಹನಿಗೆ ಪ್ರತಿಕೂಲನಾಗಿ ನಡೆಯಬಾರದು; ನ್ಯಾಯಾನ್ಯಾಯ ಯುಕ್ತಾಯುಕ್ತಗಳನ್ನೊಂದೂ ಎಣಿಸದೆ, ವಂಗೇಶ್ವರನ ಪಕ್ಷವನ್ನೇ ವಹಿಸಿ ನಡೆಯುವೆನೆಂದು ಶಪಥಪೂರ್ವಕವಾಗಿ ಒಪ್ಪಬೇಕು." ಅಂದರೆ ಗಣೇಶದೇವನನ್ನು ಕೊಲ್ಲದೆ ಅವನ ರಾಜ್ಯಕ್ಕೆ ಮರಳಿ ಕಳಿಸಿರಿ, ಎಂದು ಬಾದಶಹನು ಅವನ ವಿಷಯವಾಗಿ ಜೇಲಖಾನೆಯ ಮುಖ್ಯಸ್ಥನಿಗೆ ನಿರೂಪ ಕಳಿಸಿದ್ದನು. ಆದರೆ ಗಣೇಶದೇವನು ರಾಜಾನುಗ್ರಹವನ್ನು ಅಗ್ರಾಹ್ಯ ಮಾಡಿದನು. ಈ ಪ್ರಕಾರ ಸತತವಾಗಿ ಬಾದಶಹನ ದಾಸ್ಯತ್ವವನ್ನು ವಹಿಸಿ ಲಾಂಗೂಲಚಾಲನ ಮಾಡುತ್ತ ಬೀದಿಯನಾಯಿಯಂತೆ ಬಾಳುವದಕ್ಕಿಂತ ಇಂದೇ ಮರಣಪ್ರಾಪ್ತವಾಗುವದು ಉಕ್ತವೆಂದು ಅವನು ಗಣಿಸಿದನು. ಗಣೇಶದೇವನು ಮರಣಕ್ಕಂಜುತ್ತಿರಲಿಲ್ಲ; ಆದರೆ ತನ್ನ ಪಶ್ಚಾತ್ ತನ್ನ ಸ್ವಜನರು ಆದರಂತೆ ಪ್ರಜೆಗಳು ಯಾವದುರ್ದೆಶೆಯನ್ನು ಹೊಂದಬೇಕಾಗುವದೋ ಎಂಬ ಬಗ್ಗೆ ಅವನ ಹೃದಯದಲ್ಲಿ ದಾಹವಾಗಹತ್ತಿತ್ತು; ಮತ್ತು ಈ ಹೃದಯ ವಿದಾರಕವಾದ ಚಿಂತೆಯಿಂದಲೇ ಶಕ್ತಿಮಯಿಯು ಅವನಿದ್ದ ಕೋಣೆಯೊಳಗೆ ಪ್ರವೇಶಿಸುವವರೆಗೆ—ಮಧ್ಯರಾತ್ರಿ ಮೀರುವವರೆಗೆ—ಅವನು ಕೊರಗಿ ಕೊರಗಿ ಅವನಿಗೆ ತಂದ್ರಾವಸ್ಥೆಯು ಉಂಟಾಗಿತ್ತು. ಆ ತಂದ್ರಾವಸ್ಥೆಯಲ್ಲಿ ಅವನಿಗೆ ಒಂದುಸ್ವಪ್ನದ ಭಾಸವಾಯಿತು. ತನ್ನ ಕಷ್ಟವನ್ನು ನೋಡಲಾರದೆ ಯಾವಳೊಬ್ಬ ಕರುಣಾಮಯಿದೇವಿಯು ತನ್ನನ್ನು ಆ ಕಾರಾಗಾರದಿಂದ ಬಿಡಿಸಿಕೊಂಡು ಸ್ವಾತಂತ್ರ್ಯದ ಸಾಮ್ರಾಜ್ಯದಲ್ಲಿ ಒಯ್ದು ಬಿಟ್ಟಂತಾಗಿತ್ತು; ಆದರೆ ಅವನು ತನ್ನ ಸ್ವಪ್ನಸ್ಥಳಾದ ಆ ದೇವಿಯ ಕಡೆಗೆ ದೀನಮೊಗದಿಂದ ನೋಡುವಷ್ಟರಲ್ಲಿ ಆ ದೇವಿಯ ಮುಖಲಕ್ಷಣವು ಶಕ್ತಿಮಯಿಯ ಮುಖಲಕ್ಷಣವನ್ನು ಹೋಲುತ್ತಿತ್ತು. ಆದರಿಂದ ಅವನ ಮನಸ್ಸು

ಒಂದು ತರದ ಸಂಶಯದಿಂದ ಕುದಿಯುತೊಡಗಿತು. ಆಗ ಅವನು ತನ್ನ ಸಂಶಯ ನಿವಾರಣ ಮಾಡಿಕೊಳ್ಳುವದಕ್ಕಾಗಿ ಆ ದೇವಿಗೆ ಇನ್ನು ಪ್ರಶ್ನ ಮಾಡತಕ್ಕವನು, ಅಷ್ಟರಲ್ಲಿ ಮೇಲೆ ಹೇಳಿದಂತೆ ಶಕ್ತಿಮಯಿಯು ಕಾವಲುಗಾರನಿಗೆ ದೀಪ ತರುವದಕ್ಕಾಗಿ ಕೂಗಿದ್ದರಿಂದ ಅವನ ಆ ತಂದ್ರಾಮಯ ಸ್ವಪ್ನವು ಹೇಳಹೆಸರಿಲ್ಲದಂತೆ ಮಾಯವಾಗಿಬಿಟ್ಟಿತ್ತು.

ಬಳಿಕ ಶಕ್ತಿಯು ಗಣೇಶದೇವನನ್ನು ಕುರಿತು—"ರಾಜಕುಮಾರ, ಏಳು" ಎಂದು ನುಡಿದಳು. ಆದರೆ ಶಕ್ತಿಯ ಈ ನುಡಿಯ ದನಿಯು ಅರಕ್ಷಣದ ಮುಂಚಿನ "ನಾನು ಶಕ್ತಿಯಲ್ಲ; ಸುಲ್ತಾನೆಯು, " ಎಂಬ ಶಬ್ದಗಳ ದನಿಗಿಂತ ತೀರ ಭಿನ್ನವಾಗಿತ್ತು. ಅವಳು ಮೊದಲಿನ ಶಬ್ದಗಳನ್ನು ಶಾಂತನದಿಂದ ತೀರ ಕಠೋರವಾಗಿ ನುಡಿದಿದ್ದಳು. ಆದರೆ ಈಗ ಅವಳು ಬಹು ಲೀನಭಾವದಿಂದ ಸೌಮ್ಯವಾಗಿಕೇಳಿಕೊಂಡಿದ್ದಳು. ಅವಳಲ್ಲಿ ಈ ತರದ ವೃತ್ತಿಭೇದವಾಗಲಿಕ್ಕುಂಟಾದ ಮರ್ಮವನ್ನು ನಾರಿಯರ ಸೂಕ್ಷ್ಮ ಹೃದಯವವಗತವಾಗದ ಆ ಗಣೇಶದೇವನೇನು ಬಲ್ಲನು? ಎಂಥಎಂಥ ಮಹಾಮಹಾ ಜ್ಞಾನಿಗಳೇ ನಾರಿಯರ ಹೃದಯಗಳನ್ನು ತಿಳಿಯಲಾರರೆ "ದೇವಾ ನ ಜಾನಂತಿ ಕುತೋ ಮನುಷ್ಯಾಃ" (ದೇವರು ಕೂಡ ನಾರೀಹೃದಯವನ್ನು ತಿಳಿಯಲಸಮರ್ಥನು; ಅಂದಮೇಲೆ ಮಾನವರ ಪಾಡೇನು?) ಎಂದಂದಿರುವರು. ಇದರಿಂದ ಗಣೇಶದೇವನು ಶಕ್ತಿಮಯಿಗೆ ಏನೂ ಉತ್ತರ ಕೊಡದೆ ಸುಮ್ಮನಿದ್ದನು. ಆಗ ಶಕ್ತಿಯು ಪುನಃ "ರಾಜಕುಮಾರ ಸಮಯವು ಹತ್ತರಕ್ಕೆ ಬಂದಿದೆ, ಬೆಳಗಾಯಿತೆಂದರೆ ತೀರಿತು, ಬಾದಶಹನು ನಿನ್ನ ವಧಮಾಡದಿರುವದಿಲ್ಲ. ಆದ್ದರಿಂದ ಬೇಗನೆ ಏಳು, ಇಗೋ ಈ ನನ್ನ ಅಂಗವಸ್ತ್ರವನ್ನು ಮೈತುಂಬ ಚನ್ನಾಗಿ ಹೊದ್ದುಕೋ" ಎಂದು ಸೂಚಿಸಿದಳು.

ಗಣೇಶದೇವನು ಶಕ್ತಿಯ ಇಂಗಿತವನ್ನು ತಿಳಿದನು. ತನ್ನ ಸ್ವಪ್ನಾ

ಭಾಸದಂತೆ ಇವಳು ತನ್ನನ್ನು ನಿಜವಾಗಿಯೇ ಮುಕ್ತ ಮಾಡಬಂದಿದ್ದಾಳೆಂಬದು ಅವನಿಗೆ ತಿಳಿದು ಬಂದಿತು. ಆಗ ಅವನು ಪರಮಾಶ್ಚರ್ಯ ಭರಿತನಾಗಿ—"ನಾನು ಎಲ್ಲಿಗೆ ಹೋಗಬೇಕೆನ್ನುವೆ?"

ಕೂಡಲೆ ಶಕ್ತಿಯು ಅಲ್ಲಿಯ ದೀಪವನ್ನು ನೊಂದಿಸಿ ತನ್ನ ಬಹುಮೂಲ್ಯವಾದ ಪೀತಾಂಬರವನ್ನು ಹರಿದು ಎರಡು ತುಂಡುಮಾಡಿ, ಒಂದನ್ನು ತಾನು ಉಟ್ಟುಕೊಂಡು, ಮತ್ತೊಂದು ತುಂಡನ್ನೂ ರತ್ನಖಚಿತವಾದ ಶಾಲನ್ನೂ ಗಣೇಶದೇವನ ಕೈಯಲ್ಲಿ ಕೊಟ್ಟು— "ಕುಮಾರ ತೆಗೆದುಕೋ; ಈ ವಸ್ತ್ರವನ್ನು ಉಟ್ಟುಕೊ, ಹಾಗು ಈ ಶಾಲಿನಿಂದ ನಿನ್ನ ಮೈಮುಚ್ಚಿಕೊಂಡು ಆ ಬಾಗಿಲ ಬಡೆ. ಅಂದರೆ ದ್ವಾರರಕ್ಷಕನು ಬಾಗಿಲ ತೆರೆಯುವನು. ಬಳಿಕ ನೀನು ಅವನೊಡನೆ ಸುಮ್ಮನೆಹೊರಗೆ ಹೋಗು. ತಲೆ ಬಾಗಿಲಬಳಿಯಲ್ಲಿ ನೀನು ಆ ದ್ವಾರಪಾಲಕನ ಕೈಯಲ್ಲಿ ಇಗೋ ಈ ಉಂಗುರವನ್ನು ಕೊಟ್ಟುಬಿಡು. ಅಂದರೆ ಅವನು ನಿನಗಾವ ಪ್ರತಿಬಂಧವನ್ನೂ ಮಾಡಲಿಕ್ಕಿಲ್ಲ. ಬಳಿಕ ನೀನು ಬಹುಶೀಘ್ರವಾಗಿ ಬೇಕಾದಲ್ಲಿಗೆ ಓಡಿಹೋಗಿ ನಿನ್ನ ಪ್ರಾಣಗಳನ್ನು ಉಳಿಸಿಕೋ;" ಎಂದು ಅರಿಕೆ ಮಾಡಿಕೊಂಡಳು.

ಆದರೆ ಗಣೇಶದೇವನಿಗೆ ಶಕ್ತಿಯ ಸೂಚನೆಯು ಸಮ್ಮತವಾಗಲಿಲ್ಲ. ತನ್ನ ಸಲುವಾಗಿ ತನ್ನ ವಿರಹದಿಂದ ಬಳಲುತ್ತಿರುವ ಒಬ್ಬ ಪರಸ್ತ್ರೀಯು ಮರಣಹೊಂದಿ ತಾನು ಪಾರಾಗಿ ಹೋಗುವದು ಗಣೇಶದೇವನಂಥ ಶ್ರೇಷ್ಠ ಹಿಂದೂ ಧರ್ಮಸ್ಥ ರಾಜನಿಗೆ ಸಮ್ಮತವಾದೀತೇ? ತನ್ನ ಪ್ರಾಣ ಹೋಗಿ, ತನ್ನ ಸ್ವಜನರಿಗೂ ಪ್ರಜೆಗಳಿಗೂ ಎಂಥ ದುರ್ದೆಸೆ ಪ್ರಾಪ್ತವಾದರೂ ಅವನು ಶಕ್ತಿಯ ಆ ಸಹಾಯಕ್ಕೆ ಋಣಿಯಾಗುವಂತಿದ್ದಿಲ್ಲ. ಒಂದುವೇಳೆ ಅವನು ಆಕೆಯ ಸಹಾಯ ಬಯಸಿದ್ದರೆ, ಅದರಿಂದ ಅವನು ತಿಳಿದೇ ಆಗಲಿ-ತಿಳಿಯದೇ ಆಗಲಿ, ಧರ್ಮಭ್ರಷ್ಟನಾದಂತಾಗುತ್ತಿತ್ತು. ಯಾಕಂದರೆ ಶಕ್ತಿಮಯಿಯು ಪರಧ

ರ್ಮವನ್ನಾಶ್ರಯಿಸಿದವಳು; ಮೇಲಾಗಿ ಪರಸ್ತ್ರೀಯುಳು! ಅವನು ಆಕೆಯ ಸಹಾಯದಿಂದ ಮುಕ್ತನಾಗಿದ್ದರೆ ಅವನ ಆ ಹಿಂದೂಧರ್ಮದ ಜಾಜ್ವಲ್ಯ ವೃತ್ತಿಗೆ ತುಸುಮಟ್ಟಿಗಾದರೂ ಕುಂದು ಉಂಟಾಗದೆ ಇರುತ್ತಿರಲಿಲ್ಲ. ಗಣೇಶದೇವನಂಥ ಧರ್ಮಭೀರುಗಳು ನಮ್ಮ ಆರ್ಯಾವರ್ತದಲ್ಲಿ ಯಾವಾಗಲೂ ಹುಟ್ಟಿ ಬರುತ್ತಿರುವದರಿಂದಲೇ ನಮ್ಮ ಸನಾತನ ಹಿಂದೂ ಧರ್ಮವು ಜಗತ್ತಿನೊಳಗಿನ ಎಲ್ಲ ಧರ್ಮಗಳಿಗಿಂತ ಶ್ರೇಷ್ಠವೂ ಪ್ರಾಚೀನವೂ ಆಗಿದ್ದು, ಅದಕ್ಕೆ ಎಂದೂ ಚ್ಯುತಿಯುಂಟಾಗಲರಿಯದು, ಇರಲಿ. ಬಳಿಕ ಅವನು ಶಕ್ತಿಮಯಿಯ ವಸ್ತ್ರಗಳನ್ನು ಆಕೆಗೆ ತಿರುಗಿಕೊಟ್ಟು—"ಒಲ್ಲೆನು, ಶಕ್ತೀ, ನಾನು ಹೊರಟು ಹೋಗಲಿಕ್ಕೆ ಒಲ್ಲೆನು'' ಎಂದು ನುಡಿದನು.

''ಯಾಕೆ?'' ಎಂದು ಆಶ್ಚರ್ಯಚಕಿತಳಾದ ಶಕ್ತಿಯು ಕೇಳಲು, "ನಿನ್ನ ಕೈಯಿಂದ ಬಂಧಮುಕ್ತನಾಗುವದು ನನಗೆ ಪ್ರಶಸ್ತವಾಗಿ ತೋರುವದಿಲ್ಲ. ಆದ್ದರಿಂದ ನಾನು ಓಡಿಹೋಗಲಾರೆನು '' ಎಂದು ಗಣೇಶದೇವನು ನಿಶ್ಚಯಪೂರ್ವಕವಾಗಿ ಹೇಳಿದನು. ಇವನನ್ನು ಇಲ್ಲಿಂದ ಹೊರ ಹೊರಡಿಸುವದು ಇನ್ನು ಅಸಾಧ್ಯವೆಂಬದು ಆಗ ಆಕೆಗೆ ಗೋಚರವಾಯಿತು. ಆದರಿಂದ ಶಕ್ತಿಮಯಿಯ ಆಶಾಪ್ರದೀಪ್ತ ಮುಖಲಕ್ಷಣವು ಸುಟ್ಟು ಕಪ್ಪಿಟ್ಟಂತೆ ಮಲೀನವಾಗಿ ಹೋಯಿತು. ಆಕೆಗೆ ಪರಮದುಃಖವುಂಟಾಗಿ ಆದರಿಂದ ಅವಳಿಗೆ ಘೋಳಿಬಂದತಾಯಿತು. ಆದರೆ ಆಗ ಅವಳು ಲಗುಬಗೆಯಿಂದ ಒಂದು ಗೋಡೆಯ ಆಶ್ರಯವನ್ನು ಮಾಡಿರದಿದ್ದರೆ, ಅಂದು ಆಕೆಯಿಂದಾಗಬೇಕಾಗಿದ್ದ ಸಾಹಸದ ಕಾರ್ಯವು ಅಲ್ಲಿಗೇ ಮುಗಿತಾಯಹೊಂದಬೇಕಾಗಿತ್ತು; ಆದರೆ ಈಶ್ವರೀಸಂಕೇತವು ಹಾಗಿದ್ದಿಲ್ಲ. ಕ್ಷಣದಲ್ಲಿ ಶಕ್ತಿಯು ಕಾರಾಗೃಹದ ಹೊರಗೆಬಂದಳು. ಅವಳು ಇನ್ನು ನೆಟ್ಟಗೆ ಆ ಕಗ್ಗತ್ತಲೆಯಲ್ಲಿ ತನ್ನ ಇಷ್ಟಕಾರ್ಯಸಾಧನಕ್ಕಾಗಿ ಸಾಗತಕ್ಕವಳು; ಅಷ್ಟರಲ್ಲಿ,

"ಬೇಡ, ಹಾಗೇ ಹೊರಟುಹೋಗಬೇಡ" ಎಂದು ಕಾವಲುಗಾರರ ಮುಖ್ಯಸ್ಥನು ಪಹರೆಯ ಚಾವಡಿಯೊಳಗೆ ಗುಡಗುಡಿ ಸೇದುತ್ತ ನುಡಿದನು. ಆದರೂ ಶಕ್ತಿಯು ನಿಲ್ಲದೆ ಹಾಗೇ ಒತ್ತರದಿಂದ ಕಾಲು ಬಿಡುತ್ತಿರುವದನ್ನು ನೋಡಿ ಅವನ ಸಂಜ್ಞೆಯ ಮೇರೆಗೆ ಇಬ್ಬರು ಕಾವಲುಗಾರರು ಓಡುತ್ತಬಂದು ಅವಳನ್ನು ತರುಬಿ— "ಎಲ್ಲಿ, ಉಂಗುರವೆಲ್ಲಿ?" ಎಂದು ಕೇಳಿದರು.

ಅವಳು ಅವರ ಮಾತಿನ ಕಡೆಗೆ ಲಕ್ಷ್ಯಗೊಡದೆ ಮಗ್ಗಲಿನಿಂದ ಮತ್ತೆ ನಡೆದಳು. ಆಗ ಕಾವಲುಗಾರರು ಇವಳು ಉಂಗುರವನ್ನು ಕೊಡದೆ ಓಡಿಯೋಗಲು ಪ್ರಯತ್ನಿಸುತ್ತಾಳೆಂದು ಬಗೆದು, ಒಳ್ಳೇ ಗೊಗ್ಗರದನಿಯಿಂದ—"ಎಲ್ಲಿ, ಉಂಗುರವೆಲ್ಲಿದೆ? ಅದನ್ನು ಕೊಟ್ಟು ಹೋಗು; ಉಂಗುರವನ್ನು ಕೊಡದಿದ್ದರೆ ಬಿಡಬೇಡಿರೆಂದು ಕುತುಬಶಹನ ಅಜ್ಞೆಯಾಗಿರುತ್ತದೆ." ಎಂದು ಕೇಳಿದರು; ಕೂಡಲೆ ಆಕೆಯು ಸಿಟ್ಟಿನ ಅತಿರೇಕದಿಂದ—"ಬಿಡು, ದಾರೀಬಿಡು. ಸುಲ್ತಾನೆಯ ಹುಕುಮೆಂದು ತಿಳಿ" ಎಂದು ಕೂಗಿದಳು. ಆ ಕಾವಲುಗಾರರೆಲ್ಲರು ಆ ಹೆಣ್ಣುಮಗಳನ್ನು ಗಣೇಶದೇವನ ಹೆಂಡತಿಯೆಂದೇ ಈವರೆಗೆ ಭಾವಿಸಿದ್ದರು. ಗಣೇಶದೇವನು ನಾಳೆ ಬೆಳಿಗ್ಗೆ ವಧಸ್ಥಾನಕ್ಕೆ ಒಯ್ಯಲ್ಪಡುತ್ತಿರುವದರಿಂದ ಅವಳು ಕುತುಬನ ವಶೀಲಿಯಿಂದ ತನ್ನ ಗಂಡನ ಕಟ್ಟಕಡೆಯ ಭೆಟ್ಟಿಗಾಗಿ ಹೀಗೆ ರಾತ್ರಿ-ಅಪರಾತ್ರಿಯಲ್ಲಿ ಒಬ್ಬೊಂಟಿಗಳಾಗಿ ಈ ಜೇಲಖಾನೆಗೆ ಬಂದಿರಬಹುದೆಂದು ಅವರು ಊಹಿಸಿದ್ದರು. ಆದರೆ "ಸುಲತಾನೆಯ ಹುಕುಮು" ಎಂಬ ಶಬ್ದಗಳನ್ನು ಕೇಳಿ ಅವರೆಲ್ಲರು ಗರ್ಭಗಲಿತರಾಗಿಹೋದರು. ಒಬ್ಬನೂ ಪಿಟ್ಟೆಂದುಮಾತಾಡದಾದನು. ಶಕ್ತಿಮಯಿಯು ಹೊರಟುಹೋದ ಎಷ್ಟೋ ಹೊತ್ತಿನಮೇಲೆ ಆ ಕಾವಲುಗಾರರ ಮುಖ್ಯಸ್ಥನು ಆದಸಂಗತಿಯನ್ನು ಕುತುಬನಿಗೆ ತಿಳಿಸಲು ಒಬ್ಬನನ್ನುಕಳಿಸಿ, "ಶ್ರೀಮಂತರ ಮನೆಯ ಹೆಂಗಸರ ಚಾರಿ

ತ್ರ್ಯವು ವಿಚಿತ್ರವಾದದ್ದೆಂಬದು ಸುಳ್ಳಲ್ಲ.'' ಎಂದು ಮನದಂದು ಸುಮ್ಮನಾದನು.

ಶಕ್ತಿಮಯಿಯು ಆ ಕತ್ತಲಲ್ಲಿ ಒಬ್ಬಳೇ ನಡೆದಳು. ಆದರೆ ಆಕೆಯು ತನ್ನ ಪ್ರಾಸಾದದ ಮಾರ್ಗವನ್ನು ಹಿಡಿಯದೆ, ಅರಣ್ಯದ ಕಡೆಗೆ ಸಾಗಿದಳು. ಶಕ್ತಿಯ ಪೂರ್ವ ಚಾರಿತ್ರ್ಯವನ್ನು ಬಲ್ಲವರಿಗೆ ಆಕೆಯಂಥ ಮಹಾರಾಣಿಯು ಅಂಥ ಕಗ್ಗತ್ತಲೆಯಲ್ಲಿ ಒಬ್ಬಳೇ ಹ್ಯಾಗೆ ಹೋದಳೆಂಬದು ಆಶ್ಚರ್ಯವಾಗಿ ತೋರಲಿಕ್ಕಿಲ್ಲ. ಶಕ್ತಿಯು ಸಹಜವಾಗಿ ಕೆಲದಾರೀ ನಡೆದು ಹೋಗಿ ಒಂದು ಚಿಕ್ಕ ನದಿಯನ್ನು ದಾಟಿ ಅದರ ದಂಡೆಯೊಳಗೆ ಕಡಿದು ಬಿದ್ದಿದ್ದ ಒಂದು ಹುಣಿಶೀಗಿಡವನ್ನು ತಲುಪಿದಳು. ಒಂದಾನೊಂದು ದಿವಸ ಯಾವ ಮರದ ಬೊಡ್ಡೆಗೆ ಕುಳಿತು ಶಕ್ತಿಯು ತನ್ನ ಪ್ರಿಯ ಸಖನಾದ ಗಣೇಶದೇವನೊಡನೆ ಪ್ರೇಮಾಲಾಪಗಳನ್ನಾಡುತ್ತಿರುವಾಗ ಆತನ ತಾಯಿಯಿಂದ ಅಪಮಾನಹೊಂದಿ ಅವರಿಗೆ ಅಭಿಶಾಪವನ್ನಿತ್ತು ಅಂದಿನಿಂದ ಸೇಡಿನ ಹವ್ಯಾಸಕ್ಕೆ ಒಳಗಾಗಿ ಪ್ರಸ್ತುತದ ಈ ಅನಿವಾರ್ಯ ಪಶ್ಚಾತ್ತಾಪದ ಪ್ರಸಂಗವನ್ನು ತಂದುಕೊಂಡಿದ್ದಳೋ, ಆ ಬೋಡಿ ಹುಣಿಶೀಗಿಡವೇ ಇದಾಗಿತ್ತು. ಅಂಥ ಆ ದುಷ್ಟಸ್ಮಾರಕದ ಕಡೆಗೆ ಮುಹೂರ್ತಮಾತ್ರ ನೋಡುತ್ತ ನಿಂತು ಶಕ್ತಿಯು ಹಾಗೆಯೇ ಮುಂದಕ್ಕೆ ನಡೆದಳು. ಹಿಂದೆ ಐದನೆಯ ಪ್ರಕರಣದಲ್ಲಿ ವರ್ಣಿಸಿದಂತೆ ಅವಳು ಯಾವ ಗಿಡದ ಕೆಳಗೆ ಒಂದಾನೊಂದು ದಿವಸ ಭೋಳಿಬಂದು ಬಿದ್ದಿದ್ದಳೋ ಹಾಗು ಯಾವ ಗಿಡದ ಕೆಳಗೆ ಗಣೇಶದೇವನ ವಿಷಯದ ಪ್ರೇಮರಜ್ಜುವಿನಂತಿದ್ದ ತನ್ನ ಶುಷ್ಕಬಕುಲ ಮಾಲೆಯನ್ನು ಹರಿದು ಹೂಗಳನ್ನು ಕೈಯಿಂದ ತಿಕ್ಕಿ ನುಗ್ಗು ನುಗ್ಗುಮಾಡಿ ಧೂಳಿಯಲ್ಲಿ ಕೂಡಿಸಿಬಿಟ್ಟಿದ್ದಳೋ, ಆ ವೃಕ್ಷವು ಆಕೆಗೆ ದಾರಿಯಲ್ಲಿ ಕಾಣಿಸಿತು. ಆಗ ಅವಳು ಆ ಗಿಡದ ಕೆಳಗೆ ಯಾವ ಸ್ಥಳದಲ್ಲಿ ಆ ಒಣ ಹೂಮಾಲೆಯನ್ನು ಪುಡಿಮಾಡಿ ಮಣ್ಣುಗೂಡಿಸಿದ್ದಳೋ, ಆ ಸ್ಥಳದಲ್ಲಿಯ ಒಂದು ಹಿಡಿಮಣ್ಣನ್ನು

ಒಳ್ಳೇ ವಿಶ್ವಾಸಪೂರ್ವಕವಾಗಿ ಎತ್ತಿಕೊಂಡು ತನ್ನ ರತ್ನಖಚಿತವಾದ ಶಾಲಿನ ಸೆರಗಿನಲ್ಲಿ ಕಟ್ಟಿಕೊಂಡಳು. ಬಳಿಕ ಅವಳು ಪುನಃ ಮುಂದಿನ ದಾರಿಯನ್ನು ಕ್ರಮಿಸಹತ್ತಿ ತುಸ ಹೊತ್ತಿನಲ್ಲಿ ಒಂದು ಪುರಾತನವಾದ ಜೀರ್ಣ ಕಾಲಿಕಾ ಮಂದಿರವನ್ನು ಮುಟ್ಟಿದಳು. ಪೂರ್ವದಲ್ಲಿ ಅವಳು ತನ್ನ ಸೋದರತ್ತೆಯಾದ ಯೋಗಿನಿಯ ಬಳಿಯಲ್ಲಿರುವಾಗ ಆ ಮಂದಿರವು ಹ್ಯಾಗಿತ್ತೋ, ಹಾಗೆಯೇ ಅದು ಈವಾಗಲೂ ಇದ್ದಿತು. ಅನಂತರ ಅವಳು ಆ ಮಂದಿರದ ಕದವನ್ನು ಮೆಲ್ಲನೆ ನೂಕಿನೋಡಿದಳು. ಅದಕ್ಕೆ ಒಳಗಿನಿಂದ ಅಗಳಿ ಚಿಲಕಗಳೊಂದೂ ಹಾಕಿರಲಿಲ್ಲ. ಆಗ ಅವಳು ಅದನ್ನು ಸಪ್ಪಳವಾಗದಹಾಗೆ ಮೆಲ್ಲಗೆದೂಡಿ ಒಳಗೆ ಪ್ರವೇಶಮಾಡಿದಳು. ಅಲ್ಲಿ ಪ್ರಜ್ವಲಿತವಾದ ಹೋಮಾಗ್ನಿಯಿಂದ ಪರಿಶೋಭಿಸುವ ಒಂದು ಅಗ್ನಿಕುಂಡದ ಎದುರಿಗೆ ಸನ್ಯಾಸಿನಿಯು ಕಣ್ಣುಮುಚ್ಚಿಕೊಂಡು ಕುಳಿತಿದ್ದಳು. ಆಗ ಶಕ್ತಿಯು ನಿಃಶಬ್ದದಿಂದ ಆ ಸನ್ಯಾಸಿನಿಯ ಹಿಮ್ಮಗ್ಗಲಲ್ಲಿ ಬಂದುನಿಂತಳು. ಧ್ಯಾನಸ್ಥಳಾದ ಯೋಗಿನಿಯು ಅದಾವುದನ್ನೂ ಅರಿಯಳು.

ನಂತರ ಯೋಗಿನಿಯು ತನ್ನ ಯೋಗವನ್ನಿಳಿಸಿ, ಬಾಯಿಂದ ಸ್ವಾಹಾಕಾರ ಮಂತ್ರವನ್ನುಚ್ಚರಿಸುತ್ತ ಸನ್ಮುಖಸ್ಥ ಪ್ರದೀಪ್ತಾಗ್ನಿಯಲ್ಲಿ ಆಜ್ಯಾಹುತಿಯನ್ನು ಹಾಕಿದಳು. ಕೂಡಲೆ ಆ ಅಗ್ನಿಯು ಮತ್ತಿಷ್ಟು ಪ್ರಜ್ವಲಿತವಾಯಿತು. ಆ ಅಗ್ನಿಯ ತರತರದ ಜ್ವಾಲೆಗಳು ಒಂದಕ್ಕಿಂತ ಒಂದು ಹೆಚ್ಚು ಎತ್ತರವಾಗಿ ಎದ್ದು ಆ ಮಂದಿರವನ್ನು ಸುಟ್ಟು ಬಿಡುವವೋ ಏನೋ ಎಂಬಂತೆ ತೋರಹತ್ತಿತು. ಹಿಮ್ಮಗ್ಗಲು ನಿಂತಿದ್ದ ಶಕ್ತಿಯ ಕಣ್ಣುಗಳು ಹೊಗೆಯಿಂದ ಕೆಂಡದಂತೆ ಕೆಂಪಗಾದವು. ಅಗ್ನಿಯ ಜ್ವಾಲೆಗಳ ಕುಡಿಗಳು ಗಾಳಿಗೆ ಚದುರಿದ್ದ ಆಕೆಯ ತಲೆಗೂದಲುಗಳಿಗೆ ತಗಲುತ್ತಿದ್ದದರಿಂದ ಅವು ಒಂದೊಂದೇ ಆಗಿ ಉದುರಿ ಹೊಗೆಯಿಂದ ಆ ಮಂದಿರದ ತುಂಬೆಲ್ಲ ಹಾರಾಡಹತ್ತಿದವು. ಆದರೆ

ಆಕೆಯು ನಿಂತಲ್ಲಿಂದ ಕೊಂಚವೂ ಚಲಿಸದೆ, ಉದುರಿ ಬೀಳುತ್ತಿದ್ದ ಆ ತನ್ನ ಮುಂಡರಾಶಿಗಳ-ಕೂದಲುಗಳ-ಕಡೆಗೆ ವಕ್ರದೃಷ್ಟಿಯಿಂದ ನೋಡುತ್ತಿದ್ದಳು. ಅಷ್ಟರಲ್ಲಿ ಅಗ್ನಿಯ ಸ್ಫುರಣವು ತುಸು ಕಡಿಮೆಯಾಯಿತು. ಆಗ ಈವರೆಗೆ ಆ ಮಂದಿರದ ತುಂಬೆಲ್ಲ ಹಾರಾಡುತ್ತಿದ್ದ ಶಕ್ತಿಯ ಮುಂಡರಾಶಿಗಳು ವೇದಿಕೆಯಮೇಲೆ ಹರವುವ ದರ್ಭೆಗಳಂತೆ ಚತುಷ್ಕೋನಾಕಾರಗಳಾಗಿ ಸನ್ಯಾಸಿನಿಯ ಎದುರಿಗೆ ಬಂದು ಬಿದ್ದವು. ಆ ತನ್ನ ಕೂದಲುಗಳು ಹಾರಿ ಬೆಂಕಿಯಲ್ಲಿಬೀಳಬಾರದೆಂದು ಶಕ್ತಿಯು ಅವನ್ನು ಆರಿಸಿಕೊಳ್ಳಹತ್ತಿದಳು. ಅಷ್ಟರಲ್ಲಿ ಸನ್ಯಾಸಿನಿಯುಕಣ್ಣುಮುಚ್ಚಿಕೊಂಡೇ—"ಎಲೈಸರ್ವಶಕ್ತಿದಾಯಿನೀ,ಭಗವಂತನ ದೃಶ್ಯರೂಪಳಾದ ಪ್ರಕೃತಿಯೇ, ನೀನು ನನಗೆ ಪ್ರಸನ್ನಳಾಗು. ನಿನ್ನ ಕೃಪೆಯ ಬಲದಿಂದಲೇ ವಿಶ್ವವಲಯದೊಳಗಿನ ಉತ್ಪತ್ತಿ ಮತ್ತು ಸ್ಥಿತಿಗಳು ಜರಗುವವು; ಹಾಗು ನಿನ್ನ ಕ್ರೋಧದ ಯೋಗದಿಂದಲೇ ಈ ಇಡಿ ವಿಶ್ವವು ಪ್ರಲಯವಾಗುವದು. ನಿನ್ನ ರೌದ್ರರೂಪದಿಂದ ಈ ದೇಶಕ್ಕೆ ಯಾವ ದುರ್ದಸೆಯುಂಟಾಗಿರುವದೋ, ಅಂಥ ಈ ರಾಷ್ಟ್ರದಮೇಲೆ ನಿನ್ನ ಪ್ರಸನ್ನದೃಷ್ಟಿಯನ್ನು ಕೆಡವಿ ಇದನ್ನು ದುಃಖವಿಮುಕ್ತವಾಗಮಾಡು. ಕೃಪಾನಿಧೇ, ನೀನು ಗಣೇಶದೇವನನ್ನು ಬಂಧಮುಕ್ತಮಾಡಿಸು; ಮತ್ತು ಈ ನಿನ್ನ ಕೃಪೆಯ ಯೋಗದಿಂದ ಅತ್ಯಾಚಾರಗಳಿಂದ ಪೀಡಿತವಾದ ಈ ಹತಭಾಗ್ಯದೇಶದಲ್ಲಿ ಸೌಭಾಗ್ಯದ ಉದಯವಾಗಲಿ!" ಎಂದು ಉಚ್ಚಾರಮಾಡಿ, ಮತ್ತೆ ಆಜ್ಯಾಹುತಿಯನ್ನು ಹಾಕಿದಳು.

ಆಗ ಶಕ್ತಿಯು—"ಸನ್ಯಾಸಿನೀ, ತಥಾಸ್ತು! ಮಹಾಶಕ್ತಿಯು ಆ ಕಾರ್ಯಕ್ಕಾಗಿ ನನ್ನನ್ನೇ ನಿಯೋಜಿಸಿದ್ದಾಳೆ" ಎಂದು ನುಡಿದಳು.

ಹದಿನೇಳನೆಯ ಪ್ರಕರಣ.

ಸಂ ಹಾ ರ.

ಆಗ ಸನ್ಯಾಸಿನಿಯು ಕಣ್ಣುಗಳನ್ನು ತೆರೆದು ಶಕ್ತಿಮಯಿಯು ನ್ನು ನೋಡಿ—"ನೀನು ಶಕ್ತಿಮಯಿಯು; ಸುಲತಾನೆಯು! ಹೀಗಿದ್ದು ನೀನು ಗಣೇಶದೇವನಿಗೆ ಮುಕ್ತಿಪ್ರದಾನ ಮಾಡುವ ಬಗೆ ಹೇಗೆ?" ಎಂದು ಕೇಳಿದಳು.

ಶಕ್ತಿ—"ಈ ಮೊದಲೇ ನಾನು ಅವನನ್ನು ಮುಕ್ತ ಮಾಡ ಹೋಗಿದ್ದೆನು; ಆದರೆ ಅವನು ನನ್ನ ಸಹಾಯದಿಂದ ಬಂಧಮುಕ್ತ ನಾಗಲಿಕ್ಕೆ ಒಪ್ಪದಾಗಿದ್ದಾನೆ." ನಂತರ ಶಕ್ತಿಯು ಈ ಪೂರ್ವದ ಸಮಸ್ತ ಸಂಗತಿಗಳನ್ನೂ ಸನ್ಯಾಸಿನಿಗೆ ನಿವೇದಿಸಿ—ತಾವು ನನ್ನೊಡ ನೆ ಅಲ್ಲಿಗೆ ಬರಬೇಕು. ಇಗೋ, ಈ ಉಂಗುರವನ್ನು ದ್ವಾರ ಪ್ರದೇಶ ದಲ್ಲಿ ತೋರಿಸಿ ನಾವು ಇನ್ನೂ ಗಣೇಶದೇವನಿರುವ ಕಾರಾಗೃಹವನ್ನು ಪ್ರವೇಶಿಸಬಹುದಾಗಿದೆ. ಅಲ್ಲಿಗೆ ಹೋದಬಳಿಕ ತಾವು ಅವನನ್ನು ಸಂಗಡ ಕರಕೊಂಡು ಪಲಾಯನ ಮಾಡಬೇಕು.

ಶಕ್ತಿಮಯಿಯ ಆ ಮಾತನ್ನು ಕೇಳಿ ಯೋಗಿನಿಯು ಆಶ್ಚರ್ಯೋ ಭರದಿಂದ ಎದ್ದು ನಿಂತಳು. ಪುನಃ ಶಕ್ತಿಯು ಅವಳಿಗೆ—ಯೋಗಿ ನೀ ಸ್ವಲ್ಪ ತಡೆ; ನಾನು ಈ ಪೀತಾಂಬರವನ್ನು ಬಿಡಬೇಕಾಗಿರುತ್ತದೆ. ನನಗೊಂದು ಬೇರೆ ಬಟ್ಟೆಯನ್ನು ಕೊಡುವಿಯಾ? ಎಂದು ಕೇಳಲು, ಸನ್ಯಾಸಿನಿಯು ತನ್ನ ಹಳೆಯದೊಂದು ಕಾವೀಶಾಟಿಯನ್ನು ಆಕೆಯ ಮುಂದೆ ಮಾಡಿದಳು. ಶಕ್ತಿಯು ಲಗುಬಗೆಯಿಂದ ತನ್ನ ಪೀತಾಂಬರವನ್ನು ಬಿಟ್ಟು ಅದನ್ನು ಉಟ್ಟುಕೊಂಡಳು. ಬಳಿಕ ತನ್ನ ಅಮೂಲ್ಯ ಶಾಲನ್ನು ಹರಿದು ಸರಿಯಾಗಿ ಎರಡು ತುಂಡುಮಾಡಿ,

ಒಂದನ್ನು ತನ್ನ ಮೈತುಂಬ ಹೊದ್ದುಕೊಂಡಳು. ಉಳಿದ ಒಂದು ಶಾಲಿನತುಂಡನ್ನೂ, ಪೀತಾಂಬರದ ಎರಡು ತುಂಡುಗಳನ್ನೂ ಯೋಗಿನಿಯ ಕೈಗಿತ್ತು, ಇವುಗಳಲ್ಲಿಯ ಒಂದು ಪೀತಾಂಬರದ ತುಂಡನ್ನು ನೀನು ಉಟ್ಟುಕೊಂಡು ಆ ಶಾಲನ್ನು ನನ್ನಂತೆ ಹೊದ್ದುಕೋ. ಹಾಗು ಆ ಇನ್ನೊಂದು ಪೀತಾಂಬರದ ತುಂಡನ್ನು ನಿನ್ನ ಬಗಲಲ್ಲಿ ಹಿಡಿದುಕೊಂಡುನಡೆ. ಕಾರಾಗೃಹಕ್ಕೆ ಮುಟ್ಟಿದ ಬಳಿಕ ಅದನ್ನು ಗಣೇಶದೇವನಿಗೆ ಉಡಲಿಕ್ಕೆ ಕೊಡು; ನಾನು ಹೊದ್ದುಕೊಂಡಿರುವ ಈ ಶಾಲನ್ನು ಅವನಿಗೆ ಹೊದೆಯಲಿಕ್ಕೆ ಕೊಡುವೆನು. ಬಳಿಕ ನೀವಿಬ್ಬರೂ ಬಂದದಾರಿಯಿಂದ ಕ್ಷಣಸಹ ವಿಲಂಬಮಾಡದೆ ತಿರುಗಿರಿ. ಬಂದಜನರೇ ತಿರುಗಿಹೋಗುವರೆಂದು ತಿಳಿದು ಕಾವಲುಗಾರರು ನಿಮಗಾವತರದ ಅತಂಕವನ್ನೂ ಮಾಡಲಾರರು. ಯೋಗಿನೀ, ನಡೆ ಹಾಗಾದರೆ, ಆ ಜೇಲಖಾನೆಗೆ ಹೋಗುವಾ, ಎಂದಳು.

ಗಣೇಶದೇವನ ಬದಲಾಗಿ ಶಕ್ತಿಯು ಜೇಲಿನಲ್ಲಿ ಉಳಿಯಬೇಕೆಂಬದು ಈ ಮೊದಲೇ ಅವರಿಬ್ಬರಲ್ಲಿ ಗೊತ್ತಾದ್ದರಿಂದ ಯೋಗಿನಿಯು ಆ ವಿಷಯಕ್ಕೆ ಪುನಃ ಪ್ರಶ್ನೆಮಾಡಲಿಲ್ಲ. ಗಣೇಶದೇವನಲ್ಲಿ ಸಂಪೂರ್ಣ ಅನುರಕ್ತಳಾದ ಶಕ್ತಿಗೆ, ಅವಳು ಪರಸ್ತ್ರೀಯಾದ್ದರಿಂದ ಈ ಜನ್ಮದಲ್ಲಿ ಅವನ ಸಂಘಟನದಯೋಗವು ಒದಗಿ ಬರುವ ಸಂಭವವಿದ್ದಿಲ್ಲ. ಆದರಿಂದ ಹ್ಯಾಗೂ ಅವಳು ತನ್ನ ಶೇಷಾಯುಷ್ಯವನ್ನು ಅತ್ಯಂತ ವಿರಹತಾಪದಿಂದಲೂ, ಪಶ್ಚಾತ್ತಾಪದಿಂದಲೂ ಸವಿಸಬೇಕಾಗಿತ್ತು; ಆದರೆ ಅವಳನ್ನು ಹಾಗೆ ಅಖಂಡವಾಗಿ ಕೊರಗ ಹಚ್ಚುವದಕ್ಕಿಂತ ಪ್ರಸ್ತುತಪ್ರಸಂಗದಲ್ಲಿ ಅವಳು ಬಾದಶಹನ ವಿರುದ್ಧವಾಗಿ ಗಣೇಶದೇವನನ್ನು ಬಂಧಮುಕ್ತಮಾಡಿದರೆ ಬಾದಶಹನು ಕ್ರೋಧಾವೇಶದಿಂದ ಅವಳನ್ನು ತುಂಡರಿಸಿ ಬಿಡುವದು ಖಂಡಿತವು. ಹೀಗೆ ಆಕೆಯು ಒಮ್ಮೆ ಈ ನಿಂದ್ಯಜನ್ಮದಿಂದ ಪಾರಾದಳೆಂದರೆ ಆಕೆಗೆ ತಾನು ಪರಮ

ಧನ್ಯಳಾದೆನೆಂದು ಸಮಾಧಾನವೆನಿಸುವದಲ್ಲದೆ, ಆಕೆಯ ಯೋಗದಿಂದ ಗಣೇಶದೇವನ ಬಂಧಮುಕ್ತತೆಯೂ ಅನಾಯಾಸವಾಗಿ ಆಗುವದೆಂದು. ಯೋಚಿಸಿ, ಸನ್ಯಾಸಿನಿಯು ಆ ಕೆಲಸಕ್ಕೆ ಪ್ರವೃತ್ತಳಾದಳು.

ಬಳಿಕ ಶಕ್ತಿಯು ಸನ್ಯಾಸಿನಿಯನ್ನು ಲಗುಬಗೆಯಿಂದ ಕರ ಕೊಂಡು ಕಾರಾಗಾರಕ್ಕೆ ಬಂದಳು. ಆಗ ರಾತ್ರಿಯ ನಾಲ್ಕನೆಯ ಜಾವವು ಪ್ರಾರಂಭವಾದ್ದರಿಂದ ಅಲ್ಲಿಯ ಈ ಮೊದಲಿನ ಕಾವಲುಗಾ ರರ ಸರತಿಯುತೀರಿ ಬೇರೆಯವರು ಪಹರೆ ಮಾಡುತ್ತಿದ್ದರು. ಆದರಿಂದ ಶಕ್ತಿಮಯಿಯು ಪುನಃ ಕಾರಾಗೃಹವನ್ನು ಸೇರಲಿಕ್ಕೆ ಯಕ್ಕಿಂಚ ವ್ತೂ ಬಾಧೆಯುಂಟಾಗಲಿಲ್ಲ. ಅವಳು ತನ್ನಲ್ಲಿದ್ದ ಬಾದಶಹನ ಮೊಹ ರಿನ ಉಂಗುರವನ್ನು ಜೇಲಖಾನೆಯ ಮುಖ್ಯ ಕಾವಲುಗಾರನಿಗೆ ತೋರಿಸಿದೊಡನೆ ಅವನು ಗಣೇಶದೇವನಿದ್ದ ಕೋಣೆಯ ಬಾಗಿಲು ತೆರದು ಕೊಟ್ಟನು. ಕೂಡಲೆ ಶಕ್ತಿಯು ತೀರ ಕಗ್ಗತ್ತಲಿನ ಮೂಲೆಯನ್ನು ಸೇರಿ ತನ್ನ ಮೈಮೇಲಿನ ಶಾಲನ್ನುಯೋಗಿನಿಯ ಮುಂದೆ ಚೆಲ್ಲಿದಳು. ಆಗ ಯೋಗಿನಿಯು—"ರಾಜಕುಮಾರ, ರಾಜಕುಮಾರ" ಎಂದು ಮೆಲ್ಲಗೆ ಕೂಗಿದಳು.

ನಿದ್ದೆಹತ್ತಿದ್ದ ಗಣೇಶದೇವನು ಒಮ್ಮೆಲೆಎಚ್ಚತ್ತು—"ಒಲ್ಲೆನು; ಶಕ್ತೀ, ನಾನು ಇಲ್ಲಿಂದ ಹೋಗಲಿಕ್ಕೆ ಒಲ್ಲೆನು, ನಿನ್ನ ಸಹಾಯ ಪಡೆದು ಬಂಧಮುಕ್ತನಾಗುವದು ಪ್ರಶಸ್ತವಾಗಿ ಕಾಣುವದಿಲ್ಲವಾದ್ದ ರಿಂದ ನಾನು ಹೋಗಲಾರೆನು," ಎಂದು ಮಲಗಿಕೊಂಡೇ ನುಡಿದನು.

ಸನ್ಯಾಸಿನಿ—ಕುಮಾರ, ನಾನು ಶಕ್ತಿಯಲ್ಲ; ಎದ್ದೇಳು, ನಿನ್ನನ್ನು ಒಡಿಸಿಕೊಂಡು ಹೋಗುವದಕ್ಕೆಂದೇ ಬಂದಿರುವೆನು.

ಗಣೇಶದೇವನಿಗೆ ಯೋಗಿನಿಯ ದನಿಯು ಗುರತು ಹತ್ತಿದ್ದರಿಂದ ಆಕೆಯ ಕರುಣಾಳುತನಕ್ಕಾಗಿ ಅವನ ಹೃದಯವು ತುಂಬಿಬಂದಿತು; ಕುತ್ತಿಗೆಯು ಬಿಗಿಯಿತು; ಮೈಮೇಲೆ ರೋಮಾಂಚಗಳೆದ್ದವು.

ಕೂಡಲೆ ಅವನು ಚಟಕ್ಕನೆದ್ದು ನಿಂತು—"ಭಗವತೀ, ಸನ್ಯಾಸಿನೀ, ನೀನು ಇಲ್ಲಿ ಹೇಗೆ ಬಂದೆ?" ಎಂದು ವಿಸ್ಮಯಭರದಿಂದ ಕೇಳಿದನು.

ಸನ್ಯಾಸಿನಿ—ಇಲ್ಲಿ ಅದನ್ನೆಲ್ಲ ಹೇಳುತ್ತ ಕೂಡ್ರುವಂತಿಲ್ಲ; ಇಗೋ ಈ ವಸ್ತ್ರವನ್ನುಟ್ಟುಕೊಂಡು ಈ ಶಾಲನ್ನು ಬರೇ ಕಣ್ಣುಗಳಷ್ಟು ಹೊರಗೆ ಕಾಣುವಹಾಗೆ ಮೈಮೇಲೆ ಚೆನ್ನಾಗಿ ಹೊದ್ದುಕೋ; ಹಾಗು ನನ್ನನ್ನು ಹಿಂಬಾಲಿಸಿ ಬಾ, ಎಂದು ನುಡಿದವಳೇ ಆ ಕೋಣೆಯ ಬಾಗಿಲ ಕಡೆಗೆಬಂದಳು. ಶಕ್ತಿಯೇ ಈ ಸಾಹಸಕ್ಕೆ ಕಾರಣಳೆಂಬದೂ ಅವಳು ಸನ್ಯಾಸಿನಿಯೊಡನೆ ಇಲ್ಲಿಗೆ ಬಂದಿರುವಳೆಂಬದೂ ಅವನಿಗೆ ತಿಳಿಯದು. ಆದರಿಂದ ಅವನು ಅರಕ್ಷಣದಲ್ಲಿ ಸನ್ಯಾಸಿನಿಯ ಆಜ್ಞೆಯ ಪ್ರಕಾರ ವೇಷಧರಿಸಿಕೊಂಡು ಅವಳನ್ನು ಹಿಂಬಾಲಿಸಿದನು. ಬಳಿಕ ಅವರೀರ್ವರೂ ಬಂದ ದಾರಿಯಿಂದ ತಿರುಗಿದರು. ತಲೆಬಾಗಿಲ ಬಳಿಯ ಮುಖ್ಯ ಪಹರೆಯವನ ಕೈಯಲ್ಲಿ ಸನ್ಯಾಸಿನಿಯು ಉಂಗುರವನ್ನು ಚೆಲ್ಲಿದಳು. ಅವನು ಅದನ್ನು ತಕ್ಕೊಂಡವನೇ ಮೈಮೇಲೆ ಚೆನ್ನಾಗಿ ಹೊದ್ದುಕೊಂಡು ಅಡ್ಡಾದನು. ಮುಖ್ಯ ಕಾವಲುಗಾರನ ಸ್ಥಿತಿಯೇ ಹೀಗಾದಬಳಿಕೆ ಮಿಕ್ಕ ಸಹಾಯ್ಯಕ ಪಹರೆಯವರ ಪಾಡೇನು? ಗಾಢನಿದ್ರೆಯಲ್ಲಿ ತಮ್ಮ ಪಹರೆಯ ಸರತಿ ಬಂದದ್ದುಕೂಡ ಅವರಿಗೆ ಗೊತ್ತಿರದಿರುವಾಗ, ಸನ್ಯಾಸಿನಿಯು ಗಣೇಶದೇವನೊಡನೆ ಮೋಸದಿಂದ ಪಲಾಯನ ಮಾಡಿದ ಸುದ್ದಿಯು ಅವರಿಗೆ ಹೇಗೆ ತಿಳಿಯಬೇಕು?

ಯಾವಸಂಕೋಚವನ್ನೂ ತಕ್ಕೊಳ್ಳದೆ ಗಣೇಶದೇವನು ಸನ್ಯಾಸಿನಿಯೊಡನೆ ಒಮ್ಮೆ ಹೊರಟು ಹೋದಮೇಲೆ, ಇಡಿ ಆಯುಷ್ಯದಲ್ಲಿ ಎಂದೂ ಆಗದಷ್ಟು ಸಮಾಧಾನವು ಶಕ್ತಿಮಯಿಗೆ ಅಂದು ಉಂಟಾಯಿತು. ಆಗ ಶಕ್ತಿಯು ಈವರೆಗೆ ಅಡಗಿಕೊಂಡು ಕುಳಿತಿದ್ದ ಆ ಕೋಣೆಯ ಮೂಲೆಯೊಳಗಿಂದ ಎದ್ದು ಗಣೇಶದೇವನು ಮಲಗಿದ್ದ ಸ್ಥಳಕ್ಕೆ ಬಂದಳು. ಅಲ್ಲಿ ಗಣೇಶದೇವನು ಬಿಟ್ಟು ಹೋಗಿದ್ದ ಒಂದು ಹರಕ

ಕಂಬಳಿ ಹಾಗು ಜೀರ್ಣವಾದದ್ದೊಂದು ವಸ್ತ್ರ ಇವುಗಳು ಬಿದ್ದಿದ್ದವು. ಅವಳು ಅವುಗಳನ್ನು ಬಹಳ ಆದರದಿಂದ ಎತ್ತಿ ಹೃದಯದಲ್ಲಿರಿಸಿಕೊಂಡಳು. ಬಳಿಕ ಅವಳು ಆ ವಸ್ತ್ರವನ್ನು ಹಾಸಿ ಕಂಬಳಿಯನ್ನು ಹೊದ್ದುಕೊಂಡು ಗಣೇಶದೇವನು ಮಲಗಿದ್ದ ಸ್ಥಳದಲ್ಲಿಯೇ ಬಿದ್ದುಕೊಂಡಳು. ಇಂದು ಆಕೆಯು ತನ್ನ ಜೀವಿತದ ಪವಿತ್ರಕರ್ತವ್ಯವನ್ನು ಮುಗಿಸಿದ್ದರಿಂದ ಆಕೆಯ ಮನಸ್ಸು ಅತ್ಯಂತ ಉಲ್ಲಸಿತವಾಗಿತ್ತು. ಆದರಿಂದ ಅದು ಇಹದಲ್ಲಿಯ ಸೌಖ್ಯಾಸೌಖ್ಯಗಳಲ್ಲಿ ಲೀನವಾಗದೆ, ಶಾಶ್ವತನಾದ ಭಗವಂತನ ಗುಣ ಗಾನಮಾಡುವದರಲ್ಲಿ ಮಗ್ನವಾಗಿತ್ತು.

ಕುತುಬನು ಶಕ್ತಿಯನ್ನು ಕಾರಾಗೃಹಕ್ಕೆ ಮುಟ್ಟಿಸಿ ತನ್ನ ಮನೆಗೆ ನಡೆದನೆಂದು ಹಿಂದಿನ ಒಂದು ಪ್ರಕರಣದಲ್ಲಿ ವಿವರಿಸಿತ್ತಷ್ಟೇ? ಆದರೆ ಜೇಲಿನಿಂದ ಹೊರಟ ಬಳಿಕ ಕುತುಬನು "ಈಗಲೇ ಬಾದಶಹನಿಗೆ ಶಕ್ತಿಯ ಈ ಗುಪ್ತಕಾರಸ್ಥಾನವನ್ನು ತಿಳಿಸಿ ಅವನನ್ನು ಇಲ್ಲಿಗೆ ಕರಕೊಂಡು ಬಂದು ಇವಳ ಕೃತಿಯು ಅವನ ಕಣ್ಣಿಗೆ ಬೀಳುವಂತೆ ಮಾಡಬೇಕು. ಅಂದರೆ ಈವಳ ಈ ದುಷ್ಕೃತಿಯನ್ನು ನೋಡಿ, ಸಿಟ್ಟಿನ ಭರದಲ್ಲಿ ಬಾದಶಹನು ಗಣೇಶದೇವನನ್ನು ಆಗಿಂದಾಗಲೇ ತುಂಡರಿಸುವನಲ್ಲದೆ, ಇವಳನ್ನೂ ಕೊಲ್ಲಿಸಬಹುದು; ಇಲ್ಲವೆ ಇವಳನ್ನು ತ್ಯಜಿಸಿ ತನ್ನ ರಾಜ್ಯದಿಂದಾದರೂ ಹೊರಹೊರಡಿಸಬಹುದು" ಎಂದು ಮನಸ್ಸಿನಲ್ಲಿ ಕಲ್ಪಿಸಿಕೊಂಡು ನೆಟ್ಟಗೆ ಮನೆಗೆ ಹೋಗಲಿಲ್ಲ. ಆವನು ಆ ಅಪರಾತ್ರಿಯಲ್ಲಿ ಪ್ರಾಸಾದಕ್ಕೆ ಬಂದನು. ಗಾಯಸುದ್ದೀನನು ಇನ್ನೂ ಮಲಗಿದ್ದಿಲ್ಲ. ಅವನು ಹಾಸಿಗೆಯ ಮೇಲೆ ಸುಮ್ಮನೆ ಆಡ್ಡಾಗಿದ್ದನು; ಆಗ ಕುತುಬನು ಅಲ್ಲಿಗೆ ಹೋಗಿಬಾದಶಪನಿಗೆ ಕುರ್ನಿಸಾತ್ ಮಾಡಿದನು. ಕೂಡಲೆ ಬಾದಶಹನು ಲಗುಬಗೆಯಿಂದ ಹಾಸಿಗೆಯ ಮೇಲೆ ಎದ್ದು ಕುಳಿತನು; ಹಾಗು ಕುತುಬನಿಗೂ ಸಮೀಪದ ಒಂದು ಕಾಷ್ಠಾಸನದ ಮೇಲೆ ಕೂಡ್ರಲಿಕ್ಕೆ ಸೂಚಿಸಿದನು. ಆಗ ಕುತುಬನು ಆ ಖುರ್ಚಿಯನ್ನು

ಬಾದಶಹನ ಪಲ್ಲಂಗದ ತೀರಸಮೀಪಕ್ಕೆ ಎಳೆದು ಅದರಮೇಲೆ ಕುಳಿತು ಬಾದಶಹನ ಕಿವಿಯಲ್ಲಿ ಏನೇನೋ ಹೇಳಿದನು.

ಬಳಿಕ ಬಾದಶಹನು ಕುತುಬನಿಗೆ— ಸತ್ಯಮಾಡುತ್ತೀಯಾ? ಕುತುಬ, ನೀನುಸುರುವ ಸಂಗತಿಯು ಸತ್ಯವೆ? ಎಂದು ಕೇಳಲು,

ಕುತುಬನು ಬಹಳ ಗಾಂಭೀರ್ಯದಿಂದ—ಸತ್ಯವು, ಆ ಸಂಗತಿಯು ಸತ್ಯವಾಗಿದ್ದು, ಅದರ ಪ್ರತ್ಯಕ್ಷಪ್ರಮಾಣಮಾಡಿಕೊಡುವದಕ್ಕಾಗಿ ಬಾದಶಹರನ್ನೇ ಅಲ್ಲಿಗೆ ಕರೆದೊಯ್ಯಲು ಬಂದಿರುತ್ತೇನೆ; ಜಹಂಪನ್ನರವರ ಬಳಿಯಲ್ಲಿ ಅಸತ್ಯವಾಡುವದುಂಟೆ?

ಬಾದಶಹ—ತಿಳಿದಹಾಗಾಯಿತು ಬಿಡು. ಇನ್ನು ಕಣ್ಣಲೆನೋಡುವದೇಕೆ? ನಾನು ಮೊದಲೇ ಈ ಅನುಮಾನವನ್ನು ಮಾಡಿದ್ದೆನು. ಆಗಲಿ. ನೀನು ಜೇಲಿಗೆ ಹೋಗಿ ಅವನ ಛಿನ್ನಮುಂಡವನ್ನು ತಂದು ನನ್ನ ಮುಂದಿಡಬೇಕು. ಕುತುಬ, ಹೋಗು ಹಾಗಾದರೆ ಈಗಿಂದೀಗಲೇ.

ಕುತುಬ—ಯಾರ ಮುಂಡವನ್ನು?

ಬಾದಶಹ—ಯಾರಶಿರವೆನ್ನುವಿಯಾ? ಆ ನರಾಧಮ ಗಣೇಶದೇವನ.

ಕುತುಬ-ಹಾಗು ಬೇಗಮಸಾಹೇಬರನ್ನೇನು ಮಾಡಬೇಕು? ಅಪ್ಪಣೆ.

ಬಾದಶಹನು ಅತ್ಯಂತ ಕ್ರುದ್ಧಸ್ವರದಿಂದ—ಬೇಗಮಳ ವಿಷಯಕ್ಕೆ ನೀನೇನೂ ಮಾಡುವ ಕಾರಣವಿಲ್ಲ. ಆಕೆಯ ಶಿಕ್ಷೆ-ಮೋಕ್ಷಗಳ ವಿಚಾರವನ್ನು ನಾನೇಸ್ವಂತಮಾಡತಕ್ಕವನು. ನಿನಗೇಕೆ ಆಕೆಯಗೊಡವೆ?

ಬಾದಶಹನ ಕಡೆಯ ಆ ಶಬ್ದದಿಂದ ಕುತುಬನಮೋರೆಯಿಳಿದ್ಹೋಯಿತು. ತಾನು ಕೋರಿದ್ದಂತೆ ಗಣೇಶದೇವನ ಶಿರಚ್ಛೇದಮಾಡಲು ಬಾದಶಹನು ಅಪ್ಪಣೆ ಕೊಟ್ಟಿದ್ದರೂ, ತನ್ನ ಪ್ರಧಾನವೈರಿಯಾದ ಶಕ್ತಿಮಯಿಯ ವಿಷಯಕ್ಕೆ ಬಾದಶಹನು ಏನೂ ಆಜ್ಞೆಮಾಡದ್ದರಿಂದ ಅವನಿಗೆ ಸಮಾಧಾನವೆನಿಸಲಿಲ್ಲ. ಬಳಿಕ ಅವನು ಬಾದಶಹನಿಗೆ ಮತ್ತೊಮ್ಮೆ ಕುರ್ನಿಸಾತು ಮಾಡಿ ರಾಜಾಜ್ಞೆಪರಿಪಾಲನಕ್ಕಾಗಿ

ಹೊರಟು ಮಹಾಲಿನಹೊರಗೆ ಬಂದನು. ಅಷ್ಟರಲ್ಲಿ ಬಾಧಶಹನು ಪುನಃ ಅವನನ್ನು ಕರೆದು—ಎಚ್ಚರ ನೋಡು, ಕುತುಬ, ಬೇಗಮೆಯು ಕಾರಾಗೃಹದಿಂದ ಹೊರಬಿದ್ದು ಹೋಗುವವರೆಗೆ ಗಣೇಶದೇವನ ಶಿರಚ್ಛೇದವಾಗಂತೆ ಎಚ್ಚರಪಡತಕ್ಕದ್ದು. ತಿಳಿಯಿತೇ, ಎನ್ನಲು, "ಖಾವಂದರವರ ಹುಕುಮಿನನಂತೆಯೇ ನಡಕೊಳ್ಳುವೆನು.'' ಎಂದು ಹೇಳಿ ಕುತುಬನು ನಡೆದನು.

ಆದರೆ ಶಕ್ತಿಯು ಕಾರಸ್ಥಾನವನ್ನೆಲ್ಲ ತಿಳಿಯದ ಕುತುಬನು ಜೇಲಿಗೆ ಬರುವಷ್ಟರಲ್ಲಿ ಮೊದಲನೇ ಪಹರೆಯವರು ಅಲ್ಲಿ ಇರಲಿಲ್ಲ. ಸುದ್ದಿ ಹೇಳಹೋದವನು ಕುತುಬನ ಮನೆಯಲ್ಲಿ ಅವನ ಹಾದೀಕಾಯುತ್ತ ಕುಳಿತಿದ್ದನು. ಕುತುಬನು ಬೇರೆ ಪಹರೆಯವರನ್ನು ವಿಚಾರಿಸಿದನು. "ಯಾರೋ ಇಬ್ಬರು ಹೆಂಗಸರು ತಮ್ಮ ಪಹರೆಯ ಕಾಲದಲ್ಲಿ ಈ ಪರವಾನಿಗೆಯ ಉಂಗುರವನ್ನು ತೋರಿಸಿ ಒಳಗೆ ಹೋಗಿದ್ದರು. ಆದರೆ ತುಸು ಹೊತ್ತಿನಲ್ಲಿಯೇ ಬಂದದಾರಿಯಿಂದ ಅವರು ತಿರುಗಿ ಹೋದರು.'', ಎಂಬ ಸಂಗತಿಯನ್ನು ತಿಳಿಸಿ ಅವರು ತಮಲ್ಲಿಯ ಉಂಗುರವನ್ನು ಅವನಿಗೆ ತೋರಿಸಿದರು. ಹಾಗಾದರೆ ಸದ್ಯಕ್ಕೆ ಗಣೇಶದೇವನೊಬ್ಬನೇ ಆ ಕೋಣೆಯಲ್ಲಿರುವನೆಂದು ತಿಳಿದು, ಶಿರಚ್ಛೇದಮಾಡುವದಕ್ಕಾಗಿ ಕುತುಬನು ಅವನ ಕೋಣೆಯ ಬಳಿಗೆ ಹೋಗಿ, ಅವನು ಮಲಗಿರುವನೋ, ಎಚ್ಚತ್ತಿರುವನೋ ಎಂಬದನ್ನು ತಿಳಕೊಳ್ಳುವದಕ್ಕಾಗಿ ಆ ಕೋಣೆಯ ಕಿಟಕಿಯ ಹತ್ತರ ನಿಂತನು.

ಆಗ ಕೋಣೆಯಲ್ಲಿ ಮಲಗಿದ್ದ ಶಕ್ತಿಮಯಿಯು ಸುಸ್ವಪ್ನಾವಸ್ಥೆಯನ್ನು ಹೊಂದಿದ್ದಳು. ಆ ಸ್ವಪ್ನದಲ್ಲಿ ಅವಳಿಗೆ ತನ್ನ ಬಾಲ್ಯದಂತೆ ದೂರದಲ್ಲಿ ಗಣೇಶದೇವನು ಕೊಳಲಿನಲ್ಲಿ ಈ ಪದವನ್ನು ಹಾಡುತ್ತಿರುವಂತೆ ಭಾಸವಾಗುತ್ತಿತ್ತು:—

ಧಾಟಿ- "ಸ್ವಾಮಿ ಸರ್ವೋತ್ತಮಳೆ, ಸಕಲಜನಕಾಧಾರೆ||" ಎಂಬಂತೆ

ನಾನೇನು ಬಯಸಲಿ? ನನ್ನವಳೆ ಸುಂದರಿಯು|
ನಾನೆ ಅವಳವನಾಗಿ ಇರಲು ಭೇದುಂಟೆ?|| ಪಲ್ಲ||
ಧ್ಯಾನಕ್ಕೆ ತರಲಾಟವಾಡುವಾಗಾನಂದ|
ಏನೆಂದು ಹೇಳಲಿ? ಪದಕಲದಿಹುದು||ಅ. ಪಲ್ಲ||
ಅಮಿತಸಂಖ್ಯದಿ ತಾರಾ ಚಂದ್ರಮನು ತೇಜದಿ|
ಕಮನೀಯರಾಗಿಹರೊ ತಲೆಯಮೇಲ್ಭಾಗದಿ ||
ಸುಮನೋಹರವಾದಾಭರಣೈಕರತ್ನವು||
ನನ್ನ ಸುಂದರಿಗುಂಟು ನನ್ನವಳೆಯೇಕಲ್ಲ?||೧||

ಅವಳಿಗೆ ಸ್ವಪ್ನದಲ್ಲಿ ಬಾಲ್ಯಕಾಲವು ಪುನಃ ಪ್ರಾಪ್ತವಾದಂತಾಗಿತ್ತು; ರಾಜಕುಮಾರನು ಬಕುಲವೃಕ್ಷತಲದ ಆ ಮಹೀಪಾಲ ಸರೋವರದ ತೀರದಲ್ಲಿ ನಿಂತಂತೆಯೂ, ತಾನು ಉಪವನದೊಳಗಿಂದ ಸಖಿಯರೊಡಗೂಡಿ ಅಲ್ಲಿ ಬರುತ್ತಿರುವಂತೆಯೂ ಆಕೆಗೆ ತೋರಿಬಂದಿತು; ಕುಮಾರನ ಹತ್ತರಕ್ಕೆ ಹೋದ ಕೂಡಲೆ ಅವನು ಕೈಯೊಳಗಿನ ಬಕುಲ ಪುಷ್ಪದ ಹಾರವನ್ನು ತನ್ನ ಕೊರಳಲ್ಲಿ ಹಾಕಿ

"ನಾನು ಏನು ಮಾಡಲೀಗ ಹೇಳು ಗೆಳತಿಯೆ|
ಗಾನಲಹರಿಯೇಳುತಿಹುದು ಹೃದಯದಲ್ಲಿಯೇ||"

ಎಂದು ಕೊಳಲಿನಿಂದ ಊದುತ್ತ ತನ್ನನ್ನು ಚುಂಬಿಸಿದಂತೆಯೂ ಅವಳಿಗೆ ಭಾಸವಾಯಿತು. ಹೀಗೆ ಆ ಸ್ವಪ್ನಸೃಷ್ಟಿಯಲ್ಲಿ ಅವಳು ಪರಮಾನಂದವನ್ನನುಭೋಗಿಸಹತ್ತಿದ್ದಳು. ಕ್ರಮಕ್ರಮವಾಗಿ ಅವಳಲ್ಲಿಯ ನಾನು ತಾನೆಂಬಭೇದಭಾವವು ಅಳಿದುಹೋಯಿತು; ತನ್ನ ಹಾಗು ಗಣೇಶದೇವನ ಆತ್ಮಗಳು ಒಂದೇ ಆಗಿರುವಂತೆ ಅವಳಿಗೆ ತೋರಲು, ಅವಳು ದ್ವೈತಭಾವವನ್ನು ಸಂಪೂರ್ಣವಾಗಿ ಮರೆತುಬಿಟ್ಟಳು. ವಿಷಯಸಂಬಂಧದ ಅವಳ ಕ್ಷುದ್ರಪ್ರೇಮವು, ವಿಷಯಾತೀತವಾದ ಅಖಂಡ

ಪ್ರೇಮದಲ್ಲಿ ಬೆರೆತುಹೋಯಿತು. ಆನಂದವೆಂಬ ಮಹಾಸಮುದ್ರದಲ್ಲಿ ಅವಳು ಮನಸೋಕ್ತವಾಗಿ ವಿಹರಿಸಹತ್ತಿದಳು.

ಆಗ ಹೊರಗೆ ನಿಂತಿದ್ದ ಕುತುಬನು ಸಂಗಡಿಗನೊಬ್ಬನಿಗೆ— ಕೈದಿಯು ಗಾಢನಿದ್ರೆಯಲ್ಲಿದ್ದಾನೆ; ಆದ್ದರಿಂದ ನಾನು ಕತ್ತಲಲ್ಲಿ ಯೇ ನನ್ನ ಕೆಲಸವನ್ನು ತೀರಿಸಿಕೊಂಡು ಬರುತ್ತೇನೆ. ಅಷ್ಟರಲ್ಲಿ ನೀನು ಒಂದು ದೀಪವನ್ನು ತಕ್ಕೊಂಡು ಬಾ, ಎಂದು ಹೇಳಿಕಳಿಸಿ, ತಾನು ಆ ಕೋಣೆಯಲ್ಲಿ ಸೇರಿದನು. ಸಂಗಡಿಗನು ಹಿಲಾಲ(ದೀಪ) ನ್ನು ತಂದು ಆ ಕೋಣೆಯ ಬಾಗಿಲಲ್ಲಿ ನಿಲ್ಲಿಸಹತ್ತಿದ್ದನು. ಅಷ್ಟರಲ್ಲಿ ಸುಲ್ತಾನ ಗಾಯಸುದ್ದೀನನು ಉನ್ಮತ್ತನಂತೆ ಓಡುತ್ತೋಡುತ್ತ ಅಲ್ಲಿ ಗೆ ಬಂದನು. ಆಗ ಕುತುಬನು ಒಳಗೆ ಹೊಕ್ಕಿರುವನೆಂಬದು ಅವನಿ ಗೆ ತಿಳಿಯಲು, ಅವನ ಹೌಹಾರಿ, ತಾನು ಸ್ವತಃ ಬಾದಶಹನಿರುವೆನೆಂಬದ ರ ಅರಿವು ಕೂಡ ಅವನಲ್ಲಿ ಉಳಿಯದೆ, ಅವನು ಆ ಕತ್ತಲೆಯ ಕೋಣೆ ಯಲ್ಲಿ ಹೊಕ್ಕನು. ಆದರೆ ಬಾದಶಹನು ಹೀಗೆ ಮದ್ದಾನೆಯಂತೆ ಒಳಗೆ ಹೊಗುವಷ್ಟರಲ್ಲಿ ಕುತುಬನೇ ಛಿನ್ನ ರುಂಡವನ್ನು ಕೈಯಲ್ಲಿ ಹಿಡಕೊಂಡು ಹೊರಗೆ ಬಂದನು. ಕೂಡಲೆ ಬಾದಶಹನು ಕುತುಬ ನನ್ನುದ್ದೇಶಿಸಿ—"ಕುತುಬ, ಕೆಲಸವನ್ನು ಪೂರೈಸಿಲ್ಲವಷ್ಟೆ? ಸ್ವಲ್ಪ ತಡೆ; ಈಗಲೇ ಶಿರಚ್ಛೇದ ಮಾಡಬೇಡ. ಗಣೇಶದೇವನು ಇಲ್ಲಿಂದ ಓಡಿಹೋಗಿದ್ದು, ಅವನ ಸ್ಥಳದಲ್ಲಿ ಸುಲ್ತಾನೆಯು ಕುಳಿತಿರಬಹುದಾಗಿ ನನಗೆ ಸಂಶಯ ಬಂದಿದೆ. ಆದ್ದರಿಂದ ದೀಪದ ಬೆಳಕಿನಲ್ಲಿ ನೋಡಿ ಕೆಲಸಮಾಡು." ಎಂದು ತೀರ ಅಧೀರತೆಯಿಂದ ನುಡಿದನು.

ಆದರೆ ಕುತುಬನು ಬಾದಶಹನ ಮಾತಿಗೇನೂ ಉತ್ತರ ಕೊಡ ಲಿಲ್ಲ. ಕೈಯಲ್ಲಿಯ ಛಿನ್ನ ರುಂಡವನ್ನು ಬಾದಶಹನಿಗೆ ತೋರಿಸಿ, ತನ್ನ ಕೃತಿಯ–ಗಣೇಶದೇವನನ್ನೇ ಸಂಹರಿಸಿರುವೆನೆಂಬ ಕೃತಿಯ–ಸಮ ರ್ಥನಮಾಡಿಕೊಳ್ಳಬೇಕೆಂದು ಅವನು ಅದನ್ನು ಬಾದಶಹನೆದುರಿಗೆ ದೀ

ಪದಬೆಳಕಿಗೆ ಹಿಡಿದನು.

ಆ ರುಂಡವನ್ನು ನೋಡಿ ಬಾದಶಹನು ಸಿಟ್ಟಿನಿಂದ ಎಚ್ಚರದಪ್ಪಿ—ಕುತುಬ, ಇದು ಯಾರ ಶಿರವು? ಚನ್ನಾಗಿ ದೀಪದ ಮುಂದೆ ಹಿಡೆ ನೋಡೋಣ, ಎನ್ನಲು, ಕುತುಬನು ಅದನ್ನು ದೀಪದ ಹತ್ತಿರಕ್ಕೆ ತಂದನು. ಕೂಡಲೆ ಬಾದಶಹನು(ಮತ್ತಿಷ್ಟು ಸಿಟ್ಟಿನ ಆವೇಶದಿಂದ)—"ಸೈತಾನ್, ಇದನ್ನೇನು ಮಾಡಿದೆ!" ಎಂದು ಗಟ್ಟಿಯಾಗಿ ಕೂಗಿದವನೇ ಕ್ಷಣಹೊತ್ತು ಹುಚ್ಚನಂತೆ ಮುಗ್ಧನಾದನು.

ಉತ್ತರಕ್ಷಣದಲ್ಲಿ ಅವನು ಸ್ಮೃತಿಹೊಂದಿ ಶಕ್ತಿಮಯಿಯನ್ನು ಕೊಂದದ್ದಕ್ಕಾಗಿ ಕುತುಬನನ್ನು ಅಲ್ಲಿಂದಲ್ಲಿಯೇ ತುಂಡುತುಂಡಾಗಿ ಸಂಹರಿಸಿದನು; ಆ ಜೇಲಖಾನೆಯ ಕಾವಲುಗಾರರನ್ನು ಸಂಹರಿಸಿದನು; ಕುಮಾರಸಾಹೇಬುದ್ದೀನನ್ನೂ ಸಂಹರಿಸಿಬಿಟ್ಟನು. ಅಪರಾಧಿ-ನಿರಪರಾಧಿಗಳನ್ನೊಂದೂ ವಿಚಾರಮಾಡದೆ ತನ್ನ ಪ್ರಿಯತಮೆಯ ಸಂಹಾರದಿಂದ ಉನ್ಮತ್ತನಾದ ಆ ಯವನ ಬಾದಶಹನು ಕಂಡಕಂಡವರನ್ನು ಕೊಲ್ಲಲಿಕ್ಕೆ ಆಜ್ಞಾಪಿಸಹತ್ತಿದನು. ಬಾದಶಹನ ಈ ಅತ್ಯಾಚಾರಕ್ಕಾಗಿ ಪಾಂಡುಯಾ ನಗರದ, ಅದರಂತೆ ವಂಗ ದೇಶದ, ಎಲ್ಲ ಪ್ರಜೆಗಳ ಹೃತ್ಕಂಪವಾಯಿತು. ಕೆಲವರು ಗುಪ್ತವಾಗಿಯೂ, ಬೇರೆ ಕೆಲವರು ಡಾಣಾಡಂಗುರವಾಗಿಯೂ ಗಣೇಶದೇವನ ಪಕ್ಷವಹಿಸಿದರು. ಮದಾಂಧನಾದ ಗಾಯಸುದ್ದೀನನು ಪುನಃ ಗಣೇಶದೇವನೊಡನೆ ಯುದ್ಧಹೂಡಿದನು. ಆದರೆ ಎಣ್ಣೆತೀರಿದ ದೀಪದಂತೆ ಆ ಬಾದಶಹನ ಪಕ್ಷವು ಕ್ಷಿಪ್ರದಲ್ಲಿಯೇ ಕ್ಷಯವಾಯಿತು. ಹೀಗೆ ಎಲ್ಲರ ಸಂಹಾರಕ್ಕೆ ಕಾರಣನಾದ ಗಾಯಸುದ್ದೀನನೂ ಆ ಯುದ್ಧದಲ್ಲಿ ಸಂಹರಿಸಲ್ಪಟ್ಟನು.